॥ ಶ್ರೀ ಗುರು ಬಸವ ಲಿಂಗಾಯನಮಃ ॥



# ಲಿಂಗಾಯತ ದರ್ಶನ


ಸಂಪುಟ : ೬ ನವೆಂಬರ್ ೨೦೧೯ ಸಂಚಿಕೆ : ೧೧



**ಮಾರ್ಗದರ್ಶನ**

**ಪೂಜ್ಯಶ್ರೀ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು**

ರುದ್ರಾಕ್ಷಿಮಠ, ನಾಗನೂರು–ಬೆಳಗಾವಿ

ತೋಂಟದಾರ್ಯ ಸಂಸ್ಥಾನಮಠ, ಗದಗ–ಡಂಬಳ

**ಸಂಪಾದಕ**

**ಡಾ॥ ಎಸ್. ಜಿ. ಮಹಾದೇವಪ್ಪ**

**ಸಹ ಸಂಪಾದಕ**

**ಡಾ॥ ರಾಮಕೃಷ್ಣ ಮರಾಠೆ**

**ಸಂಪಾದಕ ಮಂಡಳಿ**

ಡಾ॥ ಗುರುಲಿಂಗ ಕಾಪಸೆ | ಡಾ॥ ಸಿ. ಕೆ. ನಾವಲಗಿ
ಶ್ರೀ ಆರ್. ಪಿ. ಅಪರಾಜ | ಡಾ॥ ವಿ. ಎಸ್. ಮಾಳಿ
ಡಾ॥ ಬಸವರಾಜ ಜಗಜಂಪಿ | ಶ್ರೀ ಬಿ. ಬಿ. ಹೊಸಮನಿ
ಡಾ. ಎಂ. ಎಸ್. ಹುಲ್ಲೋಳಿ | ಶ್ರೀಮತಿ ನೀಲಗಂಗಾ ಚರಂತಿಮಠ



**ಪ್ರಕಾಶಕರು**

ಕಾರ್ಯದರ್ಶಿ ಶ್ರೀ ಸಿದ್ಧರಾಮೇಶ್ವರ ಶಿಕ್ಷಣ ಸಂಸ್ಥೆಯ

**ವಚನ ಅಧ್ಯಯನ ಕೇಂದ್ರ**

ನಾಗನೂರು ಶ್ರೀ ರುದ್ರಾಕ್ಷಿಮಠ, ಶಿವಬಸವನಗರ

ಬೆಳಗಾವಿ–೫೯೦೦೧೦

ದೂ:೦೮೩೧–೨೪೦೬೧೫೭ *email:basavaguru@rediffmail.com*

*Web: www.rudrakshimath.in*

**ಚಂದಾವಿವರ**

| | | |
|---|---|---|
| ಮಹಾಪೋಷಕರು | ರೂ. | ೧೦,೦೦೦=೦೦ |
| ಪೋಷಕರು | ರೂ. | ೫೦೦೦=೦೦ |
| ಆಜೀವ | ರೂ. | ೩೦೦೦=೦೦(೨೦ ವರ್ಷ) |
| ಆರು ವರ್ಷದ | ರೂ. | ೧೦೦೦=೦೦ |
| ಒಂದುವರ್ಷದ | ರೂ. | ೨೦೦=೦೦ |
| ಬಿಡಿ ಪ್ರತಿ | ರೂ. | ೨೦=೦೦ |

ಚಂದಾಹಣವನ್ನು ನಗದು ಅಥವಾ **'ವಚನ ಅಧ್ಯಯನ ಕೇಂದ್ರ'** ಹೆಸರಿನಲ್ಲಿ ಕ್ರಾಸ್ ಮಾಡಿದ ಡಿ.ಡಿ/ಚೆಕ್‌ಮುಖಾಂತರ**"ನಿರ್ದೇಶಕರು, ವಚನ ಅಧ್ಯಯನ ಕೇಂದ್ರ ನಾಗನೂರು ರುದ್ರಾಕ್ಷಿಮಠ, ಶಿವಬಸವ ನಗರ, ಬೆಳಗಾವಿ–೫೯೦ ೦೧೦"** ಈ ವಿಳಾಸಕ್ಕೆ ಕಳಿಸಬೇಕಾಗಿ ವಿನಂತಿ.


**ಅಂತರಂಗದೊಳಗೆ.....**


* ಸಂಪಾದಕೀಯ ೨
* ವಚನಾರ್ಥ–ಚಿಂತನ ೪
  - **ಡಾ. ಸಿದ್ಧರಾಮ ಸ್ವಾಮಿಗಳು**
* ಬಸವಪುರಾಣ : ಒಂದು ಚಿಂತನೆ ೬
  - **ಡಾ. ಬಸವರಾಜ ಜಗಜಂಪಿ**
* ಶಿವಬಸವ ಶ್ರೀಗಳು ೯
  - **ಚಂದ್ರಕಾಂತ ಕುಸನೂರ**
* ಶೀಲಸಂಪನ್ನರು ೧೦
  - **ವೀ. ಬ. ಭದ್ರಣ್ಣವರ**
* ಕರ್ಮಯೋಗಿ ೧೪
  - **ಡಾ. ಆರ್. ಶಿವಣ್ಣ**
* ಶಿವ–ಬಸವ ಸಂಗಮ ೨೫
  - **ಡಾ. ಸರಜೂ ಕಾಟ್ಕರ್**
* ಸೇವಾಯೋಗಿ ಲಿಂ. ಪ್ರಭುಮಹಾಸ್ವಾಮಿಗಳವರು ೨೭
  - **ಪೂಜ್ಯಶ್ರೀ ಮಹಾಂತ ದೇವರು**
* ಶ್ರೀ ಸಿದ್ಧರಾಮ ಸ್ವಾಮಿಗಳು ೩೨
  - **ಡಾ. ರಾಮಕೃಷ್ಣ ಮರಾಠೆ**
* ಸುಸಂಸ್ಕೃತ ವ್ಯಕ್ತಿ ೪೯
  - **ಪೂಜ್ಯಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು**
* ನೆನೆಯೊಳಗಣ ಪರಿಮಳದಂತಿತ್ತು ೫೧
  - **ಪ್ರೊ. ಎಸ್. ಎಂ. ಗಂಗಾಧರಯ್ಯ**
* ಸದುವಿನಯದ ತವರು–ಸಾವಳಗೀಶ್ವರ ದೇವರು ೫೪
  - **ಪೂಜ್ಯಶ್ರೀ ಪ್ರಭುಚನ್ನಬಸವ ಸ್ವಾಮಿಗಳು**
* ವಿದ್ಯಾ–ವಿನಯ ವಿಭೂಷಿತರು: ಶ್ರೀ ಸಾವಳಗೀಶ್ವರ ದೇವರು ೫೬
  - **ಪೂಜ್ಯಶ್ರೀ ಮಹಾಂತ ದೇವರು**
* ವಿದ್ಯೆ–ವಿನಯಗಳ ಸಾಕ್ಷಾತ್ಕಾರ ೫೯
  - **ಪೂಜ್ಯಶ್ರೀ ಶಿವಯೋಗಿ ದೇವರು**
* ಸಾತ್ವಿಕ ಮನದ ಡಾ. ಸಾವಳಗೀಶ್ವರ ದೇವರು ೬೧
  - **ಪೂಜ್ಯಶ್ರೀ ವಿವೇಕಾನಂದ ದೇವರು**
* ನೂತನ ಶ್ರೀಗಳಿಗೆ ಶರಣು ಶರಣಾರ್ಥಿ ೬೩
  - **ಈಶ್ವರ ಕಾಪಸೆ**



ಇಲ್ಲಿಯ ಲೇಖನಗಳ ಅಭಿಪ್ರಾಯಗಳು ಲೇಖಕರವೇ ಹೊರತು ಪತ್ರಿಕೆಯ ಅಭಿಪ್ರಾಯಗಳಲ್ಲ. **–ಸಂ**

# ನಾಗನೂರು ರುದ್ರಾಕ್ಷಿಮಠ : ಇತಿಹಾಸ ಮತ್ತು ಪರಂಪರೆ

'ನಾಗನೂರು' ಇಂದಿನ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನಲ್ಲಿರುವ ಚಿಕ್ಕ ಗ್ರಾಮ. ಜನಸಂಖ್ಯೆ ಸರಿ ಸುಮಾರು ೫ ಸಾವಿರ ಇರಬಹುದು. ಕೃಷಿಕರೇ ಬಹುಸಂಖ್ಯಾತರಾಗಿರುವ ಈ ಗ್ರಾಮದ ಪ್ರಮುಖ ಮಠವೇ ರುದ್ರಾಕ್ಷಿಮಠ. ಅಂದಾಜು ಎರಡುನೂರು ವರ್ಷಗಳ ಇತಿಹಾಸವಿರುವ ಈ ಮಠಕ್ಕೆ ಇಂದಿನ ಪೀಠಾಧಿಪತಿಗಳು ಒಂಬತ್ತನೆಯವರು. ಸಿದ್ಧಪುರುಷ ಗರಗದ ಮಡಿವಾಳ ಶಿವಯೋಗಿಗಳ ಒಡನಾಡಿನಗಳಾಗಿದ್ದ ಪೂಜ್ಯರಾದ ಅಲ್ಲಮಪ್ರಭು ಸ್ವಾಮಿಗಳು ಹಾಗು ಸಿದ್ಧರಾಮ ಸ್ವಾಮಿಗಳು ಕ್ರಿ.ಶ. ೧೮೨೦ರ ಸಮಯಕ್ಕೆ ಈ ಮಠವನ್ನು ಸ್ಥಾಪಿಸಿದ್ದಾರೆ. ನಾಗನೂರಿನ ಹೊರವಲಯದ ಚೌಕಿಮಠದಲ್ಲಿ ಈ ಇಬ್ಬರೂ ಶ್ರೀಗಳ ಸಮಾಧಿಗಳು ಇವೆ. ಎಲ್ಲ ಮಠಗಳ ಸಂಸ್ಥಾಪಕರು ಒಬ್ಬರೇ ಆಗಿರುವುದು ಸಾಮಾನ್ಯ. ಆದರೆ ನಾಗನೂರು ರುದ್ರಾಕ್ಷಿಮಠದ ಸಂಸ್ಥಾಪಕರು ಇಬ್ಬರಾಗಿರುವುದು ವಿಶೇಷ. ಈ ಇಬ್ಬರ ಸ್ವಾಮಿಗಳ ನಂತರ ಶ್ರೀ ಸಿದ್ಧರಾಮ ಸ್ವಾಮಿಗಳು (ಇಮ್ಮಡಿ), ಪ್ರಭಾವಶಾಲಿ ಸ್ವಾಮಿಗಳಾಗಿ ಶ್ರೀಮಠದ ಮೂರನೆಯ ಪಟ್ಟವನ್ನು ಅಲಂಕರಿಸಿದ್ದರು. ನಾಲ್ಕನೆಯವರಾಗಿ ಶ್ರೀ ಗುರುಸಿದ್ಧ ಸ್ವಾಮಿಗಳು, ಐದನೆಯವರಾಗಿ ಶ್ರೀ ಗುರುಲಿಂಗ ಸ್ವಾಮಿಗಳು ಆರನೆಯವರಾಗಿ ಶ್ರೀ ವೀರಭದ್ರ ಸ್ವಾಮಿಗಳು ರುದ್ರಾಕ್ಷಿಮಠದ ಪೀಠಾಧಿಪತಿಗಳಾಗಿ ಕಾರ್ಯ ನಿರ್ವಹಿಸಿದ್ದರೂ ಇವರ ಸಾಧನೆ-ಸಿದ್ಧಿಗಳ ಬಗ್ಗೆ ವಿಶೇಷ ಮಾಹಿತಿ ದೊರೆಯದಿರುವುದು ವಿಪರ್ಯಾಸದ ಸಂಗತಿ.

ಶ್ರೀಮಠದ ಏಳನೆಯ ಪೀಠಾಧಿಪತಿಗಳಾದ ಡಾ. ಶಿವಬಸವ ಮಹಾಸ್ವಾಮಿಗಳ ಕಾಲಾವಧಿಯನ್ನು ನಾಗನೂರು ರುದ್ರಾಕ್ಷಿಮಠದ 'ಸುವರ್ಣಯುಗ' ಎಂದೇ ಭಾವಿಸಲಾಗಿದೆ. ಪೂಜ್ಯಶ್ರೀಗಳು ಬಡತನದಲ್ಲಿಯೇ ಹುಟ್ಟಿ ಬಡತನದಲ್ಲಿಯೇ ಬೆಳೆದವರು. ಬಾಲ್ಯಾವಸ್ಥೆಯಲ್ಲಿಯೇ ತಾಯಿ ರುದ್ರಮ್ಮ ಹಾಗು ತಂದೆ ಅಡವಯ್ಯನವರನ್ನು ಕಳೆದುಕೊಂಡು ಸಮಾಜದ ಮಗುವಾಗಿ ಎಲ್ಲರ ಪ್ರೀತ್ಯಾದರಗಳಿಗೆ ಪಾತ್ರರಾದರು. ಕಿರಿಯ ವಯಸ್ಸಿನಲ್ಲಿಯೇ ನಾಗನೂರು ಮಠದ ಉತ್ತರಾಧಿಕಾರಿಯಾಗಿ, ಸ್ವಾಮಿಗಳ ಧಾರ್ಮಿಕ ತರಬೇತಿ ಕೇಂದ್ರ ಶಿವಯೋಗಮಂದಿರದಲ್ಲಿ ಪ್ರವೇಶ ಪಡೆದು, ಲಿಂ. ಹಾನಗಲ್ಲ ಗುರು ಕುಮಾರ ಶಿವಯೋಗಿಗಳವರ ಶಿಷ್ಯತ್ವ ಸ್ವೀಕರಿಸಿದವರು. ಗುರುಗಳ ಸೇವೆಯನ್ನು ತ್ರಿಕರಣಪೂರ್ವಕವಾಗಿ ಮಾಡಿದ ಅವರು ಸಾಮಾಜಿಕ ಕಳಕಳಿಯನ್ನು ಮೈಗೂಡಿಸಿಕೊಂಡರು. ಅವರ ಆಶೀರ್ವಾದವನ್ನು ಪಡೆದು ಕ್ರಿ. ಶ. ೧೯೨೪ ರಲ್ಲಿ ನಾಗನೂರು ರುದ್ರಾಕ್ಷಿಮಠದ ಕಾರ್ಯಭಾರ ವಹಿಸಿಕೊಂಡು ಭಕ್ತರ ಶ್ರೇಯೋಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಹಾಕಿಕೊಂಡರು. ಹಾನಗಲ್ಲ ಕುಮಾರ ಶಿವಯೋಗಿಗಳವರಿಂದ ಸಮಾಜ ಸೇವೆಗೆ ದೀಕ್ಷಾ ಬದ್ಧರಾಗಿದ್ದ ಅವರು ೧೯೩೨ರಲ್ಲಿ ಬೆಳಗಾವಿ ಮಹಾನಗರಕ್ಕೆ ಬಂದು ಗ್ರಾಮೀಣ ಬಡಮಕ್ಕಳಿಗೆ ಪ್ರಸಾದ ನಿಲಯ ಪ್ರಾರಂಭಿಸಿದರು. ಜಾತಿ ಮತ ಪಂಥಗಳ ಭೇದವಿಲ್ಲದೇ ಬಡವರೆಲ್ಲರಿಗೂ ಪ್ರಸಾದ ನಿಲಯದಲ್ಲಿ ಪ್ರವೇಶವಾವಕಾಶ ನೀಡಿ ಅನ್ನ ಆಶ್ರಯಗಳನ್ನೊದಗಿಸಿದರು.

ಪರಮಪೂಜ್ಯರಾದ ಡಾ. ಶಿವಬಸವ ಮಹಾಸ್ವಾಮಿಗಳವರದು ಈ ನಾಡಿನ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಹಾಗು ಸಾಂಸ್ಕೃತಿಕ ಕ್ಷೇತ್ರಕ್ಕೆ ಅವಿಸ್ಮರಣೀಯ ಕೊಡುಗೆ ಇದೆ. ಅವರು ಪ್ರಸಾದ ನಿಲಯದಲ್ಲಿ ಅಂದು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಸ್ವಾತಂತ್ರ್ಯಯೋಧರಿಗೂ ಅನ್ನ ಆಶ್ರಯಗಳನ್ನಿತ್ತು ಪ್ರೋತ್ಸಾಹಿಸಿದರು. ಕರ್ನಾಟಕ ಏಕೀಕರಣಕ್ಕಾಗಿಯೂ ಬಹುವಾಗಿ ಶ್ರಮಿಸಿದರು. ಅದಕ್ಕಾಗಿ ಮರಾಠಿ ಭಾಷಿಕರ ಕೆಂಗಣ್ಣಿಗೂ ಗುರಿಯಾದರು. ಕಾಲಾಂತರದಲ್ಲಿ ಪ್ರಸಾದ ನಿಲಯಕ್ಕೆ ಆದಾಯದ ಮೂಲಗಳನ್ನು ಸ್ಥಾಪಿಸಿ ಕಾಯಕಲ್ಪ ಒದಗಿಸಿದರು. ಜ್ಞಾನದಾಸೋಹಕ್ಕಾಗಿ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿದರು. ೧೯೫೪ರ ನಂತರ ಅವರ ಉತ್ತರಾಧಿಕಾರಿಗಳಾಗಿದ್ದ ಮತ್ತು ಎಂಟನೆಯ ಪೀಠಾಧಿಪತಿಗಳಾಗಿದ್ದ ಪೂಜ್ಯಶ್ರೀ ಪ್ರಭುಸ್ವಾಮಿಗಳವರೂ ಕೂಡ ಪೂಜ್ಯರ ಸೇವಾಕಾರ್ಯಗಳಲ್ಲಿ ಕೈಗೂಡಿಸಿ, ಹೆಗಲಿಗೆ ಹೆಗಲು ಕೊಟ್ಟು ದುಡಿದರು. ಜ್ಞಾನಶಕ್ತಿಗೆ ಕ್ರಿಯಾಶಕ್ತಿಯ ಜೋಡಣೆ ಒಂದು ಅಪೂರ್ವ ಸಂಗಮವೆನಿಸಿತು. ಪರಿಣಾಮ ನಾಗನೂರು ರುದ್ರಾಕ್ಷಿಮಠ ನಾಡಿನ ಹೆಮ್ಮೆಯ ಮಠಗಳಲ್ಲಿ ಒಂದಾಯಿತು. ಆದರೆ ಪೂಜ್ಯ ಪ್ರಭುಸ್ವಾಮಿಗಳವರು ೧೯೮೭ರಲ್ಲಿ ಅಕಾಲಿಕ ಲಿಂಗೈಕ್ಯರಾದುದು ಪೂಜ್ಯಶ್ರೀಗಳವರಿಗೆ ಬರಸಿಡಿಲೆರಗಿದಂತಾಯಿತು.

ಪರಮಪೂಜ್ಯ ಶ್ರೀ ಶಿವಬಸವ ಮಹಾಸ್ವಾಮಿಗಳವರ ಅನನ್ಯ ಸೇವೆಯನ್ನು ಗಮನಿಸಿ ಕರ್ನಾಟಕ ವಿಶ್ವವಿದ್ಯಾಲಯ ಅವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಿತು. ಕರ್ನಾಟಕ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿಯಿಂದ ಸನ್ಮಾನಿಸಿತು. ಅವರ ಸೇವಾ ಕಾರ್ಯಗಳ ಫಲವಾಗಿ ನಂತರ ದಿನಗಳಲ್ಲಿ ನಾಗನೂರು ರುದ್ರಾಕ್ಷಿಮಠಕ್ಕೆ ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯೂ ಲಭಿಸಿತು. ನಾಡು-ನುಡಿಯ ಸೇವೆಯನ್ನು ಸರ್ವಾರ್ಪಣ ಭಾವದಿಂದ ಮಾಡುವ ಮೂಲಕ ಈ ನಾಡಿನ ಪುಣ್ಯಪುರುಷರಲ್ಲಿ ಶ್ರೀಗಳು ಅಗ್ರಗಣ್ಯರೆನಿಸಿದರು. ಗುರುಗಳಂತೆ ಅವರೂ ಸದಾ ಸಮಾಜದ

ಹಿತಚಿಂತನೆಯಲ್ಲಿಯೇ ದಿನಗಳೆದು ತಮ್ಮ ಬದುಕಿನ ೧೦೫ನೆಯ ವಯಸ್ಸಿನಲ್ಲಿ ಕ್ರಿ.ಶ. ೧೯೯೪ ಸೆಪ್ಟೆಂಬರ್ ೯ ರಂದು ಲಿಂಗೈಕ್ಯರಾದರು.

ಶ್ರೀಮಠದ ಒಂಭತ್ತನೆಯ ಪೀಠಾಧಿಪತಿಗಳಾಗಿ ಬಂದವರು ಶ್ರೀ ಸಿದ್ಧರಾಮ ಸ್ವಾಮಿಗಳು (ಮುಮ್ಮಡಿ). ಅವರು ಡಾ. ಶಿವಬಸವ ಸ್ವಾಮಿಗಳವರ ಸೇವೆಯನ್ನು ನಿಷ್ಠೆಯಿಂದ ಮಾಡುವುದರ ಜೊತೆಗೆ ಶ್ರೀಮಠದ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಹಾಗು ಸಾಂಸ್ಕೃತಿಕ ಸೇವಾ ಕಾರ್ಯಗಳನ್ನು ಮುನ್ನಡೆಸಿಕೊಂಡು ಬಂದವರು. ಶ್ರೀಮಠದ ಕಾರ್ಯಚಟುವಟಿಕೆಗಳಲ್ಲಿ ೧೯೯೨ರಲ್ಲಿ ಜರುಗಿದ ಅಖಿಲ ಭಾರತ ವೀರಶೈವ ಮಹಾಸಭೆಯ ೨೧ನೆಯ ಅಧಿವೇಶನ, ೧೯೯೫ರಲ್ಲಿ ಜರುಗಿದ ಕರ್ನಾಟಕ ಇತಿಹಾಸ ಅಕಾಡೆಮಿಯ ೯ನೆಯ ರಾಜ್ಯಮಟ್ಟದ ಸಮ್ಮೇಳನ, ೧೯೯೯ರಲ್ಲಿ ಜರುಗಿದ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನ, ೨೦೦೧ರ ರಾಜ್ಯಮಟ್ಟದ ಲಿಂಗಾಯತ ಯುವ ಜನ ಸಮಾವೇಶ, ೨೦೦೩ರಲ್ಲಿ ಜರುಗಿದ ಕದಳಿ ಮಹಿಳಾ ಸಮಾವೇಶ, ೨೦೦೩ರ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಸಂಘಟಿಸಿ ಯಶಸ್ವಿಯಾಗಿ ಜರುಗಿಸಿದ ಐತಿಹಾಸಿಕ ಸಂದರ್ಭಗಳು. ಬೀಳಗಿ ಅರಸು ಮನೆತನ, ಬೆಳಗಾವಿ ಜಿಲ್ಲೆಯ ವಿದ್ವತ್‌ಪರಂಪರೆ, ಕರ್ನಾಟಕ ಏಕೀಕರಣದಲ್ಲಿ ಬೆಳಗಾವಿ ಜಿಲ್ಲೆಯ ಪಾತ್ರ, ವಚನ ಅಧ್ಯಯನ ಹಿಂದಣ ಹೆಜ್ಜೆ–ಮುಂದಣ ಮಾರ್ಗ ಮುಂತಾದ ಹತ್ತು ಹಲವು ವಿಚಾರ ಸಂಕಿರಣಗಳು, ಪತ್ರಕರ್ತರ ಸಮ್ಮೇಳನ, ಮಕ್ಕಳ ಸಾಹಿತ್ಯ ಸಮ್ಮೇಳನ, ಚುಟುಕು ಸಾಹಿತ್ಯ ಸಮ್ಮೇಳನ, ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶ, ಬೆಳಗಾವಿ ಜಿಲ್ಲಾ ವೀರಶೈವ ಮಹಾಸಭೆಯ ರಜತ ಮಹೋತ್ಸವ, ಲಿಂಗಾಯತ ಪುನಶ್ಚೇತನ ಶಿಬಿರ, ಡಾ. ಎಂ. ಎಂ. ಕಲಬುರ್ಗಿ, ಡಾ. ಚಂದ್ರಶೇಖರ ಕಂಬಾರ ಬದುಕು ಬರಹ ಕುರಿತಾದ ವಿಚಾರ ಸಂಕಿರಣ, ಶ್ರೀಕೃಷ್ಣ ಪಾರಿಜಾತ ಮತ್ತು ಜಾನಪದ ಕಲೆಗಳ ದಾಖಲೀಕರಣ ಇತ್ಯಾದಿ ನೂರಾರು ಸಾಂಸ್ಕೃತಿಕ ಚಟುವಟಿಕೆಗಳನ್ನು ಈವರೆಗೆ ನಡೆಸಲಾಗಿದೆ. ಪ್ರತಿ ತಿಂಗಳು ಶಿವಾನುಭವ ಕಾರ್ಯಕ್ರಮ, ಮೌಲಿಕ ಗ್ರಂಥಗಳ ಪ್ರಕಟಣೆ, ಲಿಂಗಾಯತ ಮಾಸಪತ್ರಿಕೆಯ ಪ್ರಕಟಣೆಗಳು ನಿರಂತರ ನಡೆದಿವೆ. ಲಿಂಗಾಯತ ಸಂಶೋಧನ ಕೇಂದ್ರವನ್ನು ಸ್ಥಾಪಿಸಿ, ಲಿಂಗಾಯತ ಧರ್ಮ, ಸಾಹಿತ್ಯ, ತತ್ವಜ್ಞಾನ, ಇತಿಹಾಸ, ಕಲೆ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಸಾವಿರಾರು ಗ್ರಂಥಗಳನ್ನು ಸಂಗ್ರಹಿಸಲಾಗಿದೆ. ಸಾಹಿತಿ–ಸಂಶೋಧಕರಿಗೆ ಸಂಶೋಧನೆ ಮಾಡಲು ಅನುಕೂಲಗಳನ್ನು ಕಲ್ಪಿಸಿ ಕೊಡಲಾಗಿದೆ. ಲಿಂಗಾಯತ ಧರ್ಮ ಸಾಹಿತ್ಯಕ್ಕೆ ಸಂಬಂಧಿಸಿದ ನೂರಾರು ಗ್ರಂಥಗಳನ್ನು ಪ್ರಕಟಿಸಿ ಸಾಹಿತ್ಯಲೋಕಕ್ಕೆ ಪರಿಚಯಿಸಲಾಗಿದೆ. ಇತ್ತೀಚೆಗೆ ವಚನ ಅಧ್ಯಯನ ಕೇಂದ್ರವನ್ನು ಸ್ಥಾಪಿಸಿ ತನ್ಮೂಲಕ ವಚನಗಳನ್ನು ಬೇರೆ ಭಾಷೆಗಳಿಗೆ ಭಾಷಾಂತರಿಸುವ ಕಾರ್ಯ ಮಾಡಲಾಗುತ್ತಿದೆ.

ಶೈಕ್ಷಣಿಕ ಕ್ಷೇತ್ರದಲ್ಲಿಯೂ ನಾಗನೂರು ಶ್ರೀ ರುದ್ರಾಕ್ಷಿಮಠದ ಸೇವೆ ಸ್ಮರಣೀಯವಾಗಿದೆ. ಪ್ರಸಾದ ನಿಲಯದಲ್ಲಿ ನೂರಾರು ಬಡ ಪ್ರತಿಭಾವಂತ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಅನ್ನ ಆಶ್ರಯಗಳನ್ನು ಕಲ್ಪಿಸಿರುವುದಲ್ಲದೆ ನರ್ಸರಿಯಿಂದ ಕಾಲೇಜು ಹಂತದವರೆಗೆ ವಿವಿಧ ವಿದ್ಯಾಲಯಗಳನ್ನು ಪ್ರಾರಂಭಿಸಿ ಶೈಕ್ಷಣಿಕ ಸೇವಾ ಕಾರ್ಯಗಳಲ್ಲಿ ಶ್ರೀಮಠ ತೊಡಗಿಸಿಕೊಂಡಿದೆ. ಇತ್ತೀಚೆಗೆ ಪ್ರಾರಂಭಿಸಿದ ಎಸ್. ಜಿ. ಬಾಳೇಕುಂದ್ರಿ ತಾಂತ್ರಿಕ ಮಹಾವಿದ್ಯಾಲಯ ಅಲ್ಪಾವಧಿಯಲ್ಲಿಯೇ ರಾಜ್ಯದ ಅತ್ಯುತ್ತಮ ತಾಂತ್ರಿಕ ಮಹಾವಿದ್ಯಾಲಯಗಳಲ್ಲಿ ಒಂದಾಗಿದೆ. ಜೊತೆಗೆ ಶ್ರೀಮಠ ನಡೆಸುವ ಕನ್ನಡದ ಕಾರ್ಯಚಟುವಟಿಕೆಗಳ ಕಾರಣದಿಂದ ಅದೊಂದು ಕನ್ನಡದ ಶಕ್ತಿಕೇಂದ್ರವಾಗಿ ಪರಿಣಮಿಸಿದೆ. ಹೀಗೆ ಹತ್ತು ಹಲವು ಸೇವಾ ಕಾರ್ಯಗಳನ್ನು ಶ್ರೀಮಠವು ಅರ್ಪಣಾ ಭಾವದಿಂದ ತೆರೆಯ ಮರೆಯ ಕಾಯಿಯಾಗಿ ನಿರ್ವಹಿಸುತ್ತ ನಾಡಿನ ಹೆಮ್ಮೆಯ ಮಠಗಳಲ್ಲಿ ಒಂದಾಗಿ ಬೆಳಗುತ್ತಲಿದೆ.

ಇಂತಹ ಭವ್ಯ ಪರಂಪರೆಯುಳ್ಳ ಮತ್ತು ಕಾರ್ಯಚಟುವಟಿಕೆಗಳನ್ನು ಮುನ್ನಡೆಸಿಕೊಂಡು ಬಂದಿರುವ ಶ್ರೀಮಠದ ಹತ್ತನೆಯ ಪೀಠಾಧಿಪತಿಗಳಾಗಿ ಅಧಿಕಾರ ವಹಿಸಿಕೊಳ್ಳಲಿರುವವರು ಪೂಜ್ಯಶ್ರೀ ಡಾ. ಸಾವಳಗೀಶ್ವರ ದೇವರು. ಅವರು ವಿದ್ಯಾವಿನಯ ಸಂಪನ್ನರು, ಜನಸೇವೆಯನ್ನೇ ಕಾಯಕವಾಗಿಸಿಕೊಂಡವರು. ಬಾಲ್ಯದಿಂದಲೂ ನಾಗನೂರು ರುದ್ರಾಕ್ಷಿಮಠದ ಪ್ರಸಾದನಿಲಯದಲ್ಲಿದ್ದುಕೊಂಡು ಅವರು ತಮ್ಮ ವಿದ್ಯಾಧ್ಯಯನ ಪೂರೈಸಿದವರು. ಶ್ರೀಮಠದ ಉದಾತ್ತ ಪರಂಪರೆಯ ಅರಿವುಳ್ಳ ಶ್ರೀಗಳು ಇದೇ ದಿನಾಂಕ ೧೧–೧೧–೨೦೧೯ ರಂದು ಡಾ. ಅಲ್ಲಮಪ್ರಭು ಸ್ವಾಮಿಗಳು, ಎಂಬ ನೂತನ ನಾಮಾಭಿದಾನದಿಂದ ಪೀಠಾರೋಹಣ ಗೈಯಲಿದ್ದಾರೆ. ಈ ಸಂದರ್ಭದಲ್ಲಿ 'ಲಿಂಗಾಯತ ದರ್ಶನ' ಪತ್ರಿಕಾ ಬಳಗವು ಅವರಿಗೆ ಶುಭ ಹಾರೈಸುತ್ತದೆ.

■■

# ವಚನಾರ್ಥ–ಚಿಂತನ

● ಡಾ. ಸಿದ್ಧರಾಮ ಸ್ವಾಮಿಗಳು

**ನೂರನೋದಿ ನೂರ ಕೇಳಿದಡೇನು?**
**ಆಸೆ ಹರಿಯದು, ರೋಷ ಬಿಡದು**
**ಮಜ್ಜನಕ್ಕೆರೆದು ಫಲವೇನು?**
**ಮಾತಿನಂತೆ ಮನವಿಲ್ಲದ ಜಾತಿ ಡೊಂಬರ ನೋಡಿ**
**ನಗುವ ನಮ್ಮ ಕೂಡಲಸಂಗಮದೇವ.**

ಜ್ಞಾನಿಗಳು, ಭಕ್ತರು ಆಸೆ–ಆಮಿಷ, ರೋಷ–ದ್ವೇಷಗಳೆಂಬ ದುರ್ಗುಣಗಳಿಂದ ಮುಕ್ತರಾಗಿರಬೇಕು. ಅವರ ಅಂತರಂಗ ಬಹಿರಂಗಗಳೆರಡೂ ಪರಿಶುದ್ಧವಾಗಿರಬೇಕು ಹಾಗೆಯೇ ಪಾರದರ್ಶಕವಾಗಿರಬೇಕೆಂದು ಸೂಚಿಸುವ ಈ ವಚನ ಭಕ್ತಿಭಂಡಾರಿ ಬಸವಣ್ಣನವರದು.

ಜ್ಞಾನವು ಲೌಕಿಕವಾಗಿರಲಿ, ಪಾರಮಾರ್ಥಿಕವೇ ಆಗಿರಲಿ ಅತ್ಯಂತ ಮಹತ್ವಪೂರ್ಣವಾದುದು. ಅದು ನಮ್ಮಲ್ಲಿರುವ ಅಜ್ಞಾನವನ್ನು ಕಳೆಯಬೇಕು. ದುರ್ಗುಣಗಳನ್ನು ದೂರಮಾಡಬೇಕು. ಆಗಲೇ ಜ್ಞಾನವು ಸಾರ್ಥಕತೆಯನ್ನು ಹೊಂದುವುದು. ಈ ಜ್ಞಾನವನ್ನು ನಾವು ಗ್ರಂಥಗಳ ಅಧ್ಯಯನದಿಂದ, ವಿದ್ವಾಂಸರ ಅಥವಾ ಜ್ಞಾನಿಗಳ ಮಾತುಗಳನ್ನು ಕೇಳುವುದರಿಂದ ಪಡೆಯುತ್ತೇವೆ. ಲೌಕಿಕ ಜ್ಞಾನವು ನಮಗೆ ಶಾಲೆ ಕಾಲೇಜು ವಿಶ್ವವಿದ್ಯಾಲಯಗಳಲ್ಲಿ ದೊರೆತರೆ ಅಧ್ಯಾತ್ಮ ಜ್ಞಾನವು ಅನುಭಾವಿಗಳ, ಶರಣರ ಸಂಗದಿಂದ ದೊರೆಯುತ್ತದೆ. ಸಾಕಷ್ಟು ಗ್ರಂಥಗಳನ್ನು ಓದಿ, ವಿಶ್ವವಿದ್ಯಾಲಯಗಳ ಪದವಿಯನ್ನು ಪಡೆದರೂ ನಮ್ಮಲ್ಲಿ ಇರುವ ಆಸೆ ದೂರಾಗದಿದ್ದರೆ, ರೋಷ ಅರ್ಥಾತ್ ಕೋಪತಾಪಗಳು ಶಮನವಾಗದಿದ್ದರೆ ಅಂಥ ಓದಿನಿಂದ ಏನು ಪ್ರಯೋಜನ? ಜ್ಞಾನಿಗಳ ಮಾತುಗಳನ್ನು ಕೇಳಿಯೂ ದುರ್ಗುಣಗಳಿಂದ ಮುಕ್ತರಾಗದಿದ್ದರೆ ಎಷ್ಟು ಕೇಳಿ ಏನು ಪ್ರಯೋಜನ? ವಾಸ್ತವವಾಗಿ ಈ ಮಾತು ಇಂದು ಹೆಚ್ಚು ಪ್ರಸ್ತುತವಾಗು ವಂತಿದೆ. ಏಕೆಂದರೆ ಇಂದು ಹೆಚ್ಚು ಓದಿದಂತೆಲ್ಲ ಆಶೆಯೂ ರೋಷವೂ ಅದೇ ಪ್ರಮಾಣದಲ್ಲಿ ಹೆಚ್ಚುತ್ತಿದೆ. ಹೆಚ್ಚು ಓದಿದವರು ಕಡಿಮೆ ಓದಿದವರಿಗಿಂತ ಹೆಚ್ಚು ವರದಕ್ಷಿಣೆಗಾಗಿ ಹೆಚ್ಚು ಸಂಬಳಕ್ಕಾಗಿ ಹಂಬಲಿಸುತ್ತಾರೆ; ಅಧಿಕಾರಕ್ಕಾಗಿ ಆಸೆ ಪಡುತ್ತಾರೆ. ಆಸೆ ಈಡೇರದಿದ್ದರೆ ರೋಷಕ್ಕೆ ಗುರಿಯಾಗುತ್ತಾರೆ, ದ್ವೇಷ ವೈಷಮ್ಯಗಳನ್ನು ಸಾಧಿಸಲು ನಿರತರಾಗುತ್ತಾರೆ. ಹೀಗಾಗಿ ಅನೇಕರು ತಮ್ಮ ಬದುಕಿನಲ್ಲಿ ಶಾಂತಿ–ಸಮಾಧಾನ–ಸಂತೃಪ್ತಿಯನ್ನು ಕಳೆದುಕೊಳ್ಳುತ್ತಾರೆ. ಅದೇ ರೀತಿ ಪುರಾಣ ಪ್ರವಚನಗಳನ್ನು, ಶರಣರ ಅನುಭಾವದ ನುಡಿಗಳನ್ನು ಕೇಳುವುದರ ಉದ್ದೇಶವೂ ನಮ್ಮಲ್ಲಿರುವ ಆಸೆ ಮತ್ತು ರೋಷಗಳನ್ನು ಕಳೆದುಕೊಳ್ಳುವುದೇ ಆಗಿದೆ. ಸಾಕಷ್ಟು ಓದಿ, ಕೇಳಿ ಆಸೆ–ಆಮಿಷಗಳಿಂದ, ಕೋಪ–ತಾಪಗಳಿಂದ ಮುಕ್ತರಾಗದಿದ್ದರೆ ಅದು ನಿಜವಾದ 'ಓದು' ಅಲ್ಲ. ಆ ಓದಿನಿಂದ ಕರಗತವಾದ ವಿದ್ಯೆಯೂ ನಿಜವಾದ ವಿದ್ಯೆಯಲ್ಲ. ಅದಕ್ಕಾಗಿಯೇ ಜ್ಞಾನಿಗಳು 'ಸಾ ವಿದ್ಯಾ ಯಾ ವಿಮುಕ್ತಯೇ' ಎಂಬ ಮಾತನ್ನು ಹೇಳುತ್ತಾರೆ. ನಿಜವಾದ ವಿದ್ಯೆ ನಮ್ಮನ್ನು ಕೇವಲ ಆಶೆ ಆಮಿಷಗಳಿಂದ ಮಾತ್ರವಲ್ಲ ಭವಚಕ್ರದಿಂದಲೇ ಮುಕ್ತಗೊಳಿಸುತ್ತದೆ ಎಂಬುದು ಇದರ ಅರ್ಥ. ಆದ್ದರಿಂದ ಹೆಚ್ಚು ಓದಿದವರು ಹೆಚ್ಚು ಹೆಚ್ಚು ಕೇಳಿದವರು ಆಶೆ–ರೋಷಗಳಿಂದ ಮುಕ್ತರಾಗಬೇಕೆಂಬ ಆಶಯ ಇಲ್ಲಿದೆ.

ಭಕ್ತರು ಭಕ್ತಿಯಿಂದ ಭಗವಂತನ ಸೇವೆ ಮಾಡುತ್ತಾರೆ. ಇಷ್ಟಲಿಂಗಕ್ಕೆ ಮಜ್ಜನಾದಿಗಳನ್ನು ನೆರವೇರಿಸುತ್ತಾರೆ. ಪರಿಶುದ್ಧ ಮನಸ್ಸಿನಿಂದ ಮಾಡುವ ಸೇವೆ, ಪೂಜೆಗಳು ಮಾತ್ರ ಫಲಪ್ರದವಾಗುತ್ತವೆ. ಆದರೆ ಮನಸ್ಸಿನಲ್ಲಿ ಅನೇಕ ಲೌಕಿಕ ಆಸೆ–ಆಮಿಷ, ದ್ವೇಷ–ಅಸೂಯೆಗಳನ್ನು ಇಂಬಿಟ್ಟುಕೊಂಡು ಭಕ್ತಿಯನ್ನಾಚರಿಸಿದರೆ ನಿರರ್ಥಕವಾಗುವುದು. ಅದು ಸಮಯ ಮತ್ತು ವಸ್ತುಗಳ ಅಪವ್ಯಯವೇ ಹೊರತು ಮತ್ತೇನೂ ಅಲ್ಲ. ಇಂಥ ಬಹಿರಾಡಂಬರದ ಮಜ್ಜನ ಅಭಿಷೇಕಾದಿಗಳು ಸದ್ಭಕ್ತರಿಗೆ ಸಲ್ಲವು. ಆದ್ದರಿಂದ ಭಕ್ತಿ ಸಾಧನೆಯಲ್ಲಿ ತೊಡಗಿರುವವರು ಆಸೆ ಮತ್ತು ರೋಷಗಳಿಂದ ಮುಕ್ತರಾಗಿ ತಮ್ಮ ಸಾಧನೆಯನ್ನು ಮುಂದುವರಿಸಬೇಕು. 'ಆಸೆ ಎಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯ' ಎಂಬ ಶರಣೆ ಆಯ್ದಕ್ಕಿ ಲಕ್ಕಮ್ಮನ ಮಾತು ಭಕ್ತರಲ್ಲಿ ಈ ಲೌಕಿಕ ಆಸೆಗಳು ಇರಬಾರದೆಂಬುದನ್ನು ಸ್ಪಷ್ಟಪಡಿಸುತ್ತದೆ. ಆದ್ದರಿಂದ ಅಧ್ಯಾತ್ಮ ಗ್ರಂಥಗಳನ್ನು ಓದಿ

ನಾಗನೂರು ಶ್ರೀ ರುದ್ರಾಕ್ಷಿಮಠ, ಬೆಳಗಾವಿ

ಜ್ಞಾನಿಗಳಾದವರು, ಶರಣರ ಅನುಭಾವದ ನುಡಿಗಳನ್ನು ಕೇಳಿ ಭಕ್ತರಾದವರು ಆಸೆ-ಆಮಿಷ, ವಿಷಯವಾಸನೆ, ಕೋಪ-ತಾಪ, ದ್ವೇಷವೈಷಮ್ಯಗಳಿಂದ ಮುಕ್ತರಾಗಬೇಕು. ತಮ್ಮ ಅಂತರಂಗ ಬಹಿರಂಗಗಳೆರಡನ್ನು ಶುದ್ಧವಾಗಿಸಿಕೊಂಡು ತಮ್ಮ ಸಾಧನೆಯನ್ನು ಮುಂದುವರಿಸಬೇಕು. ನಡೆನುಡಿಗಳನ್ನು ಒಂದಾಗಿಸಿಕೊಳ್ಳಬೇಕು ಮಾತಿಗೂ ಕೃತಿಗೂ ಸಮನ್ವಯವನ್ನು ಸಾಧಿಸಬೇಕು. ಆಗ ಮಾತ್ರ ಅವರ ಸಾಧನೆ ಫಲಪ್ರದವಾಗಲು ಸಾಧ್ಯ.

ಬಸವಾದಿ ಶಿವಶರಣರು ನೈತಿಕ ಬದುಕಿಗೆ, ಪರಿಶುದ್ಧ ಆಚರಣೆಗೆ ಒತ್ತು ನೀಡುತ್ತಾರೆ. ಬರೀ ಒಳ್ಳೆಯ ಮಾತುಗಳನ್ನಾಡಿದರೆ ಸಾಲದು, ನಮ್ಮ ಮಾತಿನಂತೆ ಮನಸ್ಸೂ ಇರಬೇಕಾದುದು ಅತ್ಯವಶ್ಯ. ಅದಕ್ಕಾಗಿ ಬಸವಣ್ಣನವರು ಕೊಡುವ ಪ್ರಚಲಿತ ದೃಷ್ಟಾಂತ ಮಾರ್ಮಿಕವಾದುದು. ಡೊಂಬರಾಟವನ್ನು ನೋಡದವರಾರು? ಡೊಂಬರು ಅನೇಕ ಚಮತ್ಕಾರಿಕ ಕಾರ್ಯಗಳನ್ನು ಜನರಂಜನೆಗಾಗಿ ಮಾಡುತ್ತಾರೆ-ಅಲ್ಲವೆ? ಹಾಗೆಯೆ ಧಾರ್ಮಿಕ ಆಚರಣೆಗಳನ್ನು ಬಹಿರಾಡಂಬರದಲ್ಲಿ ಪ್ರದರ್ಶಿಸುವವರನ್ನು ಬಸವಣ್ಣನವರು ಜಾತಿಡೊಂಬರು ಎಂದು ಹೀಗಳೆಯುತ್ತಾರೆ. ಇಂದೂ ಕೂಡ ಅಂತರಂಗದಲ್ಲಿ ಶಿವಯೋಗದ ಸವಿಸುಖವನ್ನು ಅನುಭವಿಸದೇ ಬಹಿರಂಗದಲ್ಲಿ ಆಡಂಬರದ ಪೂಜೆಯನ್ನು ಕೈಕೊಂಡು ಜನರನ್ನು ಡೊಂಬರಂತೆ ಮೋಸಗೊಳಿಸುವ ವ್ಯಕ್ತಿಗಳನ್ನು ನಾವು ಕಾಣುತ್ತೇವೆ. ಅಲ್ಲಿ ಲಿಂಗಾಂಗ ಸಾಮರಸ್ಯದ ಲವಲೇಶವೂ ಇಲ್ಲ. ಬಹಿರಂಗದ ವ್ಯಾಪಾರ ನಿಂತಿಲ್ಲ. ಪೂಜಾ ಮಂಟಪವನ್ನು ಬಹಿರಂಗದಲ್ಲಿ ನಿರ್ಮಿಸಿ ಹೂ ಮತ್ತಿತರ ಅಲಂಕಾರಿಕ ವಸ್ತುಗಳಿಂದ ಮಂಟಪವನ್ನು ಸಿಂಗರಿಸಿ, ಜೊತೆಗೆ ತಾವೂ ಸಿಂಗರಿಸಿಕೊಂಡು ಇಷ್ಟಲಿಂಗ ಪೂಜೆ ಮಾಡುವ ಇಂಥ ಜಾತಿ ಡೊಂಬರನ್ನು ಕಂಡು ದೇವರು ನಗುತ್ತಾನೆ ಎನ್ನುತ್ತಾರೆ ಬಸವಣ್ಣನವರು. ಏಕೆಂದರೆ ಅವರ ಪೂಜೆ ಕೇವಲ ಡೊಂಬರ ಪ್ರದರ್ಶನವಿದ್ದಂತೆ. ಮಾತಿಗೂ ಮನಸ್ಸಿಗೂ ಅಲ್ಲಿ ಸಾಮರಸ್ಯವಿಲ್ಲ. ಒಳಹೊರಗೂ ಒಂದಾಗದ, ಮಾತಿನಂತೆ ಮನವಿಲ್ಲದ ಈ ಡೊಂಬರು ಜಾತಿ ಶ್ರೇಷ್ಠತ್ವನ್ನು ಮೆರೆಯುತ್ತ, ನುಡಿಯಲ್ಲಿ ಇಷ್ಟಲಿಂಗದ ನಿಷ್ಠೆಯನ್ನು ಪ್ರತಿಪಾದಿಸುತ್ತ ಸ್ಥಾವರಲಿಂಗಗಳನ್ನು ಪ್ರತಿಷ್ಠಾಪಿಸು-ವವರು. ಸ್ಥಾವರಲಿಂಗ ಪ್ರತಿಷ್ಠಾಪನೆ, ಕೋಟಿ ಬಿಲ್ವಾರ್ಚನೆ, ಲಕ್ಷದೀಪೋತ್ಸವ ಗಳಲ್ಲಿ ಹಣಗಳಿಕೆಯ ತಂತ್ರವಿದೆ, ಆಸೆ-ಆಮಿಷಗಳಿವೆ. ಅವರ ಅಂತರಂಗ ಪರಿಶುದ್ಧವಾಗಿಲ್ಲ.. ಅಂತೆಯೇ ಮಾತಿನಂತೆ ಅವರ ಮನವಿಲ್ಲ. ದೇವರನ್ನು ನಂಬಿಯೂ ನಂಬದ ಈ ಡಂಭಕರಿಗೆ ಶಿವನೊಲುಮೆ ಎಂಬುದು ಕನಸಿನ ಮಾತು. ಆಸೆ-ರೋಷಗಳನ್ನು ಕಳೆದುಕೊಂಡು, ಮಾತು ಮನಸ್ಸುಗಳನ್ನು ಒಂದಾಗಿಸಿಕೊಂಡು ಬಹಿರಂಗದ ಪ್ರದರ್ಶನವಿಲ್ಲದೆ ಅಂತರಂಗದಲ್ಲಿ ಶಿವಧ್ಯಾನ ನಿರತರಾದ ಶರಣರು ಮಾತ್ರ ಶಿವನೊಲುಮೆಯನ್ನು ಸಾಧಿಸಬಲ್ಲರು. ಪೂಜೆಯ ಸೋಗು ಧರಿಸಿದ ವೇಷಧಾರಿಗಳು ಬಹಿರಂಗದಲ್ಲಿ ಕುಳಿತು ಪೂಜೆ ಮಾಡುತ್ತ ಮಹಾಲಿಂಗದ ಭಕ್ತರಂತೆ ನಟಿಸುತ್ತಾರೆ. ಪೂಜೆಯ ನಂತರ ವೈಯಕ್ತಿಕ ದ್ವೇಷಾಸೂಯೆಗಳಲ್ಲಿ, ಪರನಿಂದೆಯಲ್ಲಿ ತೊಡಗುತ್ತಾರೆ. ಇಂಥವರ ಪೂಜೆಯನ್ನು ಕೂಡಲಸಂಗಮನಾಥನೆಂದೂ ಸ್ವೀಕರಿಸಲಾರ ಬದಲಾಗಿ ಇಂಥವರನ್ನು ಕಂಡು ನಗುತ್ತಾನೆ ಎಂದು ಲಿಂಗಾಯತ ಧರ್ಮದ ಸಂಸ್ಥಾಪಕರಾದ ಗುರು ಬಸವಣ್ಣನವರು ಈ ವಚನದಲ್ಲಿ ಸ್ಪಷ್ಟಪಡಿಸಿದ್ದಾರೆ.

■■

# ಬಸವಪುರಾಣ : ಒಂದು ಚಿಂತನೆ

● ಡಾ. ಬಸವರಾಜ ಜಗಜಂಪಿ

ವೇದ ಆಗಮಗಳಂತೆ ಭಾರತೀಯರ ಜನಜೀವನದಲ್ಲಿ ಹಾಸುಹೊಕ್ಕಾಗಿ ಹೆಣೆದುಕೊಂಡಿರುವ ಪುರಾಣಗಳು ತುಂಬ ಪವಿತ್ರ ಹಾಗು ಪೂಜ್ಯವಾಗಿವೆ. ವೇದಗಳಿಗೆ ಬರೆದ ಭಾಷ್ಯಗಳೇ ಪುರಾಣಗಳೆಂಬ ಭಾವನೆ ಭಾರತೀಯರದು. ಉದಾತ್ತ ಚರಿತೆಯ, ಮಹಾನ್ ವಕ್ತಿಗಳ ಜೀವನದ ಗಾಥೆಗಳನ್ನು ಅತ್ಯಂತ ಮನೋಜ್ಞವಾಗಿ ನಿರೂಪಿಸುವ ಪುರಾಣಗಳು, ಅವರ ಬದುಕು–ಧ್ಯೇಯ–ಆದರ್ಶಗಳನ್ನು ಸಾಧಿಸುವತ್ತ ನಮ್ಮನ್ನು ಆಕರ್ಷಿಸುತ್ತವೆ. ಅಂಥ ವ್ಯಕ್ತಿಗಳ ಬದುಕು, ಅದೇ ಮಾರ್ಗದಲ್ಲಿ ಸಾಗಲು ಇತರರಿಗೆ ಪ್ರೇರಣೆಯನ್ನೊದಗಿಸುತ್ತದೆ.

ತಾತ್ವಿಕ ಹಾಗು ಧಾರ್ಮಿಕ ಅಂಶಗಳನ್ನು ತುಂಬ ಸರಳವಾಗಿ ಬೋಧಿಸುವ ಪುರಾಣಗಳಲ್ಲಿ ಪ್ರಮುಖವಾಗಿ ಐತಿಹಾಸಿಕ ಕಥಾಬೇರುಗಳಿದ್ದರೂ ಅದರ ಕಟ್ಟಡವು ಕಲ್ಪನೆಯ ಮೇಲೆಯೇ ಬೆಳೆಯುತ್ತದೆ. ಬ್ರಹ್ಮ ಪುರಾಣದಿಂದ ಬ್ರಹ್ಮಾಂಡ ಪುರಾಣದವರೆಗಿನ ಎಲ್ಲ ಹದಿನೆಂಟು ಪುರಾಣಗಳು ಧಾರ್ಮಿಕ–ನೈತಿಕ–ಸಾಮಾಜಿಕ–ಸಾಹಿತ್ಯಕ ಹಾಗು ಸಾಂಸ್ಕೃತಿಕ ಮೌಲ್ಯಗಳನ್ನು ಒಳಗೊಂಡಿವೆ. ಅಂತೆಯೆ ಪುರಾಣಗಳ ಅಭ್ಯಾಸ ಅತ್ಯಂತ ಪ್ರಯೋಜನಕಾರಿಯಾಗಿದೆ.

ವೇದಗಳ ಕಾಲದಿಂದಲೂ ನಿರಂತರವಾಗಿ ಸಾಗಿ ಬರುತ್ತಿರುವ ಭಾರತದ ಆಧ್ಯಾತ್ಮಿಕ ಪ್ರಗತಿಯನ್ನು ಅನೇಕ ಮತಪ್ರವರ್ತಕರು ಆಗಾಗ ಪರಿಷ್ಕರಿಸಿ, ಸಮಾಜಕ್ಕೆ ಅಗತ್ಯವಾದ ಧರ್ಮ–ನೀತಿಗಳ ಬಗೆಗೆ ಜ್ಞಾನ ನೀಡಿ, ಸಾಮಾಜಿಕ ಜಾಗೃತಿಗೈಯುವ ಕಾರ್ಯದಲ್ಲಿ ಅವಿರತವಾಗಿ ತೊಡಗಿದ್ದಾರೆ. ಈ ಮಹಾನುಭಾವಿಗಳ, ವಿಶ್ವವಿಭೂತಿಗಳ ನಕ್ಷತ್ರ ಪುಂಜದಲ್ಲಿ ಧ್ರುವನಕ್ಷತ್ರದಂತೆ ತೊಳಗಿ ಬೆಳಗುತ್ತಿದ್ದಾರೆ ಜಗಜ್ಯೋತಿ ಬಸವಣ್ಣನವರು.

ಜಾತಿ–ಮತ–ಪಂಥಗಳ ಕಟ್ಟುಕಟ್ಟಳೆಗಳನ್ನು ಅಲ್ಲಗಳೆದು, 'ಮನುಷ್ಯ ಜಾತಿ ತಾನೊಂದೇ' ಎಂಬುದನ್ನು ಘಂಟಾಘೋಷವಾಗಿ ಸಾರಿ, ಅದನ್ನು ಜನಮನದಲ್ಲಿ ಶಾಶ್ವತವಾಗಿ ನೆಲೆಗೊಳಿಸಲು ಮನಸಾರೆ ಯತ್ನಿಸಿ ಯಶಸ್ವಿಯಾದ ಅಣ್ಣ ಬಸವಣ್ಣ ಸಾರ್ಥಕ ವಿಶ್ವಮಾನವ. ಬಸವಣ್ಣ ಸಾಧಿಸಿದ್ದು, ಬೋಧಿಸಿದ್ದು ವಿಶ್ವಧರ್ಮವನ್ನು. ಧರ್ಮ ಸಹಿಷ್ಣುತೆಯನ್ನು ಅರ್ಥವತ್ತಾಗಿ ಅಳವಡಿಸಿಕೊಂಡು, ಭಾವೈಕ್ಯದ ತುತ್ತತುದಿಗೇರಿದುದರಿಂದಲೇ ಲಿಂಗಾಯತ ಧರ್ಮವು ವಿಶ್ವಧರ್ಮವೆನಿಸಿದೆ. ಅಂತೆಯೇ ವಿಶ್ವಮಾನ್ಯವೆನಿಸಿದೆ. ಮಾನವನಲ್ಲಿ ಮಹಾದೇವನನ್ನು ದರ್ಶಿಸಿ, ಗೌರವಿಸಿದ ಲಿಂಗಾಯುತರದು ಪುಣ್ಯ ಸಂಸ್ಕೃತಿ. ಮಾನವೀಯತೆಯ ಚಿರಂತನ ಮೌಲ್ಯಗಳನ್ನು ಗರ್ಭೀಕರಿಸಿಕೊಂಡು ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ ಲಿಂಗಾಯತ ಸಾತ್ವಿಕ ಧರ್ಮವೆನಿಸಿದೆ. ಲಿಂಗಾಯತ ಧರ್ಮವು ತನ್ನದೇ ಆದ ವಿಶಿಷ್ಟ ಪುರಾಣ ಪರಂಪರೆಯನ್ನು ಬೆಳೆಸಿಕೊಂಡಿದೆ. ಬಸವ ಪುರಾಣ, ಪ್ರಭುದೇವರ ಪುರಾಣ, ಮಹಾದೇವಿಯಕ್ಕನ ಪುರಾಣ, ದೇವಾಂಗದಾಸಿಮಯ್ಯನ ಪುರಾಣ, ಚನ್ನಬಸವ ಪುರಾಣ ಇವೇ ಮೊದಲಾದವು ಜನಸಾಮಾನ್ಯರನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿತವಾಗಿವೆ. ಶಿವನನ್ನು ಶಿವಶರಣರನ್ನು ಕುರಿತು ಕೃತಿಗಳನ್ನು ರಚಿಸುವುದೇ ಕವಿಗಳ ಉದ್ದೇಶ. ಅದೇ ಅವರ ಮಾರ್ಗ. ಹರಿಹರನಿಂದ ಉದಿತವಾದ ಈ ಮಾರ್ಗದಲ್ಲಿ ರಾಘವಾಂಕ, ಭೀಮಕವಿ, ಚಾಮರಸ, ವಿರುಪಾಕ್ಷಪಂಡಿತ, ಷಡಕ್ಷರದೇವ, ಸಿದ್ಧನಂಜೇಶ ಮೊದಲಾದ ಕವಿಗಳು ಸಾಗಿ ಉದ್ಗ್ರಂಥಗಳನ್ನು ರಚಿಸಿದ್ದಾರೆ. ಇವರೆಲ್ಲರೂ ಬರೆದುದು ಸತ್ತವರ ಕಥೆಯನ್ನಲ್ಲ; ಸತ್ಯಶರಣರ ಚರಿತ್ರೆಯನ್ನು.

ಬಸವಣ್ಣನವರ ಚರಿತ್ರೆಯನ್ನು ತಿಳಿಯಲು ಉಪಲಬ್ಧವಿರುವ ಗ್ರಂಥಗಳಲ್ಲಿ ಚಾರಿತ್ರಿಕ ದೃಷ್ಟಿಗಿಂತ ಪೌರಾಣಿಕ ದೃಷ್ಟಿ ಪ್ರಧಾನವಾಗಿದ್ದು, ಇತಿಹಾಸ ಘಟನೆಗಳಿಗಿಂತ ಪವಾಡಗಳಿಗೆ ಹೆಚ್ಚಿನ ಅವಕಾಶವಿದೆ. ಬಸವಣ್ಣನವರ ವ್ಯಕ್ತಿತ್ವ, ಅವರುಗೈದ ಪವಾಡಗಳ ಮೇಲೆ ನಿಂತಿಲ್ಲವೆಂಬುದು ಸ್ಪಷ್ಟ. ಅಂತೆಯೇ ಬಸವಣ್ಣನವರ ಚರಿತ್ರೆಗಿಂತ ಅವರ ಚಾರಿತ್ರ್ಯಕ್ಕೆ,

ವಾತ್ಸಲ್ಯ, ವಿನಾಯಕ ಕಾಲೋನಿ, ಶಾಹೂನಗರ ಬೆಳಗಾವಿ–೫೯೦೦೧೦

ವ್ಯಕ್ತಿಗಿಂತ ವ್ಯಕ್ತಿತ್ವಕ್ಕೆ ನಾವು ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಬೇಕಾಗಿದೆ. ಬಸವಣ್ಣನವರ ಉಜ್ವಲವಾದ ವ್ಯಕ್ತಿತ್ವವನ್ನು ತಿಳಿದುಕೊಳ್ಳುವಲ್ಲಿ ಅವರಿಂದ ರಚಿತವಾದ ವಚನಗಳು ನೆರವಿಗೆ ನಿಲ್ಲುತ್ತವೆ.

ಬಸವಣ್ಣನವರ ಚರಿತ್ರೆಯನ್ನು ಕನ್ನಡದಲ್ಲಿ ಮಹಾಕವಿ ಹಂಪೆಯ ಹರಿಹರದೇವ 'ಬಸವರಾಜದೇವರ ರಗಳೆ' ಎಂಬ ಹೆಸರಿನಲ್ಲಿ, ತೆಲಗು ಭಾಷೆಯಲ್ಲಿ ಪಾಲ್ಕುರಿಕೆ ಸೋಮನಾಥನು 'ಬಸವ ಪುರಾಣಮು' ಎಂಬ ಹೆಸರಿನಲ್ಲಿ ರಚಿಸಿದರು. ಇವರ ನಂತರ ಭೀಮಕವಿಯು ಕ್ರಿ. ಶ. ೧೩೬೯ ರಲ್ಲಿ 'ಬಸವ ಪುರಾಣ'ವನ್ನು ರಚಿಸಿ, ಸಮಸ್ತ ಕನ್ನಡಿಗರಿಗೆ ಮಹದುಪಕಾರ ಮಾಡಿರುವನು. ತನ್ನ ಕೃತಿಯನ್ನು ಭೀಮಕವಿಯು 'ಬಸವ ಪುರಾಣ' 'ಬಸವ ಚರಿತೆ' 'ಬಸವ ಕಥೆ' ಎಂದು ಕರೆದಿದ್ದಾನೆ.

ಕನ್ನಡ ಸಾಹಿತ್ಯದಲ್ಲಿ ಭೀಮಕವಿಗೆ ವಿಶಿಷ್ಟವಾದ ಸ್ಥಾನವಿದೆ. ಸಮಕಾಲೀನ ಕವಿಗಳಲ್ಲಂತೂ ಭೀಮಕವಿ ಅತ್ಯಂತ ಶ್ರೇಷ್ಠನೆನಿಸಿದ್ದಾನೆ. ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಹಲವಾರು ಪ್ರಥಮಗಳನ್ನು ಸಾಧಿಸಿ ವಿಶಿಷ್ಟನೆನಿಸಿದ್ದಾನೆ. ಭಾಮಿನಿ ಷಟ್ಪದಿಯಲ್ಲಿ ಮೊಟ್ಟಮೊದಲು ಕಾವ್ಯವನ್ನು ರಚಿಸಿ, ಆ ದೃಷ್ಟಿಯಿಂದ ಭಾಮಿನಿ ಷಟ್ಪದಿಕಾರರಿಗೆಲ್ಲ ಆಚಾರ್ಯನೆನಿಸಿದ್ದಾನೆ.

ಬಸವಣ್ಣನವರನ್ನು ಕುರಿತು ಕನ್ನಡದಲ್ಲಿ ರಚಿತಗೊಂಡ ಪುರಾಣಗಳಲ್ಲಿ ಭೀಮಕವಿಯ 'ಬಸವಪುರಾಣ' ಮೊಟ್ಟಮೊದಲನೆಯದು. ಬಸವಣ್ಣನವರು ಭಕ್ತಿಭಂಡಾರಿಯೆನಿಸಿದವರು. ಸಾರ್ಥಕ ಜೀವನ ನಡೆಸಿದವರು. ಅವರ ವಿಕಾಸಶೀಲ ಜೀವನ ಹಾಗು ಪ್ರಗತಿಶೀಲ ವ್ಯಕ್ತಿತ್ವದ ಸಹಜ ನಿರೂಪಣೆಯಿಂದ ಕೂಡಿಕೊಂಡಿರುವ ಈ ಕಾವ್ಯ ಅತ್ಯಂತ ಸರಳ ಶೈಲಿಯಲ್ಲಿದೆ. ಅಂತೆಯೇ ಶತಶತಮಾನಗಳು ಕಳೆದರೂ ಜನಮನದಲ್ಲಿ ಗಟ್ಟಿಯಾಗಿ ಉಳಿದಿದೆ.

ಬಸವಣ್ಣನವರ ಪವಾಡಸದೃಶ ಜೀವನದಿಂದ ಪ್ರಭಾವಿತನಾದ ಭೀಮಕವಿ ಚಾರಿತ್ರಿಕ ಅಂಶಗಳಿಗಿಂತ ಪುರಾಣ ಮಾರ್ಗಕ್ಕೆ ಹೆಚ್ಚು ಒತ್ತು ಕೊಟ್ಟಿದ್ದಾನೆ. ಚಮತ್ಕಾರಗೊಳಿಸುವ ಪವಾಡಗಳಲ್ಲಿ ಅಣ್ಣನ ವ್ಯಕ್ತಿತ್ವ ಮರೆಯಾಗದಂತೆ ಎಚ್ಚರ ವಹಿಸಿದ್ದಾನೆ. ಮಹೋನ್ನತ ವ್ಯಕ್ತಿತ್ವಕ್ಕೆ ತಕ್ಕುದಾದ ಸನ್ನಿವೇಶಗಳನ್ನು ತುಂಬ ಕೌಶಲದಿಂದ ಚಿತ್ರಿಸಿದ್ದಾನೆ. ಚರಿತ್ರೆ ಮತ್ತು ಪುರಾಣಗಳೆರಡನ್ನು ಹಾಸುಹೊಕ್ಕಾಗುವಂತೆ ಚಿತ್ರಿಸಿ, ಓದುಗರಿಗೆ ಆಕರ್ಷಣವಾಗುವಂತೆ ಕೃತಿ ರಚಿಸಿದ್ದು ಭೀಮಕವಿಯ ಹೆಗ್ಗಳಿಕೆ. ಅಣ್ಣನ ಜೀವನಕ್ಕೆ ಸಂಬಂಧಿಸಿದ ಐತಿಹಾಸಿಕ ಅಂಶಗಳು ಕೂಡ ಇಲ್ಲಿ ಹೆಚ್ಚು ವಿವರವಾಗಿ ಬಂದಿವೆ.

ಬಸವ ಪುರಾಣವನ್ನು ರಚಿಸಬೇಕೆಂಬ ಆಕಾಂಕ್ಷೆಯ ಅಂಕುರಾರ್ಪಣವಾದಾಗ, ತನ್ನ ಬಡಮತಿಯಿಂದ ಬಸವರಾಜನ ಕೃತಿಯನ್ನು ರಚಿಸುವುದೆಂತು? ಎಂಬ ಚಿಂತಾಲೋಚನೆಯಲ್ಲಿ ಭೀಮಕವಿ ನಿದ್ರೆಹೋಗಲು, ಕನಸಿನಲ್ಲಿ ಪಾಲ್ಕುರಿಕೆ ಸೋಮನಾಥ ಹಾಗು ತಂದೆ ಶಿವದೇವಾರ್ಯರು ಪ್ರಸನ್ನರಾಗುವರು. ಅವರ ಪ್ರಸಾದವೇ ಈ ಬಸವಪುರಾಣದ ರಚನೆಯ ಆಶಾಂಕುರ ಬೆಳೆದು, ಪಲ್ಲವಿಸಿ ಮಹಾವೃಕ್ಷವಾಗಲು ಅಮೃತಧಾರೆಯಾಯಿತು. 'ನಿನ್ನಾತ್ಮದೊಳಗಿದ್ದು ನಾವು ರಚಿಸುವೆವು, ಬಸವಪುರಾಣವನ್ನು ಬರೆದುಕೋ' ಎಂಬ ಅಭಯ ವಾಣಿಯನ್ನು ನಿಷ್ಠೆಯಿಂದ ಶಿರದಲ್ಲಿ ಧರಿಸಿದ ಭೀಮಕವಿ ಕಾವ್ಯರಚನೆಗೆ ತೊಡಗಿದನು. ವಿದ್ಯಾ ಪಾರಂಗತನೂ ತೆಲಗು-ಕನ್ನಡ ಉಭಯಭಾಷಾ ವಿಶಾರದನೂ ಆದ ಭೀಮಕವಿ, ತನ್ನ ಹಿರಿಯರಾದ ಶಿವಕವಿ ಹರಿಹರ ಮತ್ತು ರಾಘವಾಂಕರಿಗೆ ವಂದಿಸಿ, ಬಸವಪುರಾಣ ರಚಿಸಿದ್ದಾನೆ. ಎರಡನೆಯ ಮುಕ್ಕಣ್ಣನೆನಿಸಿದ ಬಸವಣ್ಣನವರ ಚರಿತ್ರೆಯನ್ನು ಹೇಳುವಲ್ಲಿ ಸ್ವಯಂಸ್ಫೂರ್ತವಾದ ಭಕ್ತಿ ಉತ್ಸಾಹಗಳು ಎದ್ದು ಕಾಣುತ್ತವೆ. ಜೊತೆಗೆ ಭೀಮಕವಿಯ ನಿರೂಪಣೆಯಲ್ಲಿ, ಕಾವ್ಯಶೈಲಿಯಲ್ಲಿ ಧಾರಾಳತೆಯಿದೆ, ಮಾರ್ದವ ಮಾಧುರ್ಯಗಳಿವೆ.

**ಶೀಲವಂತರ ಕೈಯ್ಯಕನ್ನಡಿ**
**ಕಾಲಕಂಠನ ಕೂರಲಗು ಕರು**
**ಣಾಳು ಬಸವಂ ಲಿಂಗಜಂಗಮದೊಳು ಸೊಬಗನೆನಿಸಿ**
**ಲೀಲೆಯಿಂ ನವಕುಸುಮಗಂಧ ಸ**
**ಮೇಳನದೊಳಿಪ್ಪಸಮ ಭಕ್ತಿ ವಿ**
**ಶಾಲನಂ ಬಣ್ಣಿಸಲಳವೆ ಸುರದನುಜಮನುಜರಿಗೆ**

ಎನ್ನುವ ಭೀಮಕವಿ, ಬಸವಣ್ಣನ ಅನನ್ಯ ವ್ಯಕ್ತಿತ್ವದ ಗಾಢವಾದ ಪ್ರಭಾವಕ್ಕೆ ಒಳಗಾಗಿದ್ದಾನೆ. ಅಂತೆಯೆ ತನ್ನ ಮನೋಧರ್ಮವನ್ನು ಹೀಗೆ ವ್ಯಕ್ತಪಡಿಸಿದ್ದಾನೆ.

**ಶ್ರೀ ಪರಂಜ್ಯೋತಿ ಸ್ವರೂಪಿಗೆ**
**ದೀಪವೊಂದಂ ಪೊತ್ತಿಸುವವೊಲು**
**ಮಾಪ ನಿರ್ಮಿತವಪ್ಪ ಪತ್ರಪ್ರಸವಬಿಸರವನು**
**ಆ ಪರಮಶಿವಗರ್ಪಿಸುವೆನಂ**
**ಬೀ ಪರಿಯದಲ್ಲದೆ ನುತಿಸಲಾ**
**ನಾಪನೇ ಸದುಭಕ್ತಿ ಭಂಡಾರಿಯ ಚರಿತ್ರವನು**

ಎನ್ನುತ್ತಾನೆ. ಭಾಮಿನಿ ಷಟ್ಪದಿಯಲ್ಲಿ ಬೃಹತ್ ಕಾವ್ಯವೊಂದನ್ನು ರಚಿಸಿಕೊಡುವಲ್ಲಿ ಸರಳ ಹಾಗು

ಮೃದುಮಧುರ ಶೈಲಿಯನ್ನನುಸರಿಸಿದ ಭೀಮಕವಿ, ಆಗಾಗ ಪಾಂಡಿತ್ಯ ಪ್ರದರ್ಶನಕ್ಕೂ ತೊಡಗುವುದುಂಟು. ಏನಿದ್ದರೂ ತಾತ್ಕಾಲಿಕ ಹಿತಮಿತ ವರ್ಣನೆಗಳನ್ನು ನೋಡಿದಾಗ ಭಾಮಿನಿ ಷಟ್ಪದಿ ರಚನೆಯಲ್ಲಿ ಭೀಮಕವಿಯ ಪಳಗಿದ ಹಸ್ತದ ಕೌಶಲವನ್ನು ಕಾಣಬಹುದು.

ಭೀಮಕವಿಯ ಬಸವಪುರಾಣವು ಲಿಂಗಾಯತ ಪುರಾಣ ಪರಂಪರೆಗೆ ಆದಿಯಾಗಿದೆ. ಬಸವ ಚರಿತೆಯೊಂದಿಗೆ ಆದಿಗಣಗಳ ಚರಿತೆಯನ್ನು ಮೇಳವಿಸಿ ಹೇಳಿದುದರಿಂದ ಈ ಪುರಾಣವು ಜನಸಾಮಾನ್ಯರ ಚಿತ್ತವನ್ನು ಸುಲಭವಾಗಿ ಸೆಳೆಯುವಲ್ಲಿ ಯಶಸ್ವಿಯಾಗಿದೆ. ತುಂಬ ಜನಪ್ರಿಯವೂ ಆಗಿದೆ.

ಬಸವಣ್ಣನವರ ಮಹಿಮಾತಿಶಯವನ್ನು ಬಿತ್ತರಿಸುವ ಬಸವಪುರಾಣವು ಅಣ್ಣನವರ ಭಕ್ತಿಯ ವೈಭವ, ಅವರು ಅನ್ಯ ಶರಣರೊಡನೆ ಬದುಕಿದ ರೀತಿ ಹೀಗೆ ಮುನ್ನಿನ ಪುರಾತನರ ಕಥೆಯನ್ನೊಳಗೊಂಡು ಮಹತ್ಕೃತಿಯೆನಿಸಿದೆ. ಬಸವಣ್ಣನವರ ಜೀವನಕ್ಕೆ ನೇರವಾಗಿ ಸಂಬಂಧಿಸಿದ ಕಥಾವಸ್ತುವನ್ನುಳ್ಳ ಈ ಕೃತಿ ಜನತೆಯಲ್ಲಿ ಭಕ್ತಿಭಾವ ಹುಟ್ಟಿಸಬೇಕೆಂಬ ಘನ ಉದ್ದೇಶ ಹೊಂದಿದೆ. ಹಲವಾರು ಶಿವಭಕ್ತರ ಕಥೆಗಳನ್ನೊಳಗೊಂಡು ಮಹಾಪುರಾಣವಾಗಿದೆ. ಅಲ್ಲಿ ಚಿತ್ರಿತವಾದ ಅಣ್ಣನವರ ಅದ್ಭುತ–ಅಗಾಧ ಹಾಗು ವಿಶಾಲವಾದ ವ್ಯಕ್ತಿತ್ವವು ಕಲಾತ್ಮಕವಾಗಿದ್ದು, ಕಾವ್ಯ ಕ್ಷೇತ್ರದಲ್ಲಿ ಎಲ್ಲೋರಾದ ಅಖಂಡ ಕೈಲಾಸ ದೇವಾಲಯಕ್ಕೆ ಸರಿಸಮಾನವಾಗಿದೆ. ಉತ್ತರ ಭಾರತದಲ್ಲಿ ತುಲಸೀದಾಸರ 'ರಾಮಚರಿತ ಮಾನಸ' ಎಂಬ ಕೃತಿ ಪಡೆದಷ್ಟೇ ಜನಪ್ರಿಯತೆಯನ್ನು ಕನ್ನಡ ಬಸವಪುರಾಣವು ಪಡೆದಿದೆ ಎನ್ನುವುದು ಗಮನಾರ್ಹ.

ಧಾರ್ಮಿಕ–ಸಾಮಾಜಿಕ–ಸಾಹಿತ್ಯಕ ಹಾಗು ರಾಜಕೀಯ ಕ್ಷೇತ್ರಗಳಲ್ಲಿ ಬೀಸುತ್ತಿದ್ದ ವಿಷಯ ಬಿರುಗಾಳಿಯನ್ನು ಸತ್ಯ, ಶಾಂತಿ, ಭಕ್ತಿ, ಪ್ರೇಮ, ದಯೆ, ಸಮತೆ, ಕಾಯಕ ಮೊದಲಾದ ಶಾಶ್ವತ ತತ್ತ್ವಗಳ ಸಂದೇಶ ನೀಡಿ ಶಮನಗೊಳಿಸಿದ ಅಣ್ಣ ಬಸವಣ್ಣನವರು ಮಾನವ ಕುಲಕೋಟಿಯ ಕಲ್ಯಾಣವನ್ನು ಸಾಧಿಸಿದರು.

'ಷಟ್ಪದಿಗಳ ರಾಜ' ಎನಿಸಿಕೊಂಡು, ಜನಮನ ಸೂರೆಗೈಯುವ ಲಲಿತ ಭಾಮಿನಿ ಷಟ್ಪದಿಯನ್ನು ಕಾವ್ಯದುದ್ದಕ್ಕೂ ಮೊಟ್ಟ ಮೊದಲ ಬಾರಿಗೆ ಬಳಸಿದ ಶ್ರೇಯಸ್ಸಿಗೆ ಪಾತ್ರನಾದವ ಭೀಮಕವಿ. ಬಸವಪುರಾಣದಲ್ಲಿ ಕನ್ನಡ ನಾಡಿನ ಅಸಾಮಾನ್ಯ ವ್ಯಕ್ತಿ ಹಾಗು ಸಮಷ್ಟಿ ವಿಶ್ವದ ಚೇತನ ಶಕ್ತಿಯಾದ ಬಸವಣ್ಣನವರ ಚಾರುಚರಿತೆ ಇದೆ.

ಆರು ಶತಮಾನಗಳಿಂದ ಕನ್ನಡ ನಾಡಿನ ಮೂಲೆಮೂಲೆಗಳಲ್ಲಿನ ಮಠಮಂದಿರಗಳಲ್ಲಿ ಪಠಣಗೊಳ್ಳುತ್ತಿರುವ ಪುರಾಣಕಾವ್ಯ ತುಂಬ ಸರಳ ಹಾಗು ಆಕರ್ಷಕ ಶೈಲಿಯಲ್ಲಿ ರಚಿತವಾಗಿದೆ. ಅಂತೆಯೇ ಅದರ ಲಯಲಾಲಿತ್ಯಗಳು ಜನಮನವನ್ನು ಸೂರೆಗೊಂಡಿವೆ. ಹರಿಹರನ 'ಬಸವರಾಜದೇವರ ರಗಳೆ'ಗಿಂತಲೂ ಭೀಮಕವಿಯ ಬಸವಪುರಾಣವು ಹೆಚ್ಚು ಜನಪ್ರಿಯವಾಗಿದೆ. ಆ ಕಾರಣದಿಂದ ಬಸವಭಕ್ತರು ಇದನ್ನು ತಪ್ಪದೆ ಆಲಿಸುವರು. ಇದನ್ನು ಓದಿದವರ, ಕೇಳಿದವರ ಪಾಪಗಳು ನಾಶವಾಗಿ, ಭವದ ಬೇರು ಕಿತ್ತು ಊರ್ಜಿತ ಭಕ್ತಿಯು ರಂಜಿಸುವುದು. ಅವರಿಗೆ ಸೂರ್ಯನ ತೇಜ, ಚಂದ್ರನ ಕಾಂತಿ, ಅಗ್ನಿಯ ಪ್ರತಾಪ, ಕುಬೇರನ ಸಂಪತ್ತು, ಮನ್ಮಥನ ರೂಪ, ದೇವೇಂದ್ರನ ಉನ್ನತ ಭೋಗಗಳು ಉಂಟಾಗುವವು ಎಂದು ಬಸವಪುರಾಣ ಶ್ರವಣದ ಫಲವನ್ನು ತಿಳಿಸಲಾಗಿದೆ.

ಲಿಂಗಾಯತ ಮಠಗಳಿಗೆ ಸರಿಗಟ್ಟುವ ಯಾವುದೊಂದು ವ್ಯವಸ್ಥೆಯಾಗಲಿ, ಸಂಸ್ಥೆಯಾಗಲಿ ಇನ್ನೊಂದಿಲ್ಲವೆನ್ನುವಂತೆ ನಮ್ಮ ಸಂಸ್ಕೃತಿಯ ನೆಲೆವನೆಗಳೆನಿಸಿದ ಮಠಗಳು ಅಸ್ತಿತ್ವಕ್ಕೆ ಬಂದು, ವಿದ್ಯಾಪ್ರಸಾರದ ವಿಶಿಷ್ಟ ಕೇಂದ್ರಗಳೆನಿಸಿವೆ. ಅಧ್ಯಾತ್ಮ ತರಬೇತಿಯ ತಾಣಗಳೆನಿಸಿವೆ. ಸಮಸ್ತ ಮನುಕುಲವನ್ನು ಪ್ರೀತಿಸುತ್ತ, ಸರ್ವಧರ್ಮೀಯರನ್ನು ತನ್ನ ತೆರೆದ ಬಾಹುಗಳಿಂದ ಸ್ವಾಗತಿಸಿ, ಅನ್ನದಾಸೋಹ ನಡೆಸುವ ಮೂಲಕ ಧರ್ಮಸಹಿಷ್ಣುತೆಯ ಕೇಂದ್ರಗಳೆನಿಸಿವೆ. ಭಾವೈಕ್ಯದ ತವರಾಗಿವೆ. ಅಂಥ ಮಠಗಳಲ್ಲಿ ಬಸವಪುರಾಣ ಪಠಣ ಹಾಗು ಪ್ರವಚನಗಳು ಇಂದಿಗೂ ಜರುಗುತ್ತಿವೆ. ಸಾಂಸ್ಕೃತಿಕ ಸಾಮರಸ್ಯ ಹಾಗು ವಿಶ್ವಶಾಂತಿಯನ್ನು ಸ್ಥಾಪಿಸುವ ಘನ ಉದ್ದೇಶವನ್ನು ಸಾರ್ಥಕವಾಗಿ ಸಾಧಿಸುತ್ತಿವೆ.

■■

# ಶಿವಬಸವ ಶ್ರೀಗಳು

● ಶ್ರೀ ಚಂದ್ರಕಾಂತ ಕುಸನೂರ

ಆಕಾಶ ಮುಟ್ಟುವ ಆಸೆ
ಇಲ್ಲ
ಕ್ಷಿತಿಜ ಸ್ಪರ್ಶಿಸುವ ಬಯಕೆ
ಇಲ್ಲ
ಇದ್ದದ್ದು ಸಾಕು
ಶಾಂತ–ಸಮೃದ್ಧತೆ

ಮೌನ ಮಾತಾಡುವ ವಿಷಯ
ದಾಸೋಹ
ಅನ್ನ–ಅಕ್ಷರದ
ದಾಸೋಹ
ಅಪಾರ ಪ್ರೀತಿ–ಆಕಾಶಕ್ಕೆ ಸಮ

ವ್ಯೋಮವ್ಯಾಪಿಸಿಕೊಂಡ
ಪ್ರೇಮಕ್ಕೆ
ಆದಿ–ಅಂತ್ಯದ ಚಿಂತೆ
ಯಾಕೆ ಇರಬೇಕು
ಕಾಲಕ್ಕೆ ಕೈ ಹಿಡಿದು
ನಡೆಸುವ ಕ್ಷಮತೆ
ಕೋಲು ತುದಿಗೆ

ಕಟ್ಟಿದ ಕಲ್ಪನೆಯ ಗೆಜ್ಜೆಗಳ
ನಾದ ಮಾಧುರ್ಯ
ಪರಿಶುದ್ಧ ದೃಷ್ಟಿಯಲ್ಲಿ
ಕಾಣುವುದೇ
ಕಾಯಕ

ಅಕ್ಷರ ಅಕ್ಷರದಲ್ಲಿ
ಶಿವನ ಸಾಕ್ಷಾತ್ಕಾರ ಮಾಡಿಸುವ
ಮೂಡಿಸುವ ಛಲ
ಅಪರಂಪಾರ

ಪರಿಶುದ್ಧ ಪ್ರೇಮಕ್ಕೆ
ತಾಳಿದ ಅವತಾರ
ಭಕ್ತಿ–ಮುಕ್ತಿಗಳಲ್ಲಿ
ದ್ವೈತ ಇಲ್ಲದ ಬದುಕು
ತ್ಯಾಗ ಭೋಗದ
ನಡುವೆ
ಭಕ್ತಿಯೋಗದ ನಂಟು
ಹುಡುಕಿ ಕೊಟ್ಟವರಿವರು
ಪರಮ ನಿರ್ಲಿಪ್ತರು

■■

# ಶೀಲಸಂಪನ್ನರು

● ವೀ. ಬ. ಭದ್ರಣ್ಣವರ

ಈ ಜಗದೊಳಗೆ ಜನಿಸಿದ ಎಲ್ಲ ಧರ್ಮಗಳು, ಶೀಲವನ್ನು ಮೂಲವಾಗಿ ಪ್ರತಿಪಾದಿಸುತ್ತವೆ. ಆದ್ದರಿಂದ ಆಯಾ ಧರ್ಮಾನುಯಾಯಿಯಾದ ಮಾನವನು ಶೀಲವನ್ನು ತನ್ನ ಜೀವನದ ಮೂಲ ಉಸಿರನ್ನಾಗಿ ಮಾಡಿಕೊಂಡು ಬಾಳಬೇಕು. ಶೀಲವೆಂದರೆ ಪರಿಶುದ್ಧ ಜೀವನವೇ ಶೀಲ. ಈ ಬಾಳಿನಲ್ಲಿ ಮಾನವನು ಗಳಿಸಿಕೊಳ್ಳಬೇಕಾದುದು ಉಳಿಸಿಕೊಳ್ಳಬೇಕಾದುದು ಪರಿಶುದ್ಧ ಜೀವನ. ಇದರಿಂದ ಮಾನವನ ಅಂತಿಮ ಗುರಿಯಾದ ಮುಕ್ತಿಯನ್ನು ಸಾಧಿಸಲು ಸಾಧ್ಯವಾಗುತ್ತದೆ. ಪರಿಶುದ್ಧ ಜೀವನದ ಪವಿತ್ರಾತ್ಮರು ತಮ್ಮ ಮುಕ್ತಿಯ ಗುರಿಯನ್ನೊಂದೇ ಸಾಧಿಸದೆ ಸಕಲ ಮಾನವ ಕೋಟಿಯ ಉದ್ಧಾರಕ್ಕಾಗಿ, ಮಹಾಶಾಂತಿಗಾಗಿ ಶ್ರಮಿಸುವರು, ಇಂತಹ ಶೀಲವಂತ ಮಹಾತ್ಮರು ಆತ್ಮವಿಶ್ವಾಸ, ಕಾರ್ಯಾಕಾಂಕ್ಷೆ, ಕಷ್ಟಸಹಿಷ್ಣುತೆ, ನಿಷ್ಕಪಟತೆ, ಸ್ಥೈರ್ಯ, ಧೈರ್ಯ, ಸಂತೃಪ್ತಿ, ದಯಾದೃಷ್ಟಿ, ಸರಿಸಮಾನತೆ ಮೊದಲಾದ ಉಚ್ಚಗುಣಗಳನ್ನು ಅಳವಡಿಸಿಕೊಂಡಿರುತ್ತಾರೆ. ಈ ಪ್ರಪಂಚ ಮತ್ತು ಪಂಚೇಂದ್ರಿಯಗಳ ಉಪಟಳದಿಂದ ದೂರಿರುತ್ತಾರೆ. ಇಂತಹ ಪವಿತ್ರ ಗುಣಗಳ ಶೀಲಸಂಪನ್ನ ಪವಿತ್ರಾತ್ಮರಲ್ಲಿ ನಾಗನೂರ ಶ್ರೀ ಶಿವಬಸವ ಶ್ರೀಗಳೊಬ್ಬರು. ಶೀಲವಂತರ ಬಗ್ಗೆ ಮಹಾ ಷಟ್‌ಸ್ಥಲಜ್ಞಾನಿ ಚೆನ್ನಬಸವಣ್ಣನವರ ಉಕ್ತಿಯಿದು.

**ಶೀಲವಂತನಾದೊಡೆ ಪ್ರಪಂಚ ನಾಸ್ತಿಯಾಗಿರಬೇಕು. ಶೀಲವಂತನಾದೊಡೆ ಪಂಚೇಂದ್ರಿಯಗಳು ನಾಸ್ತಿಯಾಗಿರಬೇಕು. ತನ್ನ ಕರ್ತೃವಿನಲ್ಲಿ ಸಕಲಸಂಶಯ ನಾಸ್ತಿಯಾದ ಶೀಲಕ್ಕೆ ಭವಂ ನಾಸ್ತಿ ಇವು ನಾಸ್ತಿಯಾದಲ್ಲದೆ ನಮ್ಮ ಕೂಡಲ ಚೆನ್ನಸಂಗಯ್ಯನಲ್ಲಿ ಶೀಲವಂತನೆನಿಸಬಾರದು. ಈ ವಂಚನೆಯ ಡಂಬಕ ಅಪಸ್ಮಾರಿಗಳಿಗೆಂತಯ್ಯಾ**

ಷಟ್‌ಸ್ಥಲ ಚಕ್ರವರ್ತಿಯ ಈ ಶೀಲಗಳಲ್ಲಿ ಈ ಪ್ರಪಂಚವು ನಾಸ್ತಿಯಾಗಬೇಕಾದರೆ ಪಂಚೇಂದ್ರಿಯಗಳು ಮೊದಲು ನಾಸ್ತಿಯಾಗಿರಬೇಕು. ಈ ಪಂಚೇಂದ್ರಿಯಗಳನ್ನು ಶ್ರೀ ಶಿವಬಸವ ಶಿವಯೋಗಿಗಳವರು ತಮ್ಮ ಅಂಕಿತದಲ್ಲಿಟ್ಟುಕೊಂಡು ಅವುಗಳನ್ನು ಜಯಿಸಿ ಹೇಗೆ ಶೀಲಸಂಪನ್ನರಾಗಿರುವರೆಂಬುದನ್ನು ನೋಡುವಾ.

**ನೇತ್ರಶೀಲ**

ಪಂಚೇಂದ್ರಿಯಗಳಲ್ಲಿ ಮೊದಲನೆಯದು ಕಣ್ಣು. ಅದು ಕಾಣಿಸಿದ ದಾರಿಯಲ್ಲಿ ಕಾಲು ಹೆಜ್ಜೆ ಹಾಕುವದು. ಅದಕ್ಕಾಗಿ

**ಕಣ್ಣು ಮನ ನಾಲಗೆಯು ತನ್ನವೆನಬೇಡ**
**ಅನ್ಯರು ಕೊಂದರೆನಬೇಡ ಇವು ಮೂರು**
**ತನ್ನನೇ ತಾನು ಕೊಲ್ಲುವವು**

ಎಂಬ ರಾಷ್ಟ್ರಕವಿ ಸರ್ವಜ್ಞಮೂರ್ತಿಯ ಹಾಗು

**ಸುತ್ತು ಸುಳಿಯದಂತೆ ಅಂಧಕನ ಮಾಡಯ್ಯ**

ಎಂಬ ಮಹಾನುಭಾವಿ ಅಣ್ಣ ಬಸವಣ್ಣನವರ ಮಾತಿನ ಮರ್ಮವನ್ನರಿತ ಶ್ರೀಗಳು ೭೨ ವರುಷಗಳಾಯುಷ್ಯದಲ್ಲಿ ತಮ್ಮ ದೃಷ್ಟಿಯನ್ನು ಬಹಳೇ ಪವಿತ್ರವಾಗಿಟ್ಟುಕೊಂಡಿದ್ದಾರೆ. 'ಪರವಧುವನು ಮಹಾದೇವಿ ಎಂದು ಕಾಂಬೆನು' ಎಂಬ ಅಣ್ಣನ ಉಕ್ತಿಯನ್ನು ಚಾಚು ತಪ್ಪದೆ ಪಾಲಿಸುತ್ತಿದ್ದಾರೆ. ದೇವರೂಪಿ ಮಾನವನನ್ನು ಕಾಣುವ ಅವರ ವಿಶ್ವ ಬಾಂಧವ್ಯ ದೃಷ್ಟಿ ಅತ್ಯಂತ ಪವಿತ್ರವಾದುದು. 'ಬಾಹ್ಯದೃಷ್ಟಿ ಪವಿತ್ರವಾದಾಗ ಅಂತರ್ದೃಷ್ಟಿ ಪವಿತ್ರವಾಗುತ್ತದೆ.' ಎಂಬ ಶ್ರೀ ಹಾನಗಲ್ಲ ಕುಮಾರ ಶಿವಯೋಗಿವರೇಣ್ಯರ ಅಮೃತವಾಣಿಯನ್ನೂ

**ಆಲಿನಿಂದೊಡೆ ಸುಳಿದು ಸೂಸುವ ಗಾಳಿನಿಲುವದು**
**ಗಾಳಿನಿಂದೊಡೆ ಮನವು ನಿಲುವುದು; ಮನವು ನಿಂದೊಡೆ**
**ಬಿಂದು ನಿಲುವುದು; ಬಿಂದು ನಿಂದೊಡೆ ಕಾಲಕರ್ಮಗಳು**
**ಕಳೆದು ಮಾಯೆ ಹೇಳ ಹೆಸರಿಲ್ಲದಂತಾಗುವುದು**

ಎಂಬ ಪ್ರಭುಲಿಂಗ ಲೀಲೆಯಲ್ಲಿಯ ಪ್ರಭುದೇವರ ಉಕ್ತಿಯನ್ನು ಪದೇ ಪದೇ ಹೇಳುತ್ತಾರೆ. ಈ ದೃಷ್ಟಿಶೀಲ ಸಾಧಿಸಬೇಕಾದರೆ ತನ್ನ ಕರದಿಷ್ಟಲಿಂಗದಲ್ಲಿ ದೃಷ್ಟಿಯನ್ನು ಲೀನಗೊಳಿಸಿ ಪ್ರಾಣಭಾವ ಲಿಂಗಗಳೊಡನೆ ಸಮರಸಗೊಳ್ಳಬೇಕಾಗುತ್ತದೆ. ಆದ್ದರಿಂದ

**ಹೊತ್ತಾರೆ ಎದ್ದು ಲಿಂಗದೇವನ ದೃಷ್ಟಿಯಾರೆ**
**ನೋಡದವನ**
**ಸಂಸಾರ ಏನವನ ಬಾಳುವೆ ಏನವನ ನಡೆ ಏನವನನುಡಿ**

**ಏನವನ ಕರ್ತೃ? ಕೂಲಡಸಂಗಮದೇವ ನಿಮ್ಮ ತೊತ್ತು ಗೆಲಸ ಮಾಡದವನ.**
**ಶರೀರ ಗೂಡುಹೋಗದಮುನ್ನ**
**ಹಲ್ಲು ಹೋಗಿ ಬೆನ್ನು ಬಾಗಿ ಅನ್ಯರಿಗೆ ಹಂಗಾಗದ ಮುನ್ನ**
**ಕಾಲ ಮೇಲೆ ಕೈಯನೂರಿ ಕೋಲುಹಿಡಿಯದ ಮುನ್ನ......**
**ಪೂಜಿಸು ನಮ್ಮ ಕೂಡಲಸಂಗಮದೇವನ**

ಎಂಬ ಅಣ್ಣನ ಉಕ್ತಿಯಂತೆ ಪ್ರತಿನಿತ್ಯ ತ್ರಿಕಾಲದೋಳ್ ಲಿಂಗಪೂಜೆ ಮಾಡುತ್ತ ಲಿಂಗಾಂಗ ಸಾಮರಸ್ಯ ಸುಖವನ್ನು ಅನುಭೋಗಿಸುತ್ತ ಅದನ್ನು ಆತ್ಮ ಜಿಜ್ಞಾಸುಗಳಿಗೆ ಬೋಧಿಸುತ್ತ ಅಂತರ್ಬಾಹ್ಯ ಶೀಲ ಸಂಪನ್ನರಾಗಿದ್ದಾರೆ.

**ಶ್ರೋತ್ರಶೀಲ**

ಶ್ರೋತ್ರಶೀಲವು ಶಬ್ದಶೀಲದಿಂದ ಸಂಭವಿಸುತ್ತದೆ. 'ಶಿವಶಬ್ದವೇ ಶೀಲ; ಅಶಿವಶಬ್ದವೇ ಅಶ್ಲೀಲ. ಶಿವಶಬ್ದವನ್ನು ಶ್ರವಣಮಾಡುವುದೇ ಶ್ರೋತ್ರಶೀಲ ಆಲಿಸಿದ್ದನ್ನೇ ನಾವು ಆಡಬೇಕಾಗುತ್ತದೆ. ಪ್ರಸಾದವಾಣಿಯನ್ನು ಕೇಳುವವನ ಮುಖದಿಂದ ಪ್ರಸಾದವಾಣಿಯೇ ವೈಖರಿಯಾಗಿ ಹೊರಹೊಮ್ಮುತ್ತದೆ. ಇದರಿಂದ ವಾಕ್‌ಶೀಲವೂ ಸಂಭವಿಸುತ್ತದೆ.

**ಮತ್ತೊಂದು ಕೇಳದಂತೆ ಕಿವುಡನ ಮಾಡಯ್ಯ ತಂದೆ**
**ಕಿವಿಯಲ್ಲಿ ನಿಮ್ಮ ಕೀರುತಿ ತುಂಬಿ**
**ಶ್ರೀ ಗುರು ವಚನೋಪದೇಶವನಾಲಿಸಿದಾಗಳಹುದು**
**ನರರಿಗೆ ಮುಕುತಿ**

ಈ ಮಾತುಗಳು ಶ್ರೋತ್ರ ಶೀಲವನ್ನು ಹೇಳುತ್ತಿವೆ. ಶ್ರೀ ಶಿವಬಸವ ಶಿವಯೋಗಿಗಳವರು ಮೇಲಿನ ಮಾತುಗಳಂತೆ ತಮ್ಮ ವರ್ತನವನ್ನಿಟ್ಟುಕೊಂಡಿದ್ದಾರೆ. ಅವಾಚ್ಯ ಶಬ್ದಗಳನ್ನವರು ಎಂದೂ ನುಡಿಯುವುದಿಲ್ಲ. ನುಡಿಯುವವರನ್ನು ಕಂಡರೆ ಎಳ್ಳಿನಿತು ಸೇರರು. ಅಂತವರಿಗೆ ನಿಮಗೇನಾದರೂ ಬೇರೆ ಕೆಲಸವಿಲ್ಲವೆ? ಇಂತಹ ಶಬ್ದಗಳನ್ನಾಡುವ ಬದಲು ಮಂಗಲಮಯನಾದ ಆ ದೇವನ ಸಂಬಂಧ ಏನಾದರೂ ಆಡಿರಿ; ನುಡಿಯಿರಿ ಎಂದು ಉಪದೇಶಿಸುತ್ತಾರೆ. ಅದರಂತೆ ತಾವೂ ಆಚರಿಸುತ್ತಾರೆ. ಹರನಿಂದೆ ಗುರುನಿಂದೆಗಳನ್ನು ಅವರು ಎಂದೂ ಕೇಳರು; ಎಷ್ಟೂ ಸಹಿಸರು. ಹರ ಗುರುಗಳಲ್ಲಿ ಅಚಲವಾದ ಭಕ್ತಿಯನ್ನಿಟ್ಟ ಅವರು ಒಮ್ಮೆ ಅವರ ಸ್ಥಲ ಗುರುಗಳಾದ ಹಾಲಕೆರೆಯ ಅನ್ನದಾನೀಶ್ವರ ಮಹಾಸ್ವಾಮಿಗಳವರ ಬಗ್ಗೆ ಒಬ್ಬ ಮಹಾಸ್ವಾಮಿಗಳವರು 'ಹಳೆಯ ಸ್ವಾಮಿಗಳಿಗೆ ಏನೂ ತಿಳಿಯದು' ಹಾಗೆ ಹೀಗೆ ಎಂದು ಕೆಲವು ಮಾತುಗಳನ್ನಾಡುವಾಗ್ಗೆ 'ಸ್ವಾಮಿಗಳಾದ ನಿಮ್ಮ ಬಾಯಿಂದ ಇಂತಹ ಮಾತುಗಳು ಬರಬಾರದು. ಇವು ನಿಮ್ಮ ಸ್ವಾಮಿತ್ವಕ್ಕೆ ಯೋಗ್ಯ ಮಾತುಗಳಲ್ಲ' ಎಂದು ಖಂಡ ತುಂಡಾಗಿ ಹೇಳಿ ಅವುಗಳನ್ನು ಅಲ್ಲಿಯೇ ಖಂಡಿಸಿಬಿಟ್ಟರು. ಇದರಿಂದ ಶ್ರೀಗಳವರ ಶ್ರೋತ್ರ ಶೀಲವು ಎಷ್ಟು ಪರಮ ಪವಿತ್ರವಾದುದು ಎಂಬುದು ಗೊತ್ತಾಗುತ್ತದೆ. ಇಂತಹ ಶ್ರೋತ್ರೀಯ ಶೀಲಸಂಪನ್ನರು ಶ್ರೀ ಶಿವಬಸವ ಶಿವಯೋಗಿಗಳು.

**ಘ್ರಾಣಶೀಲ**

ಘ್ರಾಣದ ಕಾರ್ಯ ಗಂಧವನ್ನು ಗ್ರಹಿಸುವುದು. ಗಂಧದಲ್ಲಿ ಸುಗಂಧ, ದುರ್ಗಂಧ ಎಂದು ಎರಡು ಬಗೆ. ಸುಗಂಧವು ಸೇವಿಸಲು ಯೋಗ್ಯ. ದುರ್ಗಂಧವು ಅಯೋಗ್ಯ 'ಸುಗಂಧಂ ಪುಷ್ಟಿ ವರ್ಧನಂ' ಎಂಬ ಉಕ್ತಿ ಇದ್ದರೂ ಇದರಲ್ಲಿ ತಾಮಸ ರಾಜಸ ಸಾತ್ವಿಕ ಎಂಬ ಮೂರು ಪ್ರಕಾರಗಳಿವೆ. ಈ ಸಾತ್ವಿಕ ಗಂಧವನ್ನು ಘ್ರಾಣ ಮೂಲಕ ಗ್ರಹಿಸಿ ತನ್ನ ಆಚಾರ ಲಿಂಗಕ್ಕರ್ಪಿಸಿ ಪ್ರಸಾದವನ್ನಾಗಿ ಘ್ರಾಣಿಸುವದೇ ಸೂಕ್ಷ್ಮವಾದ ಘ್ರಾಣಶೀಲ. ಹೀಗೆ ಮಾಡುವದರಿಂದ ತನ್ನ ಸಾಧನೆ ಸಂಪುಷ್ಟವಾಗುತ್ತದೆ. ಶರೀರ ಸತ್ವಗೊಳ್ಳುತ್ತದೆ. ವಿಷಯವಾಸನೆಯಿಂದ ಈ ಸುಗಂಧವನ್ನು ಮೂಸಬಾರದು. ನೇರವಾಗಿ ಶಿವಲಿಂಗಕ್ಕರ್ಪಿಸಿದ ಪುಷ್ಪಾದಿಗಳ ಪರಿಮಳವನ್ನು ಆಘ್ರಾಣಿಸಬೇಕು. ಹೊರಗಿನ ಪರಿಮಳಕ್ಕಿಂತ ಒಳಗಿನ ಪರಿಮಳ ಒಳಿತು.

'ಉಸಿರು ಪರಿಮಳವಿರಲು ಕುಸುಮದ ಹಂಗೇಕಯ್ಯ? ಕ್ಷಮೆ, ದಯೆ, ಶಾಂತಿ, ಸೈರಣೆ ಇರಲು ಸಮಾಧಿಯ ಹಂಗೇಕಯ್ಯ? ಎಂದು ಮಹಾದೇವಿ ಅಕ್ಕ ಕೇಳುತ್ತಾಳೆ. ಉಸಿರು-ಬಸಿರುಗಳು ಪಾರಮಾರ್ಥದ ಪರಿಮಳದಿಂದ ಕೂಡಿರುವದೇ ಘ್ರಾಣಶೀಲ. ಇಂತಹ ಘ್ರಾಣಶೀಲರಾದ ನಮ್ಮ ಶ್ರೀಗಳವರು 'ಸೂರ್ಯ ಚಂದ್ರ ನಾಡಿಗಳ ಕೇಂದ್ರವಾದ ಮೂಗು ಹದಗೆಡಬಾರದು. ಮೂಸುವುದನ್ನು ಮೊದಲು ಲಿಂಗಕ್ಕೆ ಮೀಸಲಾಗಿ ಅರ್ಪಿಸಿ ಬಳಿಕ ಅಂಗ ಆಘ್ರಾಣಿಸಬೇಕು' ಎಂದು ಅಪ್ಪಣೆ ಕೊಡಿಸುತ್ತಾರೆ. ಅದರಂತೆ ತಾವೂ ಆಚರಿಸುತ್ತ ಆಚಾರಲಿಂಗಾರ್ಪಿತಜನ್ಯ ಸದ್ವಾಸನೆಯನ್ನು ಆಘ್ರಾಣಿಸುತ್ತ ಶಿವಪ್ರಸಾದವಾದ ತಮ್ಮ ಜೀವನವನ್ನು ಸುಂದರವಾಗಿ ಸುಖಮಯವಾಗಿ ಸಾಗಿಸುತ್ತಿದ್ದಾರೆ.

**ಜಿಹ್ವಾ ಶೀಲ**

ನೇತ್ರ ಶೀಲದಂತೆ ಜಿಹ್ವಾ ಶೀಲವೂ ಬಹಳೇ ಮುಖ್ಯವಾದುದು. ಆದ್ದರಿಂದ ಪರಿಶುದ್ಧವಾದ ಸಾತ್ವಿಕ ಆಹಾರವನ್ನು ಲಿಂಗಾರ್ಪಿತಮಾಡಿ ಹಿತಮಿತವಾಗಿ ಪ್ರಸಾದ ರೂಪದಿಂದ ಸೇವಿಸಬೇಕಾಗುತ್ತದೆ. ಇಂತಹ ಸಾತ್ವಿಕ ಪ್ರಸಾದ ಸೇವಿಸುವ ಪ್ರಸಾದಿಗೆ ಜಿಹ್ವೆಯ ಎಲ್ಲ ಬಗೆಯ ಚಪಲತೆಗಳನ್ನು

ಜಯಿಸಿ ಜಿಹ್ವಾಶೀಲನಾಗುವುದು ಸಾಧ್ಯ. ಆಹಾರದಂತೆ ಆತನು ಮಾತುಗಳನ್ನು ಸಹ ಹಿತಮಿತವಾಗಿ ಬಳಸಿ ಮಾತನ್ನು ಮಂತ್ರವನ್ನಾಗಿಸುವದು ನಾಲಗೆಯ ಶೀಲ. ಮಾತು ಮಂತ್ರವಾಗಬೇಕಾದರೆ ಮಾತನ್ನು ಸತ್ಯವಾಗಿ ಮನಸ್ಸಿನಲ್ಲಿ ಸಂಯಮಿಸಬೇಕು. ಅಂದರೆ ಮಾತಿನಂತೆ ಮನಸ್ಸು; ಮನಸ್ಸಿನಂತೆ ಮಾತು ಇರಬೇಕು. ಮಾತು, ಮನ, ಜ್ಞಾನ, ಕ್ರಿಯೆಗಳೆಲ್ಲ ಸತ್ಯನಿಷ್ಠವಾಗಿರಬೇಕು.

**ಸತ್ಯವ ನುಡಿವುದೇ ಸ್ವರ್ಗಲೋಕ ಮಿಥ್ಯವ ನುಡಿವುದೇ ಮೃತ್ಯುಲೋಕ. ಮೌನದಲುಂಬುದು ಆಚಾರವಲ್ಲ ಲಿಂಗಾರ್ಪಿತ ಮಾಡಿದ ಬಳಿಕ ತುತ್ತಿಗೊಮ್ಮೆ ಶಿವಶರಣು ಎನ್ನುತ್ತಿರಬೇಕು. ಕರಣವೃತ್ತಿಗಳಡಗುವವು ಕೂಡಲ ಸಂಗಮನ ನೆನೆಯುತ ಉಂಡರೆ**

ರಸನೇಂದ್ರಿಯ ಶೀಲವು ಈ ವಚನಗಳಲ್ಲಿ ಎರಡನೆಯದು. ಜಿಹ್ವಾ ಶೀಲವನ್ನು ಸುಂದರವಾಗಿ ಸಂಪೂರ್ಣವಾಗಿ ಪ್ರತಿಪಾದಿಸುತ್ತದೆ. ಅದಕ್ಕಾಗಿ ಲಿಂಗಾರ್ಪಿತ ಪ್ರಸಾದದ ಆರೋಗಣೆಯಾಗಬೇಕು. ಲಿಂಗವಾರ್ತೆಯನ್ನೇ ನುಡಿಯುತ್ತಿರಬೇಕು. ಇಂತಹ ಆಡುವ ಆರೋಗಿಸುವ ಸುಶೀಲವನ್ನು ಶ್ರೀ ಶಿವಬಸವ ಶಿವಯೋಗಿಗಳವರು ತಮ್ಮ ಆಧ್ಯಾತ್ಮಿಕ ಜೀವನದಲ್ಲಿ ಸಂಪೂರ್ಣವಾಗಿ ಅಳವಡಿಸಿಕೊಂಡಿದ್ದಾರೆ. 'ಮಾನವನು ಜಿಹ್ವಾಲಂಪಟನಾಗಬಾರದು. ಅದರಿಂದ ಅವನ ಶಾರೀರಿಕ, ಮಾನಸಿಕ, ನೈತಿಕ ಶೀಲವೆಲ್ಲವೂ ಹಾಳಾಗುವದು' ಎಂದು ನಮ್ಮೆಲ್ಲರಿಗೂ ಮೇಲಿಂದ ಮೇಲೆ ಹೇಳುತ್ತಾರೆ. ಅವರ ದಿವ್ಯ ಪಾದ ಸನ್ನಿಧಿಯಲ್ಲಿ ನಾಲ್ವತ್ತು ವರುಷಗಳಿಂದ ಜೀವಿಸುತ್ತಿದ್ದ ನಾನು ನಾಲಿಗೆಯ ರುಚಿಗಾಗಿ ಇಂತಹ ಅಡಿಗೆಯನ್ನು ಮಾಡಿರೆಂದು ಹೇಳಿದುದನ್ನು ಕಿವಿಯಾರೆ ಕೇಳಿಲ್ಲ; ಕಣ್ಣಾರೆ ಕಂಡಿಲ್ಲ.

**ಬಯಸಿ ಬಂದುದು ಅಂಗಭೋಗ ಬಯಸದೆ ಬಂದುದು ಲಿಂಗಭೋಗ, ಅದರ ತಾಗುವ ರುಚಿಯ ಉದರ ತಾಗುವ ಸುಖವ ಲಿಂಗಾರ್ಪಿತವಲ್ಲದೆ ಕೊಂಡರೆ ಕಿಲ್ಬಿಷ ನೋಡಾ ಕೂಡಲಸಂಗಮದೇವಾ**

ಎಂಬ ಸೂಳ್ನುಡಿಯಂತೆ ಸುಶೀಲ ಸಂಪನ್ನರಾಗಿ ಹಾನಗಲ್ಲ ಕುಮಾರ ಶಿವಯೋಗಿಗಳ ಪರಮ ಶಿಷ್ಯರಾದ ಇವರು, ಅವರು ಸ್ವೀಕರಿಸುತ್ತಿದ್ದ ಪವಿತ್ರವಾದ ಸಾತ್ವಿಕ ಆಹಾರವನ್ನೇ ಈವರೆಗೂ ಸೇವಿಸುತ್ತ ಜಿಹ್ವಾಶೀಲರಾಗಿದ್ದಾರೆ. 'ಉಣ್ಣುವದಕ್ಕಾಗಿ ಜೀವಿಸಬೇಡ ಜೀವಿಸುವದಕ್ಕಾಗಿ ಉಣ್ಣು' ಎಂಬ ಗಾದೆಯಂತೆ ಶ್ರೀ ಶಿವಬಸವ ಶ್ರೀಗಳವರಷ್ಟು ಕಡಿಮೆ ಪ್ರಸಾದ ಸೇವಿಸುವವರನ್ನು ನನ್ನ ಈ ಅರವತ್ತು ವರುಷಗಳ ಆಯುಷ್ಯದಲ್ಲಿಯೇ ಕಂಡಿಲ್ಲ. ಏಕೆಂದರೆ ನಾನು ಅನೇಕ ಸಾರಿ ಅನೇಕ ಸ್ವಾಮಿಗಳು ಆರೋಗಿಸುವ ಪಂಕ್ತಿಯಲ್ಲಿ ಪ್ರಸಾದ ಸ್ವೀಕರಿಸಿದವನಿದ್ದೇನೆ. ಈ ಜಿಹ್ವಾ ಶೀಲದಿಂದ ಶ್ರೀಗಳು ಸಾಧಿಸಿದ ಬ್ರಹ್ಮಚರ್ಯವು ಬಹಳೇ ಪವಿತ್ರವಾಗಿದೆ.

**ಅಯ್ಯಾ ಎಂದೊಡೆ ಸ್ವರ್ಗ ಎಲವೋ ಎಂದೊಡೆ ನರಕ ಉಡುವಿನ ನಾಲಗೆಯಂತೆ ಎರಡಾದರೆ ಕೂಡಲಸಂಗಯ್ಯ ಮೆಚ್ಚುವನೆ**

ಮಾತಿನ ಶೀಲ ಶೀಲದ ಮತ್ತೊಂದು ಮುಖವು. ಮಾತು ಬಿರುಸಾಗಬಾರದು, ಬಿರುಕಾಗಬಾರದು, ಎಂಬುದನ್ನರಿತ ಶ್ರೀಗಳವರಿಗೆ ಬಿರುಸು ಬಿರುಕು ಮಾತುಗಳನ್ನಾಡಿಯೇ ಗೊತ್ತಿಲ್ಲ. ಅವರ ಮಾತಿನಲ್ಲಿ ಮಂಗಲ ತುಂಬಿದ ಮಂತ್ರ ಶಕ್ತಿಯಿದೆ. ಒಂದು ಗಂಡಾಂತರ ಪ್ರಸಂಗದಲ್ಲಿ ಒಬ್ಬ ದುಷ್ಟ ವ್ಯಕ್ತಿಯನ್ನು ಕುರಿತು 'ಅಪ್ಪಾ ನಾನು ಕೈಕೊಂಡ ಕಾರ್ಯವು ನಿನ್ನ ಮನಸ್ಸಿಗೆ ಬರದಿದ್ದರೆ ಈ ಕ್ಷಣದಲ್ಲಿಯೇ ನೀನು ಮಾಡಬೇಕಾದುದನ್ನು ಮಾಡು. ನಾನು ನಿನಗೆ ಏನೂ ಆತಂಕ ಮಾಡುವುದಿಲ್ಲ. ಶಿವನಿಚ್ಛೆ ಇದ್ದಂತೆ ಆಗಲಿ ! ಎಂದು ಉಸುರಿದ ಆ ಮಂತ್ರಮಯ ಮಂಗಳ ವಾಣಿಯನ್ನು ಆಲಿಸಿದ ಆ ದುಷ್ಟ ವ್ಯಕ್ತಿಯ ಹೃದಯ ಕರಗಿ ಶಿಷ್ಯನಾಗಿ ಸಾಷ್ಟಾಂಗವೆರಗಿ ಕ್ಷಮೆ ಬೇಡಹತ್ತಿದನು. ಆಗ ಶ್ರೀಗಳವರು ಕ್ಷಮೆ ಮಾಡಲಿಕ್ಕೆ ನಾನಾರು? ಆ ದಯಾಘನನಾದ ಪರಮಾತ್ಮನಲ್ಲಿ ಕ್ಷಮೆ ಬೇಡು ಎಂದು ಹೇಳಿ ಪ್ರಸಾದ ಸ್ವೀಕರಿಸಲು ಕಳುಹಿಸಿದರು.

ಮಾತಿನ ಮೊದಲ ಬಲ್ಲವರ ಎನಗೊಮ್ಮೆ ತೋರಾ ಗುಹೇಶ್ವರ ಎಂಬ ಪ್ರಭುವಾಣಿ ಈ ಪ್ರಸಂಗದಲ್ಲಿ ನೆನಪಿಗೆ ತರುತ್ತದೆ. ಇಂತಹ ಮಾತಿನ ಜಿಹ್ವಾ ಶೀಲಿನ ಮಾತು ಜ್ಯೋತಿರ್ಲಿಂಗವಾಗುತ್ತದೆ. ಆತನು ಮಾತನಾಡಿದರೂ ಸರಿ; ಮೌನವಾಗಿದ್ದರೂ ಸರಿ. ಆತನ ಮೌನದಲ್ಲಿ ಸಮರ್ಥ ಸಿದ್ಧ ಪುರುಷನ ಶಕ್ತಿ ಇರುತ್ತದೆ. ಅದಕ್ಕಾಗಿ ಶ್ರೀಗಳವರು ಮೌನಿಗಳಾಗಿ ಧ್ಯಾನ ಮಗ್ನರಾಗಿರುವದು ಹೆಚ್ಚು. ತಮ್ಮ ದರ್ಶನಾರ್ಥಿಗಳಾಗಿ ಬಂದವರಿಗೆ ನಾಲಗೆಯ ಪಾವಿತ್ರ್ಯವನ್ನು ಕಾಯ್ದುಕೊಂಡು ಧ್ಯಾನ ತತ್ಪರರಾಗಿರಲು ಬೋಧಿಸುತ್ತಾರೆ.

**ಸ್ಪರ್ಶಶೀಲ**

ಸ್ಪರ್ಶಶೀಲವು ದೇಹಕ್ಕೆ ಸಂಬಂಧಪಟ್ಟುದು. ಆದ್ದರಿಂದ ದೇಹವು ಬಹಳೇ ಪವಿತ್ರವಿರಬೇಕಾಗುತ್ತದೆ. ಪವಿತ್ರತೆಯ ಬಯಸುವ ಶೀಲವಂತನು ಮೈಲಿಗೆಯುಳ್ಳ ಜಡ ವಸ್ತುಗಳನ್ನು ಮುಟ್ಟಲಾರನು. ಮುಟ್ಟಿದರೂ ಮಣ್ಣು ನೀರುಗಳಿಂದ ಉಜ್ಜಿ ಕೈ ತೊಳೆದುಕೊಳ್ಳಬೇಕಾಗುವದು. ಸಾಮಾನ್ಯವಾದ ಜಡ ಕೊಳೆಗಿಂತಲೂ ಅವಗುಣ ಕೊಳೆಯು ಬಹಳೇ ಕೆಟ್ಟದ್ದು.

ಹಸಿವು, ತೃಷೆ, ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಮುಂತಾದ ಅವಗುಣಗಳ ಮೈಲಿಗೆಯನ್ನು ಮುಟ್ಟದಿರುವದೇ ಅಚ್ಚ ಶೀಲ. ಈ ಮುಟ್ಟು ಕಟ್ಟುಗಳ ಕಟ್ಟಳೆಯು ಬಹು ಆಳವಾದುದು. ಇದನ್ನು ಕಡೆಗಣಿಸುವಂತಿಲ್ಲ. ಶ್ರೀಗಳವರ ಈ ಸ್ಪರ್ಶ ಶೀಲವು ಬಹಳೇ ಪವಿತ್ರವಾಗಿದೆ.

ಮನಸ್ಸನ್ನೂ ಅದರಂತೆ ಶರೀರವನ್ನೂ ಪವಿತ್ರವಾಗಿ ಇಟ್ಟುಕೊಳ್ಳಬೇಕು. ಇದರಿಂದ ಮನಕ್ಕೆ ಮುಂದೆ ತಾನೇ ಶಾಂತಿ ದೊರೆಯುವದು. 'ಇದು ಶ್ರೀಗಳು ನಮ್ಮೆಲ್ಲರಿಗೆ ಆಗಾಗ ಕೊಡಿಸುವ ಅಮರ ವಾಣಿಯ ಅಪ್ಪಣೆ. ಈ ವಾಣಿಯನ್ನು ತಾವು ತಪ್ಪದೆ ಪಾಲಿಸಿ ಪವಿತ್ರ ಶರೀರಿಗಳಾಗಿದ್ದಾರೆ. ಅಲ್ಲದೆ ಷಡ್ರಿಪು ಅವಗುಣ ಸಮೂಹವು ಎಂದೂ ಅವರ ಹತ್ತಿರ ಸುಳಿಯುವಂತೆಯೇ ಇಲ್ಲ. 'ಸಕಲ ಜೀವಾತ್ಮರಿಗೆ ಲೇಸನೆ ಬಯಸುವ' ಅದರಲ್ಲಿ ಎಲ್ಲವೂ ತನಗಾಗಬೇಕೆಂಬ ಲೋಭವು ತಿಲಮಾತ್ರವೂ ಇಲ್ಲ. ಅದು ಇರಬೇಕಾಗಿದ್ದರೆ ಸಕಲ ಸಮಾಜ ಹಿತಕ್ಕಾಗಿ ಮಾತ್ರ. ಮದಮತ್ಸರಾದಿಗಳು ಅವರಲ್ಲಿ ಎನಿತೂ ಇಲ್ಲ. ಇಂತಹ ಪವಿತ್ರ ಗುರುವಿನ ಹಸ್ತ ಮಸ್ತಕಕ್ಕೆ, ಪಾದ ಸ್ಪರ್ಶ ಕರಶಿರಗಳಿಗೆ ಅಗತ್ಯ ಆಗಬೇಕು.

ಶ್ರೀ ಗುರುದೇವರು ತಮ್ಮ ಹಸ್ತವ ತಂದು ಎನ್ನ ಮಸ್ತಕದ ಮೇಲೆ ಇರಿಸಿದಾಗಲೆ ಎನ್ನ ಭವಂ ನಾಸ್ತಿಯಾಯಿತ್ತು ಎನ್ನ ತನ್ನ ಮಾಡಿದ ಎನಗೆ ತನಗೆ ತೆರಹಿಲ್ಲದಂತೆ ಮಾಡಿ ತೋರಿಸಿದನು ನೋಡಾ.

ಎಂಬ ಅಕ್ಕನ ಉಕ್ತಿಯಂತೆ ಶ್ರೀ ಶಿವಬಸವ ಶ್ರೀಗಳವರು ಎಷ್ಟೋ ಪಾಮರ ಜೀವಿಗಳನ್ನು ತಮ್ಮ ಪವಿತ್ರ ಸ್ಪರ್ಶಶೀಲದಿಂದ ಮುಕ್ತಾತ್ಮರನ್ನಾಗಿ ಮಾಡಿದ್ದಾರೆ; ಮಾಡುತ್ತಿದ್ದಾರೆ.

**ಅಂತರಂಗ ಆತ್ಮ ಶುದ್ಧಿ ಇಲ್ಲದವರನೆಂತು**
**ನಂಬುವನಯ್ಯ ನಮ್ಮ ಕೂಡಲಸಂಗಮದೇವ**

ಎಂಬ ಅಣ್ಣನ ಉಕ್ತಿಯಂತೆ ಅಂತರಂಗ ಶೀಲಕ್ಕೆ ಬಹಳೇ ಮಹತ್ವ ಕೊಟ್ಟಿದ್ದಾರೆ. ಅಂತಃಕರಣ ಚತುಷ್ಠಿಗಳಾದ ಮನ, ಬುದ್ಧಿ, ಚಿತ್ತ-ಅಹಂಕಾರ ಇವುಗಳ ಶುದ್ಧಿಯೇ ಅಂತರಂಗಶೀಲ. ವೇದ ವೇದಾಂತವ ನೋಡಿದರೇನು ಮನ ಸಂತಕವಳಿಯದನ್ನಕ್ಕ ಮನಃಶುದ್ಧಿಯನ್ನು ಮಾಡಿಕೊಳ್ಳುವ ಶೀಲ ವೇದ ವೇದಾಂತಗಳ ಓದಿಗಿಂತಲೂ ಮಿಗಿಲಾದುದು. ನಮ್ಮ ಶ್ರೀಗಳವರು ವೇದ ವೇದಾಂತಗಳ ಅಭ್ಯಾಸವನ್ನು ಹೆಚ್ಚಾಗಿ ಮಾಡಿದವರಲ್ಲಿ ಮನಶುದ್ಧವಿಲ್ಲ. ಓದು ಅದೊಂದು ಶೂಲವೆಂಬುದನ್ನರಿತ ಅವರು

**ಒಬ್ಬರ ಮನವ ನೋಯಿಸಿ ಒಬ್ಬರ ಮನೆಯ**
**ಘಾತವ ಮಾಡಿ ಗಂಗೆಯಲಿ ಮುಳುಗಿದರೆ**
**ಆಗುವುದೇನಯ್ಯ?.... ಅದಕಾರಣ ಮನವ**
**ನೋಯಿಸದವನೆ ಪರಮ ಪಾವನ ನೋಡಾ**
**ಕಪಿಲಸಿದ್ಧ ಮಲ್ಲಿಕಾರ್ಜುನಾ**

ಶಿವಯೋಗಿ ಸಿದ್ಧರಾಮ ದೇವರ ಈ ವಾಣಿಯಂತೆ ಮನಸ್ಸಿನ ಮಲಿನತೆ ಅಳಿದು ಮನಃಶುದ್ಧ ಶೀಲರಾಗಿದ್ದಾರೆ ಅವರಿಗೆ ಒಳಗೊಂದು ಹೊರಗೊಂದು ಎಂಬುದು ಗೊತ್ತೇ ಇಲ್ಲ. ಮನಶೀಲದಂತೆ ಬುದ್ಧಿ ಚಿತ್ತಗಳ ಶೀಲವನ್ನು ಸಂಪಾದಿಸಿರುವರು. ಕರಣ ಚತುಷ್ಟಯಗಳಲ್ಲಿ ಕೊನೆಯದಾದ ಅಹಂಕಾರವು.

**ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ**

ಎಂಬ ಅಣ್ಣನ ವಾಣಿಯಂತೆ ಅವರಲ್ಲಿ ಎನಿತೂ ಇಲ್ಲ. ಈ ಪ್ರಕಾರ ಶ್ರೀಗಳವರ ಅಂತರ್ಬಾಹ್ಯ ಶೀಲ ಸಂಪನ್ನತೆಯ ಪ್ರಭಾವದಿಂದ ಪ್ರತಿನಿತ್ಯ ನಾಲ್ಕು ನೂರು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಜಾತ್ಯತೀತ ಭಾವನೆಯಿಂದ ಪ್ರಸಾದ ಸೇವಿಸುತ್ತ ರಾಷ್ಟ್ರದ ಭಾವೈಕ್ಯತೆಯನ್ನು ಸಾಧಿಸುತ್ತಿದ್ದಾರೆ. ಬೇಡುವಾತ ಜಂಗಮನಲ್ಲ ಬೇಡಿಸಿಕೊಳ್ಳುವಾತ ಭಕ್ತನಲ್ಲ ಎಂಬಂತೆ ಅವರು ಬಯಸದೆ ಸುಮಾರು ೨೪-೨೫ ಲಕ್ಷ ರೂ ಬೆಲೆಬಾಳುವ ಸ್ಥಾವರ ಆಸ್ತಿಯು ಸಕಲ ಸಮಾಜ ಭಕ್ತರಿಂದ ಅವರ ಪದತಲಕ್ಕೆ ಅರ್ಪಿತವಾಗಿದೆ. ಅಲ್ಲದೆ ೭-೮ ಲಕ್ಷ ರೂಪಾಯಿ ಬೆಲೆ ಬಾಳುವ ಪ್ರಸಾದನಿಲಯದ ನೂತನ ಭವ್ಯ ಕಟ್ಟಡವು ಅವರ ಶೀಲ ಸಂಪನ್ನತೆಯ ಘನತೆಯನ್ನು ಎತ್ತಿ ತೋರಿಸುತ್ತಿದೆ. ಇಂತಹ ಶೀಲ ಸಂಪನ್ನ ಗುರುವಿಗೆ ನನ್ನ ಅನಂತ ದೀರ್ಘದಂಡ ಪ್ರಣಾಮಗಳು.

ಈ ಲೇಖನವನ್ನು ಶ್ರೀಶೈಲ ಮಣಿಖಚಿತ ಕನಕ ಸೂರ್ಯ ಸಿಂಹಾಸನಾಧೀಶ ಜಗದ್ಗುರು ಚೆನ್ನಬಸವ ದೇಶಿಕೇಂದ್ರ ಶ್ರೀಗಳು ನಿಡುಮಾಮಿಡಿ ಸಂಸ್ಥಾನಮಠ ಗುಳೂರು ಸನ್ನಿಧಿಯವರು ಬರೆದ 'ಶೀಲ ಸಂಪಾದನೆ' ಗ್ರಂಥದ ಅಭ್ಯಾಸ ಮಾಡಿ ಅದರ ಆಧಾರದ ಮೇಲೆ ಸನ್ನಿಧಿಯವರವೇ ಕೆಲವು ಮಾತುಗಳನ್ನು ಬಳಸಿಕೊಂಡು ಬರೆದಿರುವೆ. ಅದಕ್ಕಾಗಿ ಸನ್ನಿಧಿಗೆ ಉಪಕೃತನಾಗಿ ಅವರ ಚರಣ ಸನ್ನಿಧಿಯಲ್ಲಿ ನನ್ನ ಅನಂತ ದೀರ್ಘದಂಡ ಪ್ರಣಾಮಗಳನ್ನು ಸಲ್ಲಿಸುವೆ.

■■

# ಕರ್ಮಯೋಗಿ

● ಡಾ. ಆರ್. ಶಿವಣ್ಣ

ಕನ್ನಡ ನಾಡಿನ ಪ್ರಗತಿಯಲ್ಲಿ ಲಿಂಗಾಯತ ಮಠಗಳ ಪಾತ್ರ ತುಂಬಾ ಪ್ರಮುಖವಾಗಿದೆ. ನಾಡು–ನುಡಿ–ಸಂಸ್ಕೃತಿ ಇವುಗಳ ಹಿನ್ನೆಲೆಯಲ್ಲಿ ಗಮನಿಸಿದಾಗ ಲಿಂಗಾಯತ ಮಠಗಳು ವಹಿಸಿದ ಪಾತ್ರಗಳು ಏನೆಂದು ತಿಳಿದುಬರುತ್ತದೆ. ಕನ್ನಡ ನಾಡಿನ ಸಾಂಸ್ಕೃತಿಕ, ಶೈಕ್ಷಣಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಲಿಂಗಾಯತ ಮಠಗಳು ವಹಿಸಿದ ಪಾತ್ರವನ್ನು ಸುವರ್ಣ ಅಕ್ಷರಗಳಲ್ಲಿ ಬರೆಯುವಂತಾಗಿದೆ.

ನಮ್ಮ ನಾಡು ಸಾಧು ಸಂತರ ನೆಲೆಬೀಡು. ೧೨ನೇ ಶತಮಾನದಲ್ಲಿ ಬಸವಣ್ಣನವರಾದಿಯಾಗಿ ಅನೇಕ ಜನ ಶಿವಶರಣರು ಈ ನಾಡಿನ ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಶ್ರಮಿಸಿದ್ದಾರೆ. ಕಾಯಕದ ಹಣತೆಯನ್ನು ಹಚ್ಚಿದ್ದಾರೆ. ಲಿಂಗಾಯತ ಧರ್ಮದ ಮೂಲಕ ಇಡೀ ಪ್ರಪಂಚಕ್ಕೆ ಮೊಟ್ಟಮೊದಲ ಬಾರಿಗೆ ವಿಶ್ವಮಾನವ ಸಂದೇಶವನ್ನು ಸಾರಿದ್ದಾರೆ.

ಶಿವಬಸವ ಸ್ವಾಮಿಗಳು ೮.೧೨.೧೮೮೯ ರಂದು ಜನಿಸಿದರು. ಇವರ ತಂದೆ ಅಡವಯ್ಯ, ತಾಯಿ ರುದ್ರಮ್ಮ. ನಾಲ್ಕು ಮಕ್ಕಳಲ್ಲಿ ಇವರು ಕೊನೆಯವರು. ಬಸಲಿಂಗಯ್ಯ ಇವರ ಅಣ್ಣ. ನೀಲಮ್ಮ, ಗದಿಗೆಮ್ಮ ಸಹೋದರಿಯರು. ಇವರು ಹುಟ್ಟಿ ಏಳು ತಿಂಗಳೊಳಗೆ ತಂದೆ ಅಡವಯ್ಯ ಶಿವಪಾದ ಸೇರಿದರು.ಇವರ ತಾಯಿ ರುದ್ರಮ್ಮ ತಂದೆಯಾಗಿ ದುಡಿದು, ತಾಯಿಯಾಗಿ ಇವರನ್ನು ಸಾಕಿದರು.

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ನಾಗನೂರು ಇವರ ಮೂಲ ಊರು. 'ಶೀಲಯ್ಯನವರಮಠ' ಎಂಬ ಹೆಸರಿನ ಆದರ್ಶ ಜಂಗಮ ಕುಟುಂಬದ ಮನೆತನ ಇವರದ್ದಾಗಿತ್ತು. ಈ ಮನೆತನದ ಶಿವಬಸವಸ್ವಾಮಿ, ಬಸಮ್ಮ ದಂಪತಿಗಳು ನಾಗನೂರಿನಿಂದ ಹಿರೇಕೊಪ್ಪಕ್ಕೆ ಬಂದು ನೆಲೆಸಿದರು. ಇವರಿಗೆ ಅಡವೆಯ್ಯ, ಚನ್ನಯ್ಯ, ಬಸವಯ್ಯ ಎಂಬ ಹೆಸರಿನ ಗಂಡು ಮಕ್ಕಳು, ಬಸವಲಿಂಗಮ್ಮ, ಸಂಗಮ್ಮ ಎಂಬ ಹೆಣ್ಣು ಮಕ್ಕಳು ಜನಿಸಿದರು.

ಜೇಷ್ಠ ಪುತ್ರ ಅಡವಯ್ಯರವರ ಸುಪುತ್ರರೇ ಶಿವಬಸವ ಸ್ವಾಮಿಗಳು. ಜಂಗಮರ ಮನೆ, ಬಡತನ ಹಾಸುಹೊಕ್ಕಿದ ಮನೆ, ಶಿವನಾಮ ಪಾರಾಯಣ, ಹೊಲಗದ್ದೆಗಳಿಲ್ಲ, ಆಸ್ತಿಪಾಸ್ತಿಗಳಿಲ್ಲ, ತಾಯಿಯ ಪ್ರೀತಿಯೇ ಇವರಿಗೆ ಸರ್ವಸ್ವವಾಗಿತ್ತು. ಇವರು ಮಗುವಾಗಿದ್ದಾಗ ಅಥಣಿಯ ಮುರುಘೇಂದ್ರ ಶಿವಯೋಗಿಗಳ ಕೃಪಾಶೀರ್ವಾದಕ್ಕೆ ಪಾತ್ರರಾದರು.

ಒಂದು ಪುಣ್ಯ ವಿಶೇಷ ಕಾರ್ಯಕ್ರಮ. ಅಥಣಿಯ ಮುರುಘೇಂದ್ರ ಶಿವಯೋಗಿಗಳು ಹಿರೇಕೊಪ್ಪದ ಶ್ರೀ ತೋಡಕರ ಬಾಳಪ್ಪನವರ ಮನೆಗೆ ಬಂದಿದ್ದರು. ಅಂದು ಬಾಳಪ್ಪ ಊರಿನ ಎಲ್ಲರಿಗೂ ತಮ್ಮ ಮನೆಯಲ್ಲಿ ಪ್ರಸಾದ ವ್ಯವಸ್ಥೆ ಮಾಡಿದ್ದರು. ರುದ್ರಮ್ಮ ತನ್ನ ಮಕ್ಕಳನ್ನು ಕರೆದುಕೊಂಡು ಅಲ್ಲಿಗೆ ಬಂದರು. ಶಿಶು ಶಿವಬಸಪ್ಪನನ್ನು ಹೊರಗಡೆ ಬಿಟ್ಟು ಅಡಿಗೆ ಕಾರ್ಯದಲ್ಲಿ ಸಹಾಯಕ್ಕೆ ನಿಂತರು. ಅಡಿಗೆ ಮನೆಯ ಪಕ್ಕದಲ್ಲಿ ಪೂಜೆಯ ಕೋಣೆ ಇತ್ತು. ಶಿವಯೋಗಿಗಳು ಲಿಂಗಪೂಜೆ ಪೂರೈಸಿ ಶಿವಧ್ಯಾನದಲ್ಲಿ ತೊಡಗಿದ್ದರು. ಆಗ ಶಿಶು ಶಿವಬಸಪ್ಪ ದೇವರ ಕೋಣೆ ಪ್ರವೇಶಿಸಿದ. ಪೂಜಾ ಸಾಮಗ್ರಿಗಳನ್ನು ಅತ್ತಿಂದ ಇತ್ತ, ಇತ್ತಿಂದ ಅತ್ತ ಇಟ್ಟ. ಅಂಬೆಗಾಲಿಕ್ಕುತ್ತ ಮಗು ದೇವರ ಕೋಣೆಯಲ್ಲಿ ಪೂಜಾ ಸಾಮಗ್ರಿಯೊಂದಿಗೆ ಆಟವಾಡುತ್ತಿತ್ತು. ಇದ್ಯಾವ ಪರಿಯೂ ಇಲ್ಲದೆ ಶಿವಯೋಗಿಗಳು ಧ್ಯಾನ ಮುದ್ರೆಯಲ್ಲಿ ತಲ್ಲೀನರಾಗಿದ್ದರು.

ಮಗು ಪೂಜಾ ಸಾಹಿತ್ಯವನ್ನು ಅಸ್ತವ್ಯಸ್ತ ಮಾಡುತ್ತಾ ಆಟ ಆಡುತ್ತಿತ್ತು. ಕೊನೆಗೆ ಅದರ ಕೈಗೆ ಗಂಟೆ ಸಿಕ್ಕಿತು. ಅದನ್ನು ಅಲ್ಲಾಡಿಸಿತು. ಆಗ ಬಂದ ನಾದ ಕೇಳಿ ಮಗುವಿಗೆ ಆನಂದ ಉಂಟಾಯಿತು. ಅನಂತರ ಗಂಟೆಯನ್ನು ನೆಲಕ್ಕೆ ಕುಕ್ಕಿತು. ಈ ಶಬ್ದವನ್ನು ಕೇಳಿದ ಜನರು ಇದು ಶಿವಯೋಗಿಗಳ ಸೂಚನೆ ಇರಬಹುದೆಂದು ಭಾವಿಸಿ ದೇವರ ಕೋಣೆಗೆ ಬಂದು ನೋಡಿ ಆಶ್ಚರ್ಯಪಟ್ಟರು, ಭಯಗೊಂಡರು. ಪೂಜಾ ಸಾಹಿತ್ಯದೊಂದಿಗೆ ಆಟವಾಡುವ ಮಗು, ಧ್ಯಾನಾಸಕ್ತ

# ೫೯೭, ೬ನೇ ಕ್ರಾಸ್, ೪ನೇ ಹಂತ, ಬಿ. ಇ. ಎಂ. ಎಲ್. ಬಡಾವಣೆ, ಬೆಂಗಳೂರು–೫೬೦೦೯೮

ಶಿವಯೋಗಿಗಳು. ಅವರ ಪೂಜೆಗೆ ಭಂಗವಾಯಿತೆ ಎಂಬ ಕಳವಳ ಜನರದ್ದು. ಜನರು ಕಣ್ಸನ್ನೆಯಿಂದ ಉಳಿದವರನ್ನು ಕರೆದರು. ಆಗ ಮಗು ಗಟ್ಟಿಯಾಗಿ ಗಂಟೆ ಬಾರಿಸಿತು. ಶಿವಯೋಗಿಗಳಿಗೆ ಎಚ್ಚರವಾಯಿತು. ಮಗುವಿನ ಲೀಲೆಯನ್ನು ಮೆಚ್ಚಿಕೊಂಡರು. ತೋಡಕರ ಬಾಳಪ್ಪನವರು ಆಗಬಾರದು ಆಗಿದೆ ಎಂದು ಕಳವಳಪಟ್ಟರು. ಆಗ ಶಿವಯೋಗಿಗಳು ಮಗುವಿನ ತಂದೆ–ತಾಯಿ ಯಾರೆಂದು ಅವರಿಂದ ಕೇಳಿ ತಿಳಿದುಕೊಂಡರು. ಮಗುವನ್ನು ಎತ್ತಿ ಮುದ್ದಾಡಿದರು. ತಾವು ಮಗುವಾದರು. ಮಗುವಿನ ತೇಜಸ್ಸು ಗಮನಿಸಿದ ಶಿವಯೋಗಿಗಳು, "ಈ ಮಗುವನ್ನು ಕೊಡುವಿಯೇನಮ್ಮ" ಎಂದು ರುದ್ರಮ್ಮನನ್ನು ಕೇಳಿದರು. ಮುಗ್ಧೆ ರುದ್ರಮ್ಮ ಇದ್ಯಾವುದರ ಪರಿವಿಲ್ಲದೆ "ಆಗಲಿ" ಯಪ್ಪಾ ಎನ್ನುತ್ತಾ ಶಿವಯೋಗಿಗಳಿಗೆ ಭಕ್ತಿಪೂರ್ವಕವಾಗಿ ನಮಸ್ಕರಿಸಿದರು. ಅನಂತರ ಮಗುವನ್ನು ಎತ್ತಿ ಮುದ್ದಾಡುತ್ತಾ ಮನೆಯೊಳಗೆ ಕರೆದುಕೊಂಡು ಹೋದರು.

ಇದು ಸಾಮಾನ್ಯ ಘಟನೆಯಾಗಿರಬಹುದು. ಆದರೆ ಶಿವಯೋಗಿಗಳಿಗೆ, ಮಗುವಿಗೆ ಸಂಬಂಧಿಸಿದಂತೆ ಇದು ಅಮೂಲ್ಯವಾದ ಘಟನೆಯೇ ಆಗಿದೆ. ಮುಂದೆ ಪೀಠಾಧಿಪತಿಯಾಗಿ ಭಕ್ತರನ್ನು ಸಲುಹುವ ದೇವಮಾನವನಾಗುತ್ತಾನೆಂದು ಶಿವಯೋಗಿಗಳಿಗೆ ಮಾತ್ರ ತಿಳಿದಿತ್ತೋ ಏನೋ? ಒಟ್ಟಿನಲ್ಲಿ ಶಿವಬಸಪ್ಪ ಶಿಶುವಾಗಿದ್ದಾಗ ನಡೆದ ಈ ಘಟನೆ ಒಂದು ಪ್ರಮುಖವಾದ ಸನ್ನಿವೇಶವಾಗಿದೆ.

ರುದ್ರಮ್ಮನಿಗೆ ಶಿವಬಸವನೆಂದರೆ ಅಚ್ಚುಮೆಚ್ಚು.ಅವನ ಅಣ್ಣ ಬಸವಲಿಂಗಯ್ಯನಿಗೆ ಆರೋಗ್ಯ ಅಷ್ಟೊಂದು ಸರಿಯಿರಲಿಲ್ಲ.ಮುದ್ದು ಮುದ್ದಾಗಿ ಬೆಳೆದ ಶಿವಬಸವ ಎಲ್ಲರಿಗೂ ಬೇಕಾದವನಾದ. ಚಿಕ್ಕವನಾದರೂ ದೊಡ್ಡವರು ಮಾಡುವ ಹಾಗೆ ಕೆಲಸ ಕಾರ್ಯಗಳನ್ನು ಮಾಡುತಿದ್ದ. ಇವನ ಅಕ್ಕಂದಿರು ತಾಯಿಯ ಕೆಲಸದಲ್ಲಿ ನಿರತರಾಗುತಿದ್ದರು. ಹೀಗೆ ರುದ್ರಮ್ಮಳು ಕಷ್ಟಪಟ್ಟು ನೆಮ್ಮದಿಯಿಂದ ಮಕ್ಕಳನ್ನು ಸಾಕುತ್ತಿದ್ದರು. ಇದು ವಿಧಿಗೆ ಸರಿ ಕಾಣಲಿಲ್ಲ. ಶಿವಬಸವನಿಗೆ ಎಂಟು ವರ್ಷವಾಗುವಾಗ ರುದ್ರಮ್ಮ ಶಿವನ ಪಾದ ಸೇರಿದಳು.

ಶಿವಬಸವ ಸೇರಿ ನಾಲ್ವರು ಮಕ್ಕಳು ಅನಾಥರಾದರು. ಅನಾರೋಗ್ಯವಿರುವ ಅಣ್ಣ ಪ್ರಾಯ ಬಂದಿರುವ ಅಕ್ಕಂದಿರು ಹೊರಗಡೆ ಬರುವಂತಿಲ್ಲ. ಸಂಸಾರದ ಜವಾಬ್ದಾರಿ ಶಿವಬಸವನದ್ದಾಯಿತು.ಬಿಳಿಯ ಜೋಳಿಗೆ ಹಿಡಿದು ಭಿಕ್ಷೆ ಬೇಡುವಂತಾಯಿತು. ಶಿವಬಸವ ತಂದ ಭಿಕ್ಷೆಯ ಹಿಟ್ಟಿನಿಂದ ಸಂಸಾರ ನಡೆಯುತ್ತಿತ್ತು. ಪ್ರಾಯಕ್ಕೆ ಬಂದ ಅಕ್ಕಂದಿರು ಮದುವೆಯಾಗಿ ಗಂಡನ ಮನೆ ಸೇರಿದರು. ಶಿವಬಸವ ಭಿಕ್ಷೆ ಬೇಡಿ ಅಣ್ಣನನ್ನು ಸಾಕುವಂತಾಯಿತು.

ಹೀಗೆ ಹಿರೇಕೊಪ್ಪದಲ್ಲಿ ಬಸವಲಿಂಗಯ್ಯ, ಶಿವಬಸವಯ್ಯ ಅವರ ಜೀವನ ಕುಂಟುತ್ತಾ ಸಾಗುತ್ತಿತ್ತು. ತುತ್ತು ಅನ್ನ ನೀಡಿದವರೆಲ್ಲಾ ಇವರ ತಂದೆ–ತಾಯಿಗಳಂತಾದರು. ಇವರು ಜಂಗಮರಾದುದರಿಂದ ಆಗಾಗ್ಗೆ ಊರಿನಲ್ಲಿ ನಡೆಯುವ ಊಟಕ್ಕೆ ಕರೆಯುತ್ತಿದ್ದರು. ಆ ಸಂದರ್ಭದಲ್ಲಿ ಹೊಟ್ಟೆ ತುಂಬಾ ಊಟ ಇವರದ್ದಾಗಿರುತ್ತಿತ್ತು.

ಇದೇ ಸಮಯಕ್ಕೆ ಸರಿಯಾಗಿ ನಾಗನೂರಿನ ರುದ್ರಾಕ್ಷಿಮಠದ ಪೀಠಾಧಿಪತಿಗಳದ ಶ್ರೀ ವೀರಭದ್ರ ಸ್ವಾಮಿಗಳು ಶಿವೈಕ್ಯರಾದರು. ನಾಗನೂರಿಗೆ ಜಂಗಮಮೂರ್ತಿ ಇಲ್ಲದಂತಾಯಿತು. ಊರಿನವರು ಮಠಕ್ಕೆ ಉತ್ತರಾಧಿಕಾರಿಗಳನ್ನು ಹುಡುಕುತ್ತಿದ್ದರು. ಗುರುಪಾದಯ್ಯ ಶೀಲಯ್ಯನವರಮಠರವರ ಮೇಲೆ ಈ ಜವಾಬ್ದಾರಿ ಬಿತ್ತು. ಇವರು ಉತ್ತರಾಧಿಕಾರಿಗಳನ್ನು ಹುಡುಕುತ್ತಾ ಹಿರೇಕೊಪ್ಪಕ್ಕೆ ಬಂದರು. ಅಲ್ಲಿ ಅನಾಥರಾದ ಬಸವಲಿಂಗಯ್ಯ, ಶಿವಬಸವಯ್ಯ ಇವರ ದೃಷ್ಟಿಗೆ ಬಿದ್ದರು. ಈ ಮಕ್ಕಳು ಇವರ ಮನೆತನದವರಾಗಿದ್ದರು. ಮಕ್ಕಳಿಗೆ ಬಂದ ಕಷ್ಟಕಾರ್ಪಣ್ಯ ನೋಡಿ ದುಃಖಿಸಿದರು, ಸಾಂತ್ವನ ಹೇಳಿದರು. ಶಿವಬಸವ, ಬಸವಲಿಂಗಯ್ಯ ಅವರ ಅಕ್ಕಂದಿರು ಸಂಬಂಧಿಕರನ್ನು ಭೇಟಿಯಾದರು. ರುದ್ರಾಕ್ಷಿಮಠದ ಉತ್ತರಾಧಿಕಾರಿಯಾಗಲು ಶಿವಬಸವಯ್ಯ ಸೂಕ್ತವೆಂಬ ನಿರ್ಧಾರಕ್ಕೆ ಬಂದರು. ಚೂಟಿಯಾದ ಹುಡುಗ, ತೇಜಸ್ಸುಯುತ ವರ್ಚಸ್ಸು. ಪಾದರಸದಂತಹ ವ್ಯಕ್ತಿತ್ವದ ಹುಡುಗ ಗುರುಪಾದಯ್ಯ ಶೀಲಯ್ಯನವರಮಠರವರ ಗಮನ ಸೆಳೆದ. ಇವರು ಜ್ಯೋತಿಷ್ಯ ಹೇಳುವುದರಲ್ಲಿ, ಜಾತಕ ನೋಡಿ ಲಕ್ಷಣ ನೋಡುವುದರಲ್ಲಿ ನಿಷ್ಣಾವಂತರು. ಹುಡುಗನ ಬಗ್ಗೆ ಲೆಕ್ಕಾಚಾರ ಹಾಕಿದರು. ಅದ್ಭುತ ಫಲಿತಾಂಶ ಬಂತು. ನಾಗನೂರಿನ ರುದ್ರಾಕ್ಷಿಮಠಕ್ಕೆ ಶಿವಬಸವ ಸ್ವಾಮಿರವರೆ ಸೂಕ್ತ ಎಂಬ ನಿರ್ಧಾರಕ್ಕೆ ಬಂದರು. ಈ ಬಗ್ಗೆ ಬಾಲಕನ ಸಂಬಂಧಿಕರೂ ಕೂಡ ಮಾತನಾಡಿದರು. ಹುಡುಗರಿಗೊಂದು ನೆಲೆಯಾಗಿತ್ತದೆ ಎಂಬ ಕಾರಣಕ್ಕೆ ಎಲ್ಲರು ಒಪ್ಪಿದರು.

ಗುರುಪಾದಯ್ಯ ನಾಗನೂರಿಗೆ ತೆರಳಿ ರುದ್ರಾಕ್ಷಿಮಠದ ಉತ್ತರಾಧಿಕಾರಿಯಾಗಿ ಶಿವಬಸವರನ್ನು ಆಯ್ಕೆ ಮಾಡುವ ಪ್ರಸ್ತಾಪ ಮುಂದಿಟ್ಟರು. ಎಲ್ಲ ಹಿರಿಯರು ಒಪ್ಪಿಗೆ ಸೂಚಿಸಿದರು. ಒಳ್ಳೆಯ ದಿವಸ ನೋಡಿ ಶಿವಬಸವರನ್ನು ಮರ್ಯಾದೆ ಪೂರ್ವಕವಾಗಿ ಹಿರೇಕೊಪ್ಪದಿಂದ ನಾಗನೂರಿಗೆ ಸಕಲ ಮರ್ಯಾದೆಯೊಂದಿಗೆ ಬರಮಾಡಿಕೊಂಡರು.

ಸುಂದರವಾದ ಮುಖ, ಸದೃಢವಾದ ದೇಹ, ಮೃದುವಾದ ಮಾತು. ಇವುಗಳಿಂದ ಶಿವಬಸವ ಎಲ್ಲರ

ಪ್ರಶಂಸೆಗೆ ಒಳಗಾದ. ರುದ್ರಾಕ್ಷಿಮಠದ ಏಳನೆಯ ಉತ್ತರಾಧಿಕಾರಿಯಾಗಿ ಸೇರಿದರು. ಅಲ್ಲೇ ಅವರ ಶಿಕ್ಷಣ ಪ್ರಾರಂಭವಾಯಿತು.

ನಾಗನೂರಿಗೆ ಬಂದ ಶಿವಬಸವ ಸ್ವಾಮಿಗಳಿಗೆ ಸಿದ್ಧಯ್ಯನೆಂಬ ಸೇವಕನನ್ನು ನೇಮಿಸಿದ್ದರು. ಆತ ಬಾಲಕ ಶಿವಬಸವ ಸ್ವಾಮಿಗಳಿಗೆ ಹೊಡೆಯುತ್ತಿದ್ದ. ಶಿಕ್ಷೆ ನೀಡುತ್ತಿದ್ದ. ಪ್ರಸಾದ ರೂಪದಲ್ಲಿ ಯಾರಾದರೂ ಏನಾದರೂ ಕೊಟ್ಟರೆ ಮೊದಲು ಆತ ತಿಂದು ಅನಂತರ ಶಿವಬಸವ ಸ್ವಾಮಿಗಳಿಗೆ ಕೊಡುತ್ತಿದ್ದ. ಇದು ಊರಿನವರಿಗೆ ತಿಳಿಯಿತು. ವೀರಯ್ಯ ಎಂಬುವವರನ್ನು ಸೇವಕನನ್ನಾಗಿ ನೇಮಿಸಿದರು. ಈತ ತುಂಬಾ ಒಳ್ಳೆಯವನಾಗಿದ್ದ. ಶಿವಬಸವ ಸ್ವಾಮಿಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದ. ಸ್ವಾಮಿಯವರು ಊಟ ಮಾಡಿದ ಬಳಿಕ ತಾನು ಊಟ ಮಾಡುತ್ತಿದ್ದ.ಶಿವಬಸವ ಸ್ವಾಮಿಗಳಿಗೆ ಹುಶಾರಿಲ್ಲದಿದ್ದಾಗ ತಾನೇ ನಿಂತು ಆರೈಕೆ ಮಾಡುತ್ತಿದ್ದ. ಪ್ರೀತಿ, ವಾತ್ಸಲ್ಯದಿಂದ ಶಿವಬಸವ ಸ್ವಾಮಿಗಳನ್ನು ನೋಡಿಕೊಳ್ಳುತ್ತಿದ್ದನು. ಶಿವಬಸವ ಸ್ವಾಮಿಗಳು ತಮ್ಮ ಇಳಿ ವಯಸ್ಸಿನ ಸಂದರ್ಭದಲ್ಲೂ ಕೂಡ ಈ ಸ್ವಾಮಿ ನಿಷ್ಠೆಯನ್ನು ನೆನಪು ಮಾಡಿಕೊಳ್ಳುತ್ತಿದ್ದರು.

ಇವರ ಮೇಲೆ ಪ್ರಭಾವ ಬಿದ್ದ ಇನ್ನೋರ್ವ ವ್ಯಕ್ತಿ ಎಂದರೆ ಶಿಕ್ಷಕರಾದ ಅದೃಶಯ್ಯ ಚರಂತಿಮಠ. ಇವರು ಸ್ವಾಮಿಗಳಿಗೆ ತಾಯಿಗಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದರು. ಅಕ್ಷರಾಭ್ಯಾಸದ ಜೊತೆಗೆ ಮರಿದೇವರ ಸ್ನಾನ, ಪೂಜೆ, ಶಿವಧ್ಯಾನ, ಶಿವಯೋಗ ಮುಂತಾದವುಗಳನ್ನು ಹೇಳಿಕೊಟ್ಟರು. ಈ ಶಿಕ್ಷಕರು ಮಹಾಶರಣರಾಗಿದ್ದರು. ಇಂಥವರಿಂದ ಆಶೀರ್ವಾದ ಪಡೆದದ್ದು ನನ್ನ ಪುಣ್ಯವೆಂದು ಆಗಾಗ್ಗೆ ಶಿವಬಸವ ಸ್ವಾಮಿಗಳು ಹೇಳುತ್ತಿದ್ದರು.

ಅಕ್ಷರಾಭ್ಯಾಸದ ಜೊತೆ ಶಿವಧ್ಯಾನ, ಶಿವಪೂಜೆಯಲ್ಲಿ ಶಿವಬಸವ ಸ್ವಾಮಿಗಳು ತೊಡಗಿಕೊಂಡರು. ಹಣಬರಟ್ಟಿಯ ಪಟ್ಟದೇವರ ಸಲಹೆ ಮೇಲೆ ಶಿವಬಸವ ಸ್ವಾಮಿಗಳು ಹುಬ್ಬಳ್ಳಿಯ ರುದ್ರಾಕ್ಷಿಮಠಕ್ಕೆ ಶಿಕ್ಷಣ ಪಡೆಯಲು ಸೇರುವಂತಾಯಿತು.

ಹುಬ್ಬಳ್ಳಿಯ ರುದ್ರಾಕ್ಷಿಮಠವು ಒಂದು ಪ್ರಸಿದ್ಧಮಠವಾಗಿದೆ. ಈ ಮಠವು ಲಿಂಗಾಯತ ಸ್ವಾಮಿಗಳಿಗೆ ತರಬೇತಿ ನೀಡುವ ಸ್ಥಳವಾಗಿದೆ. ಅಲ್ಲಿನ ಮುಖ್ಯಸ್ಥರಾದ ಶ್ರೀ ಚನ್ನಮಲ್ಲ ಸ್ವಾಮಿಗಳು ಶಿವಬಸವ ಸ್ವಾಮಿಗಳನ್ನು ನೋಡಿ ಸಂತಸಪಟ್ಟರು. ಇವರು ಸ್ವಾಮಿಗಳನ್ನು ಬಲು ಪ್ರೀತಿಯಿಂದ ನೋಡಿಕೊಂಡರು. ಶಿವಬಸವ ಸ್ವಾಮಿಗಳ ಜೊತೆಗೆ ಹತ್ತಾರು ಮರಿದೇವರುಗಳು ವಿದ್ಯಾಭ್ಯಾಸಕ್ಕೆ ಬರುತ್ತಿದ್ದರು. ಅವರ ಜೊತೆ ಇವರ ವಿದ್ಯಾಭ್ಯಾಸ ಸಾಗ ತೊಡಗಿತು. ಪ್ರತಿನಿತ್ಯ ಸಂಸ್ಕೃತ, ವೈದಿಕ, ಆಯುರ್ವೇದಗಳನ್ನು ಕಲಿಸುತ್ತಿದ್ದರು. ನಿಜಗುಣ ಶಾಸ್ತ್ರದ ಬಗ್ಗೆಯೂ ನಿತ್ಯ ಚರ್ಚೆ ಆಗುತ್ತಿತ್ತು.

ಶಿವಬಸವ ಸ್ವಾಮಿಗಳು ಬಹುಬೇಗ ಕಲಿತ ವಿದ್ಯೆಯಲ್ಲಿ ಪಬುದ್ಧ ಮಟ್ಟವನ್ನು ಸಾಧಿಸಿದರು. ಹೆಚ್ಚಿನ ವಿದ್ಯಾಭ್ಯಾಸಕ್ಕೆ ಶಿವಯೋಗ ಮಂದಿರಕ್ಕೆ ಬಂದರು. ಅಲ್ಲಿ ಹಾನಗಲ್ಲ ಶ್ರೀ ಕುಮಾರ ಸ್ವಾಮಿಗಳು ಮರಿದೇವರನ್ನು ಸ್ವೀಕರಿಸಿ, ಅವರ ಶಿಕ್ಷಣ ತರಬೇತಿಗಳು ತಮ್ಮ ಹೊಣೆಯೆಂದು ತಿಳಿದಿದ್ದರು.ಅದಕ್ಕಾಗಿ ಶ್ರಮಿಸಿದರು.

ಲಿಂಗಾಯತ ಧರ್ಮ ಗುರುಗಳಾಗಬೇಕೆನ್ನುವವರಿಗೆ ಕರ್ನಾಟಕದಲ್ಲಿ ತರಬೇತಿ ಕೇಂದ್ರಗಳು ಇರಲಿಲ್ಲ. ಕಾಶಿ ಅಥವಾ ಯಾರಾದರೂ ಹಿರಿಯ ಸ್ವಾಮಿಗಳ ಬಳಿಗೆ ಹೋಗಬೇಕಾಗಿತ್ತು. ಈ ಕೊರತೆಯನ್ನು ಹಾನಗಲ್ಲ ಶ್ರೀ ಕುಮಾರ ಸ್ವಾಮಿಗಳು ಶಿವಯೋಗ ಮಂದಿರದಲ್ಲಿ ತರಬೇತಿ ನೀಡುವುದರ ಮೂಲಕ ನಿವಾರಿಸಿದ್ದರು. ಇವರು ಶಿವಯೋಗ ಮಂದಿರದ ಸ್ಥಾಪನೆಯನ್ನು ಲಿಂಗಾಯತ ಮುಖಂಡರ ಸಹಾಯದಿಂದ ಮಾಡಿದ್ದರು.

ಶ್ರೀ ಕುಮಾರ ಸ್ವಾಮಿಗಳು ಶಿವಬಸವ ಸ್ವಾಮಿಗಳಿಗೆ ಸೂಕ್ತವಾದ ತರಬೇತಿ ನೀಡಿದರು. ಉತ್ತಮವಾದ ಪರಿಸರ, ಅಚ್ಚುಕಟ್ಟಾದ ವ್ಯವಸ್ಥೆ, ಶಿಸ್ತಬದ್ಧ ಯೋಜನೆಯಂತೆ ಶಿಕ್ಷಣ ನಡೆಯುತ್ತಿತ್ತು. ಮುಂಜಾನೆ ಬೇಗ ಏಳುವುದು, ಯೋಗಾಸನ, ಸ್ನಾನ, ಶಿವಪೂಜೆ, ಪ್ರಸಾದ, ಸಂಸ್ಕೃತ ಪ್ರವಚನ ಎಲ್ಲವೂ ಶಿಸ್ತುಬದ್ಧವಾಗಿ ನಡೆಯುತ್ತಿತ್ತು. ಶಿವಬಸವ ಸ್ವಾಮಿಗಳು ಇವೆಲ್ಲವನ್ನು ಅಚ್ಚುಕಟ್ಟುತನದಿಂದ ಮಾಡುತ್ತಿದ್ದರು.

ಶ್ರೀ ಕುಮಾರ ಸ್ವಾಮಿಯವರಿಗೆ ಶಿವಬಸವ ಸ್ವಾಮಿಗಳು ಅಚ್ಚುಮೆಚ್ಚಿನವರಾದರು. ಶಿವಬಸವ ಸ್ವಾಮಿಗಳ ಆಚಾರ-ವಿಚಾರ, ನಯ-ವಿನಯತೆ, ಚಾರಿತ್ರ್ಯ, ಸ್ಥಿತಪ್ರಜ್ಞೆ, ಸಂಯಮಶೀಲತೆ ಶ್ರೀ ಕುಮಾರ ಸ್ವಾಮಿಗಳಿಗೆ ಹಿಡಿಸಿತು. ಗುರು-ಶಿಷ್ಯರ ಸಂಬಂಧ ಗಾಢವಾಗಿ ಬೆಳೆಯಿತು. ಶ್ರೀ ಕುಮಾರ ಸ್ವಾಮಿ ಎಲ್ಲಿಗೆ ಹೋದರೂ ಅಲ್ಲಿ ಶಿವಬಸವ ಸ್ವಾಮಿಗಳು ಇರುತ್ತಿದ್ದರು.

ಒಮ್ಮೆ ಶ್ರೀ ಕುಮಾರ ಸ್ವಾಮಿಯವರಿಂದ ಶಿವಬಸವ ಸ್ವಾಮಿಯವರಿಗೆ ವೀರಪ್ಪ ಶರಣರ ಭೇಟಿಯಾಯಿತು. ಜನರು ವೀರಪ್ಪರವರನ್ನು 'ಹುಚ್ಚ ವೀರಪ್ಪ' ಎಂದು ಕರೆಯುತ್ತಿದ್ದರು. 'ಹುಚ್ಚ ವೀರಪ್ಪ'ರವರ ದಿವ್ಯಜ್ಞಾನ ನೋಡಿ ಶಿವಬಸವ ಸ್ವಾಮಿಗಳಿಗೆ ಆಶ್ಚರ್ಯವಾಯಿತು. ಅವರ ಪ್ರಭಾವದಿಂದ ಪುಳಕಿತರಾದರು. ಅಂಥ ಅನುಭಾವಿ ಶರಣರ ಸೇವೆ ಮಾಡುವ ಭಾಗ್ಯ ಶ್ರೀ ಕುಮಾರ ಸ್ವಾಮಿಗಳಿಂದ ಒಮ್ಮೆ ಸಿಕ್ಕಿದ ಬಗ್ಗೆ ಶಿವಬಸವ ಸ್ವಾಮಿಗಳು ಸದಾ ಸ್ಮರಿಸುತ್ತಿದ್ದರು. ೧೨ ವರ್ಷಗಳ

ಕಾಲ ಶಿವಬಸವ ಸ್ವಾಮಿಗಳು ಶಿವಯೋಗ ಮಂದಿರದಲ್ಲಿದ್ದು ಶ್ರೀ ಕುಮಾರ ಸ್ವಾಮಿಗಳಿಂದ ಸಕಲ ವಿದ್ಯೆಗಳನ್ನು ಕಲಿತು ಪರಿಪೂರ್ಣ ವ್ಯಕ್ತಿತ್ವವನ್ನು ಸಂಪಾದಿಸಿಕೊಂಡರು.

'ಯಾವ ಆಮಿಷಕ್ಕೂ ಬಲಿಯಾಗದೇ ಜನ ಸೇವೆ ಮಾಡುವೆವು' ಎಂದು ಶಿವಬಸವ ಸ್ವಾಮಿಗಳು ಎಲ್ಲರಂತೆ ಆಣೆ ಮಾಡಲಿಲ್ಲ.ಆದರೆ ಗುರುಗಳಿಗೆ ವಚನ ಕೊಟ್ಟರು. ಅದರಂತೆ ಬದುಕಿ ಉಸಿರಿರುವ ತನಕ ನಡೆದು ಎಲ್ಲರಿಗೂ ಮಾದರಿಯಾದರು.

ಶಿಕ್ಷಣ, ತರಬೇತಿ, ಅನುಷ್ಠಾನ ಪೂರೈಸಿದ ಶಿವಬಸವ ಸ್ವಾಮಿಗಳು ನಾಗನೂರಿಗೆ ಪ್ರಯಾಣ ಬೆಳೆಸಿದರು. ಅವರ ಜೊತೆ ಮರಡಿಮಠದ ಶ್ರೀ ಕೆಂಪಯ್ಯ ಸ್ವಾಮಿ ಹಾಗೂ ನವಿಲುಗುಂದದ ಗವಿಮಠದ ಶ್ರೀ ಬಸವಲಿಂಗ ಸ್ವಾಮಿಗಳು ಪ್ರಯಾಣ ಬೆಳೆಸಿದರು. ಮೂವರು ಸ್ವಾಮಿಗಳು ಬಹಳ ಅನ್ಯೋನ್ಯರಾಗಿದ್ದರು.

ಬಾಲಕನಾಗಿದ್ದಾಗ ಶಿವಯೋಗ ಮಂದಿರಕ್ಕೆ ತೆರಳಿದ್ದ ಶಿವಬಸವ ಸ್ವಾಮಿಗಳು ವಯಸ್ಕನಾಗಿ ನಾಗನೂರಿನ ರುದ್ರಾಕ್ಷಿಮಠಕ್ಕೆ ಬಂದಿದ್ದರು. ಶಿವಪೂಜೆ, ಲಿಂಗಾನುಷ್ಠಾನ, ವ್ರತ ನಿಯಮಗಳಿಂದ ಅವರ ಮುಖದ ಕಾಂತಿ ಪ್ರಜ್ವಲಿಸುತ್ತಿತ್ತು. ಕರುಣೆ ತುಂಬಿದ ಕಣ್ಣುಗಳನ್ನು ಕಂಡ ಭಕ್ತರು ಆನಂದಪಟ್ಟರು. ಮಠದ ಭಾಗ್ಯದ ಬಾಗಿಲು ಇವರಿಂದಾಗಿ ತೆರೆಯುವಂತಾಯಿತು. ಮಠದ ಭಕ್ತರಿಗೆ ಆದ ಆನಂದ ಹೇಳತೀರದು.

೧೯೨೨ರಲ್ಲಿ ಮರಳಿ ಮಠಕ್ಕೆ ಬಂದ ಶಿವಬಸವ ಸ್ವಾಮಿಗಳು ಭಕ್ತೋದ್ಧರಕ್ಕಾಗಿ ತನ್ನನ್ನು ತಾನೇ ಮುಡುಪಾಗಿಟ್ಟುಕೊಂಡರು. ಇವರ ಜೊತೆ ಬಂದಿದ್ದ ಮರಡಿ ಮಠದ ಕೆಂಪಯ್ಯ ಸ್ವಾಮಿಗಳು ೧೯೨೫ರಲ್ಲಿ ಶ್ರೀ ಗುರುಸಿದ್ಧರಾಜ ಯೋಗೀಂದ್ರ ಮಹಾಸ್ವಾಮಿಗಳ ಹೆಸರಿನಲ್ಲಿ ಹುಬ್ಬಳ್ಳಿಯ ಮೂರುಸಾವಿರಮಠದ ಜಗದ್ಗುರುಗಳಾದರು. ಇವರು ನಾಗನೂರು ಶಿವಬಸವ ಸ್ವಾಮಿಗಳ ಜೊತೆ ಆಪ್ತ ಸಮಾಲೋಚನೆ ಮಾಡುತ್ತಾ ಹೆಜ್ಜೆ ಹಾಕುತ್ತಿದ್ದರು.

ನಾಗನೂರು ರುದ್ರಾಕ್ಷಿಮಠದ ಬಗ್ಗೆ ಕೆಲವು ಮಾಹಿತಿಗಳನ್ನು ತಿಳಿಯುವುದು ಅವಶ್ಯಕ. ಧರ್ಮ,ಸಮಾಜ, ಶಿಕ್ಷಣ, ಹಸ್ತಪ್ರತಿಗಳ ರಕ್ಷಣೆ, ಸಂಶೋಧನೆ, ನಾಡು–ನುಡಿಗಳ ಹಿತಚಿಂತನೆ ಮಾಡುವುದರಲ್ಲಿ ಲಿಂಗಾಯತ ಮಠಗಳು ಮೊದಲ ಸಾಲಿನಲ್ಲಿ ನಿಲ್ಲುತ್ತವೆ. ಅಂತಹ ಮಠಗಳಲ್ಲಿ ರುದ್ರಾಕ್ಷಿಮಠವು ಒಂದು.ಇದು ಬೈಲಹೊಂಗಲ ತಾಲೂಕಿನ ನಾಗನೂರಿನಲ್ಲಿದೆ. ಮಠದಲ್ಲಿ ರುದ್ರಾಕ್ಷಿಯ ಕಿರೀಟವಿದೆ. ಆದುದರಿಂದ ಈ ಮಠವನ್ನು ರುದ್ರಾಕ್ಷಿಮಠವೆಂದು ಕರೆಯಲಾಗುತ್ತಿದೆ.

ವಿಜಾಪುರ ಜಿಲ್ಲೆಯ ತೊರವಿ ಗ್ರಾಮದ ಅಲ್ಲಮಪ್ರಭು ಮತ್ತು ಸಿದ್ಧರಾಮ ಸ್ವಾಮಿಗಳು ನಾಗನೂರು ರುದ್ರಾಕ್ಷಿಮಠದ ಮೂಲ ಪುರುಷರೆಂದು ತಿಳಿದುಬರುತ್ತದೆ. ಈ ಮಠ ೧೮೭೦ರಲ್ಲಿ ಸ್ಥಾಪನೆಯಾಗಿದೆ ಎಂದು ಹೇಳಲಾಗುತ್ತಿದೆ.

ಅಲ್ಲಮಪ್ರಭು ಸ್ವಾಮಿಗಳು ಶ್ರೀ ಮಠದ ಮೊದಲ ಪೀಠಾಧಿಪತಿಗಳು. ಅನಂತರ ಸಿದ್ಧರಾಮ ಸ್ವಾಮಿಗಳು, ತರುವಾಯ ಮೂರನೆಯವರು ಸಿದ್ಧರಾಮ ಸ್ವಾಮಿಗಳು, ಗುರುಸಿದ್ಧ ಸ್ವಾಮಿಗಳು, ಗುರುಲಿಂಗ ಸ್ವಾಮಿಗಳು, ವೀರಭದ್ರ ಸ್ವಾಮಿಗಳು ಕ್ರಮವಾಗಿ ನಾಲ್ಕು, ಐದು, ಆರನೇ ಪೀಠಾಧಿಪತಿಗಳಾಗಿದ್ದರು. ಆರನೇ ಪೀಠಾಧಿಪತಿ ವೀರಭದ್ರ ಸ್ವಾಮಿಗಳು ಲಿಂಗೈಕ್ಯರಾದ ಬಳಿಕ ೮ ವರ್ಷದ ಶಿವಬಸವ ಸ್ವಾಮಿಗಳು ಏಳನೇ ಪೀಠಾಧಿಪತಿಗಳಾದರು.ಇವರು ಪೀಠಾಧಿಪತಿಗಳಾದ ಮೇಲೆ ಶ್ರೀಮಠದ ಉನ್ನತಿಗಾಗಿ ಹಗಲಿರುಳು ಶ್ರಮಿಸಿದರು.

ಇವರು ಪೀಠಾಧಿಪತಿಗಳಾದಾಗ ರುದ್ರಾಕ್ಷಿಮಠ ತೀರ ಬಡತನದಲ್ಲಿತ್ತು. ಜನರ ಭಕ್ತಿ ಬಿಟ್ಟರೆ ಮಠಕ್ಕೆ ಯಾವ ಆಸ್ತಿಯೂ ಇರಲಿಲ್ಲ. ಗದ್ದುಗೆಯ ಮೇಲೆ ಹಳೆಯ ತಗಡಿನ ಹೊದಿಕೆ.ಬಾಗಿಲು ಸಹ ಹಳೇ ತಗಡಿನಿಂದ ಮಾಡಿದುದಾಗಿತ್ತು. ಶಿವಬಸವ ಸ್ವಾಮಿಗಳು ಮೂರು ದಿನ ರುದ್ರಾಕ್ಷಿಮಠದಲ್ಲಿ ಇದ್ದರೆ ಮೂರು ದಿನ ಶ್ರೀ ಕೆಂಪಯ್ಯ ಸ್ವಾಮಿಗಳ ಮಠದಲ್ಲಿ ಕಳೆಯುತ್ತಿದ್ದರು.

ಪ್ರಾರಂಭದಲ್ಲಿ ಶಿವಬಸವ ಸ್ವಾಮಿಗಳೇ ಸ್ವತಃ ಬಡಗಿಯ ಸಹಾಯದಿಂದ ಮಠದ ಗದ್ದಿಗೆಯ ಮೇಲೆ ಹಲಗೆಗಳನ್ನು ಜೋಡಿಸಿದರು. ಹಳೆಯ ಮಠವನ್ನು ಕೆಡವಿ ಹೊಸ ಕಟ್ಟಡವನ್ನು ಕಟ್ಟಿಸಿದರು.

ನಾಗನೂರಿನಲ್ಲಿ ಶಿವಬಸವ ಸ್ವಾಮಿಗಳು ಹೊಸ ಹೊಸ ಪ್ರಯೋಗಗಳನ್ನು ಮಾಡಿದರು.ಪ್ರಾರಂಭದಲ್ಲಿ ಒಂದು ದೊಡ್ಡ ಆಕಳು ಕಟ್ಟಿದ್ದರು. ಅದು ದಿನ ೧೨ ತಂಬಿಗೆ ಹಾಲು ಕೊಡುತ್ತಿತ್ತು. ಸ್ವಾಮಿಗಳ ಪ್ರಸಾದಕ್ಕೆ ಅರ್ಧ ತಂಬಿಗೆ ಸಾಕಾಗುತ್ತಿತ್ತು. ನಾಗನೂರಿನಲ್ಲಿ ಚೆನ್ನಪ್ಪ ಎಂಬ ಕುಸ್ತಿಪಟು ಇದ್ದ. ಅವನಿಗೆ ಶ್ರೀಗಳ ಮೇಲೆ ವಿಶೇಷ ಮಮತೆ, ಪ್ರೀತಿ ಇತ್ತು, ಸ್ವಾಮಿಗಳು ಚೆನ್ನಪ್ಪನ ಕುಸ್ತಿಗೆ ಸದಾ ಪ್ರೋತ್ಸಾಹ ಕೊಡುತ್ತಿದ್ದರು. ಶಿವಬಸವ ಸ್ವಾಮಿಗಳ ಅನುಗ್ರಹವಿದ್ದರೆ ತಾನು ಎಂಥವರನ್ನೂ ಸೋಲಿಸಬಲ್ಲೆ ಎಂಬ ವಿಶ್ವಾಸ ಅವನಲ್ಲಿ ಮೂಡಿತ್ತು. ಮಠದ ಆಕಳು ನೀಡುವ ಹಾಲಿನಲ್ಲಿ ಪ್ರಸಾದ, ಅಭಿಷೇಕದ ಅನಂತರ ಉಳಿದ ಹಾಲು ಇವನಿಗೆ ಸ್ವಾಮಿಗಳು ನೀಡುತ್ತಿದ್ದರು. ಚನ್ನಪ್ಪನ ಕುಸ್ತಿ ಕಾದಾಟವೆಂದರೆ ಊರಿನವರಿಗೆಲ್ಲಾ ತುಂಬಾ ಮೆಚ್ಚಿಗೆ.

ಸ್ವಾಮಿಗಳು ೧೯೨೪ ರಿಂದ ನಾಗನೂರಿನ ಸುತ್ತಮುತ್ತಲಿನ ಗ್ರಾಮಗಳಿಗೆ ಅನುಕೂಲವಾಗುವಂತೆ ಜಾತ್ರೆ ಪ್ರಾರಂಭಿಸಿದರು. ಜಾತ್ರೆ ಶ್ರಾವಣ ಭಾದ್ರಪದ ಮಾಸದಲ್ಲಿ ನಡೆಯುತ್ತಿತ್ತು. ಆ ಸಂದರ್ಭದಲ್ಲಿ ಸ್ವಾಮಿಗಳು ಕುಸ್ತಿ ಪಂದ್ಯಾಟ ಏರ್ಪಡಿಸುತ್ತಿದ್ದರು. ಈ ಸಂದರ್ಭದಲ್ಲಿ ಚನ್ನಪ್ಪನಿಗೆ ಮಠದ ವತಿಯಿಂದ ಸಾಕಷ್ಟು ಪ್ರೋತ್ಸಾಹ ಉತ್ತೇಜನ ನೀಡಲಾಗುತ್ತಿತ್ತು.

೧೯೨೮ರಲ್ಲಿ ನೇಗಿನಹಾಳದ ಗೌಡರು ಬೆಳೆಸಿದ ಪೈಲವಾನನಿಂದ ನಾಗನೂರಿನ ಯುವಕರಿಗೆ ಸೋಲಾಯಿತು. ಆ ಪೈಲವಾನನ ಅಟ್ಟಹಾಸ ಮುಗಿಲು ಮುಟ್ಟಿತು.ಆಗ ಆತನ ಸವಾಲನ್ನು ಸ್ವೀಕರಿಸಿದ ಚನ್ನಪ್ಪ ಶಿವಬಸವ ಸ್ವಾಮಿಗಳ ಆಶೀರ್ವಾದ ಪಡೆದು, ಅವರ ನಾಮಸ್ಮರಣೆ ಮಾಡುತ್ತಾ ನೇಗಿನಹಾಳದ ಪೈಲವಾನನ ಜೊತೆ ಕುಸ್ತಿಗೆ ಇಳಿದ ಜನರು ನೋಡುನೋಡುತ್ತಿದ್ದಂತೆ ಆತನನ್ನು ಸೋಲಿಸಿದ.

ಶಿವಬಸವ ಸ್ವಾಮಿಗಳ ನಾಮಸ್ಮರಣೆ ಮಾಡಿದರೆ ಗೆಲುವು ಖಂಡಿತ ಎಂಬ ಆತನ ನಂಬಿಕೆ ಸತ್ಯವಾಗಿತ್ತು. ಸ್ವಾಮಿಗಳು ಚೆನ್ನಪ್ಪನಿಗೆ ನೀಡುವ ಪ್ರೋತ್ಸಾಹ ಊರಿನ ಒಬ್ಬನಿಗೆ ಮತ್ಸರ ತಂದಿತ್ತು. ಮಠದ 'ಕಪಿಲಾ'ಳ ಹಾಲು ಅವನು ಕುಡಿಯುವುದೇನೆಂದು ಕಿಡಿ ಕಾರಿದ್ದ. ಒಮ್ಮೆ ರಾತ್ರಿ ಮಠದ ಮೇಲಿನ ತಗಡು ಕದ್ದ. ಸ್ವಾಮಿಗಳಿಗೆ ಸೂರಿಲ್ಲದಂತಾಯಿತು. ಇದು ಊರಿನವರಿಗೆ ತಿಳಿಯಿತು. ಕಳ್ಳನನ್ನು ಗುರುತಿಸಿ ಕಂಬಕ್ಕೆ ಕಟ್ಟಿ ಹಾಕಲಾಗಿತ್ತು. ಆಗ ಬ್ರಿಟಿಷ ಅಧಿಕಾರಿಗಳ ಕಾರುಬಾರು. ಸ್ವಾಮಿಗಳು ದೂರು ನೀಡಿದರೆ ಕಳ್ಳನಿಗೆ ಕಠಿಣ ಶಿಕ್ಷೆಯಾಗುತ್ತಿತ್ತು. ಕಳ್ಳನಿಗೆ ಶಿಕ್ಷೆಯಾಗಬೇಕೆಂದು ಯಾರು ಎಷ್ಟೇ ಹೇಳಿದರೂ ಸ್ವಾಮೀಜಿ ದೂರು ನೀಡಲಿಲ್ಲ. ಅನುಕಂಪ, ಕ್ಷಮೆ ಸ್ವಾಮಿಗಳ ದೊಡ್ಡ ಗುಣವಾಗಿತ್ತು. ಕಳ್ಳತನ ಮಾಡಿದ ವ್ಯಕ್ತಿಗೆ ಅರ್ಧಾಂಗ ವಾಯು ಹೊಡೆದು ಕೆಲವೇ ಸಮಯದಲ್ಲಿ ತೀರಿಹೋದ. ದೇವರೆ ಅವನಿಗೆ ಶಿಕ್ಷೆ ಕೊಟ್ಟ ಎಂದು ಜನ ಭಾವಿಸಿದರು.

ಒಳ್ಳೆಯ ಮಾರ್ಗದಲ್ಲಿ ನಡೆದರೆ ಸಾಧನೆ ಮಾಡಬಹುದು. ಇದು ಸ್ವಾಮಿಗಳ ನಂಬಿಕೆಯಾಗಿತ್ತು. ಅವರ ಪ್ರೀತಿಯ ಕುಸ್ತಿಪಟು ಚೆನ್ನಪ್ಪ ತನ್ನ ಕಾರ್ಯವನ್ನು ಕಾಯ್ದುಕೊಳ್ಳದೆ ಹೋದ. ಕೊನೆಗೆ ಆತ ಕುಸ್ತಿಯಲ್ಲೂ ಕುಸಿದ. ಅಲ್ಲಿಂದ ಸ್ವಾಮಿಗಳಿಗೆ ಕುಸ್ತಿಯಲ್ಲಿ ಆಸಕ್ತಿ ಕಡಿಮೆಯಾಗುತ್ತಾ ಬಂತು.

ನಾಗನೂರಿನ ಗ್ರಾಮಸ್ಥರಿಗೆ ರುದ್ರಾಕ್ಷಿಮಠದ ಮೇಲೆ ವಿಶೇಷ ಪ್ರೀತಿ. ತಾವು ಬೆಳೆಸಿದ ವಸ್ತುಗಳನ್ನು ಮೊದಲು ಮಠಕ್ಕೆ ನೀಡುತ್ತಿದ್ದರು. ಅನಂತರ ತಾವು ಬಳಸಿಕೊಳ್ಳುತ್ತಿದ್ದರು. ಗ್ರಾಮದಲ್ಲಿ ಯಾರ ಮನೆಯಲ್ಲಿ ರುಚಿಯಾದ ಅಡಿಗೆ ಇರಲಿ, ಕರಿದ ಪದಾರ್ಥವಿರಲಿ, ಮೊದಲು ಅದನ್ನು ಮಠಕ್ಕೆ ತಲುಪಿಸುತ್ತಿದ್ದರು. ಅಷ್ಟರಮಟ್ಟಿಗೆ ಮಠ ಜನರ ಪ್ರೀತಿಗೆ ಪಾತ್ರವಾಯಿತು. ಇದಕ್ಕೆ ಶಿವಬಸವ ಸ್ವಾಮಿಗಳ ಕರುಣಾಮಯ ವ್ಯಕ್ತಿತ್ವವೇ ಕಾರಣವಾಗಿತ್ತು. ಚಿವಟಗುಂಡಿಯ ಗೌಡರು ಮಠಕ್ಕೆ ೫ ಎಕರೆ ಭೂಮಿಯನ್ನು ಖರೀದಿ ಮಾಡಲು ಅವಕಾಶ ಮಾಡಿಕೊಟ್ಟರು. ಇದರಿಂದ ಕೃಷಿಕಾರ್ಯ ಮಾಡುತ್ತಾ ಬಂದ ದವಸ ಧಾನ್ಯಗಳಲ್ಲಿ ದಾಸೋಹ ಕಾರ್ಯ ಮಾಡಲು ಸಾಧ್ಯವಾಯಿತು.

ಪ್ರತಿಯೊಬ್ಬರು ಸಾಕ್ಷರರಾಗುವುದರ ಮೂಲಕ ಸಮಾಜದ ಏಳಿಗೆ ಸಾಧ್ಯ ಎಂದು ಶಿವಬಸವ ಸ್ವಾಮಿಗಳು ನಂಬಿದ್ದರು. ಜೀವನಕ್ಕೂ ಶಿಕ್ಷಣಕ್ಕೂ ಇರುವ ಸಂಬಂಧ ಅರಿತವರಾಗಿದ್ದರು. ಬೈಲಹೊಂಗಲ ಮಲ್ಲನಾಯಕರು, ಬಸವನಗೌಡರು, ಹೊಗರ್ತಿಯ ಕಲ್ಲಪ್ಪನವರು ಸ್ವಾಮಿಗಳಿಗೆ ವಿದ್ಯಾರ್ಥಿ ಪ್ರಸಾದ ನಿಲಯ ಸ್ಥಾಪಿಸುವ ಬಗ್ಗೆ ಸಲಹೆ ನೀಡಿದರು. ನಾಗನೂರಿನಲ್ಲಿ ಸ್ಥಾಪಿಸುವುದಕ್ಕಿಂತ ಬೆಳಗಾವಿಯಲ್ಲಿ ಸ್ಥಾಪಿಸುವುದು ಒಳ್ಳೆಯದೆಂಬ ಅಭಿಪ್ರಾಯ ಕೆಲವು ಭಕ್ತರದ್ದಾಗಿತ್ತು. ಇದನ್ನರಿತು ಶಿವಬಸವ ಸ್ವಾಮಿಗಳು ಬಸ್ಸಿನಲ್ಲಿ ಬೆಳಗಾವಿಗೆ ಪ್ರಯಾಣ ಬೆಳೆಸಿದರು. ಬೆಳಗಾವಿಯ ಲಿಂಗಾಯತ ಮುಖಂಡರಾದ ವಿರೂಪಾಕ್ಷಪ್ಪ ಬೆಂಬಳಗಿ, ಮರಯ್ಯ ನಿಂಬರಗಿ, ಚಂಬಣ್ಣರವರ ಬಳಿ ವಿಚಾರ ವಿನಿಮಯ ಮಾಡಿದರು. ತಮ್ಮ ಆತ್ಮೀಯ ಮೂರು ಸಾವಿರ ಮಠದ ಜಗದ್ಗುರು ಶ್ರೀ ಗುರುಸಿದ್ಧೇಶ್ವರ ಸ್ವಾಮಿಗಳಲ್ಲಿ ಆಪ್ತ ಸಮಾಲೋಚನೆ ಮಾಡಿದರು. ಎಲ್ಲರ ಅಭಿಪ್ರಾಯದಂತೆ ೬.೬.೧೯೩೨ರಂದು "ಲಿಂಗಾಯತ ಪ್ರಸಾದ ನಿಲಯ"ವನ್ನು ಸ್ಥಾಪಿಸಿದರು. ಶಿವಬಸವ ಸ್ವಾಮಿಗಳು ಎಲ್ಲ ಮಕ್ಕಳನ್ನು ಶಿಸ್ತಿನಿಂದ ನೋಡಿಕೊಳ್ಳುತ್ತಿದ್ದರು. ಆಲಸಿ ವಿದ್ಯಾರ್ಥಿಗಳಿಗೆ ಸ್ವಾಮಿಗಳ ಬೆತ್ತದ ರುಚಿ ಕಟ್ಟಿಟ್ಟ ಬುತ್ತಿಯಾಗಿತ್ತು. ವಿದ್ಯಾರ್ಥಿಗಳನ್ನು ಪಾದರಸದಂತೆ ಚುರುಕಾಗಿ ಮಾಡುತ್ತಿದ್ದರು. ಶರಣ ವಚನಗಳ ಪಠಣ, ಭಸ್ಮ ಧರಿಸುವುದು ಇದೆಲ್ಲವೂ ಪ್ರಸಾದ ನಿಲಯದಲ್ಲಿ ಕಟ್ಟುನಿಟ್ಟಾಗಿ ನಡೆಯ ತೊಡಗಿತು. ಅನಂತರ ಲಿಂಗಾಯತ ಪ್ರಸಾದ ನಿಲಯ ಶಹಾಪುರಕ್ಕ ವರ್ಗವಾಯಿತು.

ಶಿವಬಸವ ಸ್ವಾಮಿಗಳಿಗೆ ಮಕ್ಕಳ ಕಂಡರೆ ಪ್ರೀತಿ. ಅವರದು ಮಾತೃವಾತ್ಸಲ್ಯ. ಶಿವಬಸವ ಸ್ವಾಮಿಗಳ ಮಾತೃವಾತ್ಸಲ್ಯ, ಮೃದು ಹೃದಯವನ್ನು ಅರಿತ ಭಕ್ತರು ಶ್ರಾವಣ ಮಾಸದ ಸಂದರ್ಭದಲ್ಲಿ ಪ್ರಸಾದಕ್ಕೆ ಸ್ವಾಮಿಗಳನ್ನು ಕರೆಯುವ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನೂ ಕರೆಯುತ್ತಿದ್ದರು.

ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗತೊಡಗಿತು. ಕೆಲವರು ಬೆಳಗಾವಿಯಲ್ಲೂ ಪ್ರಸಾದ ನಿಲಯ ಬೇಕೆಂದು ಸ್ವಾಮಿಗಳನ್ನು ಕೇಳಿದರು. ಲಿಂಗರಾಜ ಕಾಲೇಜು, ಜಿ. ಎ. ಹೈಸ್ಕೂಲಿನಲ್ಲಿ

ಓದುತ್ತಿದ್ದ ವಿದ್ಯಾರ್ಥಿಗಳ ಅನುಕೂಲದ ದೃಷ್ಟಿಯಿಂದ ಜನ ಸ್ವಾಮಿಗಳಲ್ಲಿ ವಿಷಯ ಪ್ರಸ್ತಾಪ ಮಾಡಿದ್ದರು. 'ದೆವ್ವದ ಮನೆ' ಎಂದೇ ಖ್ಯಾತಿ ಪಡೆದಿದ್ದ ಮಾರುತಿ ಬೀದಿಯ ದೇಶಪಾಂಡೆಯವರ ಮನೆಯನ್ನು ಹದಿನೈದು ಸಾವಿರ ರೂಪಾಯಿಗಳಿಗೆ ಪಡೆದರು. ಶಹಾಪುರದಲ್ಲಿದ್ದ ಪ್ರಸಾದ ನಿಲಯವನ್ನು ೧೯೪೩ರಲ್ಲಿ ಅಲ್ಲಿಗೆ ವರ್ಗಾಯಿಸಿದರು. ಶಿವಬಸವ ಸ್ವಾಮಿಗಳು ಮಾಡಿದ ಮೊದಲ ಸ್ಥಿರಾಸ್ತಿ ಇದಾಗಿತ್ತು. ನಾಗನೂರಿನ ರುದ್ರಾಕ್ಷಿಮಠದ ಹೆಮ್ಮೆಯ ಸಾಧನೆಯಲ್ಲಿ ಇದೊಂದಾಗಿತ್ತು.

ಶಿವಬಸವ ಸ್ವಾಮಿಗಳು ಲಿಂಗಾಯತ ವಿದ್ಯಾರ್ಥಿಗಳೊಂದಿಗೆ ಬ್ರಾಹ್ಮಣ, ಹರಿಜನ, ಮಹಮ್ಮದೀಯರು ಸೇರಿದಂತೆ ಜಾತಿ ಭೇದವಿಲ್ಲದೆ ಎಲ್ಲ ವಿದ್ಯಾರ್ಥಿಗಳಿಗೂ ಪ್ರಸಾದ ನಿಲಯದಲ್ಲಿ ಅವಕಾಶ ಕಲ್ಪಿಸಿದರು. ೧೯೪೯ರಲ್ಲಿ ಹೊಸ ಕಟ್ಟಡ ಪ್ರಾರಂಭಿಸಿದರು. ೧೦.೯.೧೯೫೧ ರಂದು ಮೈಸೂರಿನ ಮಹಾರಾಜ ಜಯಚಾಮರಾಜೇಂದ್ರ ಒಡೆಯರು ನೂತನ ಪ್ರಸಾದ ನಿಲಯವನ್ನು ಉದ್ಘಾಟಿಸಿದರು. ಪ್ರಸಾದ ನಿಲಯದ ಕೀರ್ತಿ ದಶದಿಕ್ಕುಗಳಿಗೂ ಹಬ್ಬಿತು.

ಪ್ರಸಾದ ನಿಲಯಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಯಿತು. ಎಲ್ಲರ ಪರಿಶ್ರಮದಿಂದ ಹದಿನಾರು ಎಕರೆಯಷ್ಟು ಜಮೀನು ಪ್ರಸಾದ ನಿಲಯದ ವ್ಯಾಪ್ತಿಗೆ ಬಂದಿತ್ತು. ಅಲ್ಲಿ ಕುಮಾರೇಶ್ವರ ಪ್ರಸಾದ ನಿಲಯ, ಉದ್ಯೋಗನಿರತ ಮಹಿಳಾ ವಸತಿಗೃಹ, ಪ್ರಾಥಮಿಕ ಶಾಲೆ, ಮಾಧ್ಯಮಿಕ ಶಾಲೆ, ಔದ್ಯೋಗಿಕ ತರಬೇತಿ ಕೇಂದ್ರ, ಅಂಗನವಾಡಿ ಕಾರ್ಯಕರ್ತ ತರಬೇತಿ ಕೇಂದ್ರಗಳು ನಿರ್ಮಾಣವಾದವು.

ಸಾರ್ವಜನಿಕರಿಗೆ ಅನುಕೂಲವಾಗುವಂತೆ ಪ್ರಭುದೇವ ಸಭಾಗೃಹ ನಿರ್ಮಾಣವಾಯಿತು. ಈ ಎಲ್ಲ ಕಟ್ಟಡಗಳಿಗೆ ಹೊಂದಿಕೊಂಡು ಹೊಸ ಬಡಾವಣೆ ನಿರ್ಮಾಣವಾಯಿತು.ನಾಗನೂರಿನ ಶಿವಬಸವ ಸ್ವಾಮಿಗಳಿಂದ ಇಡೀ ಪರಿಸರವೇ ಪಾವನವಾಯಿತು. ಈ ವಿಶಾಲವಾದ ಪ್ರದೇಶವನ್ನು ಬೆಳಗಾವಿ ನಗರಸಭೆಯವರು "ಶಿವಬಸವ ನಗರ"ವೆಂದು ನಾಮಕರಣ ಮಾಡಿದರು. ನಾಗನೂರಿನ ರುದ್ರಾಕ್ಷಿಮಠದ ಶಿವಬಸವ ಸ್ವಾಮಿಗಳ ನಿಸ್ವಾರ್ಥ ಸೇವೆಗೆ ಸಂದ ಫಲ ಇದಾಗಿತ್ತು. ಸ್ವಾಮಿಗಳ ಶ್ರಮ ಸಾರ್ಥಕವೂ ಆದಂತಾಯಿತು.

ಲಿಂಗಾಯತ ಮಠಗಳಿಗೂ ಶಿಕ್ಷಣಕ್ಕೂ ಅನ್ಯೋನ್ಯವಾದ ಸಂಬಂಧವಿದೆ. ಕರ್ನಾಟಕ ಶೈಕ್ಷಣಿಕ ಕ್ಷೇತ್ರವನ್ನು ಗಮನಿಸಿದಾಗ ಈ ಮಾತು ನೂರಕ್ಕೆ ನೂರು ಸತ್ಯ. ಶೈಕ್ಷಣಿಕ ಕ್ಷೇತ್ರದಲ್ಲಿ ಕರ್ನಾಟಕ ಏನಾದರೂ ಸಾಧನೆ ಮಾಡಿದ್ದರೆ ಅದು ಲಿಂಗಾಯತ ಮಠಗಳ ಸಾರ್ಥಕ ಸೇವೆಯಿಂದ ಎಂದು ಯಾವ ಸಂಕೋಚವಿಲ್ಲದೆ ಹೇಳಬಹುದು. ಬೆಳಗಾವಿಯಲ್ಲಿ ರುದ್ರಾಕ್ಷಿಮಠದ ಪೀಠಾಧಿಪತಿ ಶಿವಬಸವ ಸ್ವಾಮಿಗಳು ಮಾಡಿದ ಕೆಲಸ ಅಸಾಧಾರಣವಾಗಿದೆ. ಶಿವಬಸವ ಸ್ವಾಮಿಗಳು ಶೈಕ್ಷಣಿಕ ಕ್ಷೇತ್ರದಲ್ಲಿ ಮಾಡಿದ ಸಾಧನೆ ತುಂಬಾ ಅಮೂಲ್ಯವಾಗಿದೆ. ಪೂರ್ವ ಪ್ರಾಥಮಿಕ ಶಾಲೆ, ಪ್ರಾಥಮಿಕ ಶಾಲೆ, ಬಾಲಕರ ವಸತಿ ಪ್ರೌಢಶಾಲೆ, ಪದವಿ ಪೂರ್ವ ಮಹಾವಿದ್ಯಾನಿಲಯ, ತಾಂತ್ರಿಕ ಶಿಕ್ಷಣ ಸಂಸ್ಥೆ ಮೊದಲಾದ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿ ಗ್ರಾಮೀಣ ಪ್ರದೇಶದ ಮಕ್ಕಳ ಬದುಕನ್ನು ಹಸನು ಮಾಡಿದ್ದಾರೆ. ಎಲ್ಲಾ ವರ್ಗದ ಮಕ್ಕಳು ತಮ್ಮ ಜ್ಞಾನದಾಹವನ್ನು ನೀಗಿಸಲು ಅವಕಾಶ ಮಾಡಿಕೊಟ್ಟ ಶ್ರೀ ಶಿವಬಸವ ಸ್ವಾಮಿಗಳು ದೇವಾಂಶ ಸಂಭೂತರಾಗಿದ್ದಾರೆ.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಶಿವಬಸವ ಸ್ವಾಮಿಗಳು ವಹಿಸಿದ ಪಾತ್ರ ತುಂಬಾ ಪ್ರಾಮುಖ್ಯತೆಯನ್ನು ಪಡೆದಿದೆ. ಬೆಳಗಾವಿಯ ಸ್ವಾತಂತ್ರ್ಯ ಹೋರಾಟಗಾರರು ಇವರ ನಿಕಟ ಸಂಪರ್ಕವನ್ನು ಹೊಂದಿದ್ದರು. ಕರ್ನಾಟಕದ ಸಿಂಹ ಎಂಬ ಹೆಸರಿಗೆ ಪಾತ್ರರಾದ ಗಂಗಾಧರರಾವ ದೇಶಪಾಂಡೆಯವರಿಗೆ ಶೈಕ್ಷಣಿಕ ಸೇವೆಯ ಬಗ್ಗೆ ಅತೀವ ಮೆಚ್ಚುಗೆ. ಎಲ್ಲ ಜಾತಿಯವರನ್ನು ಸಾಮಾನ್ಯವಾಗಿ ಕಾಣುತ್ತಿದ್ದ ಸ್ವಾಮಿಗಳ ಮೇಲೆ ಅವರಿಗೆ ಎಲ್ಲಿಲ್ಲದ ಗೌರವ. ಮಹಾತ್ಮಾ ಗಾಂಧಿಯವರು ಕರ್ನಾಟಕಕ್ಕೆ ಬಂದಾಗ ದೇಶಪಾಂಡೆಯವರು ಶಿವಬಸವ ಸ್ವಾಮಿಗಳನ್ನು ಅವರಲ್ಲಿಗೆ ಕರೆದುಕೊಂಡು ಹೋಗಿದ್ದರು. ಶಿವಬಸವ ಸ್ವಾಮಿಗಳ ಸಹಕಾರ, ಶೈಕ್ಷಣಿಕ ಸೇವೆ ಎಲ್ಲವನ್ನೂ ಮಹಾತ್ಮಾ ಗಾಂಧಿಯವರಿಗೆ ದೇಶಪಾಂಡೆಯವರು ವಿವರಿಸಿದರು. ರಾಷ್ಟ್ರೀಯವಾದಿಗಳಿಗೆ ಸ್ವಾಮಿಗಳು ಕೊಡುತ್ತಿದ್ದ ಪ್ರೋತ್ಸಾಹ ಮಹಾತ್ಮಾ ಗಾಂಧಿಯವರಿಗೆ ಮೆಚ್ಚಿಗೆಯಾಯಿತು. ಗಿರಣಿಯ ಬಟ್ಟೆಯನ್ನು ಧರಿಸಬೇಡಿ. ಕೈಯಿಂದ ನೂತ ಖಾದಿಬಟ್ಟೆಗಳನ್ನು ಧರಿಸುವಂತೆ ಮಹಾತ್ಮಾ ಗಾಂಧಿಯವರು ಶಿವಬಸವ ಸ್ವಾಮಿಗಳಿಗೆ ಸಲಹೆ ನೀಡಿದರು. ಅದನ್ನು ಒಪ್ಪಿದ ಸ್ವಾಮಿಗಳು ಕೊನೆಯವರೆಗೂ ಖಾದಿ ಬಟ್ಟೆಯನ್ನೇ ಧರಿಸುತ್ತಿದ್ದರು. 'ಚಲೇ ಜಾವ್' ಸಂದರ್ಭದಲ್ಲಿ ಸ್ವಾಮಿಗಳು ಚಳುವಳಿಗಾರರಿಗೆ ದೊಡ್ಡ ನೆರಳಾಗಿದ್ದರು, ಪ್ರಸಾದ ನಿಲಯದಲ್ಲಿ ಯಾರಿಗೂ ಗೊತ್ತಾಗದಂತೆ ಚಳುವಳಿಗಾರ ದೇಶಭಕ್ತರಿಗೆ ಪ್ರಸಾದದ ವ್ಯವಸ್ಥೆ ಮಾಡುತ್ತಿದ್ದರು. ಇದು ಬ್ರಿಟಿಷರಿಗೆ ತಿಳಿಯಿತು. ಸ್ವಾಮಿಯವರನ್ನು ಬಂಧಿಸಬೇಕೆಂದು ನಿಶ್ಚಯಿಸಿದರು. ಈ ವಿಷಯ ಜಿಗಜಿನ್ನಿ ವಕೀಲರ ಮುಖಾಂತರ ಸ್ವಾಮಿಗಳಿಗೆ ತಿಳಿಯಿತು. ಅವರ ಸೂಚನೆ ಮೇರೆಗೆ ಭೂಗತರಾಗಲು ನಿರ್ಧರಿಸಿದ ಸ್ವಾಮಿಗಳು ಯಾರಿಗೂ

ತಿಳಿಯದಂತೆ ರಾತ್ರೋರಾತ್ರಿ ಸಾಗರದ ಕೆಳದಿ ಮಠಕ್ಕೆ ಬಂದರು. ಕೆಳದಿ ಮಠದ ಸ್ವಾಮಿಗಳು ಶಿವಬಸವ ಸ್ವಾಮಿಗಳ ಸ್ನೇಹಿತರಾಗಿದ್ದರು. ಅವರ ಸಹಕಾರ ಸ್ವಾಮಿಗಳಿಗೆ ಸಿಕ್ಕಿತು. ೧೯೪೭ರಲ್ಲಿ ಭೂಗತ ಕಾರ್ಯಕ್ರಮವನ್ನು ನಿಲ್ಲಿಸುವಂತೆ ಕಾಂಗ್ರೆಸ್ ಕರೆ ನೀಡಿತು. ಪೋಲಿಸರು ಕೇಸುಗಳನ್ನು ವಜಾ ಮಾಡುತ್ತಿದ್ದರು. ಇದನ್ನು ತಿಳಿದ ಶಿವಬಸವ ಸ್ವಾಮಿಗಳು ಕೆಳದಿ ಮಠಕ್ಕೆ ಕೃತಜ್ಞತೆ ಸಲ್ಲಿಸಿ ಬೆಳಗಾವಿಗೆ ಬಂದರು.

ಹೀಗೆ ರಾಷ್ಟ್ರೀಯ ಹೋರಾಟಗಾರರಿಗೆ ಸ್ಫೂರ್ತಿಯ ಚಿಲುಮೆಯಾಗಿದ್ದ ಶಿವಬಸವ ಸ್ವಾಮಿಗಳು ಸಕ್ರಿಯ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ಶ್ರೇಷ್ಠ ದೇಶಪ್ರೇಮಿಗಳಾಗಿದ್ದರು.

ಶ್ರೀ ಶಿವಬಸವ ಸ್ವಾಮಿಗಳು ರಾಷ್ಟ್ರಾಭಿಮಾನಿ. ಹಾಗೆಯೇ ಕನ್ನಡ ಅಭಿಮಾನಿಗಳಾಗಿದ್ದರು. ಇವರು ಕರ್ನಾಟಕ ಏಕೀಕರಣ ಚಳುವಳಿಯಲ್ಲೂ ಭಾಗವಹಿಸಿದ್ದರು. ಭಾಷಾವಾರು ಪ್ರಾಂತ್ಯ ರಚನೆಯ ಹಿನ್ನಲೆಯಲ್ಲಿ ಫಜಲ್ ಆಲಿ ಆಯೋಗ ಬೆಳಗಾವಿಗೆ ಬಂದಿತು. ಈ ಸಮಿತಿಯ ಮುಂದೆ ಕನ್ನಡಿಗರು ಹಾಗು ಮರಾಠಿಗರು ಹೇಳಿಕೆ ನೀಡಬೇಕಾಗಿತ್ತು. ಎಲ್ಲರ ಒಪ್ಪಿಗೆಯಂತೆ ಶಿವಬಸವ ಸ್ವಾಮಿಗಳು ಆಯೋಗದ ಮುಂದೆ ತಮ್ಮ ಹೇಳಿಕೆಯನ್ನು ಕೊಟ್ಟರು. ಭೌಗೋಳಿಕ, ಐತಿಹಾಸಿಕ, ಸಾಮಾಜಿಕ, ಭಾಷಿಕ ಅಂಶಗಳನ್ನೊಳಗೊಂಡ ಸ್ವಾಮಿಯವರ ಹೇಳಿಕೆ ಫಜಲ್ ಅಲಿ ಹಾಗೂ ಅವರ ಸದಸ್ಯರನ್ನು ಪ್ರಭಾವಿಸಿತು. ಬೆಳಗಾವಿ ಕರ್ನಾಟಕದ್ದು; ಕನ್ನಡಿಗರದ್ದು ಎಂದು ಪ್ರಬಲವಾಗಿ ವಾದ ಮುಂದಿಟ್ಟರು. ಇವರ ಹೇಳಿಕೆಯ ಮುಂದೆ ವಿರೋಧಿಗಳ ಹೇಳಿಕೆ ಸಪ್ಪೆ ಎನಿಸಿತು. ಇದರಿಂದಾಗಿ ಬೆಳಗಾವಿ ಸಂಪೂರ್ಣ ಕರ್ನಾಟಕದ ಭಾಗವಾಗಿ ಉಳಿಯಿತು.

ಶಿವಬಸವ ಸ್ವಾಮಿಗಳಿಗೆ ಕನ್ನಡ ಭಾಷಿಕರಂತೆ ಮರಾಠಿ ಭಕ್ತರೂ ಸಹ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಆದರೆ ಕನ್ನಡದ ವಿಷಯ ಬಂದಾಗ ಇವರು ಕನ್ನಡಪರ ದೃಢನಿಲುವು ಹೊಂದುತ್ತಿದ್ದರು. ಕನ್ನಡಪರವಾದ ಸಭೆಗಳು ನಡೆಯಲು ಪ್ರಸಾದ ನಿಲಯದಲ್ಲಿ ಸ್ವಾಮಿಗಳು ಅವಕಾಶ ಮಾಡಿಕೊಡುತ್ತಿದ್ದರು. ಬೆಳಗಾವಿಯಲ್ಲಿ ಕನ್ನಡಿಗರ ಸಭೆಗೆ ಬರುವಾಗ ಜನರಿಗೆ ಊಟೋಪಚಾರ, ವಸತಿ ಸೌಲಭ್ಯವನ್ನು ಶಿವಬಸವ ಸ್ವಾಮಿಗಳು ಸಮರ್ಥವಾಗಿ ಮಾಡುತ್ತಿದ್ದರು. ರಜಾಕಾರರ ಹಾವಳಿಯನ್ನು ತಡೆಗಟ್ಟುವಲ್ಲಿ ಸ್ವಾಮಿಗಳ ಪಾತ್ರ ಹಿರಿದಾಗಿದೆ. ಭಾಲ್ಕಿ ಪಟ್ಟದೇವರು ಹಾಗೂ ಅವರ ಸಂಗಡಿಗರಿಗೆ ರಕ್ಷಣೆ ನೀಡಿದ ಸ್ವಾಮಿಗಳು ಗಮನ ಸೆಳೆದಿದ್ದಾರೆ.

ಬೆಳಗಾವಿಯಲ್ಲಿ ಕನ್ನಡದ ಕಂಪನ್ನು ಪಸರಿಸುವಲ್ಲಿ ಸ್ವಾಮಿಗಳ ಪಾತ್ರ ತುಂಬಾ ಹಿರಿದಾಗಿದೆ. ಕನ್ನಡಪರ ಹೋರಾಟಗಾರರಿಗೆ ಇವರು ನೀಡಿದ ನೈತಿಕ ಬೆಂಬಲ ಇದಕ್ಕೆ ಕಾರಣವಾಗಿದೆ. ಕನ್ನಡ ವಿರೋಧಿಗಳ ಸೊಕ್ಕನ್ನು ಅಡಗಿಸಲು ಕಾರಣರಾದವರು ಸ್ವಾಮಿಗಳು ಎಂದರೆ ಅತಿಶಯೋಕ್ತಿಯ ಮಾತಲ್ಲ. ಹೀಗಾಗಿ ಬೆಳಗಾವಿಯಲ್ಲಿ ಕನ್ನಡದ ಧ್ವನಿಯಾಗಿ ಶಿವಬಸವ ಸ್ವಾಮಿಗಳು ಕಣ್ಣಮುಂದೆ ಬರುತ್ತಾರೆ.

ಬೆಳಗಾವಿಯ ಹೃದಯ ಭಾಗದಲ್ಲಿರುವ ವಿದ್ಯಾರ್ಥಿ ಪ್ರಸಾದ ನಿಲಯ ಕನ್ನಡದ ಶಕ್ತಿಕೇಂದ್ರವಾಗಿತ್ತು. ಇದಕ್ಕೆ ಕಾರಣೀಕರ್ತರು ಶಿವಬಸವ ಸ್ವಾಮಿಗಳು. ಇವರ ಸಹಕಾರದಿಂದ ಪ್ರಸಾದ ನಿಲಯದ ಆವರಣದಲ್ಲಿ ನಾಡಹಬ್ಬಕ್ಕೆ ಚಾಲನೆ ಸಿಕ್ಕಿತು. ಇದು ವರ್ಷದಿಂದ ವರ್ಷಕ್ಕೆ ಸಂಭ್ರಮದಿಂದ ಸಾಗುತ್ತಿದೆ.

ಸಾಹಿತ್ಯ ಸೇವೆಯಲ್ಲೂ ಶಿವಬಸವ ಸ್ವಾಮಿಗಳು ಎತ್ತಿದ ಕೈ. ೧೯೯೧ರಲ್ಲಿ ಲಿಂಗಾಯತ ಅಧ್ಯಯನ ಅಕಾಡೆಮಿ ಅಸ್ತಿತ್ವಕ್ಕೆ ಬಂತು. ಈ ಅಕಾಡೆಮಿಯು ಪಿಎಚ್. ಡಿ. ಪ್ರಬಂಧಗಳಿಂದ ಹಿಡಿದು ಜನಪ್ರಿಯ ಸಾಹಿತ್ಯ ಕೃತಿಗಳು ಪ್ರಕಟಿಸುತ್ತಿವೆ. ಶರಣ ಸಾಹಿತ್ಯ, ಅದರ ರಕ್ಷಣೆ ಮತ್ತು ಪ್ರಸಾರಕ್ಕೆ ಸಂಬಂಧಿಸಿದಂತೆ ಈ ಅಕಾಡೆಮಿ ಮಹತ್ವದ ಕೆಲಸ ಮಾಡುತ್ತಿದೆ.

'ಲಿಂಗಾಯತ ಸಂಶೋಧನೆ ಕೇಂದ್ರ ಗ್ರಂಥಾಲಯದ ಸ್ಥಾಪನೆ ನಾಗನೂರು ರುದ್ರಾಕ್ಷಿಮಠದ ಇತ್ತೀಚಿನ ಮಹತ್ವದ ಸಾಧನೆಯಾಗಿದೆ. ಶ್ರೀಮಂತ ಪರಂಪರೆ ಇರುವ ವೀರಶೈವ ಸಾಹಿತ್ಯ ಸಂಸ್ಕೃತಿಗಳನ್ನು ಉಳಿಸಿ ಬೆಳೆಸುವಲ್ಲಿ ಈ ಗ್ರಂಥಾಲಯ ಸಹಾಯಕವಾಗಿದೆ.'

ಶಿವಬಸವ ಸ್ವಾಮಿಗಳು ಒಮ್ಮೆ ರೈಲಿನಲ್ಲಿ ಪ್ರಯಾಣಿಸುವಾಗ, ಕವಿ ಸಣಕಲ್ಲರಿಗೆ ಪ್ರೋತ್ಸಾಹದ ಕೊರತೆ ಇರುವುದನ್ನು ಸಹ ಪ್ರಯಾಣಿಕರು ಮಾತನಾಡುವುದನ್ನು ಕೇಳಿ ಮರುಕಪಟ್ಟರು.'ಸಣಕಲ್ಲ–ಸಾಹಿತ್ಯ ಪ್ರೋತ್ಸಾಹ ನಿಧಿ'ಯನ್ನು ಭಕ್ತರ ಸಹಕಾರದಿಂದ ಪ್ರಾರಂಭಿಸಿದರು. ಅದನ್ನು ಒಂದು ಸಮಾರಂಭದಲ್ಲಿ ಸಣಕಲ್ಲ ಅವರಿಗೆ ಅರ್ಪಿಸಿದರು. 'ಸ್ವಾಮಿಗಳ ಆಶೀರ್ವಾದ ಎಂಬ ಅಕ್ಷಯ ನಿಧಿ ನನಗೆ ದೊರಕಿದೆ. ಇದು ನನ್ನ ಪುಣ್ಯ' ಎಂದು ಸಣಕಲ್ಲರವರು ಹೇಳಿದರು. ಈಶ್ವರ ಸಣಕಲ್ಲರವರಿಗೆ ಸಾಮೀಜಿ ಪ್ರೋತ್ಸಾಹ ನೀಡಿದರು. ಅವರ ಸಾಹಿತ್ಯ ಸೇವೆ ಮುಂದುವರೆಯಲು ಕಾರಣಕರ್ತರಾದರು.

ಇದೇ ರೀತಿ ಹಳಕಟ್ಟಿಯವರಿಗೆ ಬಹುದೊಡ್ಡ ನಿಧಿಯನ್ನು ಸಮರ್ಪಿಸಿ ಸಹಾಯ ಮಾಡಿದ್ದಾರೆ. ಹಳಕಟ್ಟಿಯವರು ಶರಣರು, ಮಹಾತ್ಮರು. ಲಿಂಗಾಯತ ಸಮಾಜವನ್ನು ಶ್ರೀಮಂತಗೊಳಿಸಿದವರು. ಅವರ ಬಡತನ ನೋಡಿ ಸ್ವಾಮಿಗಳಿಗೆ ಕಣ್ಣೀರು ಬಂತು. ಅವರಿಗಾಗಿ ನಿಧಿ ಸಂಗ್ರಹಿಸಿದರು. ಧಾರವಾಡ

ನವಕಲ್ಯಾಣ ಮಠದ ಶ್ರೀ ಕುಮಾರ ಸ್ವಾಮಿಗಳ ಅಮೃತಹಸ್ತದಿಂದ ಸಂಗ್ರಹಿಸಿದ ನಿಧಿಯನ್ನು ಹಳಕಟ್ಟಿಯವರಿಗೆ ಅರ್ಪಿಸಿದರು. ಈ ಸಮಾರಂಭಕ್ಕೆ ಶ್ರೀ ಕುಮಾರ ಸ್ವಾಮಿಯವರನ್ನು ಆಮಂತ್ರಿಸಿ ಸತ್ಕರಿಸಿದರು. ಇದರಿಂದ ಶಿವಬಸವ ಸ್ವಾಮಿಗಳ ವಿದ್ವತ್ತು ಸಮಾಜ ಸೇವೆಗಳಿಗೆ ಮನ್ನಣೆ ಇಟ್ಟು ಆದರಿಸಿದ್ದು ಅರಿವಾಗುತ್ತಿದೆ.

ಶಿವಬಸವ ಸ್ವಾಮಿಗಳು ಸಮಾಜದ ಹಿತಚಿಂತಕರಾಗಿದ್ದರು. ಇವರು ತಮ್ಮ ಇಡೀ ಜೀವನವನ್ನು ಸಮಾಜ ಸೇವೆಯಲ್ಲಿ ತೊಡಗಿಸಿದ್ದರು. ಇವರು ಕರುಣಾಮಯಿ. ಮಾತೃ ಹೃದಯದವರು. ಪ್ರತಿಯೊಬ್ಬರನ್ನು ಪ್ರೀತಿಯಿಂದ ಮಾತನಾಡಿಸುತ್ತಿದ್ದರು. ಎಲ್ಲರಿಗೂ ಸದಾ ಶುಭಹಾರೈಸುವ ಶ್ರೀ ಶಿವಬಸವ ಸ್ವಾಮಿಗಳಂಥವರು ತುಂಬಾ ಅಪರೂಪ.

ಶಿವಬಸವ ಸ್ವಾಮಿಗಳ ಕನ್ನಡ ಪ್ರೇಮ ದೊಡ್ಡದು.ಕನ್ನಡ ವಿದ್ವಾಂಸರನ್ನು ಗೌರವಿಸುವ ರೀತಿ ಮೆಚ್ಚಿಗೆಗೆ ಅರ್ಹವಾಗಿದೆ. ಡಾ. ಆರ್. ಸಿ. ಹಿರೇಮಠರವರು ಎಂ. ಎ. ಪರೀಕ್ಷೆಗೆ ಮುಂಬಯಿಗೆ ಹೋಗುವ ಸಂದರ್ಭದಲ್ಲಿ ಶ್ರೀಗಳು ಹಣ್ಣು, ಹಾರ ತರಿಸಿ ೧೦೧ ರೂಪಾಯಿ ನೀಡಿ ಗೌರವಿಸಿದ್ದಾರೆ. ಇದೇ ರೀತಿ ಅನೇಕ ಲೇಖಕರನ್ನು, ಶಿಕ್ಷಕರನ್ನು, ವಿದ್ವಾಂಸರನ್ನು ಗೌರವಿಸಿರುತ್ತಾರೆ. ಇವರಿಗೆ ಕನ್ನಡ ಕಾರ್ಯಕರ್ತರ ಮೇಲೆ ಅಪಾರ ಗೌರವ. ಕನ್ನಡ ಹೋರಾಟಗಾರ ಸಿದ್ಧನಗೌಡರ ಮನೆಗೆ ಹೋಗಿ ಆಶೀರ್ವಾದ ಮಾಡಿದರು.ಅನಂತರ ಸಿದ್ಧನಗೌಡರು ಬೆಳಗಾವಿ ಮಹಾನಗರ ಪಾಲಿಕೆಯ ಪ್ರಪ್ರಥಮ ಕನ್ನಡ ಮೇಯರ್ ಆದರು. ಇದೆಲ್ಲವೂ ಸ್ಮರಣೀಯವಾದ ದೃಶ್ಯವಾಗಿದೆ. ಕನ್ನಡ ಕಾರ್ಯಕರ್ತನ ಮನೆಗೆ ಹೋಗಿ ಆಶೀರ್ವಾದ ಮಾಡಿದ ಶ್ರೀಗಳ ಕನ್ನಡ ಪ್ರೇಮ ನಮ್ಮ ಕಣ್ಣ ಮುಂದೆ ಸುಳಿಯುತ್ತದೆ.

ಕನ್ನಡ ನಾಟಕ ಕಲಾವಿದರನ್ನು ಗುರುತಿಸಿ ಶಿವಬಸವ ಸ್ವಾಮಿಗಳು ಗೌರವಿಸಿದ್ದಾರೆ.ಇವರಿಗೆ ಸಾಹಿತಿ ಕಲಾವಿದರ ಬಗೆಗೆ ವಿಶೇಷ ಕಾಳಜಿ. ನಾಟ್ಯಭೂಷಣ ಏಣಗಿ ಬಾಳಪ್ಪರವರನ್ನು ವಿದ್ಯಾರ್ಥಿ ಪ್ರಸಾದ ನಿಲಯಕ್ಕೆ ಬರಮಾಡಿಕೊಂಡು ದೊಡ್ಡದೊಂದು ಸಮಾರಂಭ ಏರ್ಪಡಿಸಿ ಇವರು ಗೌರವಿಸಿದ್ದಾರೆ.

ಶಿವಬಸವ ಸ್ವಾಮಿಗಳು ಸಮಾಜ ಸೇವೆಗೆ ತಮ್ಮನ್ನು ತಾವೇ ಅರ್ಪಿಸಿಕೊಂಡರು. ಇವರಿಗೆ ನೂರು ವರ್ಷ ತುಂಬಿತು. ಸ್ವಾಮಿಯವರ ಸ್ಮರಣೀಯ ಸೇವೆ ಗುರುತಿಸಿದ ಕರ್ನಾಟಕ ವಿಶ್ವವಿದ್ಯಾಲಯ ೨೨.೧೨.೧೯೮೯ ರಂದು ಗೌರವ ಡಾಕ್ಟರೇಟ್ ನೀಡಿ ಗೌರವಿಸಿತು.

೨-೬-೧೯೯೦ ಇವರ ಶತಮಾನದ ಸಂಭ್ರಮ. ಅಂದು ಬೆಳಗಾವಿಯಲ್ಲಿ ಕನ್ನಡದ ವಾತಾವರಣ, ಶತಾಯುಷಿ, ಕನ್ನಡದ ಪ್ರಭೆ, ಸಂಘಟಕ, ಹೋರಾಟಗಾರ, ಆಧ್ಯಾತ್ಮಿಕ ಶಿಖರ, ಶಿಕ್ಷಣ ತಜ್ಞ ಏನೆಲ್ಲಾ ಹೆಸರಿನಿಂದ ಕರೆದರೂ ಅದು ಡಾ. ಶಿವಬಸವ ಸ್ವಾಮಿಗಳಿಗೆ ಅನ್ವಯವಾಗುತ್ತಿತ್ತು. ಅವರನ್ನು ನೋಡಲು ನಾಡಿನಾದ್ಯಂತ ಭಕ್ತರು, ಅಭಿಮಾನಿಗಳು, ಸಾಹಿತಿಗಳು, ಕಲಾವಿದರು, ಕನ್ನಡಾಭಿಮಾನಿಗಳು, ಪತ್ರಕರ್ತರು, ಹೋರಾಟಗಾರರು ಆಗಮಿಸಿದರು.

ಡಾ. ಶಿವಬಸವ ಸ್ವಾಮಿಗಳ ಶತಮಾನ ಸಂಭ್ರಮವನ್ನು ಐದು ದಿನಗಳ ಕಾಲ ಆಚರಿಸಲಾಯಿತು. ಕನ್ನಡ ಸಾಹಿತಿಗಳಿಗೆ, ಪತ್ರಕರ್ತರಿಗೆ, ಕಲಾವಿದರಿಗೆ ಗೌರವ ನೀಡಲಾಗಿತ್ತು. ಅಂದು ಸಂಪೂರ್ಣ ಕನ್ನಡಮಯ. ನಾಡು-ನುಡಿಗೆ ಶ್ರಮಿಸಿದ ಮೇರು ಪತ್ರಕರ್ತ ಪಾಟೀಲ ಪುಟ್ಟಪ್ಪರವರನ್ನು ಸತ್ಕರಿಸಿ ಅಭಿನಂದಿಸಲಾಯಿತು. ಬೃಹತ್ ಸಂಖ್ಯೆಯ ಜನ ಸೇರಿದ್ದರು. ಈ ಕಾರ್ಯಕ್ರಮ ಸದಾ ನೆನಪಿನಲ್ಲಿಟ್ಟುಕೊಳ್ಳುವ ಕಾರ್ಯಕ್ರಮವಾಗಿತ್ತು.

ಡಾ. ಶಿವಬಸವ ಸ್ವಾಮಿಗಳು ಶಿವಯೋಗ ಮಂದಿರದ ಅಧ್ಯಕ್ಷರಾಗಿ ೧೯೬೬ ರಿಂದ ೧೯೭೪ ವರೆಗೆ ಕಾರ್ಯ ನಿರ್ವಹಿಸಿದ್ದಾರೆ. ಶಿವಯೋಗಮಂದಿರ ಆರ್ಥಿಕ ಬುನಾದಿಯನ್ನು ಭದ್ರಪಡಿಸಿದ್ದಾರೆ. ಗೋಶಾಲೆಯನ್ನು ಬೆಳೆಸಿದರು. ಕುಮಾರೇಶ್ವರರ ಗದ್ದುಗೆಯನ್ನು ಸುಂದರವಾಗಿ ಕಟ್ಟಿಸಿದರು. ಮಠದಿಂದ ಹೊಲ ಗದ್ದೆಗಳಿಂದ, ತೋಟಗಳಿಂದ ಸರಿಯಾದ ರೀತಿಯಲ್ಲಿ ಉತ್ಪನ್ನಗಳು ಬರುವಂತೆ ಮಾಡಿದರು.

ಇವರು ಹಲವಾರು ಸಂಸ್ಥೆಗಳಿಗೂ ಅಧ್ಯಕ್ಷರಾಗಿ ಮಾರ್ಗದರ್ಶನ ಮಾಡಿದ್ದಾರೆ. ಅವುಗಳಲ್ಲಿ ಘಟಪ್ರಭಾದ ಜಗದ್ಗುರು ಗುರುಸಿದ್ಧೇಶ್ವರ ಆಸ್ಪತ್ರೆ ಹಾಗೂ ಶೇಖ ಸಾಹೇಬರ ಹೋಮಿಯೋಪಥಿ ಕಾಲೇಜು ಮುಖ್ಯವಾಗಿತ್ತು.

ಡಾ. ಶಿವಬಸವ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಗುರುಸಿದ್ಧೇಶ್ವರ ಆಸ್ಪತ್ರೆ ಒಳ್ಳೆಯ ಹೆಸರನ್ನು ಗಳಿಸಿತು. ಆಗ ಈ ಆಸ್ಪತ್ರೆಯಲ್ಲಿ ಡಾ. ವ್ಹಿ. ಎಸ್. ಮೆಟಗುಡ್ಡರವರು ಪ್ರಧಾನ ವೈದ್ಯರಾಗಿ ಕೆಲಸ ನಿರ್ವಹಿಸುತ್ತಿದ್ದು ಇವರ ಕೀರ್ತಿ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಹಬ್ಬಿತ್ತು. ಎಲ್ಲಾ ಭಾಗದಿಂದ ಜನ ತಪಾಸಣೆಗೆ ಇಲ್ಲಿಗೆ ಬರುತ್ತಿದ್ದರು. ಬೇರೆ ಜನಾಂಗದ ಪ್ರಸಿದ್ಧ ವ್ಯಕ್ತಿಯ ಸಂಸ್ಥೆಗೆ ಲಿಂಗಾಯತ ಪೀಠಾಧ್ಯಕ್ಷರು ಅಧ್ಯಕ್ಷರಾದುದು ಸಾಮಾನ್ಯದ ಮಾತಲ್ಲ. ಅಷ್ಟರ ಮಟ್ಟಿಗೆ ಅವರು ಜನಾನುರಾಗಿಗಳಾಗಿದ್ದರು. ಸ್ವತಃ ಶೇಖರವರು ತಮ್ಮ ಸಂಸ್ಥೆಯ ಅಧ್ಯಕ್ಷರು ಲಿಂಗಾಯತರೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು.

ಡಾ. ಶಿವಬಸವ ಸ್ವಾಮಿಗಳು ವೈಜ್ಞಾನಿಕ ಮನೋಭಾವದವರು. ಇವರು ತಮ್ಮ ಜೀವನದುದ್ದಕ್ಕೂ ವೈಜ್ಞಾನಿಕ ಮನೋಭಾವವನ್ನೇ ಬೆಳೆಸಿಕೊಂಡು ಬಂದವರಾಗಿದ್ದಾರೆ. ಯಾವಾಗಲೂ ಇವರದ್ದು ಚಿಕ್ಕ ಮಕ್ಕಳ ಅಭಿವೃದ್ಧಿಯ ಕನಸು. ಅದನ್ನು ನನಸು ಮಾಡಲು ಸದಾ ಕಂಕಣಬದ್ಧರಾಗಿದ್ದರು.

ಡಾ. ಸ. ಜ. ನಾಗಲೋಟಿಮಠ ಹಾಗೂ ಶ್ರೀ ಬಳೂರಗಿಯವರು ಬೆಳಗಾವಿಯಲ್ಲಿ ವಿಜ್ಞಾನ ಕೇಂದ್ರ ಪ್ರಾರಂಭಿಸಬೇಕೆಂದು ಶಿವಬಸವ ಸ್ವಾಮಿಗಳಿಗೆ ತಿಳಿಸಿದರು. ಸ್ವಾಮೀಜಿ ಸಂತೋಷದಿಂದ ಒಪ್ಪಿದರು. ಪ್ರಾರಂಭದಲ್ಲಿ ಶ್ರೀ ಸಿದ್ಧರಾಮೇಶ್ವರ ಮಾಧ್ಯಮಿಕ ಶಾಲೆಯಲ್ಲಿ ಅವಕಾಶ ಕಲ್ಪಿಸಿದರು. ಬೆಳಗಾವಿಯಲ್ಲಿ ವಿಜ್ಞಾನ ಕೇಂದ್ರ ಸ್ಥಾಪಿಸಲು ಸ್ವಾಮಿಗಳು ನಿರಂತರ ಪ್ರೋತ್ಸಾಹ ನೀಡಿದರು. ವಿಜ್ಞಾನ ಕೇಂದ್ರಕ್ಕೆ ಒಂದು ಎಕರೆ ಜಾಗ ಸಿಕ್ಕಿತು. ಶಿವಬಸವ ಸ್ವಾಮಿಗಳ ಆಶೀರ್ವಾದದಿಂದ ಇದು ಅದ್ಭುತವಾಗಿ ಬೆಳೆದಿದೆ. ನಾಡಿಗೆ ಮಾದರಿಯಾಗಿದೆ.

ಪವಾಡ ಬಯಲು ಕಾರ್ಯಕ್ರಮವನ್ನು ಮಾಡಲು ಶಿವಬಸವ ಸ್ವಾಮಿಗಳು ಏರ್ಪಾಡು ಮಾಡಿರುತ್ತಾರೆ.ಸುಮಾರು ೬೦ ಜನ ಧರ್ಮಗುರುಗಳನ್ನು ಕರೆಸಿ ಅವರ ಮುಂದೆ ಕಾರ್ಯಕ್ರಮಗಳನ್ನು ಆಯೋಜಿಸಿದ್ದ ಶಿವಬಸವ ಸ್ವಾಮಿಗಳು ಎಲ್ಲರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಧರ್ಮಗುರುಗಳಾಗಿದ್ದರು ಮೂಢನಂಬಿಕೆಗಳನ್ನು ಕಿತ್ತೊಗೆಯಲು ಶ್ರೀಯುತರು ಶ್ರಮಿಸಿದ್ದಾರೆ. ವೈಜ್ಞಾನಿಕ ಮನೋಭಾವನೆಯ ಮೂಲಕ ಎಲ್ಲ ಪೀಠಾಧಿಪತಿಗಳಿಗೆ ಶ್ರೀ ಶಿವಬಸವ ಸ್ವಾಮಿಗಳು ಮಾದರಿಯಾಗಿದ್ದಾರೆ.

ಜಾತ್ರೆಯ ಸಂದರ್ಭದಲ್ಲಿ ಹಳ್ಳಿಯ ಜನರಿಗಾಗಿ ಆರೋಗ್ಯಗೋಷ್ಠಿ, ವಿಜ್ಞಾನ ಗೋಷ್ಠಿಗಳನ್ನು ಆಯೋಜಿಸಿದ ಸ್ವಾಮಿಗಳು ವೈಜ್ಞಾನಿಕ ಮನೋಭಾವನೆಯ ಮೂಲಕ ಗಮನ ಸೆಳೆಯುತ್ತಾರೆ.ಸಮಾಜ ಸೇವೆಯಲ್ಲೂ ಇವರದು ಎತ್ತಿದ ಕೈ.

ಶಿವಬಸವ ಸ್ವಾಮಿಗಳ ಜನಪ್ರಿಯತೆ ನಾಡಿನಾದ್ಯಂತ ಪಸರಿಸಿತು. ಇದು ಕೆಲವರ ಹೊಟ್ಟೆ ಉರಿಗೆ ಕಾರಣವಾಯಿತು. ಒಮ್ಮೆ ಇವರು ಮಲಗಲು ಮಂಚದ ಹತ್ತಿರ ಹೋದಾಗ ಇವರನ್ನು ಕೊಲೆ ಮಾಡಲು ಒಬ್ಬ ಆಗಂತುಕ ಅಲ್ಲಿ ಅಡಗಿದ್ದ. ಅವನ ಹತ್ತಿರ ಚಾಕು ಇತ್ತು. ಇದು ಶಿವಬಸವ ಸ್ವಾಮಿಗಳಿಗೆ ತಿಳಿಯಿತು. ಸ್ವಾಮಿಗಳು ತಮ್ಮ ಕೈಯಲ್ಲಿದ್ದ ಬೆತ್ತದಿಂದ ಆತನಿಗೆ ಕತ್ತಲಲ್ಲೇ ೪ ಏಟು ಹಾಕಿದರು. ಈ ಹೊಡೆತಕ್ಕೆ ವ್ಯಕ್ತಿ ತತ್ತರಿಸಿ ಹೋದ. ತಪ್ಪಾಯಿತೆಂದು ಕ್ಷಮೆ ಕೇಳಿದ. ಹಣ ಕೊಟ್ಟು ನಿಮ್ಮನ್ನು ಕೊಲೆ ಮಾಡಲು ಕಳುಹಿಸಿದ್ದಾರೆ ಎಂದು ಆತ ಎಲ್ಲ ವಿಚಾರಗಳನ್ನು ಸ್ವಾಮಿಗಳಿಗೆ ತಿಳಿಸಿದ. ಕೊಲೆ ಮಾಡಲು ಕಳುಹಿಸಿದ ಮಹಾನುಭಾವ ತನ್ನೊಳಗೆ ಕುದಿಯತೊಡಗಿದ.

ಇದೇ ರೀತಿ ಇನ್ನೊಮ್ಮೆ ಇನ್ನೊಂದು ಘಟನೆ ನಡೆಯಿತು. ರಾತ್ರಿ ಒಬ್ಬ ಅಪರಿಚಿತ ಬಾಗಿಲು ತಟ್ಟಿದ. ಸ್ವಾಮಿಗಳು ಬಾಗಿಲು ತೆಗೆದರು. ಅವನ ಕೈಯಲ್ಲಿ ಪಿಸ್ತೂಲು ಇತ್ತು. ಸ್ವಾಮಿಗಳಿಗೆ ಗುರಿ ಇಟ್ಟು ಹೊಡೆಯುತ್ತೇನೆಂದು ಹೆದರಿಸಿದ. ಸ್ವಾಮಿಗಳು ಹೆದರಲಿಲ್ಲ. ಗುಂಡು ಹೊಡೆ ಎಂದು ಎದುರು ಬಂದು ನಿಂತರು. ಸ್ವಲ್ಪ ಗಲಾಟೆಯಾದರೆ ಪ್ರಸಾದ ನಿಲಯದ ೩೦೦ಕ್ಕೂ ಹೆಚ್ಚು ವಿದ್ಯಾರ್ಥಿಗಳು ಬಂದು ತನ್ನನ್ನು ಚೂರು ಚೂರು ಮಾಡುತ್ತಾರೆಂದು ಯೋಚಿಸುವಂತಾಯಿತು. ಆತನಿಗೆ ತನ್ನ ತಪ್ಪಿನ ಅರಿವಾಯಿತು. ಸ್ವಾಮಿಗಳ ಪಾದಸ್ಪರ್ಶಿಸಿ ನಮಸ್ಕರಿಸಿ ಕ್ಷಮೆ ಯಾಚಿಸಿದ.

'ನಿಮ್ಮ ಸೇವೆಯನ್ನು ಗಮನಿಸಿದ ಕೆಲವರಿಗೆ ಹೊಟ್ಟೆ ಉರಿ. ಅವರಿಗೆ ಒಳ್ಳೆಯದಾಗುವುದಿಲ್ಲ' ಎಂದು ಹೇಳಿ ಆತ ಅಲ್ಲಿಂದ ತೆರಳಿದ.

ಈ ಎರಡು ಘಟನೆಗಳು ಶಿವಬಸವ ಸ್ವಾಮಿಗಳನ್ನು ಮುಗಿಸಲು ವಿರೋಧಿಗಳು ಹುನ್ನಾರ ಮಾಡಿದ್ದರು. ಆದರೆ ಅದು ಫಲಕಾರಿಯಾಗಲಿಲ್ಲ. ಸ್ವಾಮಿಯವರ ಸಮಾಜ ಸೇವೆ, ಅವರ ನಿಸ್ವಾರ್ಥ ಸೇವೆ ಜನಮನ್ನಣೆಯನ್ನು ಗಳಿಸುವಂತಾಗಿತ್ತು.

ಸ್ವಾಮಿಗಳು ಆರೋಗ್ಯವಂತರಾಗಿ ಬಾಳಿದವರು. ಅವರಿಗೆ ಸಣ್ಣ ಪುಟ್ಟ ಕಾಯಿಲೆಗಳನ್ನು ಹೊರತುಪಡಿಸಿ ಬೇರೆ ಯಾವ ಕಾಯಿಲೆಯೂ ಅವರ ಬಳಿ ಸುಳಿಯಲಿಲ್ಲ. ಸ್ವಾಮೀಜಿಗೆ ನೂರು ವರ್ಷವಾಗುವ ಸಂದರ್ಭದಲ್ಲಿ ಎಚ್. ನರಸಿಂಹಯ್ಯರವರು ಭೇಟಿಯಾಗಿದ್ದರು. ನಿಮ್ಮ ಆರೋಗ್ಯದ ಒಳಗುಟ್ಟೇನು?ಎಂದು ಪ್ರಶ್ನಿಸಿದರು. ಆಗ ಶಿವಬಸವ ಸ್ವಾಮಿಗಳು ನಗುತ್ತಾ, "ನಾನು ಒಣ ಜಂಜಾಟದಲ್ಲಿ ಬೀಳುವುದಿಲ್ಲ. ಎಲ್ಲ ಭಾರ ಶಿವನ ಮೇಲೆ ಹಾಕಿ ನನ್ನ ಕೈಲಾದಷ್ಟು ಕಾಯಕ ಮಾಡುತ್ತೇನೆ" ಎಂದು ಉತ್ತರಿಸಿದರು. ಇದನ್ನು ಕೇಳಿದ ಎಚ್. ನರಸಿಂಹಯ್ಯ ಅವರಿಗೆ ಆನಂದವಾಗಿತ್ತು.

ಸಾರ್ವಜನಿಕ ಸಂಸ್ಥೆಯೊಳಗೆ ಎಂದೂ ಹಣ ಕೂಡಿ ಇಡಬಾರದು. ಒಳ್ಳೆಯ ಕೆಲಸಕ್ಕೆ ಸದುಪಯೋಗಪಡಿಸಿಕೊಳ್ಳಲು ಹಣವನ್ನು ಬಳಸಬೇಕು. ಸಂಸ್ಥೆಯಲ್ಲಿ ಹಣವಿದ್ದರೆ ಜನರು ಅದರೊಳಗೆ ಕೈ ಹಾಕಲು ಬಯಸುತ್ತಾರೆ. ಇದರಿಂದ ಸಂಸ್ಥೆಗೆ ಕೆಟ್ಟ ಹೆಸರು ಬರುತ್ತದೆ.ಇದು ಶಿವಬಸವ ಸ್ವಾಮಿಗಳ ಅಭಿಪ್ರಾಯವಾಗಿತ್ತು.

ಮಠಕ್ಕೆ ಸಹಾಯ ಸಹಕಾರ ನೀಡುತ್ತಿದ್ದ ಬಾಗಲಕೋಟೆಯ ಭಕ್ತರೊಬ್ಬರು ಸಿರಿತನದಿಂದ ಬಡತನಕ್ಕೆ ಇಳಿದು ಕಷ್ಟದಲ್ಲಿರುವುದು ಶಿವಬಸವ ಸ್ವಾಮಿಗಳಿಗೆ ತಿಳಿಯಿತು. ಕೂಡಲೇ ಅಲ್ಲಿಗೆ ಹೋಗಿ ರೂ.೫,೦೦೦-೦೦ ಅವರು ಬೇಡವೆಂದರೂ ಕೇಳದೆ ಕೊಟ್ಟು ಬಂದವರು ಇವರಾಗಿದ್ದಾರೆ.

ಕರುಣಾಮಯಿಗಳೆಂದರೆ ಶಿವಬಸವ ಸ್ವಾಮಿಗಳಾಗಿದ್ದಾರೆ.

ಮಠದ ಲೆಕ್ಕ ಬರೆಯುವವರು ತಪ್ಪು ಮಾಡಿದ್ದನ್ನು ಈಶ್ವರ ಸಣಕಲ್ಲರವರು ಸ್ವಾಮಿಗಳ ಗಮನಕ್ಕೆ ತಂದರು. ಅವರಿಗೆ ಶಿಕ್ಷೆ ಕೊಡಬೇಕೆಂದು ಹೇಳಿದರೂ ಸ್ವಾಮಿಗಳು ಕೇಳಲಿಲ್ಲ. ಆಗ ಈಶ್ವರ ಸಣಕಲ್ಲರು ಅವರು "ಸ್ವಾಮಿ ಅವರನ್ನು ಜೈಲಿಗೆ ಹಾಕದಿದ್ದರೆ ನಿಮ್ಮನ್ನು ಹಾಕಬೇಕಾಗುತ್ತದೆ" ಎಂದು ರೋಷದಿಂದ ನುಡಿದರು. ಅದಕ್ಕೆ ನಗುತ್ತಾ ಸ್ವಾಮಿಗಳು: "ಪರ್ವಾಗಿಲ್ಲ ನಾನು ಒಂಟಿ. ಜೈಲಿಗೆ ಹೋದರೆ ಯಾರಿಗೂ ತೊಂದರೆಯಿಲ್ಲ. ಆದರೆ ಅವರಿಬ್ಬರು ಸಂಸಾರಿಗಳು ಜೈಲಿಗೆ ಹೋದರೆ ತೊಂದರೆ" ಎಂದಾಗ ಈಶ್ವರ ಸಣಕಲ್ಲರವರಿಗೆ ಸ್ವಾಮಿಗಳ ಹತ್ತಿರ ತಾವು ರೋಷದಿಂದ ಮಾತಾಡಬಾರದಿತ್ತು ಅನಿಸಿತು. ಕೂಡಲೇ ಅವರ ಚರಣಕ್ಕೆ ಬಿದ್ದು ಕ್ಷಮಿಸಬೇಕೆಂದು ಗೋಳಾಡಿದರು. ನಿಮ್ಮ ಊಟದಲ್ಲಿ ಜಾಸ್ತಿ ಖಾರ ತಿಂದಿದ್ದಿರಿ ಎಂದು ನಗುತ್ತಾ ಈಶ್ವರ ಸಣಕಲ್ಲರವರನ್ನು ಸಂತೈಸಿದರು.

೧೯೭೩ರಲ್ಲಿ ಜವಹರಲಾಲ್ ನೆಹರೂ ಮೆಡಿಕಲ್ ಕಾಲೇಜಿನಲ್ಲಿ "ಅಖಿಲ ಕರ್ನಾಟಕ ವೈದ್ಯಕೀಯ ಸಾಹಿತ್ಯ ಸಮ್ಮೇಳನ" ನಡೆಯಿತು.ಅದರಲ್ಲಿ ಉಳಿದ ಹಣವನ್ನು ಏನು ಮಾಡಬೇಕೆಂಬ ಜಿಜ್ಞಾಸೆ ಉಂಟಾಯಿತು. ಕೊನೆಗೆ ಮೆಡಿಕಲ್ ಕಾಲೇಜಿನಲ್ಲಿ ಶಿವಾಲಯ ಸ್ಥಾಪಿಸಲು ಸಂಘಟಕರು ನಿರ್ಧರಿಸಿದರು.ಆಗ ಶಿವಬಸವ ಸ್ವಾಮಿಗಳು ಜಾಗ ತೋರಿಸಿ "ಮೆಡಿಕಲ್ ಮೃತ್ಯುಂಜಯ" ಎಂಬ ಹೆಸರಿನಲ್ಲಿ ದೇವಾಲಯ ಸ್ಥಾಪಿಸಲು ಸೂಚಿಸಿದರು.ಇದು ಎಲ್ಲರಿಗೂ ಒಪ್ಪಿಗೆಯಾಯಿತು.

ದೇವಸ್ಥಾನದಲ್ಲಿ ಶಿವಲಿಂಗ ಪ್ರತಿಷ್ಠಾಪನೆಯ ಮುಂದಾಳತ್ವವನ್ನು ಶಿವಬಸವ ಸ್ವಾಮಿಗಳು ವಹಿಸಿದ್ದರು. ಮೊದಲ ಅಭಿಷೇಕವನ್ನು ಹೂದೋಟದಲ್ಲಿ ಕೆಲಸ ಮಾಡುತ್ತಿದ್ದ ಕಲ್ಲಪ್ಪ ಹಾಗೂ ಅವನ ಹೆಂಡತಿಯಿಂದ ಮಾಡಿಸಿದರು. ಅನಂತರ ಉಳಿದ ಅಧಿಕಾರಿಗಳು ಹಾಗೂ ಪ್ರಾಧ್ಯಾಪಕರು ತಮ್ಮ ಭಕ್ತಿಯನ್ನು ಸಲ್ಲಿಸಿದರು.

ಪ್ರಭುಸ್ವಾಮಿಗಳು ಚಿಕ್ಕಂದಿನಿಂದಲೆ ವೈರಾಗ್ಯದ ಕಡೆ ವಾಲಿದವರು. ಇವರು ಶಿವಬಸವ ಸ್ವಾಮಿಗಳ ಕಣ್ಣಿಗೆ ಬಿದ್ದರು. ಶಿವಬಸವ ಸ್ವಾಮಿಗಳು ಇವರಿಗೆ ಶಿವಯೋಗ ಮಂದಿರ ಹಾಗು ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡಿಸಿದರು. ಪ್ರಭುಸ್ವಾಮಿಗಳ ದಕ್ಷತೆ, ಶಿವಾನುಷ್ಠಾನ ನಡತೆಯು ಸ್ವಾಮಿಗಳಿಗೆ ಇಷ್ಟವಾಯಿತು. ೯-೧೨-೧೯೭೪ರಲ್ಲಿ ಶಿವಬಸವ ಸ್ವಾಮಿಗಳು ಅವರಿಗೆ ಎಲ್ಲ ಅಧಿಕಾರವನ್ನು ವಹಿಸಿ ರುದ್ರಾಕ್ಷಿಮಠದ ಜವಾಬ್ದಾರಿಯನ್ನು ನೀಡಿದರು. ರುದ್ರಾಕ್ಷಿಮಠದ ಪೀಠಾಧಿಪತಿಯಾದರೂ ಅವರು ಅಧಿಕಾರವನ್ನು ಬಯಸದೆ ಶಿವಬಸವ ಸ್ವಾಮಿಗಳ ಸೇವೆ ಮಾಡುತ್ತಾ ಜನಮನ್ನಣೆ ಗಳಿಸಿದರು. ಅವರ ಕರ್ತವ್ಯಪ್ರಜ್ಞೆ, ಸ್ವಭಾವ ಎಲ್ಲರ ಮೆಚ್ಚಿಗೆಗೆ ಪಾತ್ರವಾಯಿತು. ೧೯೮೭ರಂದು ಪ್ರಭುಸ್ವಾಮಿಗಳು ಲಿಂಗದೊಳಗೊಂದಾದರು.

ಶಿವಬಸವ ಸ್ವಾಮಿಗಳಿಗೆ ತಡೆಯಲಾರದ ಆಘಾತವಾಯಿತು. ಶಿಷ್ಯನ ಸಮಾಧಿಯನ್ನು ಗುರುವೇ ಕಟ್ಟಿಸುವಂತಾಯಿತು.

ಬೆಳಗಾವಿಯಲ್ಲಿ ಸ್ತ್ರೀಯರ ಸಾಂಸ್ಕೃತಿಕ ಚಟುವಟಿಕೆ ಪ್ರಾರಂಭಿಸಲು ಸ್ವಾಮಿಗಳ ಮಾರ್ಗದರ್ಶನದಲ್ಲಿ ಅಕ್ಕನ ಬಳಗ ಸ್ಥಾಪನೆಗೊಂಡಿತು. ಸುಗ್ಗಲಾದೇವಿ-ರವಿದೇವಿಯವರು ಪುರಾಣ ಹೇಳಲು ಪ್ರಸಿದ್ಧರು. ಇದನ್ನು ತಿಳಿದ ಸ್ವಾಮಿಗಳು ಅವರನ್ನು ವಿದ್ಯಾರ್ಥಿ ನಿಲಯದ ಪಕ್ಕದಲ್ಲಿ ವಸತಿ ಕಲ್ಪಿಸಿ ಬೆಳಗಾವಿಯಲ್ಲಿ ಉಳಿಯುವಂತೆ ಮಾಡಿದರು.ಇವರುಗಳು ಶರಣ ಜೀವನವನ್ನು ನಡೆಸುತ್ತ ಬೆಳಗಾವಿ ಪರಿಸರವನ್ನು ಪವಿತ್ರಗೊಳಿಸಿದರು.

ವಿನೋಭಾ ಭಾವೆಯವರ ಕಾರ್ಯದ ಬಗ್ಗೆ ಶಿವಬಸವ ಸ್ವಾಮಿಗಳಿಗೆ ತುಂಬಾ ಮೆಚ್ಚಿಗೆ. ಒಮ್ಮೆ ಅವರು ಬೆಳಗಾವಿಗೆ ಬಂದಾಗ ಪ್ರಸಾದ ನಿಲಯಕ್ಕೆ ಬರುವವರಿದ್ದರು. ಇದಕ್ಕಾಗಿ ಸ್ವಾಮಿಗಳು ಎಲ್ಲಾ ಸಿದ್ಧತೆಯನ್ನು ಮಾಡಿದ್ದರು. ಆದರೆ ವಿನೋಭಾ ಭಾವೆ ಬರಲೇ ಇಲ್ಲ. ವಿದ್ಯಾರ್ಥಿಗಳು ಸ್ವಾಗತಕ್ಕಾಗಿ ಕಾದದ್ದೇ ಬಂತು. ಸ್ವಾಮಿಗಳ ಕೈಯಲ್ಲಿದ್ದ ಹಾರ ಕೆಳಗೆ ಬಿತ್ತು. ಪಾದಯಾತ್ರೆ ಮೂಲಕ ಪ್ರಸಾದ ನಿಲಯವನ್ನು ಪ್ರವೇಶಿಸದೆ ಮುಂದೆ ಹೋದ ವಿನೋಭಾ ಭಾವೆರವರಿಗೆ ಕೊನೆಗೆ ಶಿವಬಸವ ಸ್ವಾಮಿಗಳ ಬಗ್ಗೆ ಯಾರೋ ಸುಳ್ಳು ಸುದ್ದಿ ಕೊಟ್ಟಿರುವುದು ತಿಳಿಯಿತು. ಪುನಃ ಸ್ವಾಮಿಗಳನ್ನು ನೋಡಲು ಬರುವುದಾಗಿ ಹೇಳಿ ಕಳುಹಿಸಿದರು.

ಆಗ ಶಿವಬಸವ ಸ್ವಾಮಿಗಳು "ಸಂತರು ಬರುವ ಕಾಲಕ್ಕೆ ಬಾರದೇ ಹೋದರು. ಮಕ್ಕಳ ಮನಸ್ಸು ಮುದುಡಿ ಹೋಗಿದೆ. ಈ ಸಂತರಿಗೆ ಪ್ರಸಾದ ನಿಲಯದಲ್ಲಿ ಯಾವ ಕೆಲಸವಿಲ್ಲ ಬರುವ ಅಗತ್ಯವಿಲ್ಲ. ಇದು ಶಿವನಿಚ್ಛೆ" ಎಂದು ಹೇಳಿ ಕಳುಹಿಸಿದರು.

ಪುನಃ ಕಾರ್ಯಕರ್ತರು ಬಂದರೂ ಶಿವಬಸವ ಸ್ವಾಮಿಗಳು ತಮ್ಮ ನಿರ್ಧಾರ ಸಡಿಲ ಮಾಡಲಿಲ್ಲ. ಭಾವೆಯವರು ತಮ್ಮ ತಪ್ಪನ್ನು ಅದರ ಕಹಿಯನ್ನು ನುಂಗಬೇಕಾಯಿತು.

ಶಿವಬಸವ ಸ್ವಾಮಿಗಳೆಂದರೆ ಮುಖ್ಯಮಂತ್ರಿಗಳಾದ ಶ್ರೀ ಎಸ್. ನಿಜಲಿಂಗಪ್ಪರವರಿಗೆ ತುಂಬಾ ಹೆಮ್ಮೆ. ಸ್ವಾಮಿಗಳಿಂದಲೇ ಕರ್ನಾಟಕಕ್ಕೆ ಹೆಸರು ಬಂದಿದೆ ಎಂದು ಹೆಮ್ಮೆಯಿಂದ ಹೇಳುತ್ತಿದ್ದರು. ಶ್ರೀ ವೀರೇಂದ್ರ ಪಾಟೀಲರು ಸಹ ಸ್ವಾಮಿಗಳನ್ನು ಬಹಳವಾಗಿ ಮೆಚ್ಚಿಕೊಂಡಿದ್ದರು. ೧೯೫೧ರಲ್ಲಿ

ಜಯಚಾಮರಾಜ ಒಡೆಯರ್ ಪ್ರಸಾದ ನಿಲಯವನ್ನು ಉದ್ಘಾಟನೆ ಮಾಡಿರುವುದಲ್ಲದೆ ಕಾಣಿಕೆಯನ್ನು ಸಹ ನೀಡಿದ್ದರು.

ಶಿವಬಸವ ಸ್ವಾಮಿಗಳಿಗೆ ಹಲವಾರು ಜನ ಪೀಠಾಧಿಪತಿಗಳ ನಿಕಟ ಸಂಪರ್ಕವಿತ್ತು. ಪ್ರತಿಯೊಬ್ಬರು ಸಹ ಇವರನ್ನು ಪ್ರೀತಿಯಿಂದ ಕಾಣುತ್ತಿದ್ದರು. ಕೇದಾರ, ಕಾಶಿ, ಶ್ರೀಶೈಲ, ಉಜ್ಜಯಿನಿ ಹಾಗೂ ರಂಭಾಪುರಿ ಪೀಠಾಧೀಶರೊಂದಿಗೆ ನಾಗನೂರು ಶಿವಬಸವ ಸ್ವಾಮಿಗಳು ಆತ್ಮೀಯರಾಗಿದ್ದರು.

ಭಜರಂಗ ಮಹಾರಾಷ್ಟ್ರದ ಕುಸ್ತಿಪಟು. ಆತ ನಾಗನೂರಿಗೆ ಬಂದು ನೆಲೆನಿಂತ. ಮಾಂಸಾಹಾರಿಯಾದ ಆತ ಸಂಪೂರ್ಣ ಸಸ್ಯಾಹಾರಿಯಾದ. ಕನ್ನಡ ಕಲಿತ, ವಚನ ಕಲಿತ, ಇಂಪಾಗಿ ಹಾಡುತ್ತಿದ್ದ. ಸ್ವಾಮಿಯಿಂದ ದೀಕ್ಷೆ ಸ್ವೀಕರಿಸಿ ಲಿಂಗಾಯತನಾದ. ಸ್ವಾಮಿಗಳು ಆತನನ್ನು ಬಸವಾನಂದ ಎಂದು ಕರೆಯುತ್ತಿದ್ದರು. ತನ್ನ ಜೀವಿತ ಅವಧಿಯಲ್ಲಿ ಆತ ಸ್ವಾಮಿಗಳ ಅಂಗರಕ್ಷಕನಾಗಿ ಕಾರ್ಯನಿರ್ವಹಿಸಿದ. ಸ್ವಾಮಿಗಳಿಗೆ ಅವನ ಮೇಲೆ ಎಲ್ಲಿಲ್ಲದ ಪ್ರೀತಿ. ೧೯೬೫ರಲ್ಲಿ ಆತ ಶಿವೈಕ್ಯನಾದ.

ಪ್ರಭುಸ್ವಾಮಿಗಳು ಲಿಂಗೈಕ್ಯರಾದ ಬಳಿಕ ಶಿವಬಸವ ಸ್ವಾಮಿಗಳಿಗೆ ೯೬ರ ವಯಸ್ಸಿನಲ್ಲಿ ಮರುಪಟ್ಟಾಭಿಷೇಕವಾಯಿತು. ಅನಂತರ ಅವರಿಗೆ ಭಕ್ತರು ಶಿಷ್ಯನನ್ನು ಆರಿಸುವ ಕೆಲಸ ಪ್ರಾರಂಭಿಸಿದರು. 'ಸಿದ್ಧರಾಮ ಸ್ವಾಮಿ'ಗಳು ನಾಗನೂರು ರುದ್ರಾಕ್ಷಿಮಠಕ್ಕೆ ತಕ್ಕವರೆಂದು ಮನವರಿಕೆ ಮಾಡಿಕೊಂಡ ಗದುಗಿನ ಶ್ರೀ ತೋಂಟದಾರ್ಯ ಜಗದ್ಗುರುಗಳು ಅವರನ್ನು ಪಟ್ಟಾಭಿಷೇಕ ಮಾಡುವ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸಿದರು.

ಅದರಂತೆ ಸಿದ್ಧರಾಮ ಸ್ವಾಮಿಗಳಿಗೆ ಪಟ್ಟಾಭಿಷೇಕ ಮಾಡಿದರು. ಶಿವಬಸವ ಸ್ವಾಮಿಗಳು ತಮ್ಮ ಅಧಿಕಾರವನ್ನು ಎರಡನೇ ಸಲ ಶಿಷ್ಯನಿಗೆ ವಹಿಸಿಕೊಟ್ಟರು. ಇಂತಹ ಪ್ರಸಂಗಗಳು ತುಂಬಾ ಅಪರೂಪ.ಇವರು ಶಿವಬಸವ ಸ್ವಾಮಿಗಳು ಹಾಕಿಕೊಟ್ಟ ಎಲ್ಲಾ ಕಾರ್ಯಕ್ರಮಗಳನ್ನು ದಕ್ಷತೆಯಿಂದ ನಡೆಸಿಕೊಂಡು ಹೋಗುತ್ತಿದ್ದಾರೆ. ರುದ್ರಾಕ್ಷಿಮಠದ ಕೀರ್ತಿಯನ್ನು ಹೆಚ್ಚಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆ.

೯. ೯. ೧೯೯೫ ರಂದು ಡಾ. ಶಿವಬಸವ ಸ್ವಾಮಿಗಳು ಸಂಜೆ ೭ ಗಂಟೆಗೆ ಲಿಂಗೈಕ್ಯರಾದರು.

■■

# ದಾಸೋಹ ದೀಪ

ಚುಮುಚುಮು ನಸುಕು; ಮೈತುಂಬ ಚೆಂಗಾವಿ ಹೊದೆದು
ಬಾನ ಬಟ್ಟೆಯಲಿ ಹರದಾರಿ ಹೆಜ್ಜೆಯನಿಟ್ಟು
ನೆಲದೆದೆಯ ಬಾಗಿಲು ತೆರೆಯೆ; ಬೆಳ್ಳಂಬೆಳಕು
ಜೋಳಿಗೆ ತುಂಬ ಶಿವಯೋಗಿಧ್ಯಾನ ಹೋಳಿಗೆ;
ಕಂಡವರಿಗೆಲ್ಲ ನಿಚ್ಚಪ್ರಸಾದ. ಕಾಯಕದಿ
ಸೇವೆ-ಸೆರಗೊಡ್ಡಿ ಹಾಡಿದರು ಮಂಗಲಗೀತ
ಮನದ ಅಂಗಳದಂಗುಲಂಗುಲದಿ ದಾಸೋಹ
ದೀಪ ಹೊತ್ತಿಸಿ, ಪುರಾತನರ ನೂತನ ಹಾದಿ
ಕಂಡವರು. ಅಂತರಂಗದಿ ಕಡೆದ ಆನಂದ
ಸಾಗರದಿ ಸಾವಿರ ಹೃದಯ-ದೋಣಿ ಚುಕ್ಕಾಣಿ
ಯಾಗಿ ತೆರೆ ತೂಗಿದರು; ದಿಗಂತ ಮೌನಶ್ರೇಣಿ
ನಂಬಿಗೆಯ ನಡುಗಡ್ಡೆಯಲಿ ನಡೆ-ನುಡಿಯ ಛಂದ
ದಡದಿಂದ ದೂರ ಕಂಬದ ದೀಪ ತಿರುಗುವುದು;
ಬಿರುಗಾಳಿಯಲಿ ಸಿಕ್ಕ ನಾವೆ ಕಣ್‌ತೆರೆಯುವುದು

● **ನಾಡೋಜ ಚೆನ್ನವೀರ ಕಣವಿ**

# ಶಿವ–ಬಸವ ಸಂಗಮ

● ಡಾ. ಸರಜೂ ಕಾಟ್ಕರ್

ಬೆಳಗಾವಿಯ ನನ್ನ ಪತ್ರಿಕೋದ್ಯಮ ಕಾರ್ಯಚಟುವಟಿಕೆಗಳ ಓಂ ನಾಮ ಆರಂಭವಾದದ್ದೇ ನಾಗನೂರು ಶಿವಬಸವ ಮಹಾಸ್ವಾಮಿಗಳ ಕಾರ್ಯಕ್ರಮವೊಂದರಿಂದ. ಅದು ೧೯೭೬ ರ ಅಕ್ಟೋಬರ್ ತಿಂಗಳು. ನಾನು ಹುಬ್ಬಳ್ಳಿಯಿಂದ 'ಸಂಯುಕ್ತ ಕರ್ನಾಟಕ'ದ ಬೆಳಗಾವಿಯ ಜಿಲ್ಲಾ ವರದಿಗಾರನಾಗಿ ವರ್ಗವಾಗಿ ಬೆಳಗಾವಿಗೆ ಬಂದಿದ್ದೆ. ಇಲ್ಲಿಗೆ ಬರುವುದಕ್ಕಿಂತ ಮೊದಲು ಈ ಹಿಂದೆ ಎಂದೂ ನಾನು ಬೆಳಗಾವಿ ನೋಡಿರಲಿಲ್ಲ. ಮುಂಬಯಿ ಮತ್ತು ಅಹಮದಾಬಾದಿಗೆ ರೈಲಿನಲ್ಲಿ ಹೋಗುವಾಗ ಬೆಳಗಾವಿ ರೇಲ್ವೆ ಸ್ಟೇಶನ್ ಕ್ರಾಸ್ ಮಾಡಿದ್ದೆ. ಇಲ್ಲಿ ವರ್ಗವಾಗಿ ಬಂದಾಗ ಬೆಳಗಾವಿಯಲ್ಲಿ ನಾಡಹಬ್ಬದ ಕಾರ್ಯಕ್ರಮಗಳು ಆರಂಭವಾಗಿ, ಮುಕ್ತಾಯದ ಹಂತದಲ್ಲಿದ್ದವು. ಮಾರುತಿಗಲ್ಲಿಯ ನಾಗನೂರು ಮಠದಲ್ಲಿ ಬಹು ವಿಜೃಂಭಣೆಯ ನಾಡಹಬ್ಬ ಕಾರ್ಯಕ್ರಮಗಳು ಆಯೋಜನೆಗೊಂಡಿದ್ದವು. ನಾನು ಬಂದ ದಿನವೇ 'ಸಂಯುಕ್ತ ಕರ್ನಾಟಕ'ದ ಆಗಿನ ಸಹಾಯಕ ಸಂಪಾದಕರಾದ ಸುರೇಂದ್ರ ದಾನಿಯವರ ಭಾಷಣವಿತ್ತು. ಈ ಕಾರ್ಯಕ್ರಮದ ವರದಿಯಿಂದಲೇ ನನ್ನ ಬೆಳಗಾವಿಯ ವರದಿಗಾರಿಕೆ ಆರಂಭವಾಯಿತು.

ಅಂದೇ ನಾನು ಶ್ರೀ ಶಿವಬಸವ ಮಹಾಸ್ವಾಮಿಗಳನ್ನು ನೋಡಿದ್ದು. ಆಜಾನುಬಾಹು ವ್ಯಕ್ತಿತ್ವದ, ವಿರಳ ಮಾತುಗಳ, ಗಂಭೀರ ನಿಲುವಿನ ಸ್ವಾಮಿಗಳು ಆಶೀರ್ವಾದದ ರೂಪದಲ್ಲಿ ಒಂದೆರಡು ಮಾತುಗಳನ್ನು ಹೇಳಿರಬಹುದು; ಆದರೆ ಆ ಮಾತುಗಳು ಇಡೀ ಒಂದು ಆಯುಷ್ಯಕ್ಕೆ ಸಾಕಾಗುವಷ್ಟಿದ್ದವು!

ನಾನು ಬೆಳಗಾವಿಗೆ ವರ್ಗವಾಗಿ ಬರುವುದಕ್ಕಿಂತ ಒಂದೆರಡು ದಿನ ಮೊದಲು ಧಾರವಾಡದಲ್ಲಿ ಕಾದಂಬರಿಕಾರ ಬಸವರಾಜ ಕಟ್ಟೀಮನಿಯವರನ್ನು ಭೇಟಿಯಾಗಿದ್ದೆ. ನಾನು ಬೆಳಗಾವಿಗೆ ಹೋಗುತ್ತಿರುವುದಾಗಿ ಹೇಳಿದಾಗ ಅವರು 'ಅಲ್ಲಿ ನಾಗನೂರು ಸ್ವಾಮಿಗಳನ್ನು ಭೇಟಿಯಾಗ್ರಿ, ಬಲು ಅಪರೂಪದ ಸ್ವಾಮಿಗಳು ಅವರು. ಜಗದ್ಗುರುಗಳಾದರೂ ಅವರೆಂದೂ ಪಲ್ಲಕ್ಕಿ ಏರಿದವರಲ್ಲ' ಎಂದು ಹೇಳಿದ್ದರು. ಕಟ್ಟೀಮನಿಯವರು ಮಠಗಳು ಮತ್ತು ಮಠಾಧೀಶರ ವಿರೋಧವಾಗಿದ್ದವರು. ಅದಾಗಲೇ ಅವರ 'ಜರತಾರಿ ಜಗದ್ಗುರು' ಕಾದಂಬರಿ ಬೂಟಾಟಿಕೆಯ ಮಠಾಧೀಶರನ್ನು ಬಯಲಿಗೆಳೆದು ಬರಿಬತ್ತಲಾಗಿಸಿತ್ತು. ಮಠಾಧೀಶರೆಂದರೆ ಉರಿದು ಬೀಳುವ ಕಟ್ಟೀಮನಿಯವರು ನಾಗನೂರು ಶಿವಬಸವ ಸ್ವಾಮಿಗಳ ಬಗ್ಗೆ ಅತೀವವಾದ ಗೌರವವನ್ನು ಹೊಂದಿದ್ದರು. ಶ್ರೀಗಳ ಬಗ್ಗೆ ತಾವು ಬರೆದ ಕವಿತೆಯನ್ನು ಅವರು ನನಗೆ ತೋರಿಸಿದ್ದರು.

ಮರುದಿನ ನನ್ನ ವರದಿ 'ಸಂಯುಕ್ತ ಕರ್ನಾಟಕ'ದಲ್ಲಿ ಮುಖಪುಟದ ಸುದ್ದಿಯಾಗಿ ಫೋಟೋ ಸಹಿತವಾಗಿ ಪ್ರಕಟವಾಯಿತು. ಆ ಕಾಲದಲ್ಲಿ ಪತ್ರಿಕೋದ್ಯಮದಲ್ಲಿ ಈಗಿನಂತೆ ತಾಂತ್ರಿಕ ಸೌಲಭ್ಯಗಳು ಇನ್ನೂ ಬಂದಿರಲಿಲ್ಲ. ಕಾರ್ಯಕ್ರಮದ ಫೋಟೋವನ್ನು 'ಕಟ್ಟಿ ಸ್ಟುಡಿಯೋ'ದ ರಮೇಶ ತೆಗೆದಿದ್ದ. ಅರ್ಧ ಗಂಟೆಯಲ್ಲಿ ಆತ ಫೋಟೋವನ್ನು ತಂದು ಕೊಟ್ಟ. ಇನ್ನರ್ಧ ಗಂಟೆಯಲ್ಲಿ ನಾನು ವರದಿ ಬರೆದು ಬಸ್‌ಸ್ಟ್ಯಾಂಡಿಗೆ ಓಡಿದೆ. ಏಳು ಗಂಟೆಗೆ ಬೆಳಗಾವಿ ಬೆಂಗಳೂರು ಬಸ್ ಇತ್ತು. ಡ್ರೈವರನ ಕೈಯಲ್ಲಿ ವರದಿ ಮತ್ತು ಫೋಟೋದ ಪಾಕೀಟು ನೀಡಿ ಹುಬ್ಬಳ್ಳಿ ಬಸ್‌ಸ್ಟ್ಯಾಂಡಿನಲ್ಲಿ ಆಫೀಸಿನಿಂದ ಯಾರಾದರೂ ಬಂದು ಪಾಕೀಟನ್ನು ತೆಗೆದುಕೊಂಡು ಹೋಗುತ್ತಾರೆಂದು ಆತನಿಗೆ ಹೇಳಿದೆ. ಆಫೀಸಿಗೆ ಓಡಿ ಬಂದು ಹುಬ್ಬಳ್ಳಿ ಕಛೇರಿಗೆ ಟ್ರಂಕ್ ಕಾಲ್ ಹಚ್ಚಿ ಮಾತಾಡಿದೆ. ನನ್ನ ಯೋಚನೆಯಂತೆ ಆಫೀಸಿನ ಹುಡುಗ ಬಸ್‌ಸ್ಟ್ಯಾಂಡಿಗೆ ಹೋಗಿ, ನಾನು ಕೊಟ್ಟಿದ್ದ ಪಾಕೀಟನ್ನು ತೆಗೆದುಕೊಂಡು ಸುದ್ದಿ ಸಂಪಾದಕರ ಕೈಗೆ ನೀಡಿದ್ದ. ಸುದ್ದಿ ಸಂಪಾದಕರು ಅದನ್ನು ಮುಖಪುಟಕ್ಕೆ ತೆಗೆದುಕೊಂಡಿದ್ದರು.

ಶ್ರೀ ಶಿವಬಸವ ಸ್ವಾಮಿಗಳು ಹೆಚ್ಚು ಮಾತಾಡುವವರಲ್ಲ. ಯಾವಾಗಲೂ ಮೌನದಿಂದಿರುತ್ತಿದ್ದರು. ಆದರೆ ಆ ಮೌನಕ್ಕೆ ಒಂದು ಕಾಸ್ಮಿಕ್ ಮಹತ್ವ ಇತ್ತು. ಅವರ ಮಾತುಗಳೆಲ್ಲ ಸತ್ಯವಾಗುತ್ತವೆಂಬ ಶ್ರದ್ಧೆಯೂ ಜನರಲ್ಲಿತ್ತು. ಆಗ ಅವರ

'ಕಾವ್ಯ' ಮಹಾಂತೇಶ ನಗರ ಬೆಳಗಾವಿ–590017

ಜೊತೆಗೆ ಪ್ರಭು ಸ್ವಾಮಿಗಳು ಇರುತ್ತಿದ್ದರು. ಪ್ರಭು ಸ್ವಾಮಿಯವರು ಮಠದ ಉತ್ತರಾಧಿಕಾರಿಯಾಗಿದ್ದರು. ಪ್ರಭುಸ್ವಾಮಿಗಳು ಉತ್ಸಾಹದ ಚಿಲುಮೆ. ಪಾದರಸದಂತೆ ಆ ಕಡೆಯಿಂದ ಈ ಕಡೆಗೆ, ಈ ಕಡೆಯಿಂದ ಆ ಕಡೆಗೆ ಓಡಾಡುತ್ತಿದ್ದ ಚಿತ್ರ ಈಗಲೂ ನನ್ನ ಕಣ್ಣು ಮುಂದಿದೆ. ಭಾವೀ ಮಠಾಧಿಕಾರಿಯಾಗಿದ್ದರೂ ಪ್ರಭು ಸ್ವಾಮಿಗಳು ಎಲ್ಲೆಂದರಲ್ಲಿ ಚುಟುಪುಟು ನಡೆದುಕೊಂಡೇ ಹೋಗುತ್ತಿದ್ದರು. ಗುರುಗಳ ಮನಸ್ಸಿನಲ್ಲಿದ್ದ ಯೋಚನೆಗಳನ್ನು ಯೋಜನೆಯನ್ನಾಗಿ ಪರಿವರ್ತಿಸುವ ಶಕ್ತಿ ಪ್ರಭುಸ್ವಾಮಿಗಳವರಲ್ಲಿತ್ತು.

ಶಿವಬಸವ ಸ್ವಾಮಿಗಳು ನಿಜಾರ್ಥದಲ್ಲಿ ಶಿವ ಮತ್ತು ಬಸವರ ಸಂಗಮವಾಗಿದ್ದರು. ಸಮಾಜದ ಏಳ್ಗೆ ಶಿಕ್ಷಣದಿಂದ ಮಾತ್ರ ಸಾಧ್ಯವೆಂದು ಅವರು ಅರಿತಿದ್ದರು. ಆ ಕಾಲದಲ್ಲಿ ಲಿಂಗಾಯತ ಸಮಾಜ ಹಾಗು ಇನ್ನಿತರ ಹಿಂದುಳಿದ ಸಮಾಜದಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಪ್ರಾಧಾನ್ಯವಿರಲಿಲ್ಲ. ಈ ಪ್ರವೃತ್ತಿ ಸಮಾಜದ ಏಳ್ಗೆಗೆ ಪೂರಕವಲ್ಲವೆಂದು ಸ್ವಾಮಿಗಳಿಗೆ ಗೊತ್ತಿತ್ತು. ಆ ಕಾರಣವಾಗಿ ಅವರು ಹೊರ ಊರಿನ ವಿದ್ಯಾರ್ಥಿಗಳಿಗಾಗಿ ಉಚಿತ ವಿದ್ಯಾರ್ಥಿಪ್ರಸಾದ ನಿಲಯವನ್ನು ಆರಂಭಿಸಿದರು. ಜೊತೆಗೆ ಈ ವಿದ್ಯಾರ್ಥಿಗಳಿಗಾಗಿ ಶಾಲೆ ಮತ್ತು ಹೈಸ್ಕೂಲು ಆರಂಭಿಸಿದರು. ಪರ ಊರಿನ ವಿದ್ಯಾರ್ಥಿಗಳು ಬೆಳಗಾವಿಗೆ ಬಂದು ತಮ್ಮ ವಿದ್ಯಾಭ್ಯಾಸವನ್ನು ಆರಂಭಿಸಿದರು. ಸ್ವಾಮಿಗಳು ಜಾತ್ಯಾತೀತರಾಗಿದ್ದರು. ವಿದ್ಯಾರ್ಥಿ ನಿಲಯದಲ್ಲಿ ಎಲ್ಲ ಜಾತಿಯ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿದರು. ಈ ವಿದ್ಯಾರ್ಥಿ ನಿಲಯದಲ್ಲಿದ್ದು ಕಲಿತ ಅನೇಕರು ಇಂದು ಸುಪ್ರಸಿದ್ಧ ಡಾಕ್ಟರ್‌ರಾಗಿದ್ದಾರೆ, ವಕೀಲರಾಗಿದ್ದಾರೆ, ರಾಜಕಾರಣಿಯಾಗಿದ್ದಾರೆ, ಅಧ್ಯಾಪಕ–ಪ್ರಾಧ್ಯಾಪಕರಾಗಿದ್ದಾರೆ. ಅನೇಕರು ತಮ್ಮ ಜೀವನವನ್ನು ಈ ವಿದ್ಯಾರ್ಥಿ ನಿಲಯದ ಮೂಲಕವೇ ಕಟ್ಟಿಕೊಂಡಿದ್ದಾರೆ. ಕನ್ನಡದ ಸುಪ್ರಸಿದ್ಧ ಸಾಹಿತಿಗಳಾದ ಚಂದ್ರಶೇಖರ ಕಂಬಾರರವರೂ ಈ ವಿದ್ಯಾರ್ಥಿ ನಿಲಯದಲ್ಲಿಯೇ ರೂಪುಗೊಂಡವರು.

ವಿದ್ಯಾರ್ಥಿಗಳ ಪ್ರಸಾದ ವ್ಯವಸ್ಥೆಗಾಗಿ ಶಿವಬಸವ ಸ್ವಾಮಿಗಳು ಹೆಗಲಿಗೆ ಜೋಳಿಗೆಯನ್ನು ಹಾಕಿ ಹಳ್ಳಿ ಹಳ್ಳಿ ಅಡ್ಡಾಡಿದರು. ಬಂಡಿ ಕಟ್ಟಿಕೊಂಡು ಊರೂರು ತಿರುಗಾಡಿದರು. ಅವರೆದುರು ಸಮಾಜದಲ್ಲಿ ಬೇರುಬಿಟ್ಟಿದ್ದ ಅಜ್ಞಾನದ ಕತ್ತಲೆಯನ್ನು ಹೋಗಲಾಡಿಸುವ ಸವಾಲಿತ್ತು. ಸಮಾಜದಲ್ಲಿ ಜ್ಞಾನದ ಬೆಳಕನ್ನು ಪಸರಿಸುವ ಗುರಿ ಇತ್ತು. ಎಂತಹ ಕಷ್ಟ ಬಂದರೂ ತಾವು ಹಿಡಿದ ಯೋಜನೆಯನ್ನು ಶ್ರೀಗಳು ಕಾರ್ಯರೂಪಕ್ಕೆ ತರುತ್ತಿದ್ದರು.

ಶಿವಬಸವ ಸ್ವಾಮಿಗಳು ಬೆಳಗಾವಿಯನ್ನು ವೀರಭದ್ರನಂತೆ ಕಾಪಾಡಿದರು. ಆಗ ಬೆಳಗಾವಿಯಲ್ಲಿ ಎಲ್ಲೆಡೆಗೆ ಮರಾಠಿ ಪ್ರಭಾವ. ಸ್ವಾಮಿಗಳು ಕನ್ನಡಿಗರಿಗೆ ಕನ್ನಡದ ಅಸ್ಮಿತೆಯನ್ನು ಪರಿಚಯಿಸಿ ಅವರನ್ನು ಸ್ವಾಭಿಮಾನಿಗಳನ್ನಾಗಿ ರೂಪಿಸಿದರು. ಬೆಳಗಾವಿಯಲ್ಲಿ ಕನ್ನಡದ ಚಳುವಳಿ ಅಥವಾ ಮೆರವಣಿಗೆ ನಡೆದರೆ ಅದಕ್ಕೆ ಸಾವಿರಾರು ಸಂಖ್ಯೆಯಲ್ಲಿ ಕನ್ನಡಿಗರು ಸೇರುವಂತೆ ಜನರನ್ನು ಹುರಿದುಂಬಿಸಿದರು. ತಾವು ಸ್ವತಃ ಎದುರಿಗೆ ನಿಂತು ಕನ್ನಡದ ಮೆರವಣಿಗೆಗಳನ್ನು ಆಯೋಜಿಸಿದರು. ಹಲವಾರು ಸಲ ಮೆರವಣಿಗೆಗಳ ಮೇಲೆ ಕಲ್ಲುಗಳು ಬಿದ್ದವು. ಇದರಿಂದ ಸ್ವಾಮಿಗಳು ಅಂಜಲಿಲ್ಲ; ಅಳುಕಲಿಲ್ಲ. ಬೆಳಗಾವಿಯು ಇಂದು ಕರ್ನಾಟಕದಲ್ಲಿ ಉಳಿದಿದ್ದರೆ ಅದಕ್ಕೆ ನಾಗನೂರು ಮಠ ಮತ್ತು ಶಿವಬಸವ ಸ್ವಾಮಿಗಳೇ ಪ್ರಮುಖ ಕಾರಣರು.

ಸ್ವಾಮಿಗಳು ಕೇವಲ ಲಿಂಗಾಯತರಿಗೆ ಮಾತ್ರ ಸ್ವಾಮಿಗಳಾಗಿರಲಿಲ್ಲ. ಎಲ್ಲ ಜಾತಿಯ ಜನರೂ ಅವರನ್ನು ಸ್ವಾಮಿಗಳೆಂದು ಸ್ವೀಕರಿಸಿದ್ದಾರೆ. ಅವರಿಗೆ ನಡೆದುಕೊಳ್ಳುವ ಅದೆಷ್ಟೋ ಮುಸಲ್ಮಾನ ಬಾಂಧವರನ್ನು ನಾನು ನೋಡಿದ್ದೇನೆ. ಹಿಂದುಳಿದ ಸಮಾಜದವರಿಗಂತೂ ಶ್ರೀಗಳು ಸ್ವಾಭಿಮಾನದ ಸಂಕೇತವಾಗಿದ್ದವರು.

ಪ್ರಭುಸ್ವಾಮಿಗಳು ಲಿಂಗೈಕ್ಯರಾದ ನಂತರ ಶಿವಬಸವ ಸ್ವಾಮಿಗಳು ಸಿದ್ಧರಾಮ ಸ್ವಾಮಿಗಳವರನ್ನು ಪೀಠಕ್ಕೆ ತಂದರು. ಗುರುಗಳ ಆಶಯದಂತೆ ಸಿದ್ಧರಾಮ ಸ್ವಾಮಿಗಳು ಮಠದ ಕೀರ್ತಿಯನ್ನು ದಶದಿಕ್ಕುಗಳಿಗೆ ಪಸರಿಸುವಂತೆ ಕಾರ್ಯಮಾಡಿ ತೋರಿಸಿದ್ದಾರೆ. ಶಿವಬಸವ ಸ್ವಾಮಿಗಳು ಕಟ್ಟಡ ಕಟ್ಟಿದರೆ, ಸಿದ್ಧರಾಮ ಸ್ವಾಮಿಗಳು ಆ ಕಟ್ಟಡಕ್ಕೆ ಬಂಗಾರದ ಕಳಸವನ್ನು ಇಟ್ಟಿದ್ದಾರೆ. ಇದೀಗ ಸಾವಳಗೀಶ್ವರ ದೇವರು ಮಠದ ಜವಾಬ್ದಾರಿಯುನ್ನು ವಹಿಸಿಕೊಳ್ಳುತ್ತಿದ್ದಾರೆ. ಉಚ್ಚ ವಿದ್ಯಾವಿಭೂಷಿತರಾಗಿರುವ ಸಾವಳಗೀಶ್ವರ ದೇವರಿಗೆ ಮಠದ ಘನವಾದ ಪರಂಪರೆಯ ಅರಿವು ಇದೆ; ಹೊಸ ಹೊಸ ಆವಿಷ್ಕಾರಗಳೊಂದಿಗೆ ನಾಗಾಲೋಟದಲ್ಲಿ ಓಡುತ್ತಿರುವ ಪ್ರಸಕ್ತ ಜಗತ್ತಿನ ಸವಾಲುಗಳೂ ಅವರಿಗೆ ಗೊತ್ತಿವೆ. ಅವರ ಬೆನ್ನ ಹಿಂದೆ ಶಿವಬಸವ ಸ್ವಾಮಿಗಳ, ಪ್ರಭುಸ್ವಾಮಿಗಳ, ಸಿದ್ಧರಾಮ ಸ್ವಾಮಿಗಳ ಬೆಳಕು ಇದೆ; ಎದುರಿಗೆ ಸಮಾಜದ ಉತ್ಕರ್ಷತೆಯುನ್ನು ಸಾಧಿಸುವ ಗುರಿ ಇದೆ. ಖಂಡಿತವಾಗಿಯೂ ಅವರು ಆ ಗುರಿಯುನ್ನು ಸಾಧಿಸುತ್ತಾರೆಂದು ಭಕ್ತರ ನಂಬುಗೆಯಾಗಿದೆ.

■■

# ಸೇವಾಯೋಗಿ ಲಿಂ. ಪ್ರಭುಮಹಾಸ್ವಾಮಿಗಳವರು

● **ಪೂಜ್ಯಶ್ರೀ ಮಹಾಂತ ದೇವರು**

ಕಾಯಕಯೋಗಿ–ಮಹಾಪ್ರಸಾದಿ ಪೂಜ್ಯಶ್ರೀ ಲಿಂ. ಶಿವಬಸವ ಮಹಾಸ್ವಾಮಿಗಳವರು ಸದಾವಕಾಲ ಸ್ಮರಣೀಯರು. ಉದಾರ ಚರಿತರು, ಉದಾತ್ತ ಚಿಂತಕರು. ಎಡಗೈಯಲ್ಲಿನ ಲಿಂಗಪೂಜೆಯಿಂದ ಆತ್ಮಕಲ್ಯಾಣ ಸಾಧಿಸಿದ ಪೂಜ್ಯರು ಬಲಗೈಯಲ್ಲಿನ ಜೋಳಿಗೆಯಿಂದ ಸಮಾಜಕಲ್ಯಾಣ ಮಾಡಿದವರು. ಶಿಕ್ಷಣದಿಂದ ವಂಚಿತರಾಗಿ ಗುಲಾಮಗಿರಿಯ ಬದುಕನ್ನು ಬದುಕುತ್ತಿದ್ದವರಿಗೆ ಶಿಕ್ಷಣ ನೀಡಲು ೧೯೩೨ ರಲ್ಲಿಯೇ ಉಚಿತ ಪ್ರಸಾದನಿಲಯ ಕಟ್ಟಿದರು. ಮಕ್ಕಳನ್ನು ಪೋಷಿಸಲು ಹಳ್ಳಿ–ಹಳ್ಳಿಗಳನ್ನ ಸುತ್ತಿದರು. ಶಿಕ್ಷಣದ ಬೀಜ ಬಿತ್ತಿದರು–ಸುಜ್ಞಾನದ ಬೆಳೆಯ ಬೆಳೆದರು. ಕಾಯಕವನ್ನೇ ಯೋಗವಾಗಿಸಿಕೊಂಡು ಕಾಯಕಯೋಗಿಯಾದರು. ಪ್ರಸಾದ ಎಂಬ ಲಿಂಗಾಯತ ಧರ್ಮದ ಮಹಾತತ್ವಕ್ಕೆ ವ್ಯಾಖ್ಯಾನವಾಗಿ ಬದುಕಿ ಮಹಾಪ್ರಸಾದಿಯಾದರು. ಕನ್ನಡಕ್ಕಾಗಿ ಸರ್ವಸ್ವವನ್ನೂ ಸಮರ್ಪಿಸಿ ಕನ್ನಡಿಗರ ಗುರುವಾದರು, ಕನ್ನಡದ ಕಾಂತಿಯಾದರು. ಅಪ್ರತಿಮ ರಾಷ್ಟ್ರಪ್ರೇಮದಿಂದಾಗಿ ಭಾರತದ ಭಾಗ್ಯವಾದರು. ಇಂತಹ ಮಹಾಯೋಗಿಗಳವರ ಸಮರ್ಥ ವಾರಸುದಾರರಾಗಿ ನಾಗನೂರು ರುದ್ರಾಕ್ಷಿಮಠದ ಸೇವಾಕ್ಷಿತಿಜವನ್ನು ವಿಸ್ತರಿಸಿದವರು ಸೇವಾಯೋಗಿಗಳಾದ ಪೂಜ್ಯಶ್ರೀ ಲಿಂ. ಪ್ರಭುಮಹಾಸ್ವಾಮಿಗಳವರು.

ಬೆಳಗಾವಿ ಜಿಲ್ಲೆಯ ಗಡಿಗೆ ಹೊಂದಿಕೊಂಡಂತೆ ಕೊಲ್ಲಾಪೂರ ಜಿಲ್ಲೆಯಲ್ಲಿ ಕೋಳಿವಾಡ ಎಂಬ ಹಳ್ಳಿಯಿದೆ. ಕೋವಾಡ ಎಂತಲೂ ಜನ ಕರೆಯುತ್ತಾರೆ. ತಾಮ್ರಪರ್ಣಿ ನದಿ ದಡದಲ್ಲಿರುವ ಈ ಊರು ಹಚ್ಚ ಹಸಿರಿನ ಪರಿಸರದಿಂದ ಸುಂದರವಾಗಿದೆ. ಶ್ರೀ ಬಸವಯ್ಯ ಮತ್ತು ಶ್ರೀಮತಿ ಗಿರಿಜವ್ವ ಆ ಊರಿನ ಹಿರೇಮಠದ ಸಾತ್ವಿಕ ದಂಪತಿಗಳು. ಅವರಿಬ್ಬರ ಒಂದಾದ ಭಕ್ತಿಯು ಶಿವನಿಗೆ ಹಿತವಾಗಿ ಸಮರ್ಪಿತವಾಗಿತ್ತು. ತಾಯಿ ಗಿರಿಜವ್ವ ೫ನೆಯ ಮಗುವಿಗೆ ೧೯೩೦ ಸಪ್ಟಂಬರ್ ೧೫ ರಂದು ಜನ್ಮ ನೀಡಿದಳು. ಕಾರಣಿಕ ಶಿಶುವಾಗಿ ಜನಿಸಿದ ಹಾಲುಗಲ್ಲದ ಮುದ್ದಾದ ಮಗುವಿಗೆ 'ರಾಜಶೇಖರ' ಎಂಬ ಚಂದದ ಹೆಸರನ್ನಿಟ್ಟರು. ದುರಾದೃಷ್ಟಕ್ಕೆ ರಾಜಶೇಖರ ಒಂದು ವರ್ಷದವನಿರುವಾಗಲೇ ತಂದೆ ಬಸವಯ್ಯ ಲಿಂಗೈಕ್ಯರಾದರು. ತಾಯಿ ಗಿರಿಜವ್ವ ಮಕ್ಕಳನ್ನು ಪ್ರೀತಿಯಿಂದ ಸಾಕಿದರು–ಸಲುಹಿದರು. ಕುಶಲಮತಿ ರಾಜಶೇಖರನ ವಿದ್ಯಾಭ್ಯಾಸಕ್ಕಾಗಿ ಯಮಕನಮರಡಿಗೆ ಬಂದಳು. ಯಮಕನಮರಡಿಯ ಶ್ರೀಗುರುಸಿದ್ಧ ಸ್ವಾಮಿಗಳಿಗೆ ರಾಜಶೇಖರನನ್ನು ಒಪ್ಪಿಸಿ ನಿರಾಳಳಾದಳು. ರಾಜಶೇಖರ ಚೆನ್ನಾಗಿ ಓದಿ ನಿಪುಣರಾದರು. ನಿರಂಜನ ಮೂರ್ತಿಗಳಾಗಿ ನಾಗನೂರು ರುದ್ರಾಕ್ಷಿಮಠದ ಎಂಟನೆಯ ಪೀಠಾಧಿಪತಿಯಾದರು.

**ಶಿಕ್ಷಣಾರ್ಥಿ–ಸೇವಾರ್ಥಿ**

ಪ್ರೀತಿಯ ಪುತ್ಥಳಿಯೇ ಆಗಿದ್ದ ತಾಯಿ ಗಿರಿಜವ್ವ ರಾಜಶೇಖರನನ್ನು ಯಮಕನಮರಡಿಯ ಹುಣಸಿಕೊಳ್ಳಮಠದ ಶ್ರೀಗುರುಸಿದ್ಧ ಸ್ವಾಮಿಗಳವರಿಗೆ ಒಪ್ಪಿಸಿದಳು. ಮಠದಲ್ಲಿದ್ದುಕೊಂಡು ರಾಜಶೇಖರ ಅತ್ಯಂತ ಶ್ರದ್ಧೆಯಿಂದ ವಿದ್ಯೆಯನ್ನು ಸಂಪಾದಿಸತೊಡಗಿದ. ಪ್ರಾಥಮಿಕ ಶಿಕ್ಷಣವನ್ನು ಯಮಕನಮರಡಿಯಲ್ಲಿಯೇ ಪೂರೈಸಿದ. ತನ್ನ ಮುದ್ದಾದ ನಡವಳಿಕೆಯಿಂದ ಎಲ್ಲರ ಗಮನ ಸೆಳೆಯತೊಡಗಿದ. ಬೆಳೆವ ಸಿರಿಯನ್ನು ಮೊಳಕೆಯಲ್ಲಿಯೇ ಕಂಡ ಪೂಜ್ಯ ಗುರುಸಿದ್ಧ ಸ್ವಾಮಿಗಳು ಹೆಚ್ಚಿನ ಅಧ್ಯಯನಕ್ಕಾಗಿ ನಾಗನೂರ ರುದ್ರಾಕ್ಷಿಮಠದ ಪ್ರಸಾದನಿಲಯಕ್ಕೆ ಸೇರಿಸಿದರು. ಪ್ರಸಾದನಿಲಯದ ಸಂಸ್ಕೃತಿ–ಸಂಸ್ಕಾರಗಳು ರಾಜಶೇಖರನ ಮೇಲೆ ಅಗಾಧವಾದ ಪರಿಣಾಮ ಬೀರಿದವು. ಆಟ–ಪಾಠಗಳಲ್ಲಿ ಎಲ್ಲರಿಗಿಂತ ಮುಂದಿದ್ದ ರಾಜಶೇಖರ, ಶ್ರೀಮಠದ ಇನ್ನಿತರ ಸೇವೆಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡನು, ಸಂಪೂರ್ಣವಾಗಿ ಸಮರ್ಪಿಸಿಕೊಂಡನು.

**ಶೇಗುಣಸಿ, ನಾಗನೂರು ಶ್ರೀ ರುದ್ರಾಕ್ಷಿಮಠ, ಶಿವಬಸವನಗರ ಬೆಳಗಾವಿ**

ಶಿವಯೋಗಶೀಲರಾಗಿ, ಶಿವಭಕ್ತಪಾಲರಾಗಿ, ಶಿವಾನುಭವಲೋಲರಾಗಿ ಸಾಕ್ಷಾತ್ ಶಿವಸ್ವರೂಪಿಗಳೇ ಆಗಿದ್ದ ಪೂಜ್ಯಶ್ರೀ ಶಿವಬಸವ ಮಹಾಸ್ವಾಮಿಗಳವರ ಕೃಪಾದೃಷ್ಠಿ ರಾಜಶೇಖರನ ಕಡೆ ಹರಿಯಿತು. ಕಾರುಣ್ಯ-ಕಕ್ಕುಲಾತಿ ಸೋನೆ ಮಳೆಯಂತೆ ಸುರಿಯಿತು. ಅಷ್ಟರಲ್ಲಿಯೇ ರಾಜಶೇಖರನ ಕೆ. ಎಲ್. ಇ. ಸಂಸ್ಥೆಯ ಜಿ. ಎ. ಹೈಸ್ಕೂಲದಲ್ಲಿ ಮೆಟ್ರಿಕ್ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯೊಂದಿಗೆ ಪಾಸಾಗಿ ಎಲ್ಲರ ಮೆಚ್ಚುಗೆಗೆ ಪಾತ್ರನಾದ. ಪೂಜ್ಯಶ್ರೀ ಶಿವಬಸವ ಮಹಾಸ್ವಾಮಿಗಳವರೇ ಬೆಂಗಳೂರಿನ ಮಹಾರಾಜ ಸಂಸ್ಕೃತ ಕಾಲೇಜಿಗೆ ಸೇರಿಸಿ ಬಂದರು. ಬೆಂಗಳೂರಿನ ಗೌಡರ ವೀರಭದ್ರಪ್ಪ ಎಂಬ ಶ್ರೀಮಂತರಿದ್ದರು. ಅವರಿಗೆ ಗುರು-ಲಿಂಗ-ಜಂಗಮರ ಮೇಲೆ ಅಪಾರವಾದ ಗೌರವಾದರಗಳಿದ್ದವು. ಇವರು ಪ್ರಸಾದನಿಲಯವನ್ನು ಮತ್ತು ಸಂಸ್ಕೃತ ಪಾಠಶಾಲೆಯನ್ನು ನಡೆಸುತ್ತಿದ್ದರು. ರಾಜಶೇಖರ ಇವರ ಮನೆಯಲ್ಲಿದ್ದುಕೊಂಡು ಸಂಸ್ಕೃತ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿದರು. ಹಿಂದಿ ಭಾಷೆಯಲ್ಲಿಯೂ ಪ್ರಭುತ್ವ ಸಾಧಿಸಿದರು. ರಾಜಶೇಖರರ ವಿಶೇಷ ಪ್ರತಿಭೆಯನ್ನು ಸರ್ವರೂ ಪುರಸ್ಕರಿಸಿದರು. ೧೯೬೦ ರಲ್ಲಿ ಉನ್ನತ ವ್ಯಾಸಂಗವನ್ನು ಪೂರೈಸಿ ಮರಳಿ ಬೆಳಗಾವಿಗೆ ಬಂದರು.

ಸಂಪೂರ್ಣ ವಿದ್ಯೆಯನ್ನು ಸಂಪಾದಿಸಿಕೊಂಡು ಮರಳಿ ಮನೆಗೆ ಬರುವ ಮಗನನ್ನು ತಂದೆಯು ಅತ್ಯಂತ ಪ್ರೀತಿಯಿಂದ ಸ್ವಾಗತಿಸುವಂತೆ ಶ್ರೀ ಶಿವಬಸವ ಸ್ವಾಮಿಗಳು ರಾಜಶೇಖರರನ್ನು ಹೃದಯತುಂಬಿ ಸ್ವಾಗತಿಸಿದರು. ರಾಜಶೇಖರನ ಸೇವಾ ಮನೋಭಾವನೆಯನ್ನು ಗುರುತಿಸಿದ್ದ ಪೂಜ್ಯಶ್ರೀಗಳವರು ತಮ್ಮ ಉತ್ತರಾಧಿಕಾರಿಯನ್ನಾಗಿ ನಿಯೋಜಿಸಬೇಕೆಂದು ಮೊದಲೇ ನಿರ್ಣಯಿಸಿದ್ದರು. ಯಮಕನಮರಡಿಯ ಶ್ರೀಗುರುಸಿದ್ಧ ಸ್ವಾಮಿಗಳವರ ಒಪ್ಪಿಗೆಯನ್ನು ಪಡೆದು ೩-೫-೧೯೬೧ ಬಸವ ಜಯಂತಿಯಂದು ಧಾರವಾಡದ ಮುರುಘಾಮಠದ ಮಹಾಮಹಿಮರಾದ ಶ್ರೀ ಮೃತ್ಯುಂಜಯ ಅಪ್ಪಗಳವರ ನೇತೃತ್ವದಲ್ಲಿ ಸಮಸ್ತ ಸದ್ಭಕ್ತರ ಸಮ್ಮುಖದಲ್ಲಿ ರಾಜಶೇಖರರಿಗೆ ಕಾವಿಯ ವಸ್ತ್ರ ನೀಡಿ ನಾಗನೂರು ರುದ್ರಾಕ್ಷಿಮಠದ ಉತ್ತರಾಧಿಕಾರಿಯನ್ನಾಗಿ ನಿಯೋಜಿಸಿ ಶ್ರೀ ಪ್ರಭುದೇವರು ಎಂಬ ನಾಮಾಭಿದಾನ ನೀಡಿದರು. ಹಾಲಕೆರೆಯ ಪೂಜ್ಯಶ್ರೀ ಅನ್ನದಾನ ಶಿವಯೋಗಿಗಳವರು ಅನುಗ್ರಹ ದೀಕ್ಷೆಯನ್ನು ಶ್ರೀ ಪ್ರಭುದೇವರಿಗೆ ನೀಡಿ ಆಶೀರ್ವದಿಸಿದರು.

**ಸೇವೆಯೇ ಶಿವಪೂಜೆ**

ಸ್ವಾಮಿಯೆಂದರೆ ಮಠದ ಒಡೆಯನಲ್ಲ; ಸಮಾಜದ ನಿಷ್ಠಾವಂತ ಸೇವಕ ಎಂಬ ಸ್ವಾಮಿತ್ವಕ್ಕೆ ಹೊಸ ಭಾಷ್ಯ ಬರೆದವರು ಶ್ರೇಷ್ಠ ಸಮಾಜ ಸುಧಾರಕ ಗುರುಗಳಾದ ಪೂಜ್ಯಶ್ರೀ ಹಾನಗಲ್ಲ ಗುರುಕುಮಾರ ಮಹಾಸ್ವಾಮಿಗಳವರು. ಈ ಮಾತಿನಂತೆಯೇ ಪೂಜ್ಯಶ್ರೀ ಪ್ರಭುದೇವರು ನಾಗನೂರು-ರುದ್ರಾಕ್ಷಿಮಠ ಪ್ರಧಾನ ಸೇವಕನಂತೆ ಕಾರ್ಯ ನಿರ್ವಹಿಸತೊಡಗಿದರು. ಹಗಲು-ರಾತ್ರಿಗಳೆನ್ನದೆ ದುಡಿದು ಮಠದ ಅಭಿವೃದ್ಧಿ ಮಾಡಿದರು. ಮಠದ ಹಳೆಯ ಕಟ್ಟಡಗಳನ್ನೆಲ್ಲ ತೆರವುಗೊಳಿಸಿ ಸುಸಜ್ಜಿತ ಕಟ್ಟಡಗಳನ್ನು ನಿರ್ಮಿಸಿ ಶ್ರೀಮಠಕ್ಕೆ ಶಾಶ್ವತ ಆದಾಯ ಬರುವಂತೆ ಮಾಡಿದರು. ಪ್ರಸಾದನಿಲಯದ ಅಭಿವೃದ್ಧಿಗಾಗಿ ಹಳ್ಳಿ-ಹಳ್ಳಿಗಳನ್ನು ಸಂಚರಿಸಿ ಸದ್ಭಕ್ತರ ಸಂಘಟನೆ ಮಾಡಿದರು. ಶ್ರೀ ಪ್ರಭು ದೇವರ ಕಾರ್ಯವೈಖರಿ ಬಹಳಷ್ಟು ಚಾಕಚಕ್ಯತೆಯಿಂದ ಕೂಡಿರುತ್ತಿತ್ತು. ಅವರು ಯಾವುದೇ ಕಾರ್ಯವನ್ನು ಮಾಡಿದರೂ ದೂರದೃಷ್ಟಿಯಿಟ್ಟುಕೊಂಡೆ ಮಾಡುತ್ತಿದ್ದರು.

ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಿ ಸ್ವತಃ ಸಂಸ್ಕೃತ ಪಂಡಿತರಾಗಿದ್ದರಿಂದ ಅವರೇ ಪ್ರೀತಿಯಿಂದ ಪಾಠ-ಪ್ರವಚನ ಮಾಡುತ್ತಿದ್ದರು. ಮಕ್ಕಳನ್ನು ಪ್ರೀತಿಯಿಂದ ಪೋಷಿಸುತ್ತಿದ್ದರು. ಪೂಜ್ಯಶ್ರೀ ಶಿವಬಸವ ಮಹಾಸ್ವಾಮಿಗಳವರ ಸದಾಶಯದಂತೆ, ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ ಎಂಬ ಶರಣ ವಾಣಿಯಂತೆ ವಿದ್ಯಾರ್ಥಿನಿಯರಿಗಾಗಿ ಶೆಟ್ಟಿಗಲ್ಲಿಯಲ್ಲಿ ಅಕ್ಕಮಹಾದೇವಿ ಪ್ರಸಾದ ನಿಲಯವನ್ನು ಸ್ಥಾಪಿಸಿದರು. ೧೯೬೧ ರ ಸಂದರ್ಭದಲ್ಲಿಯೇ ವಿದ್ಯಾರ್ಥಿನಿ ಪ್ರಸಾದನಿಲಯವನ್ನು ಸ್ಥಾಪಿಸಿದ ಕಾರ್ಯವನ್ನು ನೆನೆದರೆ ಪೂಜ್ಯರ ಪ್ರಗತಿ-ಪರ ಚಿಂತನೆ ಎಷ್ಟಿತ್ತೆಂಬುದು ವೇದ್ಯವಾಗುತ್ತದೆ.

ಮಾರುತಿಗಲ್ಲಿಯ ಪ್ರಸಾದನಿಲಯ ಕಿರಿದಾಯಿತ್ತೆಂದು ಬೆಳಗಾವಿಯ ಹೊರವಲಯದ ವಿಶಾಲ ಪ್ರದೇಶದಲ್ಲಿ ೫ ಎಕರೆ ಜಮೀನು ಖರೀದಿಸಿದರು. ನಂತರ ಹನ್ನೊಂದು ಎಕರೆ ಖರೀದಿಸಿ ಪ್ರಸಾದನಿಲಯದ ವ್ಯಾಪ್ತಿಯನ್ನು ವಿಸ್ತರಿಸಿದರು. ಶ್ರೀ ಸಿದ್ಧರಾಮೇಶ್ವರ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿದರು. ಭವ್ಯವಾದ ಪ್ರಸಾದನಿಲಯವನ್ನು ಕಟ್ಟಿ ರಾಷ್ಟ್ರನಾಯಕರಾದ ಸನ್ಮಾನ್ಯ ಶ್ರೀ ಎಸ್. ನಿಜಲಿಂಗಪ್ಪನವರಿಂದ ಲೋಕಾರ್ಪಣೆಗೊಳಿಸಿದರು. ತಮ್ಮ ಉದ್ಘಾಟನೆ ಭಾಷಣದಲ್ಲಿ ಸನ್ಮಾನ್ಯರು ಹೃದಯತುಂಬಿ ರುದ್ರಾಕ್ಷಿಮಠದ ಕೊಡುಗೆಗಳನ್ನು ಸ್ಮರಿಸಿದರು. ಭಾವತುಂಬಿದ ಗೌರವಾದರಗಳನ್ನು ಪೂಜ್ಯದ್ವಯರಿಗೆ ಸಮರ್ಪಿಸಿದರು.

ಹಿಡಿದ ಕಾರ್ಯವನ್ನು ಸಂಪೂರ್ಣವಾಗುವವರೆಗೆ ಪೂಜ್ಯ ಪ್ರಭುದೇವರು ವಿಶ್ರಮಿಸುತ್ತಿರಲಿಲ್ಲ. ಕಾರ್ಯವು ಸಂಪೂರ್ಣವಾದರೆ ಮತ್ತೊಂದು ಜನಪರ ಯೋಜನೆಗಳನ್ನು ಕೈಗೆತ್ತಿಕೊಳ್ಳುತ್ತಿದ್ದರು. ಗ್ರಾಮೀಣ ಭಾಗದ ಹೆಣ್ಣು ಮಕ್ಕಳು ಉದ್ಯೋಗ ಅರಸಿ ಬೆಳಗಾವಿಗೆ ಬಂದರೆ ಅವರಿಗೆ ಉಳಿದುಕೊಳ್ಳಲು ವ್ಯವಸ್ಥೆ ಇರಲಿಲ್ಲ ಇಂತಹ ಸಂದರ್ಭದಲ್ಲಿ ವೃತ್ತಿನಿರತ ಮಹಿಳೆಯರಿಗಾಗಿ ಸುಸಜ್ಜಿತ ವಸತಿನಿಲಯ ಕಟ್ಟಿ ಮಹಿಳಾ ಸಬಲೀಕರಣಕ್ಕೆ ನಾಂದಿ ಹಾಡಿದರು. ಶಿಶುವಿಹಾರ ತೆರೆದು ಸಣ್ಣ ಸಣ್ಣ ಮಕ್ಕಳಿಗೆ ಸಂಸ್ಕೃತಿ-ಸಂಸ್ಕಾರ ಕಲಿಸಿದರು. ಅಂಗನವಾಡಿ ಕಾರ್ಯಕರ್ತೆಯರ ತರಬೇತಿ ಕೇಂದ್ರ ಸ್ಥಾಪಿಸಿದರು. ಕೈಗಾರಿಕಾ ತರಬೇತಿ ಕೇಂದ್ರ ಮತ್ತು ಪಾಲಿಟೆಕ್ನಿಕ್ ವಿದ್ಯಾಲಯ ತೆರೆದು ತಾಂತ್ರಿಕ ಶಿಕ್ಷಣ ನೀಡಿದರು. ಕನ್ನಡ ಪ್ರಾಥಮಿಕ ಶಾಲೆ ಆರಂಭಿಸಿದರು. ಇವೆಲ್ಲವುಗಳ ಜೊತೆಗೆ ನಾಗನೂರು ಎನ್ನುವ ಸಣ್ಣ ಹಳ್ಳಿಯಲ್ಲಿಯೂ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ ಗ್ರಾಮೀಣ ಭಾಗದ ಶೈಕ್ಷಣಿಕ ಅಭಿವೃದ್ಧಿ ಮಾಡಿದರು.

**ಕೃಷಿ-ಋಷಿ**

ಭಾರತವು ಕೃಷಿ ಪ್ರಧಾನ ದೇಶವಾಗಿದ್ದು ಬಹುಸಂಖ್ಯಾತರು ಇಂದಿಗೂ ಕೃಷಿಯನ್ನೇ ಖುಷಿಯಿಂದ ಬದುಕುತ್ತಿದ್ದಾರೆ. ಶ್ರೀ ಪ್ರಭುದೇವರಿಗೆ ರೈತರ ಬಗೆಗೆ ಎಲ್ಲಿಲ್ಲದ ಕಾಳಜಿ, ಕೃಷಿ ಭೂಮಿಯ ಬಗ್ಗೆ ಎಲ್ಲಿಲ್ಲದ ಕಳಕಳಿ. ಮಠದ ಜಮೀನನ್ನು ಸಾಗುವಳಿ ಮೊದಲು ಎತ್ತುಗಳನ್ನು ಸಾಕಿದ್ದರು. ಆಧುನಿಕ ಸಲಕರಣೆಗಳನ್ನು ಸಮರ್ಪಕವಾಗಿ ಉಪಯೋಗಿಸಿ ಕೃಷಿ ಕ್ಷೇತ್ರದಲ್ಲಿ ಅಪ್ರತಿಮ ಸಾಧನೆಯನ್ನೇ ಮಾಡಿದರು. ವಿವಿಧ ಯೋಜನೆ-ಯೋಚನೆಗಳಿಂದ ರೈತರಿಗೆ ಮಾರ್ಗದರ್ಶನ ಮಾಡಿ ಅವರ ಬದುಕನ್ನು ಸುಧಾರಿಸಿದರು. ರುದ್ರಾಕ್ಷಿಮಠದ ಜಮೀನನ್ನು ಮುಮ್ಮಡಿಗೊಳಿಸಿದರು. ಸಾವಯವ ಕೃಷಿ ಪದ್ಧತಿಯನ್ನು ಅಳವಡಿಸಿ ಆಗಿನ ಸಂದರ್ಭದಲ್ಲಿಯೇ ೮೦೦ ಚೀಲಕ್ಕಿಂತಲೂ ಅಧಿಕ ದವಸ ಧಾನ್ಯಗಳನ್ನು ಬೆಳೆಯುತ್ತಿದ್ದರೆಂಬುದು ಪೂಜ್ಯರ ಕ್ರಿಯಾಶೀಲ ಬದುಕಿಗೆ ನಿದರ್ಶನವಾಗಿದೆ. ಇವರ ಕಾರ್ಯವೈಖರಿಯನ್ನು ಕಂಡ ಅನೇಕರು ಶ್ರೀಮಠಕ್ಕೆ ದಾನವಾಗಿ ಜಮೀನು ನೀಡಿದರು.

**ನಿರಂಜನ ಪಟ್ಟಾಧಿಕಾರ**

ಶ್ರೀ ರುದ್ರಾಕ್ಷಿಮಠದ ಅಭಿವೃದ್ಧಿಯನ್ನೇ ಹಾಸುಕೊಂಡು-ಹೊದ್ದುಕೊಂಡಿದ್ದ ಶ್ರೀ ಪ್ರಭುದೇವರು ಮಠದ ಅಧಿಕಾರಕ್ಕಾಗಿ ಹಾತೊರೆದವರಲ್ಲ; ಹವಣಿಸಿದವರಲ್ಲ. ಗುರುಗಳಾದ ಪೂಜ್ಯಶ್ರೀ ಶಿವಬಸವ ಅಜ್ಜನವರ ಹೆಸರನ್ನೇ ಮುಂದು ಮಾಡಿ ಸೇವೆಯಲ್ಲಿಯೇ ಸಂತೃಪ್ತಿಯನ್ನು ಹೊಂದಿದ್ದರು. ಆದರೆ ೯೦ ಇಳಿವಯಸ್ಸಿನಲ್ಲಿ ಪೂಜ್ಯ ಗುರುಗಳವರು ತಮ್ಮ ಶಿಷ್ಯನ ಮಾತನ್ನು ಕೇಳದೇ (ಶ್ರೀ ಪ್ರಭುದೇವರು ಪಟ್ಟಾಧಿಕಾರವನ್ನು ಮುಂದೂಡುತ್ತಲೇ ಬಂದಿದ್ದರು) ೧೯೭೭ ರಲ್ಲಿ ಬಸವ ಪುರಾಣವನ್ನು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಿದರು ಹುಬ್ಬಳ್ಳಿಯ ಮೂರುಸಾವಿರಮಠದ ಪೂಜ್ಯಶ್ರೀ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು ಹಾಗು ಗದುಗಿನ ಜಗದ್ಗುರು ಶ್ರೀ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರ ಸಾನಿಧ್ಯದಲ್ಲಿ ನಾಡಿನ ಹರಗುರು ಚರಮೂರ್ತಿಗಳ ಸಮ್ಮುಖದಲ್ಲಿ ಶ್ರೀ ಪ್ರಭುದೇವರ ನಿರಂಜನ ಚರಪಟ್ಟಾಧಿಕಾರ ಸಮಾರಂಭವು ವೈಭವೋಪೇತವಾಗಿ ನೆರವೇರಿತು. ಶ್ರೀಮಠದ ಎಂಟನೆಯ ಪೀಠಾಧಿಪತಿಗಳಾಗಿ ಪೂಜ್ಯಶ್ರೀ ಪ್ರಭು ಮಹಾಸ್ವಾಮಿಗಳವರು ಅಧಿಕಾರ ಸ್ವೀಕರಿಸಿದರು.

**ಗುರುವಂದನ-ವರ್ಧಂತಿ-ಮಹೋತ್ಸವ**

ನಮ್ಮ ನಾಡು-ನುಡಿ, ನೆಲ-ಜಲ, ಆಚಾರ-ವಿಚಾರಗಳ ಕುರಿತಾಗಿ ಅನನ್ಯ ಅಭಿಮಾನವನ್ನಿಟ್ಟುಕೊಂಡು ನಾಡಿನ ಸರ್ವತೋಮುಖ ಬೆಳವಣಿಗೆಗೆ ಕಾರಣಕರ್ತರಾಗಿದ್ದ ಪೂಜ್ಯಶ್ರೀ ಶಿವಬಸವ ಅಜ್ಜನವರ ಗುರುವಂದನ ಸಮರ್ಪಿಸಲು ವರ್ಧಂತಿ ಮಹೋತ್ಸವವನ್ನು ಆಚರಿಸಲು ಶ್ರೀ ಪ್ರಭು ಸ್ವಾಮಿಗಳವರು ಸನ್ನದ್ಧರಾದರು. ವರ್ಧಂತಿ ಮಹೋತ್ಸವವನ್ನು ನೆಪವಾಗಿಟ್ಟುಕೊಂಡು ಪುರಾಣ-ಪ್ರವಚನ, ಸೇವಾಕಾರ್ಯಕರ್ತರಿಗೆ ಸತ್ಕಾರ, ಜನಜಾಗೃತಿ, ಪಾದಯಾತ್ರೆಗಳಂತಹ ವಿಧಾಯಕ ಕಾರ್ಯಕ್ರಮಗಳನ್ನು ಆಯೋಜಿಸಿ ಜನರಲ್ಲಿ ಧಾರ್ಮಿಕತೆಯನ್ನು ಜಾಗೃತಗೊಳಿಸಲು ಪ್ರಾಮಾಣಿಕ ಪ್ರಯತ್ನವನ್ನು ಮಾಡಿದರು. ಪೂಜ್ಯರು ಸಂಘಟಿಸುತ್ತಿದ್ದ ಎಲ್ಲ ಕಾರ್ಯಗಳಿಗೂ ಸದ್ಭಕ್ತರ ಸಹಾಯ ಸಹಕಾರ ದೊರೆಯುತ್ತಿತ್ತು. ಸಮಾಜಕ್ಕಾಗಿ ಸರ್ವಸ್ವವನ್ನು ಸಮರ್ಪಿಸಿದ ಪೂಜ್ಯನೀಯ ಗುರುಗಳಿಗೆ ನಾವೇನೆ ಸಲ್ಲಿಸಿದರೂ ಕಡಿಮೆಯೇ ಎನ್ನುವ ಮಾತುಗಳನ್ನಾಡುತ್ತಾ ಭಕ್ತರಲ್ಲಿ ನವಚೈತನ್ಯವನ್ನು ತುಂಬುತ್ತಿದ್ದರು.

**ನಾವೆಲ್ಲರೂ ಒಂದೇ ನಮಗೊಬ್ಬನೇ ತಂದೆ**

ಪೂಜ್ಯಶ್ರೀ ಪ್ರಭು ಮಹಾಸ್ವಾಮಿಗಳು ಜಾತಿ-ಮತ-ಪಂಥ-ಪಂಗಡಗಳೆನ್ನದೆ ಎಲ್ಲರನ್ನೂ ಪ್ರೀತಿಸುತಿದ್ದರು. ಅಂತೆಯೇ ಎಲ್ಲರೂ ಅವರನ್ನು ಗೌರವಿಸುತ್ತಿದ್ದರು. ಎಲ್ಲ

ಸಮಾಜದ ಮುಖಂಡರೊಡನೆ ಅನ್ಯೋನ್ಯವಾಗಿದ್ದರು. ಎಲ್ಲ ಸಮುದಾಯದವರು ಪೂಜ್ಯರನ್ನು ತಮ್ಮ ಕಾರ್ಯಕ್ರಮಗಳಿಗೆ ಆಹ್ವಾನಿಸುತ್ತಿದ್ದರು. ಪೂಜ್ಯರು ಪ್ರೀತಿಯಿಂದಲೇ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ನಾವೆಲ್ಲರೂ ಒಂದೇ ನಮಗೊಬ್ಬನೇ ತಂದೆ ಎಂಬ ವಿಶ್ವಸಂದೇಶ ನೀಡುತ್ತಿದ್ದರು. ಉನ್ನತ ಅಧಿಕಾರಿಗಳಾಗಿದ್ದ ಶ್ರೀ ಎ. ಎಮ್. ಶೇಖ್‌ರೊಡನೆ ಶ್ರೀಗಳಿಗೆ ಉತ್ತಮ ಬಾಂಧವ್ಯವಿತ್ತು. ಅಂತೆಯೇ ಶೇಖ್‌ರವರು ತಮ್ಮ ಸಂಸ್ಥೆಗೆ ಪೂಜ್ಯಶ್ರೀ ಶಿವಬಸವ ಅಜ್ಜನವರನ್ನು ಅಧ್ಯಕ್ಷರನ್ನಾಗಿಸಿ ಗೌರವವನ್ನು ಸಮರ್ಪಿಸಿದರು. ಹೀಗೆ ಪೂಜ್ಯರು ಎಲ್ಲರೊಳಗೊಂದಾಗಿ ಎಲ್ಲರಿಗೂ ಬೇಕಾಗಿ–ಬೆಳಕಾಗಿ ಬದುಕಿದರು.

**ನಾನಲ್ಲ–ನನ್ನದಲ್ಲ–ನನ್ನಿಂದಲ್ಲ**

**'ಮಾಡುವಂತಿರಬೇಕು ಮಾಡದಂತಿರಬೇಕು ಮಾಡುವ ಮಾಟದೊಳಗೆ ತಾನಿಲ್ಲದಂತಿರಬೇಕು ಕೂಡಲಸಂಗಮದೇವರ ನೆನೆವುತ್ತ ನೆನೆವುತ್ತ ನೆನೆಯದಂತಿರಬೇಕು'** ಈ ವಚನದಂತೆಯೇ ಬದುಕಿದವರು ಪೂಜ್ಯಶ್ರೀ ಪ್ರಭು ಮಹಾಸ್ವಾಮಿಗಳವರು. ಪಾದರಸದಂತೆ ನಿರಂತರ ಕ್ರಿಯಾಶೀಲರಾಗಿ ನಾಗನೂರು ರುದ್ರಾಕ್ಷಿಮಠದ ಸೇವಾಕ್ಷೇತ್ರವನ್ನು ವಿಸ್ತರಿಸಿದ ಪೂಜ್ಯರು ತಾವು ಅಂದುಕೊಂಡಿದ್ದನ್ನು ಸಾಧಿಸಿದವರು. ಬೆಂಗಳೂರಿನಂತಹ ವಾಣಿಜ್ಯ ನಗರಿಯಲ್ಲಿ ನಿವೇಶನ ಖರೀದಿಸಿದರು. ಸಾಧ್ಯವಾಗದಂತಹ ಅನೇಕ ಕಾರ್ಯಗಳನ್ನು ಸುಲಭವಾಗಿ ಮುಗಿಸಿಬಿಡುತ್ತಿದ್ದರು. ತಾವೇ ಎಲ್ಲವನ್ನೂ ಮಾಡಿ ಆದರೆ ಯಾವ ಶ್ರೇಯಸ್ಸನ್ನೂ ಅಪೇಕ್ಷಿಸದೇ ಎಲ್ಲವೂ ಗುರುಗಳವರ ಆಶೀರ್ವಾದ ಎಂಬ ವಿನೀತಭಾವದೊಂದಿಗೆ ಬದುಕುತ್ತಿದ್ದರು. ಅವರ ಬದುಕು ಅಷ್ಟೊಂದು ಸರಳ. ಅವರ ಜೀವನ ವಿರಳಾತಿವಿರಳ. ನಿಮ್ಮ ಸಾಧನೆ ಅಪಾರ ಎಂದು ಯಾರಾದರೂ ಹೇಳಿದರೆ ಪೂಜ್ಯರು ಆಡುತ್ತಿದ್ದ ಮಾರ್ಮಿಕ ಮಾತುಗಳೆಂದರೆ ನಾನಲ್ಲ..ನನ್ನದಲ್ಲ...ನನ್ನಿಂದಲ್ಲ. ಎಲ್ಲವೂ ಪೂಜ್ಯಶ್ರೀ ಶಿವಬಸವ ಅಜ್ಜನವರ ಕೃಪಾಶೀರ್ವಾದದಿಂದಲೇ ಸಾಧ್ಯವಾಗಿದೆ ನಾನು ನೆಪಮಾತ್ರ ಎನ್ನುತ್ತಿದ್ದರು. ಅವು ಮಾತುಗಳಲ್ಲ; ಜ್ಯೋತಿರ್ಲಿಂಗಗಳು.

**ದಯಾಮಯ–ಗುರುಕರುಣಾಮಯ**

ಪ್ರಸಾದನಿಲಯ ಮಕ್ಕಳನ್ನು ಅತ್ಯಂತ ಕಾಳಜಿ–ಕಳಕಳಿಯಿಂದ ನೋಡಿಕೊಳ್ಳುತ್ತಿದ್ದರು. ತಾಯಿಯಾಗಿ ಪ್ರೀತಿಯ ಸುಧೆಯನ್ನು ಸುರಿಸುತ್ತಿದ್ದರು. ತಂದೆಯಾಗಿ ಬೇಕು–ಬೇಡಗಳನ್ನು ಪೂರೈಸುತ್ತಿದ್ದರು. ಮನೆಯನ್ನು ನೆನೆದು ಅಳುತ್ತಿದ್ದ ಮಕ್ಕಳ ತಲೆಯ ಮೇಲೆ ಕೈಯಾಡಿಸಿ ಚಾಕಲೇಟುಗಳನ್ನು ನೀಡಿ ಸಂತೈಸುತ್ತಿದ್ದರು. ಶಿಕ್ಷಕರು ಮಕ್ಕಳನ್ನು ಬಡಿದರೆ ಅಂಥವರನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ಪ್ರೀತಿಯಿಂದ ಪಾಠಮಾಡುವಂತೆ ಅಪ್ಪಣೆ ಕೊಡುತ್ತಿದ್ದರು. ಅನಾರೋಗ್ಯದ ಮಕ್ಕಳಿಗೆ ಸಮಯಕ್ಕೆ ಸರಿಯಾಗಿ ವೈದ್ಯರಿಂದ ಚಿಕಿತ್ಸೆ ಕೊಡಿಸುತ್ತಿದ್ದರು. ಪೂಜ್ಯದ್ವಯರ ಕಾರುಣ್ಯವನ್ನು ಉಂಡ ಅನೇಕರು ಪೂಜ್ಯರನ್ನು ನೆನೆದು ಕಣ್ಣಾಲಿಗಳನ್ನು ತುಂಬಿಕೊಳ್ಳುವುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಸಾದನಿಲಯದಲ್ಲಿ ಆಯೋಜಿಸಿ ಮಕ್ಕಳಿಗೆ ಮನರಂಜನೆ ನೀಡುವ ವ್ಯವಸ್ಥೆ ಮಾಡುತ್ತಿದ್ದರು. ಹೀಗೆ ಪೂಜ್ಯರು ದಯಾಮಯಿಯಾಗಿದ್ದರು; ಕರುಣಾಮಯಿಯಾಗಿದ್ದರು.

**ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ**

೧೯೮೭ರ ಸಂದರ್ಭದಲ್ಲಿ ಶ್ರೀ ಶಿವಬಸವ ಮಹಾಸ್ವಾಮಿಗಳವರ ವರ್ಧಂತಿ ಉತ್ಸವವು ಅತ್ಯಂತ ವಿಧಾಯಕವಾಗಿ ನೆರವೇರಲು ಶ್ರೀ ಪ್ರಭುಸ್ವಾಮಿಗಳು ಎಲ್ಲ ವ್ಯವಸ್ಥೆಯನ್ನು ಮಾಡಿಕೊಂಡಿದ್ದರು. ಜನಜಾಗೃತಿ ಪಾದಯಾತ್ರೆಯಲ್ಲಿ ಪಾದರಸದಂತೆ ಓಡಾಡಿಕೊಂಡಿದ್ದರು. ಇದ್ದಕ್ಕಿದ್ದಂತೆ ಲಘು ಹೃದಯಾಘಾತವಾಯಿತು. ಕೂಡಲೇ ಅವರನ್ನು ಮೆಟಗುಡ್ಡ ಆಸ್ಪತ್ರೆಗೆ ಸೇರಿಸಲಾಯಿತು. ಆರೋಗ್ಯ ಸ್ವಲ್ಪ ಸುಧಾರಿಸಿದಂತೆ ಕಂಡು ಬಂತು. ಎರಡೇ ದಿನದಲ್ಲಿ ಮತ್ತೆ ಹೃದಯಾಘಾತವಾಯಿತು. ಅತ್ಯಂತ ಲವಲವಿಕೆಯಿಂದ ಕಾರ್ಯಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿದ್ದ ಶ್ರೀ ಪ್ರಭುಸ್ವಾಮಿಗಳು ಅಂದು ಮೆಟಗುಡ್ಡ ಆಸ್ಪತ್ರೆಯಲ್ಲಿ ನಿತ್ರಾಣರಾಗಿ ಮಲಗಿದ್ದನ್ನು ಕಂಡವರೆಲ್ಲ ಕಣ್ಣೀರು ಸುರಿಸಿದರು, ಕರುಳು ಹಿಸುಕಿದ ಅನುಭವವಾಯಿತು. ಚಿಕಿತ್ಸೆ ಫಲಿಸದೇ ಪೂಜ್ಯಶ್ರೀ ಪ್ರಭುಮಹಾಸ್ವಾಮಿಗಳು ೯–೧೨–೧೯೮೭ ರಂದು ಲಿಂಗದಲ್ಲಿ ಲೀನರಾದರು. ಸದ್ಭಕ್ತರೆಲ್ಲ ಶೋಕ ಸಾಗರದಲ್ಲಿ ಮುಳುಗಿದರು. ೯೯ ವರ್ಷ ವಯಸ್ಸಿನ ಪೂಜ್ಯಶ್ರೀ ಶಿವಬಸವ ಮಹಾಸ್ವಾಮಿಗಳವರು ಬೆಟ್ಟದಷ್ಟು ನೋವನ್ನು ನುಂಗಲು ಪ್ರಯತ್ನಿಸುತ್ತಿದ್ದರು. ತಮ್ಮ ಕಣ್ಣ ಮುಂದೆಯೇ ಆಡಿ ಬೆಳೆದ ಪೂಜ್ಯ ಪ್ರಭು ಸ್ವಾಮಿಗಳವರ ಲಿಂಗ ಶರೀರವನ್ನು ನೋಡಿ ಹಿರಿಯ ಜೀವ ಮಮ್ಮಲ ಮರುಗಿತು. ನಿಷ್ಪತ್ತಿಯೆಂಬ ಹಣ್ಣು ತೊಟ್ಟು ಕಳಚಿ ಬೀಳುವಲ್ಲಿ ಕೂಡಲ ಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ.

ಪೂಜ್ಯಶ್ರೀ ಪ್ರಭು ಮಹಾಸ್ವಾಮಿಗಳವರು ಶಿವಬಸವ ನಗರದ ವಿಶಾಲ ಪ್ರದೇಶದಲ್ಲಿ ಕಲ್ಯಾಣಮಂಟಪವನ್ನು ಕಟ್ಟಲು ಪ್ರಾರಂಭಿಸಿದ್ದರು. ಕಟ್ಟಡವು ಪೂರ್ಣಗೊಂಡಿರಲಿಲ್ಲ. ಆ ಕಟ್ಟಡವನ್ನು ಸುಸಜ್ಜಿತವಾಗಿ ಪೂರ್ಣಗೊಳಿಸಿ, ಪೂಜ್ಯಶ್ರೀ ಶಿವಬಸವ ಅಜ್ಜನವರ ಅಪೇಕ್ಷೆಯಂತೆ ಆ ಕಟ್ಟಡಕ್ಕೆ ಪೂಜ್ಯಶ್ರೀ **'ಪ್ರಭುದೇವ ಸಭಾಗೃಹ'** ಎಂಬ ನಾಮಕರಣ ಮಾಡಿದವರು ಪೂಜ್ಯಶ್ರೀ ಡಾ. ಸಿದ್ಧರಾಮ ಅಪ್ಪಗಳವರು. ಈ ಮೂಲಕ ಪೂಜ್ಯಶ್ರೀ ಪ್ರಭುಮಹಾಸ್ವಾಮಿಗಳವರ ಹೆಸರು ಚಿರಸ್ಥಾಯಿಯಾಗಿ ಉಳಿಸಿದರು.

### ಎಮ್ಮವರಿಗೆ ಸಾವಿಲ್ಲ–ಎಮ್ಮವರು ಸಾವನರಿಯರು

ಪೂಜ್ಯಶ್ರೀ ಪ್ರಭು ಮಹಾಸ್ವಾಮಿಗಳವರು ಅಪ್ರತಿಮ ಕರ್ಮಯೋಗಿಗಳು. ಪೂಜ್ಯನೀಯ ಗುರುಗಳಾದ ಶ್ರೀ ಶಿವಬಸವ ಮಹಾಸ್ವಾಮಿಗಳವರ ಮಾರ್ಗದರ್ಶನದಲ್ಲಿ ಮುನ್ನಡೆದು ನಾಗನೂರು ಶ್ರೀ ರುದ್ರಾಕ್ಷಿಮಠವನ್ನು ವಿಸ್ತಾರವಾಗಿ ಬೆಳೆಸಿದವರು. ಹಗಲು ರಾತ್ರಿಗಳೆನ್ನದೇ ದುಡಿದು ತಮ್ಮ ಬದುಕನ್ನು ಸಾರ್ಥಕಗೊಳಿಸಿಕೊಂಡರು. ಅವರು ಬದುಕಿದ್ದು ಕೇವಲ ೫೮ ವರ್ಷ. ಸಾಧಿಸಿದ್ದು ಅಪಾರ; ಅಗಾಧ. ಅಂದು ಅವರು ಕಟ್ಟಿ ಬೆಳೆಸಿದ ಅನೇಕ ಸಂಸ್ಥೆಗಳು ಇಂದು ಹೆಮ್ಮರವಾಗಿ ಬೆಳೆದು ನಿಂತಿವೆ. ಸದ್ಯದ ಪೀಠಾಧಿಪತಿಗಳಾದ ಬಾಳಬೆಳಗು ಶ್ರೀಮನ್ನಿರಂಜನ ಜಗದ್ಗುರು ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳವರ ದಿವ್ಯಸಾನಿಧ್ಯದಲ್ಲಿ ಅಂದು ತೊರೆಯಾಗಿ ಹುಟ್ಟಿದ ಸಂಸ್ಥೆಗಳು ಇಂದು ಹೆದ್ದೊರೆಯಾಗಿ ಹರಿಯುತ್ತಿವೆ. ನಾಗನೂರು ಶ್ರೀ ರುದ್ರಾಕ್ಷಿಮಠದ ಪುಣ್ಯಪರಂಪರೆಯಲ್ಲಿ ಅಚ್ಚಳಿಯದೇ ಉಳಿಯುವ ಹೆಸರು ಪೂಜ್ಯಶ್ರೀ ಲಿಂ. ಪ್ರಭು ಮಹಾಸ್ವಾಮಿಗಳವರದು. ವಿಶ್ವಗುರು ಬಸವಣ್ಣನವರ ವಚನದಂತೆ ಪೂಜ್ಯರಿಗೆ ಸಾವಿಲ್ಲ; ಅವರು ಸಾವನರಿಯರು.

**ಎಮ್ಮವರಿಗೆ ಸಾವಿಲ್ಲ, ಎಮ್ಮವರು ಸಾವನರಿಯರು**
**ಸಾವೆಂಬುದು ಸಯವಲ್ಲ**
**ಲಿಂಗದಲ್ಲಿ ಉದಯವಾದ ನಿಜೈಕ್ಯರಿಗೆ**
**ಆ ಲಿಂಗದಲ್ಲಿಯಲ್ಲದೆ ಬೇರೆ ಮತ್ತೊಂದೆಡೆಯಿಲ್ಲ**
**ಕೂಡಲಸಂಗಮದೇವರ ಶರಣ ಸೊಡ್ಡಳ ಬಾಚರಸರು**
**ನಿಜಲಿಂಗದ ಒಡಲೊಳಗೆ ಬಗಿದು ಹೊಕ್ಕಡೆ,**
**ಉಪಮಿಸಬಲ್ಲವರ ಕಾಣೆನು.**

■■

### ಲಿಂ. ಪ್ರಭು ಮಹಾಸ್ವಾಮಿಗಳು

ನಾಗನೂರು ರುದ್ರಾಕ್ಷಿಮಠದ ಎಂಟನೆಯ ಪೀಠಾಧಿಪತಿಗಳಾದ ಪೂಜ್ಯಶ್ರೀ ಪ್ರಭು ಸ್ವಾಮಿಗಳವರು ದಕ್ಷ, ಕ್ರಿಯಾಶೀಲ ಮತ್ತು ಸಾಮಾಜಿಕ ಕಳಕಳಿಯುಳ್ಳವರು. ನೆರೆಯ ಮಹಾರಾಷ್ಟ್ರದ ಕೊಲ್ಲಾಪುರ ಜಿಲ್ಲೆಯ ಚಂದಗಡ ತಾಲೂಕಿನ ಕೋವಾಡ ಗ್ರಾಮದಲ್ಲಿ ೧೫ ಸಪ್ಟಂಬರ್ ೧೯೩೦ ರಂದು ಜನಿಸಿದ ಶ್ರೀಗಳು ಬೆಳಗಾವಿ, ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ವಿದ್ಯಾಧ್ಯಯನ ಮಾಡಿ ಸಂಸ್ಕೃತ, ಇಂಗ್ಲಿಷ್ ಭಾಷೆಗಳಲ್ಲಿ ಜ್ಞಾನ ಸಂಪಾದಿಸಿದವರು; ಸಂಸ್ಕೃತದಲ್ಲಿ ವಿದ್ವಾನ್ ಪದವಿ ವಿಭೂಷಿತರು.

ಗುರುಗಳಾದ ಲಿಂ. ಡಾ. ಶಿವಬಸವ ಮಹಾಸ್ವಾಮಿಗಳವರ ಸಮರ್ಥ ಉತ್ತರಾಧಿಕಾರಿಗಳಾಗಿ ಸತತ ಮೂರು ದಶಕಗಳ ಕಾಲ ಪೂಜ್ಯ ಶ್ರೀಗಳು ಸ್ಥಾಪಿಸಿದ ಪ್ರಸಾದನಿಲಯ ಹಾಗು ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿಗೆ ಹಗಲಿರುಳೂ ಶ್ರಮಿಸಿದವರು; ಸಂಸ್ಥೆಗಳನ್ನು ಆರ್ಥಿಕವಾಗಿ ಸಮೃದ್ಧಗೊಳಿಸಿದವರು. ಪ್ರಾಥಮಿಕ, ಪದವಿಪೂರ್ವ ಹಂತದ ಶಾಲೆ ಕಾಲೇಜುಗಳಲ್ಲದೆ ಕೈಗಾರಿಕಾ ತರಬೇತಿ ಕೇಂದ್ರ ಹಾಗು ಪಾಲಿಟೆಕ್ನಿಕ್‌ಗಳಂತಹ ವೃತ್ತಿಪರ ಕಾಲೇಜುಗಳನ್ನು ಪ್ರಾರಂಭಿಸಿ ಮಕ್ಕಳಿಗೆ ಅನ್ನದಾಸೋಹದ ಜೊತೆಗೆ ಜ್ಞಾನದಾಸೋಹದ ಕೈಂಕರ್ಯವನ್ನು ಕೈಗೊಂಡರು. ನಾಗನೂರು ಮಠದ ಕೃಷಿಭೂಮಿಯನ್ನು ಅಭಿವೃದ್ಧಿಪಡಿಸಿ ರೈತರಿಗೂ ಮಾದರಿಯಾದವರು.

೧೯೭೬ ರಲ್ಲಿ ವಿಧ್ಯುಕ್ತವಾಗಿ ಪಟ್ಟಾಭಿಷಿಕ್ತರಾದ ಶ್ರೀಗಳು ಪ್ರಭುದೇವರೆಂದೇ ನಾಡಿನಲ್ಲೆಲ್ಲ ಚಿರಪರಿಚಿತರು. ಅವಿರತ ಪರಿಶ್ರಮಿಗಳಾದ ಅವರು ಚೇತೋಹಾರಿಯಾದ ವ್ಯಕ್ತಿತ್ವವುಳ್ಳವರು. ಸ್ವತಃ ಎಣ್ಣೆ ಬತ್ತಿಯಾಗಿ ಉರಿದು ಸಮಾಜಕ್ಕೆ ಬೆಳಕು ಕೊಟ್ಟವರು. ಪಾದರಸದಂತೆ ಚುರುಕಾಗಿ ಕಾರ್ಯ ನಿರ್ವಹಿಸುತ್ತಿದ್ದ ಪ್ರಭುದೇವರು ಇನ್ನೂ ಮಹತ್ತರವಾದುದನ್ನು ಸಾಧಿಸಬೇಕೆನ್ನುತ್ತಿರುವಾಗಲೇ ದಿನಾಂಕ ೯–೧೨–೧೯೮೭ ರಂದು ಲಿಂಗೈಕ್ಯರಾಗಿ ಮಹಾಬೆಳಗಿನಲ್ಲಿ ಒಂದಾದರು.

# ಶ್ರೀ ಸಿದ್ಧರಾಮ ಸ್ವಾಮಿಗಳು

● ಡಾ. ರಾಮಕೃಷ್ಣ ಮರಾಠೆ

ಪೂಜ್ಯ ಶ್ರೀ ಡಾ. ಶಿವಬಸವ ಮಹಾಸ್ವಾಮಿಗಳವರ ಸಮರ್ಥ ಉತ್ತರಾಧಿಕಾರಿಯಾಗಿ ಶ್ರೀ ಮ.ನಿ.ಪ್ರ. ಸಿದ್ಧರಾಮ ಸ್ವಾಮಿಗಳು ಎಂಬ ನಾಮಾಭಿಧಾನದಿಂದ ನಾಡ ಜನತೆಗೆ ಆಪ್ತರಾದ ಪೂಜ್ಯರು ಬಾಗಲಕೋಟ ಜಿಲ್ಲೆಯ ಮುಧೋಳ ತಾಲೂಕಿನ ಹಲಗಲಿಯವರು. ಹಲಗಲಿ ಗ್ರಾಮದ ಹಿರೇಮಠದ ರುದ್ರಯ್ಯನವರು ಮತ್ತು ಶಾಂತಾದೇವಿ ಶ್ರೀಗಳ ತಂದೆ ತಾಯಿಗಳು. ತಾಯಿ ತವರು ಮನೆ ಬಾಗಲಕೋಟೆಯಲ್ಲಿ ದಿ. ೧೨–೧೨–೧೯೫೮ ರಂದು ಶ್ರೀಗಳ ಜನನವಾಯಿತು. ಬಾಲ್ಯದ ಹೆಸರು ಕರವೀರಯ್ಯ ಆದರೆ 'ವೀರಯ್ಯ' ಎಂದು ಕರೆಯುತ್ತಿದ್ದರು. ತಂದೆ ರುದ್ರಯ್ಯನವರು ಬೀಳಗಿ ಕಲ್ಮಠದ ಪೂಜ್ಯ ಷ.ಬ್ರ. ಗುರುಪಾದ ಶಿವಾಚಾರ್ಯರ ಸೇವೆಯಲ್ಲಿದ್ದರು. ಹಲಗಲಿಯ ಸಂಬಂಧ ರುದ್ರಯ್ಯನವರಿಗೆ ಅಷ್ಟಕಷ್ಟೇ ಇತ್ತು. ಹೀಗಾಗಿ ಶ್ರೀಗಳು ಬಾಗಲಕೋಟೆಯ ತಾಯಿಯ ಮನೆಯಲ್ಲಿಯೇ ಇದ್ದರು. ಪೂಜ್ಯರ ನಾಲ್ಕನೆಯ ವಯಸ್ಸಿನಲ್ಲಿ ತಾಯಿ ಶಾಂತಾದೇವಿಯವರು ಲಿಂಗೈಕ್ಯರಾದರು. ಅನಿವಾರ್ಯವಾಗಿ ತಮ್ಮ ಮಕ್ಕಳೊಂದಿಗೆ ರುದ್ರಯ್ಯನವರು ಹಲಗಲಿ ಗ್ರಾಮಕ್ಕೆ ಬಂದರು. ಬಡತನ ಹಾಸಿ ಹೊದ್ದುಕೊಂಡು ಬಿದ್ದಿತು. ಮೂವರು ಮಕ್ಕಳನ್ನು ಆರೈಕೆ ಮಾಡುವುದು ಹೇಗೆ ಎಂಬ ಚಿಂತೆ ರುದ್ರಯ್ಯನವರನ್ನು ಕಾಡಿತು. ಜೀವನದಲ್ಲಿ ತುಂಬ ಜಿಗುಪ್ಸೆಗೊಂಡ ರುದ್ರಯ್ಯನವರು ಚಿಕ್ಕಮಕ್ಕಳನ್ನು ದರದರನೆ ಎಳೆಯುತ್ತ ತುಂಬಿದ ಬಾವಿಯತ್ತ ಹೊರಟರು. ಅದೇ ಸಮಯಕ್ಕೆ ಹಲಗಲಿಯ ಹಡಪದ ಗಂಗಮ್ಮ ಎಂಬ ಸಾತ್ವಿಕ ಮಹಿಳೆ ರುದ್ರಯ್ಯನವರು ಯಾವ ಕಡೆಗೆ ಹೊರಟಿದ್ದಾರೆಂದು ಕೇಳಿದಳು. ಬಡತನದ ಬೇಗೆಗೆ ಅಂಜಿ ಮಕ್ಕಳೊಂದಿಗೆ ಆತ್ಮಹತ್ಯೆಗೆ ಹೊರಟಿರುವ ವಿಷಯ ಕೇಳಿ ಗಂಗಮ್ಮ ಕಂಗಾಲಾದಳು. ತಕ್ಷಣ ಇಬ್ಬರೂ ಮಕ್ಕಳನ್ನು ತನ್ನತ್ತ ಎಳೆದುಕೊಂಡಳು 'ನಾನು ಜೋಪಾನ ಮಾಡುತ್ತೇನೆ' ಎಂದು ಗಂಗಮ್ಮ ಇಬ್ಬರೂ ಮಕ್ಕಳನ್ನು ತನ್ನ ಚಿಕ್ಕ ಗುಡಿಸಲಿಗೆ ಕರೆದು ತಂದಳು. ಈ ಇಬ್ಬರೂ ಮಕ್ಕಳಲ್ಲಿ ಹಿರಿಯರಾದವರೇ ನಮ್ಮ ಶ್ರೀ ಸಿದ್ಧರಾಮ ಸ್ವಾಮಿಗಳು.

ಗಂಗವ್ವ ಬೀಳಗಿ ಕಲ್ಮಠದ ಗುರುಪಾದ ಶಿವಾಚಾರ್ಯರಿಂದ 'ದೀಕ್ಷೆ' ಪಡೆದುಕೊಂಡಿದ್ದಳು. ಹೀಗಾಗಿ ಲಿಂಗಪೂಜಾ ನಿಷ್ಠಳಾಗಿದ್ದ ಅವಳು ಶೀಲಾಚಾರಣೆಯಲ್ಲಿ ಕಟ್ಟು ನಿಟ್ಟಿನವಳಾಗಿದ್ದಳು. ಜನ್ಮಕೊಟ್ಟ ತಾಯಿಯ ನೆನಪು ಆಗದ ಹಾಗೆ ಗಂಗಮ್ಮ ಇಬ್ಬರೂ ಮಕ್ಕಳನ್ನು ಪೋಷಿಸಿದಳು. ಗಂಗಮ್ಮನ ಬದುಕಿನ ಸಂಪೂರ್ಣ ವಿವರಗಳನ್ನು ಪೂಜ್ಯ ಶ್ರೀಗಳೇ ತುಂಬ ಆಪ್ತವಾಗಿ ಹೀಗೆ ವಿವರಿಸುತ್ತಾರೆ :

'ಹುಟ್ಟು ಆಕಸ್ಮಿಕ, ಸಾವು ನಿಶ್ಚಿತ' ಎಂಬ ಮಾತು ಬಹು ಪ್ರಚಲಿತವಾಗಿದ್ದರೂ ಹುಟ್ಟು ಸಾವುಗಳ ಮಧ್ಯದಲ್ಲಿರುವ ಬದುಕು ಅಷ್ಟೇ ಅರ್ಥಪೂರ್ಣವಾಗಿರಬೇಕು ಎನ್ನುವಲ್ಲಿ ಎರಡು ಮಾತಿಲ್ಲ. ಬದುಕು ಅರ್ಥವಂತಿಕೆಯನ್ನು ಪಡೆಯುವಲ್ಲಿ ಬಾಲ್ಯದ ಸಂಸ್ಕಾರ ಹಾಗು ಪರಿಸರಗಳ ಪಾತ್ರ ಗಮನಾರ್ಹ–ವಾದುದು. ಅವುಗಳೇ ಆ ವ್ಯಕ್ತಿಯನ್ನು ರೂಪಿಸುತ್ತವೆ. ಇಂದು ನಾನೇನಿದ್ದೇನೆಂಬುದು ನಾನು ಬಾಲ್ಯದಲ್ಲಿ ಪಡೆದ ಸಂಸ್ಕಾರ ಹಾಗು ಪರಿಸರದ ಫಲ ಎಂದರೆ ಅತಿಶಯೋಕ್ತಿಯಲ್ಲ.

ನಾನು ಹುಟ್ಟಿರುವುದು ಬಾಗಲಕೋಟದಲ್ಲಿಯಾದರೂ ಬಾಲ್ಯವನ್ನು ಕಳೆದದ್ದು ಮುಧೋಳ ತಾಲೂಕಿನ 'ಹಲಗಲಿ' ಗ್ರಾಮದಲ್ಲಿ. ಅಷ್ಟಾಗಿ ನಾಗರಿಕ ಸೌಕರ್ಯಗಳನ್ನು ಹೊಂದಿರದ ಈ ಗ್ರಾಮ ಐತಿಹಾಸಿಕವಾಗಿ ಖ್ಯಾತಿಯನ್ನು ಪಡೆದಿರುವುದೊಂದು ವಿಶೇಷ. ಇಲ್ಲಿಯ ಬಹುಸಂಖ್ಯಾತ ಬೇಡಜನಾಂಗದವರು ಬ್ರಿಟಿಷ ಆಳರಸರ ವಿರುದ್ಧ ಸ್ವಾಭಿಮಾನದಿಂದ ಹೋರಾಡಿದ ಕಥೆಯಂತೂ ಇತಿಹಾಸದಲ್ಲಿ ರೋಮಾಂಚನವನ್ನುಂಟು ಮಾಡುವಂತಹುದು. ಈ ಗ್ರಾಮಕ್ಕೆ ನಾನು ಬಂದಾಗ ನನಗೆ ಸರಿಯಾಗಿ ಐದು ವರ್ಷ. ಅಷ್ಟೊತ್ತಿಗಾಗಲೇ ಹೆತ್ತ ತಾಯಿಯನ್ನು ಕಳೆದುಕೊಂಡು ಪರದೇಶಿ

ಶ್ರೀಕಲ್ಪ ಪ್ಲಾಟ ನಂ. ೨೦ ಶಾಂತಿನಿಕೇತನ ಟೀಚರ್ಸ್ ಕಾಲನಿ ಹಿಂಡಲಗಾ ಗಣಪತಿ ಗುಡಿ ಹತ್ತಿರ ದಾಜೀಬಾ ದೇಸಾಯಿ ರಸ್ತೆ ಬೆಳಗಾವಿ

ಎಂಬ ಪಟ್ಟ ಪಡೆದುಕೊಂಡಿದ್ದೆ. ನನ್ನ ಸಹೋದರ ಆಗ ನನಗಿಂತಲೂ ಎರಡು ವರ್ಷ ಚಿಕ್ಕವ. ಊರಲ್ಲಿ ಹಿರಿಯಮಠದವರೆಂಬ ಅಗ್ಗಳಿಕೆ ನಮ್ಮದು. ಮಡಿ ಹುಡಿ ಮುಂತಾದ ಹತ್ತು ಹಲವು ಅರ್ಥಹೀನ ಆಚರಣೆಗಳಿಂದ ಕೂಡಿದ ನಮ್ಮ ಮನೆಯಲ್ಲಿ ಎಲ್ಲವೂ ಸರಿಯಾಗಿರಲಿಲ್ಲ. ಅಜ್ಜ, ಅಜ್ಜಿ, ಚಿಕ್ಕಪ್ಪ, ಸೋದರತ್ತೆಯರೆಲ್ಲರೂ ಸೇರಿ ನಿತ್ಯವೂ ನಮ್ಮ ತಂದೆಯೊಂದಿಗೆ ಜಗಳ ಕಾಯುತ್ತಿದ್ದರು. ಇಂಥ ಪ್ರಕ್ಷುಬ್ಧ ವಾತಾವರಣದಲ್ಲಿ ಚಿಕ್ಕವರಾದ ನಾವು ಹೊತ್ತಿಗೆ ಸರಿಯಾಗಿ ಅನ್ನ-ನೀರುಗಳನ್ನು ಕಾಣುವುದೂ ದುಸ್ತರವಾಗುತ್ತಿತ್ತು. ಹಡೆದ ತಾಯಿಯೂ ಮಾನಸಿಕ ನೋವಿನಿಂದ ನರಳಿ ನರಳಿ ಸತ್ತು ಹೋದಳು. ನಮ್ಮ ತಂದೆಗಂತೂ ಜೀವನವೇ ಒಂದು ಹೊರೆಯಾಗಿ ಸದಾ ಆತ್ಮಹತ್ಯೆಯ ಯೋಚನೆಯಲ್ಲಿ ಮುಳುಗಿರುತ್ತಿದ್ದನು. ಹೀಗೊಂದು ದಿನ ನಮ್ಮಿಬ್ಬರನ್ನೂ ಹಾಳುಭಾವಿಗೆಸೆದು ತಾನೂ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ದರದರ ಎಳೆದುಕೊಂಡು ಹೋಗುತ್ತಿರುವ ಸಂದರ್ಭದಲ್ಲಿಯೇ ದಿಢೀರನೇ ಪ್ರತ್ಯಕ್ಷವಾಗಿ ಈ ಹೇಡಿತನದ ಕೃತ್ಯವನ್ನು ಖಂಡಿಸಿ ನಮ್ಮೆಲ್ಲರ ಜೀವ ಉಳಿಸಿದವಳೇ ನಮ್ಮ ಪಡೆದವ್ವ ಗಂಗವ್ವ. ಊರವರಿಗೆಲ್ಲ ಅಚ್ಚು ಮೆಚ್ಚಿನ ಗಂಗವ್ವಮ್ಮ.

ಗಂಗವ್ವ ಆ ಊರಿನ ಕ್ಷೌರಿಕ ಮನೆತನದವಳು. ಮಲ್ಲಪ್ಪ ಹಡಪದ ಎಂಬುದು ಅವಳ ಗಂಡನ ಹೆಸರು. ಚಿಕ್ಕ ವಯಸ್ಸಿನಲ್ಲಿಯೇ ಗಂಡನನ್ನು ಕಳೆದುಕೊಂಡು ವಿಧವೆಯಾಗಿದ್ದಳು. ಬೀಳಗಿ ಹಿರೇಮಠದ ಶ್ರೀ ಷ. ಬ್ರ. ಗುರುಪಾದ ಶಿವಾಚಾರ್ಯರಿಂದ ಗುರುದೀಕ್ಷೆ ಪಡೆದು ತ್ರಿಕಾಲ ಲಿಂಗಪೂಜಾ ನಿರತಳಾಗಿ, ಕಾಯಕಶೀಲಳಾಗಿ ಬದುಕನ್ನು ಸಾಗಿಸುತ್ತಿದ್ದಳು. ಅವಳ ಪಾಲಿಗೆ ಇದ್ದುದು ಗಂಡನ ಎರಡು ಎಕರೆ ಮಸಾರಿ ಜಮೀನು, ಬಿದರಿನ ತಟ್ಟಿಯ ಬಾಗಿಲು ಹೊಂದಿದ ಅಡುಗೆಯ ಮನೆ ಮತ್ತು ಪಡಸಾಲೆಯುಳ್ಳ ಮನೆ. ಆಕೆಯ ಬದುಕಿನ ಅಪೇಕ್ಷೆ, ಅಗತ್ಯಗಳು ತೀರ ಕಡಿಮೆ ಇದ್ದ ಕಾರಣ ಇದ್ದುದರಲ್ಲಿಯೇ ತೃಪ್ತಿಯಿಂದ ಜೀವನ ಸಾಗಿಸುತ್ತಿದ್ದಳು. ಮಳೆಗಾಲದಲ್ಲಿ ತನ್ನ ಮಸಾರಿಭೂಮಿಯಲ್ಲಿ ಕಾಯಕ ಮಾಡಿಕೊಂಡಿದ್ದರೆ, ಬೇಸಗೆಯಲ್ಲಿ ಬೇರೆಯವರ ಹೊಲದಲ್ಲಿ ಬೆಳೆದ ಹತ್ತಿ ಬಿಡಿಸಿಕೊಂಡು ಬರುವ ಕಾಯಕ ಮಾಡುತ್ತಿದ್ದಳು.

ಬಡತನದ ಬೇಗೆಯಲ್ಲಿ ಬೆಂದು ಬಸವಳಿದ ನಾವಿಬ್ಬರೂ ಗಂಗವ್ವಮ್ಮನ ಮಡಿಲು ಸೇರಿದಾಗ ಅವಳ ವಯಸ್ಸು ಏನಿಲ್ಲವೆಂದರೂ ಸುಮಾರು ಅರವತ್ತು, ಅಥವಾ ಅರವತ್ತೈದು. ಒಳ್ಳೆಯ ಆರೋಗ್ಯ, ಗಟ್ಟಿಮುಟ್ಟಾದ ಶರೀರ ಹೊಂದಿದ ಅವಳು ಅತ್ಯಂತ ಆಚಾರಶೀಲಳಾಗಿದ್ದಳು. ಗುರುದೀಕ್ಷೆ ಹೊಂದಿ ಮಡಿ-ಮೈಲಿಗೆ ತುಂಬ ಪಾಲಿಸುತ್ತಿದ್ದ ಕಾರಣ ಅವಳ ಸಮಾಜದ ಯಾರೂ ಅವಳ ಮನೆಯ ಪಡಸಾಲೆಯ ಕಟ್ಟೆಯನ್ನೂ ಏರುವಂತಿರಲಿಲ್ಲ. ಒಮ್ಮೊಮ್ಮೆ ನಮಗೂ ಅದೇ ಪರಿಸ್ಥಿತಿ ಉಂಟಾಗುತ್ತಿತ್ತು. ನಾಯಿ-ನರಿಗಳಂತಹ ಕ್ಷುದ್ರ ಪ್ರಾಣಿಗಳೂ ಅವಳನ್ನು ಮುಟ್ಟುವಂತಿರಲಿಲ್ಲ. ಹಾಗೆ ಮುಟ್ಟಿದರೆ ಮತ್ತೆ ತಪ್ಪದೇ ಸ್ನಾನ-ಪೂಜಾದಿಗಳನ್ನು ಮುಗಿಸಿಯೇ ಮುಂದಿನ ಕೆಲಸಕ್ಕೆ ಅಣಿಯಾಗುತ್ತಿದ್ದಳು. ದಿನನಿತ್ಯ ಹತ್ತಿ ಬಿಡಿಸಿಕೊಂಡು ಬಂದನಂತರ ತನ್ನ ಪಾಲಿಗೆ ಬಂದ ಹತ್ತಿಯನ್ನು ಅರಗಲ್ಲಿನ ಮೇಲೆ ಉಜ್ಜಿ, ಹತ್ತಿಕಾಳುಗಳನ್ನು ಬೇರ್ಪಡಿಸಿ ಅರಳೆಯನ್ನೂ, ಅರಳೆಯಿಂದ ಹಂಜಿಯನ್ನು ಸಿದ್ಧಗೊಳಿಸುತ್ತಿದ್ದಳು. ಚರಕ ರಾಟಿಯಿಂದ ನಿತ್ಯವೂ ನೂಲು ತೆಗೆದು ಲಡಿಗಳನ್ನಾಗಿಸಿ ಪ್ರತಿ ರವಿವಾರ ಪಕ್ಕದ ಗಲಗಲಿ ಗ್ರಾಮದ ಸಂತೆಗೆ ಮಾರಲು ಕಳಿಸುತ್ತಿದ್ದಳು. ಅದರಿಂದ ಬಂದ ಹಣದಿಂದ ಎಣ್ಣೆ ಉಪ್ಪು ಇತ್ಯಾದಿ ದಿನನಿತ್ಯದ ಆವಶ್ಯಕ ವಸ್ತುಗಳನ್ನು ಖರೀದಿಸುತ್ತಿದ್ದಳು. ಇಷ್ಟಾಗಿಯೂ ಉಳಿದ ನೂಲಿನ ಲಡಿಗಳಿಂದ ಬಟ್ಟೆ ಬರೆ, ಜಮಖಾನ ಮತ್ತು ಚಾದರಗಳನ್ನು ತಯಾರು ಮಾಡಿಸಿ ಗುರುದೀಕ್ಷೆ ನೀಡಿದ ಗುರುಗಳಿಗೆ ಕಾಣಿಕೆಯಾಗಿ ಪ್ರತಿವರ್ಷವೂ ಸಮರ್ಪಿಸುತ್ತಿದ್ದಳು.

ಗಂಗವ್ವಮ್ಮ ತುಂಬ ಅಧ್ಯಾತ್ಮಜೀವಿಯಾಗಿದ್ದಳು. ಆದರೆ ಓದು ಬರಹ ಬರುತ್ತಿರಲಿಲ್ಲ. ಅವಳೆಂದೂ ಶಾಲೆಗೆ ಹೋಗಿ ಶಿಕ್ಷಣ ಪಡೆದವಳಲ್ಲ. ಅವಳು ಚಿಕ್ಕವಳಿರುವಾಗ ಊರಲ್ಲಿ ಶಾಲೆಯೇ ಇರಲಿಲ್ಲ. ಒಬ್ಬಿಬ್ಬರು ಬ್ರಾಹ್ಮಣ ಪಂಡಿತರು ಮರಾಠಿಯನ್ನು ಮಾತ್ರ ಕಲಿಸುತ್ತಿದ್ದರಂತೆ. ಓದು ಬರಹ ಬಾರದಿದ್ದರೂ ನಿತ್ಯವೂ ಆಕೆಯ ಮನೆಯಲ್ಲಿ ಅಧ್ಯಾತ್ಮಗೋಷ್ಠಿ ನಡೆಯಲೇಬೇಕು. ಶ್ರೀಮತಿ ಮಹಾಂತವ್ವಮ್ಮ ಹಲಗಲಿಮಠ ಎಂಬ ಓದು ಬರಹ ಕಲಿತ ಸಮಾನ ಮನಸ್ಕ ಅಜ್ಜಿಯೊಬ್ಬರು ತಪ್ಪದೇ ಪ್ರತಿದಿನ ಸಾಯಂಕಾಲ ಈಕೆಯ ಮನೆಗೆ ಬರುತ್ತಿದ್ದರು. ಆಗ ಧಾರವಾಡ ಮುರುಘಾಮಠ ದಿಂದ ಪ್ರಕಟವಾಗುತ್ತಿದ್ದ ಸಾವಧಾನ ಪತ್ರಿಕೆ ಮತ್ತಿತರ ಗ್ರಂಥಗಳನ್ನು ತಂದು ಅವರು ನಿಧಾನವಾಗಿ ಗಟ್ಟಿಯಾಗಿ ಓದುತ್ತಿದ್ದರು. ನಮ್ಮ ಗಂಗವ್ವಮ್ಮ ರಾಟಿಯಿಂದ ನೂಲು ತೆಗೆಯುತ್ತ ಧಾರ್ಮಿಕ ವಿಷಯಗಳನ್ನು ಶ್ರದ್ಧೆಯಿಂದ ಕೇಳಿ ಅರಿತುಕೊಳ್ಳುತ್ತಿದ್ದಳು. ಒಮ್ಮೊಮ್ಮೆ ಚಿಕ್ಕವರಾದ ನಮಗೂ ಆ ಗ್ರಂಥಗಳನ್ನು ಓದುವ ಅವಕಾಶ ಲಭಿಸುತ್ತಿತ್ತು. ಹೀಗೆ ಅನಿರೀಕ್ಷಿತವಾಗಿ ಒಳ್ಳೆಯ ಸಂಸ್ಕಾರ ಹೊಂದಿದ ಅಜ್ಜಿಯ ಮನೆಯಲ್ಲಿ ನಾನು ಮತ್ತು ನನ್ನ ಸಹೋದರರಿಬ್ಬರೂ ಬೆಳೆಯುವ ಸುಯೋಗ ಒದಗಿಬಂದಿತ್ತು.

ಶರಣೆ ಗಂಗಮ್ಮ ಅತ್ಯಂತ ಕಷ್ಟಸಹಿಷ್ಣುವಾಗಿದ್ದಳು. ಪ್ರತಿ ಬೇಸಿಗೆಯಲ್ಲಿಯೂ ಅವಳು ವಾಸಿಸುತ್ತಿದ್ದ ಹಲಗಲಿ ಗ್ರಾಮ ನೀರಿನ ಅಭಾವವನ್ನು ಎದುರಿಸುತ್ತಿದ್ದು, ಊರಿನ ಒಂದೇ ಒಂದು ನೀರಿನ ಸ್ರೋತವಾಗಿದ್ದ ಕೆರೆ ಬತ್ತಿ ಹೋಗುತ್ತಿತ್ತು. ಐದಾರು ತಿಂಗಳವರೆಗೆ ಊರ ಜನರಿಗೆ ನೀರೇ ಇಲ್ಲ ಎನ್ನುವ ಪರಿಸ್ಥಿತಿ ಉಂಟಾಗುತ್ತಿತ್ತು. ಇಂಥ ಸಂದರ್ಭದಲ್ಲಿ ಹತ್ತಾರು ಕಿಲೋಮೀಟರು ದೂರ ನಡೆದುಕೊಂಡು ಹೋಗಿ ನೀರು ತರಬೇಕಾಗುತ್ತಿತ್ತು. ತೀರ ಮಡಿ ಹುಡಿ ಆಚರಿಸುತ್ತಿದ್ದರಿಂದ ಬರಿಗಾಲಲ್ಲಿಯೇ ನಡೆದುಕೊಂಡು ಹೋಗಿ ನೀರನ್ನು ತಂದುಕೊಳ್ಳುತ್ತಿದ್ದಳು. ವಯಸ್ಸಾಗಿ ಶಕ್ತಿ ಕುಂದಿದ ನಂತರ ನೀರು ತರಲು ಒಬ್ಬ ಜಂಗಮರ ಹುಡುಗನನ್ನು ಆ ಕೆಲಸಕ್ಕೆ ನೇಮಿಸಿಕೊಂಡು ಅವನಿಗೆ ಪ್ರತಿತಿಂಗಳೂ ಹಣ ಪಾವತಿಸುತ್ತಿದ್ದಳು. ಎಷ್ಟೇ ತೊಂದರೆ ಬಂದರೂ ಚಿಕ್ಕವರಾದ ನಮಗೆ ಒಂದು ತಂಬಿಗೆ ನೀರನ್ನೂ ತರಲು ಹಚ್ಚುತ್ತಿರಲಿಲ್ಲ. ನಿತ್ಯವೂ ನಮಗೆ ಮೂರುಹೊತ್ತು ಊಟ ಮಾಡಿಸುವುದು, ಶಾಲೆಗೆ ಕಳಿಸುವುದು, ನಮ್ಮ ಬೇಕುಬೇಡಗಳನ್ನು ಈಡೇರಿಸುವುದು ಅವಳಿಗೆ ಸಂತಸ ನೀಡುವ ವಿಷಯವೇ ಆಗಿತ್ತು. ನಾವು ಯಾವುಯಾವುದೋ ವಿಷಯಕ್ಕೆ ಹಟ ಮಾಡಿದಾಗ ನಮ್ಮನ್ನು ಸುಮ್ಮನಾಗಿಸುವುದಂತೂ ಅವಳಿಗೆ ಕಷ್ಟ ಸಾಧ್ಯವಾಗುತ್ತಿತ್ತು. ಶಾಲೆಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆದು ಪಾಸಾದಾಗ ತುಂಬ ಸಂತೋಷಪಡುತ್ತಿದ್ದಳು. ಮನೆಗೆ ಬಂದವರಿಗೆಲ್ಲ ಸಕ್ಕರೆ ಹಂಚುತ್ತಿದ್ದಳು. ಯಾರಾದರೂ ನಮ್ಮನ್ನು ಬಡಿದರೆ, ಹೊಡೆದರೆ ಪರದೇಶಿ ಮಕ್ಕಳನ್ನು ಯಾಕೆ ಹೊಡಿದಿರಿ ಎಂದು ಅವರೊಡನೆ ಜಗಳವಾಡುತ್ತಿದ್ದಳು. ಅಷ್ಟೊಂದು ಅವಳ ಅಕ್ಕರೆ ನಮ್ಮ ಮೇಲಿತ್ತು. ನಾವು ಶಾಲೆಯನ್ನು ಕಲಿಯುತ್ತ ಏಳನೇ ವರ್ಗದವರೆಗೆ ಬಂದ ವಿಷಯ ನಮ್ಮ ತಂದೆಗೂ ಗೊತ್ತಿರಲಿಲ್ಲ. ಅವಳ ಮಡಿಲಿಗೆ ನಮ್ಮನ್ನು ಹಾಕಿದಂದಿನಿಂದ ಅವನು ಕೇವಲ ತನ್ನ ಹೊಟ್ಟೆ ಪಾಡನ್ನು ನೋಡಿಕೊಳ್ಳುತ್ತ ದೂರ ಉಳಿದಿದ್ದನು.

ನಾನು ಏಳನೇ ವರ್ಗದಲ್ಲಿ ಓದುತ್ತಿದ್ದ ಸಮಯದಲ್ಲಿಯೇ ೧೯೭೧ ರ ಡಿಸೆಂಬರ ೧ ರಂದು ಮಧ್ಯಾಹ್ನ ಊಟಕ್ಕಾಗಿ ಶಾಲೆಯಿಂದ ಅವಳ ಮನೆಗೆ ಬಂದಿದ್ದೆ. ಅದೇ ಸಮಯಕ್ಕೆ ಜಮಖಂಡಿಯ ಸ್ವಾಮಿಗಳೊಬ್ಬರು ಬಂದು ಅವಳ ಗುರುಗಳಾಗಿದ್ದ ಬೀಳಗಿಯ ಶ್ರೀ ಷ. ಬ್ರ. ಗುರುಪಾದ ಶಿವಾಚಾರ್ಯರು ಅಂದು ಬೆಳಗಿನ ಜಾವ ಲಿಂಗೈಕ್ಯರಾದ ಸುದ್ದಿ ತಿಳಿಸಿದರು. ಗುರುಭಕ್ತಿ ಸಂಪನ್ನಳಾಗಿದ್ದ ಅವಳಿಗೆ ಆಕಾಶವೇ ಮೈಮೇಲೆ ಕಳಚಿ ಬಿದ್ದಂತಾಯಿತು. ಎದೆ ಬಡಿದುಕೊಂಡು ಅಳಲು ಪ್ರಾರಂಭಿಸಿದಳು. ಅಲ್ಲಿಯೇ ಇದ್ದ ನನಗೆ ಏನೂ ತಿಳಿಯದಂತಾಯಿತು, ಇನ್ನು ನನ್ನ ಮೊಮ್ಮಕ್ಕಳಿಗೆ ಗತಿ ಯಾರು ಎಂದು ಗೋಳಿಡುತ್ತಿದ್ದಳು. ಬಹುಶಃ ಆ ವೇಳೆಗಾಗಲೇ ಬೀಳಗಿಮಠದ ಸ್ವಾಮಿಗಳು ಪರದೇಶಿಗಳಾದ ನಮ್ಮಲ್ಲಿ ಒಬ್ಬರನ್ನು ತಮ್ಮ ಮಠಕ್ಕೆ ಮರಿ ಮಾಡಿಕೊಳ್ಳಬಹುದೆಂದು ಅವಳು ಕನಸು ಕಂಡಂತಿತ್ತು. ಆದರೆ ನಮಗೆ ಅಜ್ಜಂದಿರೇ ಆಗಿದ್ದ ಆ ಸ್ವಾಮಿಗಳು ನಮ್ಮನ್ನು ಎಂದೂ ಪ್ರೀತಿಸಿದವರಲ್ಲ; ಸಮೀಪ ಕರೆದುಕೊಂಡವರಲ್ಲ. ತಮ್ಮ ಮಠದಲ್ಲಿ ನಮ್ಮನ್ನು ಇಟ್ಟುಕೊಂಡವರಲ್ಲ. ನಮಗಂತೂ ಮಠ, ಸ್ವಾಮಿ ಇತ್ಯಾದಿಗಳ ಬಗ್ಗೆ ಯಾವ ಕಲ್ಪನೆಯೂ ಇರಲಿಲ್ಲ. ಏನಿದ್ದರೂ ನಮ್ಮದು ಉಂಡು ಆಡುವ ವಯಸ್ಸು. ಇಂಥ ಸನ್ನಿವೇಶದಲ್ಲಿ ಹಲಗಲಿಯ ಹತ್ತಾರು ಪ್ರಮುಖ ವ್ಯಕ್ತಿಗಳ ಜೊತೆಗೆ ನಮ್ಮನ್ನು ಕರೆದುಕೊಂಡು ಸ್ವಾಮಿಗಳ ಅಂತ್ಯಸಂಸ್ಕಾರಕ್ಕಾಗಿ ನಡೆದುಕೊಂಡೇ ಬೀಳಗಿಗೆ ಬಂದಳು. ಅಷ್ಟೊತ್ತಿಗಾಗಲೇ ಬೀಳಗಿಯ ಮಠದಲ್ಲಿ ಮಠದ ಉತ್ತರಾಧಿಕಾರಕ್ಕಾಗಿ ಅನೇಕ ಆಕಾಂಕ್ಷಿಗಳಲ್ಲಿ ತಿಕ್ಕಾಟ ನಡೆದಿತ್ತು. ಪರದೇಶಿಗಳಾದ ನಮ್ಮನ್ನು ಅಲ್ಲಿ ಕೇಳುವವರು ಯಾರೂ ಇರಲಿಲ್ಲ. ಆಕಾಂಕ್ಷಿಗಳು ಯಾರೊಬ್ಬರೂ ಹಿಂದೆ ಸರಿಯದ ಕಾರಣ ಉತ್ತರಾಧಿಕಾರತ್ವ ಮತ್ತಷ್ಟು ಗೋಜಲು ಗೋಜಲಾಯಿತು. ಅನಿವಾರ್ಯವಾಗಿ ಭಕ್ತರು ಮಧ್ಯೆ ಪ್ರವೇಶಿಸುವ ಸಂದರ್ಭ ಸನ್ನಿವೇಶ ನಿರ್ಮಾಣವಾಗಿ ಮಧ್ಯರಾತ್ರಿಯೇ ನನ್ನನ್ನೇ ಉತ್ತರಾಧಿಕಾರಿ ಎಂದು ಘೋಷಣೆ ಮಾಡಿದರು. ಬೆಳಗಿನ ಜಾವ ನನಗೆ ಸ್ನಾನ ಮಾಡಿಸಿ, ಕಾವಿ ಕಫನಿ, ಕಿವಿಟೊಪ್ಪಿಗೆ ತೊಡಿಸಿ ಸ್ವಾಮಿಗಳ ಪಾರ್ಥಿವ ಶರೀರದ ಜೊತೆಗೆ ಊರ ಪ್ರಮುಖ ಬೀದಿಗಳಲ್ಲಿ ಉತ್ಸವ ನೆರವೇರಿಸಿದರು. ಆಗ ನಮ್ಮನ್ನು ಸಾಕಿ ಸಲುಹಿದ ಆ ತಾಯಿ ಗಂಗವ್ವಮ್ಮನಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ಆಕೆಗೆ ಸ್ವರ್ಗ ಮೂರೇಗೇಣು ಉಳಿದಂತಿತ್ತು.

ಈ ಎಲ್ಲ ಘಟನೆಗಳು ನಡೆದ ನಂತರ ಹೆಚ್ಚುಕಾಲ ನಾನು ಅವಳ ಮನೆಯಲ್ಲಿ ಉಳಿಯುವುದು ಸಾಧ್ಯವಾಗಲಿಲ್ಲ. ಮಠದ ಮರಿ ಎಂದ ಮೇಲೆ ಸಮಾಜದ ಸೊತ್ತು ಎಂಬಂತಾಗಿ ಬೀಳಗಿ ಮಠದಲ್ಲಿದ್ದು ವಿದ್ಯಾಭ್ಯಾಸ ಮುಂದುವರೆಸಬೇಕಾಗಿ ಬಂತು. ನಂತರ ಶಿವಯೋಗಮಂದಿರ, ಕಾಶಿಗೆ ವಿದ್ಯಾಭ್ಯಾಸಕ್ಕಾಗಿ ಹೋದೆ. ನಾನು ಎಲ್ಲಿ ಹೋದರೂ ಅವಳಿಗೆ ನನ್ನದೇ ಚಿಂತೆ. ನಮ್ಮಪ್ಪ ಶ್ಯಾಣ್ಯಾ ಆಗಬೇಕು. ದೊಡ್ಡಸ್ವಾಮಿ ಆಗಬೇಕು. ನಮ್ಮ ಬೀಳಗಿ ಮಠದ ಹೆಸರು ತರಬೇಕು ಎಂದೆಲ್ಲ ಚಿಂತಿಸುತ್ತಿದ್ದಳು. ನನ್ನ ವಿದ್ಯಾಭ್ಯಾಸಕ್ಕೆ ಅಷ್ಟಿಷ್ಟು ಹಣ ತಪ್ಪದೇ ಕಳಿಸುತ್ತಿದ್ದಳು. ನನ್ನ ಸಹೋದರ ಮಾತ್ರ ಅವಳ ಹತ್ತಿರವೇ

ಉಳಿದು ವಿದ್ಯಾಭ್ಯಾಸ ಮುಂದುವರೆಸಿದ್ದ. ಅವನಿಗೂ ಸಹಾಯ ಮಾಡುತ್ತಿದ್ದಳು. ನಮ್ಮ ಖರ್ಚು ವೆಚ್ಚ ನೀಗಿಸುವುದಕ್ಕಾಗಿ ಆ ಎಪ್ಪತ್ತರ ಇಳಿವಯಸ್ಸಿನಲ್ಲಿ ಬಡವಳಾದ ಅವಳು ಪಟ್ಟ ಪರಿಶ್ರಮ ತಿಳಿಸಲು ಶಬ್ದಗಳೇ ಸಾಲವು.

ನಾನು ಕಾಶಿಯಿಂದ ವಿದ್ಯಾಭ್ಯಾಸ ಮುಗಿಸಿಕೊಂಡು ಬಂದಾಗ ಆ ಗಂಗವ್ವಮ್ಮನಿಗೆ ಎಂಭತ್ತು-ಎಂಭತ್ತೈದು ವರ್ಷಗಳಾಗಿರಬೇಕು. ಅಷ್ಟೊತ್ತಿಗಾಗಲೇ ಅವಳ ಶಕ್ತಿಕುಂದಿತ್ತು. ಆದರೂ ನನ್ನ ಪಟ್ಟಾಭಿಷೇಕ ಕಣ್ತುಂಬ ನೋಡಬೇಕೆಂಬ ಉತ್ಸಾಹ ಮನದಲ್ಲಿ ತುಂಬಿತ್ತು. ಆದರೆ ಅದು ಅವಳೊಬ್ಬಳಿಂದ ಆಗುವ ಕೆಲಸವಲ್ಲದ ಕಾರಣ ಸುಮ್ಮನಿದ್ದಳು. ಅತೀ ವಾರ್ಧಕ್ಯದ ಕಾರಣದಿಂದಾಗಿ ಅವಳ ಊಟೋಪಚಾರದಲ್ಲಿ ವ್ಯತ್ಯಯ ತಂದುಕೊಳ್ಳಲು ಪ್ರಾರಂಭಿಸಿದಳು. ದಿನಕ್ಕೆ ಸ್ನಾನ ಪೂಜೆ ಎರಡು ಹೊತ್ತು ನಡೆದಿದ್ದರೂ ಊಟ ಮಾತ್ರ ಒಂದೇ ಹೊತ್ತು ನಡೆಯುತ್ತಿತ್ತು. ಇದನ್ನು ಗಮನಿಸಿದ ನಾನು ಬೀಳಗಿ ಮಠಕ್ಕೆ ಬರಲು ಅವಳನ್ನು ಒತ್ತಾಯಿಸಿದೆ. ಅವಳು ಸುತಾರಾಂ ಒಪ್ಪಲಿಲ್ಲ. ಅವಳಂಥ ಸ್ವಾಭಿಮಾನಿ ಹೆಣ್ಣುಮಗಳನ್ನು ನಾನು ನನ್ನ ಜೀವಮಾನದಲ್ಲೇ ಕಂಡಿಲ್ಲ. ನನಗೇನು ಮನೆ ಇಲ್ಲವೇ? ಸತ್ತರೆ ನನ್ನ ಊರಲ್ಲಿ ನನಗೆ ಸುಡುಗಾಡು ಇಲ್ಲವೇ? ನಾನೇಕೆ ಬರಲಿ ಎಂದು ಪ್ರಶ್ನಿಸುತ್ತಿದ್ದಳು. ಮೇಲಾಗಿ ತಾನು ಕ್ಷೌರಿಕರ ಜಾತಿಯವಳು. ಮಠದ ಅಂಗಳಕ್ಕೆ ಮಾತ್ರ ತನ್ನ ಪ್ರವೇಶ. ಮಠದಲ್ಲಿ ಕಾಲಿಡಬಾರದೆಂಬ ಅವಳ ಕೀಳರಿಮೆಯೊಂದು ಅವಳನ್ನು ಕಾಡುತ್ತಿತ್ತು. ಶತಾಯ ಗತಾಯ ಪ್ರಯತ್ನಿಸಿ ಅವಳನ್ನು ಬೀಳಗಿಮಠಕ್ಕೆ ಕರೆತಂದು ಮಠದೊಳಗೆ ಅವಳನ್ನು ಪ್ರವೇಶ ಮಾಡಿಸುವಲ್ಲಿ ನಾನು ಸಫಲನಾದೆ. ಬೀಳಗಿ ಮಠದಲ್ಲಿ ನಮ್ಮ ಜೊತೆಗೆ ತೃಪ್ತಿಯಿಂದ ಇರಲು ಒಗ್ಗಿಕೊಂಡಳು. ಆ ಇಳಿ ವಯಸ್ಸಿನಲ್ಲಿಯೂ ಸಾಧ್ಯವಿದ್ದಷ್ಟು ಕೆಲಸ ಕಾರ್ಯ ಮಾಡುತ್ತಿದ್ದಳು. ನಾವು ಬೇಡ ಎಂದರೂ ಕೇಳುತ್ತಿರಲಿಲ್ಲ. ರಿಣಗೂಳು ತಿನ್ನುವುದು ನನ್ನಿಂದ ಸಾಧ್ಯವಿಲ್ಲ ಎಂದು ಮುಖಕ್ಕೆ ಹೊಡೆದಂತೆ ಹೇಳುತ್ತಿದ್ದಳು. ನಮ್ಮನ್ನು ಸಾಕಿ ಸಲುಹಿದ ನೀನು ಈಗ ಆರಾಮಾಗಿ ಇದ್ದರೆ ತೊಂದರೆ ಏನು? ರಿಣಗೂಳಿನ ಪ್ರಶ್ನೆ ಎಲ್ಲಿಯದು? ಎಂದರೂ ಕೇಳುತ್ತಿರಲಿಲ್ಲ. ಇನ್ನೂ ಹಲ್ಲು ಗಟ್ಟಿಯಾಗಿದ್ದವು. ಕಿವಿ-ಕಣ್ಣುಗಳು ಚುರುಕಾಗಿದ್ದವು. ಕಟಕರೊಟ್ಟಿಯನ್ನೇ ತಿನ್ನುತ್ತಿದ್ದಳು. ಎಂದೂ ಚಾಳೀಸ ಹಾಕಲಿಲ್ಲ. ಅಕ್ಕಿಯಲ್ಲಿಯ ಹರಳುಗಳನ್ನು ಆರಿಸುತ್ತಿದ್ದಳು. ಆದರೂ ದೇಹದ ಶಕ್ತಿ ಅತಿಯಾಗಿ ಕುಂದಿತ್ತು. ನಾನು ಧಾರವಾಡದಲ್ಲಿ ಓದು ಮುಂದುವರೆಸಿದ್ದರೂ ಅವಳಿಗಾಗಿ ಹೆಚ್ಚಿನ ಸಮಯ ಬೀಳಗಿಯಲ್ಲಿಯೇ ಕಳೆಯುತ್ತಿದ್ದೆ. ೧೯೮೫ ರ ಒಂದು ದಿನ ಅವಳು ಬೀಳಗಿಯ ಮಠದಲ್ಲಿಯೇ ಲಿಂಗೈಕ್ಯಳಾದಳು. ಬೀಳಗಿ ಹಾಗು ಹಲಗಲಿ ಸದ್ಭಕ್ತರು ಅವಳ ಗುಣಗಾನ ಮಾಡುತ್ತ ಬೀಳಗಿ ಕಲ್ಮಠದ ಆವರಣದಲ್ಲಿಯೇ ಅವಳ ಗುರುಗಳ ಗದ್ದುಗೆಯ ಎದುರಿಗೆ ಅನತಿ ದೂರದಲ್ಲಿ ಸಮಾಧಿ ಕಾರ್ಯ ನೆರವೇರಿಸಿದರು. ಮಠಕ್ಕೆ ಬರುವ ಭಕ್ತರು ನಡೆದಾಡುವ ದಾರಿಯಲ್ಲಿ ಸಮಾಧಿ ಹೊಂದಬೇಕೆಂಬ ಅವಳ ಇಚ್ಛೆಯಂತೆ ನಾವೂ ನಡೆದುಕೊಂಡು ಅವಳ ಗದ್ದುಗೆಯನ್ನು ಕಟ್ಟುವ ಗೋಜಿಗೆ ಹೋಗಲಿಲ್ಲ. ಹಲಗಲಿಯಲ್ಲಿಯ ಅವಳ ಮನೆ ಮತ್ತು ಜಮೀನನ್ನು ಆವರೆಗೂ ಅವಳ ಸಮೀಪಕ್ಕೆ ಬಂದಿರದ ಅವಳ ದತ್ತುಪುತ್ರನ ಮಕ್ಕಳು ತಮ್ಮ ವಶಕ್ಕೆ ತೆಗೆದುಕೊಂಡರೆಂಬ ವಿಷಯ ನನಗೆ ನಂತರ ತಿಳಿಯಿತು.

ಇಷ್ಟಾದರೂ ನನ್ನ ಪಟ್ಟಾಭಿಷೇಕ ನೋಡಬೇಕೆಂಬ ಅವಳ ಇಚ್ಛೆ ಅದು ಇಚ್ಛೆಯಾಗಿಯೇ ಉಳಿಯಿತು. ತನ್ನ ಅಂತ್ಯಕಾಲವನ್ನು ಗುರುತಿಸಿಕೊಂಡ ಅವಳು ನನಗೆ ಗೊತ್ತಿಲ್ಲದಂತೆ ತನ್ನ ಆತ್ಮೀಯ ವ್ಯಕ್ತಿಗಳಲ್ಲಿ ಒಬ್ಬರಾದ ಶ್ರೀಮತಿ ಗಂಗಮ್ಮ ಕುಸುಗಲ್ಲ ಅವರ ಹತ್ತಿರ ಎರಡು ಸಾವಿರ ರೂಪಾಯಿ-ಗಳನ್ನು ನನ್ನ ಪಟ್ಟಾಭಿಷೇಕ ಸಂದರ್ಭದಲ್ಲಿ ಕೊಡಬೇಕೆಂದು ಹೇಳಿ ಇಟ್ಟಿರುವುದು ಅವಳ ನಿಧನಾನಂತರ ನಾಗನೂರು ರುದ್ರಾಕ್ಷಿಮಠಕ್ಕೆ ನಾನು ಪಟ್ಟಾಭಿಷಿಕ್ತನಾಗುವ ಸಂದರ್ಭದಲ್ಲಿ ಆ ಹಣ ತಂದು ಕೊಟ್ಟಾಗಲೇ ನನ್ನ ಗಮನಕ್ಕೆ ಬಂತು. ಇದ್ದಾಗಲೂ ಪ್ರೀತಿ, ಇಲ್ಲದಾಗಲೂ ಪ್ರೀತಿ. ತನ್ನ ಕಳ್ಳುಬಳ್ಳಿಯಲ್ಲದ ಪರದೇಶಿ ಮಕ್ಕಳಿಗೆ ಇಂಥ ಪ್ರೀತಿ ತೋರುವ ಎಷ್ಟು ಜನ ಈ ಜಗದಲ್ಲಿ ಇದ್ದಾರು?

ಶ್ರೀಮತಿ ಗಂಗಮ್ಮನ ರೀತಿ-ನೀತಿ, ನಡಾವಳಿ, ಆಚಾರ-ವಿಚಾರ ಶರಣ ಜೀವನವನ್ನು ಕುರಿತು ಬರೆಯಲು ಕುಳಿತರೆ ಅದೊಂದು ಬೃಹದ್‌ಗ್ರಂಥವೇ ಆದೀತು. ಈ ಲೇಖನದ ಇತಿಮಿತಿಯನ್ನು ಅರಿತು, ಡಾ. ಎಸ್.ಆರ್.ಗುಂಜಾಳ ಅವರ ಸಲಹೆ ಹಾಗು ಶ್ರೀಮತಿ ನೀಲಗಂಗಾ ಚರಂತಿಮಠ ಅವರ ಒತ್ತಾಸೆಯ ಮೇರೆಗೆ ಅವಸರದಲ್ಲಿ ನೇರವಾಗಿ ಎರಡು ಮಾತುಗಳನ್ನು ಬರೆದು ತಿಳಿಸಿರುವೆ. ನವಮಾಸಗಳವರೆಗೆ ಗರ್ಭದಲ್ಲಿ ಹೊತ್ತು ಹೆತ್ತು ಮಕ್ಕಳ ಲಾಲನೆ ಪಾಲನೆ ಮಾಡುವ ಯಾವ ತಾಯಿಗಿಂತಲೂ ಕಡಿಮೆ ಇಲ್ಲದಂತೆ ವಾತ್ಸಲ್ಯದ ತನಿರಸವನ್ನು ನೀಡಿ ಸಲುಹಿದ ಆ ಮಹಾತಾಯಿ ಜನ್ಮಕೊಟ್ಟ ತಾಯಿ ಇಲ್ಲವೆಂಬುದು ನಮ್ಮ ಗಮನಕ್ಕೆ ಬರದಂತೆ ಜಾಗೃತಿ ವಹಿಸಿ ಎಲ್ಲರಂತೆ ಉಣಿಸಿ, ತಿನಿಸಿ, ತಣಿಸಿ ಎಂದೋ ಸತ್ತು ಮಣ್ಣಾಗಬಹುದಾಗಿದ್ದ ನಮ್ಮನ್ನು ಸಂರಕ್ಷಿಸಿರುವುದನ್ನು ಜೀವಮಾನದಲ್ಲಿ ಮರೆಯಲಾದೀತೆ?

**ಕಲ್ಮಠದಿಂದ ರುದ್ರಾಕ್ಷಿಮಠಕ್ಕೆ**

೧೯೮೮ ಫೆ. ೨-ರಂದು ಭಾರತ ಹುಣ್ಣಿಮೆ. ಗದಗ ಹತ್ತಿರದ ಡಂಬಳದಲ್ಲಿ ತೋಂಟದಾರ್ಯ ಮಠದ ಜಾತ್ರಾಮಹೋತ್ಸವದ ಸಂದರ್ಭ. ಅರ್ಧನಾರೀಶ್ವರ ರಥೋತ್ಸವ. ರಥೋತ್ಸವದ ಸಿದ್ಧತೆಗಳು ನಡೆದಿವೆ. ಭಕ್ತರೆಲ್ಲ ಜಾತ್ರೆಯ ಉತ್ಸಾಹದಲ್ಲಿ ಮುಳುಗಿ ಏಳುತ್ತಿರುವ ಹೊತ್ತಿನಲ್ಲಿ ಇತ್ತ, ಮಠದ ಒಂದು ಭಾಗದಲ್ಲಿ ತೋಂಟದಾರ್ಯಮಠದ ಪೂಜ್ಯ ಡಾ. ಸಿದ್ಧಲಿಂಗ ಮಹಾಸ್ವಾಮಿಗಳ ನೇತೃತ್ವದಲ್ಲಿ ವಿಶೇಷ ಸಭೆಯೊಂದು ನಡೆದಿದೆ. ಬೆಳಗಾವಿಯಿಂದ ನಾಗನೂರು ರುದ್ರಾಕ್ಷಿಮಠದ ವಯೋವೃದ್ಧ ಪೂಜ್ಯ ಡಾ. ಶಿವಬಸವ ಸ್ವಾಮಿಗಳು ಸಭೆಯಲ್ಲಿದ್ದಾರೆ. ಅವರೊಂದಿಗೆ ಬಂದ ರುದ್ರಾಕ್ಷಿಮಠದ ಹಿತೈಷಿಗಳು, ಹಿರಿಯರು ಅಲ್ಲಿದ್ದಾರೆ. ಬೀಳಗಿಯ ಕಲ್ಮಠದಿಂದ ಬಂದಿದ್ದ ಮೂವತ್ತರ ಆಸುಪಾಸಿನಲ್ಲಿದ್ದ ಗುರುಪಾದದೇವರೂ ಇದ್ದಾರೆ. ಅವರ ಮೇಲೆಯೇ ಸಭಿಕರ ದೃಷ್ಟಿ. 'ತೋಂಟದಾರ್ಯ ಜಗದ್ಗುರುಗಳು ರುದ್ರಾಕ್ಷಿಮಠಕ್ಕೆ ಸಮರ್ಥ ಸ್ವಾಮಿಗಳನ್ನೇ ಹುಡುಕಿದ್ದಾರೆ'ಂದು ಸಭಿಕರಲ್ಲಿ ಕೆಲವರು ಆಡಿಕೊಳ್ಳುತ್ತಿದ್ದಾರೆ. ಪೂಜ್ಯ ಶಿವಬಸವಸ್ವಾಮಿಗಳಾದರೂ ಗುರುಪಾದದೇವರನ್ನೇ ಕಣ್ತುಂಬ ನೋಡಿ, ಮನದೊಳಗೆ ಯೋಚಿಸುತ್ತ ಮೌನವಾಗಿದ್ದಾರೆ. ಒಂದು ಮಹತ್ವದ ಉದ್ದೇಶಕ್ಕಾಗಿ ಈ ದೊಡ್ಡ ಸ್ವಾಮಿಗಳು ಈ ಮರಿದೇವರು ಪರಸ್ಪರ ಮುಖಾಮುಖಿಯಾಗುತ್ತಿರುವುದು ಇದೇ ಮೊದಲಿರಬೇಕು. (ಗುರುಪಾದದೇವರು ಶಿವಯೋಗಮಂದಿರದಲ್ಲಿ ಸಾಧಕ ವಟುವಾಗಿದ್ದಾಗ ಶಿವಬಸವ ಸ್ವಾಮಿಗಳು ಆ ಸಂಸ್ಥೆಯ ಅಧ್ಯಕ್ಷರಾಗಿದ್ದರು. ಸಭೆ ಸಮಾರಂಭಗಳಿಗೆಂದು ಆಗಾಗ ಸ್ವಾಮಿಗಳು ಅಲ್ಲಿಗೆ ಬರುತ್ತಿದ್ದರು. ಅವರದು ಗಂಭೀರ ವ್ಯಕ್ತಿತ್ವ. ಹಾಗಾಗಿ ಸಾಧಕರು ದೂರದಿಂದಲೇ ನಮಿಸಿ ತಮ್ಮ ಚಟುವಟಿಕೆಗಳಲ್ಲಿ ತೊಡಗುತ್ತಿದ್ದರು.)

ರುದ್ರಾಕ್ಷಿಮಠಕ್ಕೆ ಸ್ವಾಮಿಯಾಗಿ ಬರುವವರ ಬಗ್ಗೆ ಈ ದೊಡ್ಡ ಸ್ವಾಮಿಗಳು ದೊಡ್ಡ ದೊಡ್ಡ ಆಶೆ ಇಟ್ಟುಕೊಂಡಿದ್ದರು. ಅವರಿಗೆ ಇಂಗ್ಲಿಷ್ ಭಾಷೆ ಬರುತ್ತಿರಬೇಕು. ಉನ್ನತ ಪದವಿಗಳನ್ನು ಸಂಪಾದಿಸಿರ ಬೇಕು. ಅವರು ಶೀಲಸಂಪನ್ನರೂ, ವ್ಯವಹಾರಜ್ಞಾನಿಗಳೂ ಆಗಿರಬೇಕು. ಅಂಥವರಿದ್ದರೆ ಶ್ರೀಮಠ ಇನ್ನಷ್ಟು ಎತ್ತರಕ್ಕೆ ಬೆಳೆಯಬಲ್ಲುದೆಂಬುದು ಅವರ ತರ್ಕ. ಸಮಸ್ಯೆಯೆಂದರೆ ಇಂಥ ಗುಣಗಳಿರುವ ಗುರುಪಾದದೇವರು ತಮ್ಮ ಒಪ್ಪಿಗೆ ಸೂಚಿಸುತ್ತಿಲ್ಲವೆಂಬುದು. ದೊಡ್ಡಮಠದ ಪೀಠ ಕೈವಾಡಿ ಕರೆಯುತ್ತಿರುವಾಗ ಇವರು ತೋರಿದ ಉದಾಸೀನತೆಯು ಎಲ್ಲರನ್ನು ಆಶ್ಚರ್ಯಚಕಿತ ಗೊಳಿಸಿತು.

ಬೀಳಗಿಯ ಕಲ್ಮಠದ ಭಕ್ತರನ್ನು ಬಿಟ್ಟು ಹೋಗಬೇಕಾದ ಆತಂಕ ಗುರುಪಾದದೇವರಿಗೆ. ಅಲ್ಲಿಯ ಉತ್ತರಾಧಿಕಾರಿಯಾದಾಗ ಇವರಿಗೆ ಕೇವಲ ಹದಿಮೂರು ವಯಸ್ಸು. ತಾಯಿ ಇಲ್ಲದೆ ತಂದೆಯ ಆಸರೆ ಇಲ್ಲದೆ ಇರುವಾಗ, ಮಠದ ಭಕ್ತರೆಲ್ಲ ಒಮ್ಮತದಿಂದ ಇವರನ್ನು ಆಯ್ಕೆ ಮಾಡಿದ್ದರು. ಬೆಂಬಲಕ್ಕೆ ನಿಂತಿದ್ದರು. ಮಠ ಸಣ್ಣದಿದ್ದರೂ ಭಕ್ತರ ವಿಶ್ವಾಸ ದೊಡ್ಡದಿತ್ತು. ಅಂಥ ಭಕ್ತರನ್ನು ತೊರೆಯಲು ಅವರಿಗೆ ಮನಸ್ಸಾಗಲಿಲ್ಲ. ಕಲ್ಮಠದಲ್ಲಿಯೇ ತೃಪ್ತಿಯಿಂದ ಇದ್ದು ಕೈಲಾದಷ್ಟು ಸೇವೆ ಮಾಡಬೇಕೆನ್ನುವ ನಿಲುವು ಅವರದಾಗಿತ್ತು. ಈ ಕಾರಣಗಳಿಂದಾಗಿ ಗುರುಪಾದದೇವರು ರುದ್ರಾಕ್ಷಿಮಠದ ಉತ್ತರಾಧಿಕಾರ ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ. ಪರಿಸ್ಥಿತಿ ಹೀಗಿರುವಾಗ ದೇವರ ಮನವೊಲಿಸುವುದಕ್ಕಾಗಿ, ತೋಂಟದಾರ್ಯ ಸ್ವಾಮಿಗಳು ಕೊನೆಗೊಂದು ಮಾತು ಹೇಳಿದರು:

'ಇಂದು ಜಾತ್ರೆ, ಜಂಗಮನು ರಥೋತ್ಸವಕ್ಕೆ ಹೊರಟಂಥ ಪವಿತ್ರ ಸಂದರ್ಭ. ಇಂಥ ಶುಭಗಳಿಗೆಯಲ್ಲಿ ಪೀಠ ಏರುವ ಅವಕಾಶ ಬಂದಿದೆ. ಒಲ್ಲೆ ಅನ್ನುವುದು ಸರಿಯಲ್ಲ.' ಎಂದರು. ಹೀಗೆ ಹೇಳಿದರೂ ದೇವರು ತಮ್ಮ ಪಟ್ಟ ಬಿಡಲಿಲ್ಲ. ಅತಂತ್ರ ಸ್ಥಿತಿಯಲ್ಲಿಯೇ ಸಭೆ ಮುಗಿಸಬೇಕಾಯಿತು. ಅದೇನು ಯೋಗವೋ ಶಿವಬಸವ ಸ್ವಾಮಿಗಳು ರುದ್ರಾಕ್ಷಿಮಠದ ಉತ್ತರಾಧಿಕಾರಿಯ ಹೆಸರನ್ನು, ದೀಕ್ಷಾ ಅನುಗ್ರಹದ ದಿನವನ್ನು ಪ್ರಕಟಿಸಿಯೇ ಬಿಟ್ಟರು. ಆಮಂತ್ರಣ ಪತ್ರಿಕೆಗಳು ಮುದ್ರಣವಾದವು ೧೯೮೮ ಏಪ್ರಿಲ್ ೧೧ ರಂದು ಜರುಗಲಿರುವ ಸಮಾರಂಭದ ಆಮಂತ್ರಣ ಪತ್ರಿಕೆಯನ್ನು ಹಿಡಿದುಕೊಂಡು ಮಠದ ಕೆಲವು ಹಿರಿಯರು ಏಪ್ರಿಲ್ ೭ ರಂದು ಬೀಳಗಿಯ ಕಲ್ಮಠದಲ್ಲಿ ಹಾಜರಾದರು. ಅವರ ಕೈಗೆ ಆಮಂತ್ರಣ ಪತ್ರಿಕೆ ಕೊಟ್ಟರು. ಅದನ್ನು ನೋಡಿ ದೇವರಿಗೆ ಆಶ್ಚರ್ಯ! ದೊಡ್ಡಮಠದ ಅಧಿಕಾರ ತಪ್ಪಿಸಿಕೊಳ್ಳಲು ಏನೆಲ್ಲ ಪ್ರಯತ್ನ ಮಾಡಿದರೂ ಅದು ಫಲ ಕೊಟ್ಟಿರಲಿಲ್ಲ. ಪೂಜ್ಯರು ಕಲ್ಮಠದ ಭಕ್ತರನ್ನು ಕರೆದು ಪರಿಸ್ಥಿತಿಯನ್ನು ನಿವೇದಿಸಿದರು. ಭಕ್ತರ ಹೃದಯಗಳು ಭಾರವಾದವು. 'ನಮ್ಮ ಸ್ವಾಮಿಗಳು ದೊಡ್ಡ ಮಠಕ್ಕೆ ಹೋಗುವರೆಂದು ಕೆಲವರಿಗೆ ಸಂತೋಷವಾದರೆ, ತಮ್ಮ ಮಠ ಬಿಟ್ಟು ಹೋಗುವರಲ್ಲಾ ಎಂದು ಕೆಲವರಿಗೆ ನೋವು. ಗುರುಪಾದದೇವರಿಂದ ಕಲ್ಮಠಕ್ಕೆ ಹೊಸ ಕಳೆ ಬಂದಿತ್ತು. ಅಲ್ಲಿ ಅವರು ಶಿವಾನುಭವ ಗೋಷ್ಠಿಗಳನ್ನು ಪ್ರಾರಂಭಿಸಿದ್ದರು. ಪುರಾಣ, ಪ್ರವಚನಗಳನ್ನು ಚೆನ್ನಾಗಿ ನಡೆಸುತ್ತಿದ್ದರು. ತರುಣ ಸ್ವಾಮಿಗಳ ನಯ ವಿನಯದ

ನಡೆ ನುಡಿಗಳು ಭಕ್ತರ ಹೃದಯ ಗೆದ್ದಿದ್ದವು. ಇಂಥ ಸ್ವಾಮಿಗಳನ್ನು ಕಳಿಸಿಕೊಡುವುದೆಂದರೆ ತಮ್ಮ ಮಠದ ಪುಣ್ಯವನ್ನೇ ಬೀಳ್ಕೊಂಡಂತೆ ಎಂದು ಬೀಳಗಿ ಜನರು ಭಾವಿಸಿದರು.

ಬೆಳಗಾವಿ ರುದ್ರಾಕ್ಷಿಮಠದ ಕೀರ್ತಿ, ಶಿವಬಸವ ಸ್ವಾಮಿಗಳ ಕಾಯಕ, ದಾಸೋಹವನ್ನು ಬಲ್ಲ ಬೀಳಗಿಯ ಹಿರಿಯರು 'ಗುರುಪಾದದೇವರು ಎರಡೂ ಮಠಗಳನ್ನು ನೋಡಿಕೊಳ್ಳುವುದಾದರೆ ಬೆಳಗಾವಿಗೆ ಹೋಗಲಿ' ಎಂದು ಸಮ್ಮತಿ ಸೂಚಿಸಿದರು. ನಿಜಕ್ಕೂ ಹೃದಯಸ್ಪರ್ಶಿ ಸನ್ನಿವೇಶವದು. ಬೀಳಗಿ ಭಕ್ತರ ಹೃದಯ ಗೆದ್ದಿದ್ದ ಸ್ವಾಮಿಗಳು ಅವರ ಪ್ರೀತಿ, ವಿಶ್ವಾಸಕ್ಕೆ ಮಣಿದು ಮತ್ತೊಂದು ಮಣಿಹಕ್ಕೆ ಅಣಿಯಾದರು. ಕಲ್ಮಠದಿಂದ ರುದ್ರಾಕ್ಷಿಮಠದ ಹಾದಿ ಹಿಡಿದರು.

೧೯೮೮ ಏಪ್ರಿಲ್ ೧೧ ರಂದು ಬೆಳಗಿನ ೯–೩೦ ಗಂಟೆಗೆ ಗುರುಪಾದದೇವರು ಮೂಲ ರುದ್ರಾಕ್ಷಿಮಠವಿರುವ ನಾಗನೂರು ಗ್ರಾಮ ಪ್ರವೇಶಿಸಿದರು. ಶಿವಬಸವಮಹಾಸ್ವಾಮಿಗಳ ಉತ್ತರಾಧಿಕಾರಿಯಾಗಿ ಬಂದ ಅವರನ್ನು ನಾಗನೂರಿನ ಜನರು ಭಕ್ತಿ ಗೌರವಗಳಿಂದ ಸ್ವಾಗತಿಸಿದರು. ಊರಿನ ಪ್ರತಿ ಮನೆ ಮನೆಯಲ್ಲಿ ಅಂದು ಹಬ್ಬದ ಸಡಗರ, ದೊಡ್ಡ ಸ್ವಾಮಿಗಳು ಮುಂದೆ, ಮುಂದೆ, ನೂತನ ಸ್ವಾಮಿಗಳು ಅವರ ಹಿಂದೆ. ಭಕ್ತರ ಹಾರ್ದಿಕ ವಾತಾವರಣದಲ್ಲಿ ಮೊದಲು ಚೌಕಿಮಠದಲ್ಲಿ ಪೂಜೆ ಸಲ್ಲಿಸಿದರು. ಅಲ್ಲಿಂದ ಮೆರವಣಿಗೆಯಲ್ಲಿ ಸಾಗುತ್ತ ಊರಲ್ಲಿರುವ ಮಠಕ್ಕೆ ಬಂದರು. ಅಲ್ಲಿ ಉತ್ತರಾಧಿಕಾರಕ್ಕೆ ಸಂಬಂಧಿಸಿದ ಚಟುವಟಿಕೆಗಳು ಜರುಗಿದವು. ಆ ಸಂದರ್ಭದಲ್ಲಿ ಗದುಗಿನ ತೋಂಟದಾರ್ಯಮಠದ ಪೂಜ್ಯ ಸಿದ್ಧಲಿಂಗ ಮಹಾಸ್ವಾಮಿಗಳು, ಘೋಡಗೇರಿ ಅಜ್ಜನವರು, ಅರಳಿಕಟ್ಟಿ ಸ್ವಾಮಿಗಳು. ಕಾರಂಜಿಮಠದ ಗುರುಸಿದ್ಧಸ್ವಾಮಿಗಳು ಸಾನ್ನಿಧ್ಯ ಕರುಣಿಸಿದ್ದರು. ಡಿ. ಎಂ. ಪಾಟೀಲ, ಅಣ್ಣಾಸಾಬ ಪಾಟೀಲ, ನೀಲಪ್ಪ ತಲ್ಲೂರ ಮೊದಲಾದ ಊರ ಗಣ್ಯರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಗುರುಪಾದದೇವರು ಉತ್ತರಾಧಿಕಾರಿಯಾಗಿ ನಾಗನೂರು ಪ್ರವೇಶಿಸಿದ ಶುಭ ಸಂದರ್ಭದಲ್ಲಿಯೇ ೪೮ ಜೋಡಿಗಳ ಸಾಮೂಹಿಕ ವಿವಾಹ, ಶಿವಬಸವಸ್ವಾಮಿಗಳ ಹೆಸರಿನ ಹೈಸ್ಕೂಲಿನ ಕಟ್ಟಡಕ್ಕಾಗಿ ಅಡಿಗಲ್ಲು ಸಮಾರಂಭ ಜರುಗಿದವು. ನಾಗನೂರು ರುದ್ರಾಕ್ಷಿಮಠದ ಚರಿತ್ರೆಯಲ್ಲಿ ಅದೊಂದು ಅವಿಸ್ಮರಣೀಯ ಸಂದರ್ಭವಾಗಿ ಪರಿಣಮಿಸಿತು. ಅದೇ ದಿನ ಸಂಜೆ ಐದು ಮೂವತ್ತು ಗಂಟೆಗೆ ಶಿವಬಸವ ಸ್ವಾಮಿಗಳು ಗುರುಪಾದದೇವರನ್ನು ಕರೆದುಕೊಂಡು ಬೆಳಗಾವಿಯ ಪ್ರಸಾದನಿಲಯಕ್ಕೆ ಬಂದರು. ಇವರ ಜೊತೆಗೆ ಯಮಕನಮರಡಿಯ ಗುರುಸಿದ್ಧಸ್ವಾಮಿಗಳು, ಗದುಗಿನ ತೋಂಟದಾರ್ಯ ಜಗದ್ಗುರುಗಳು, ಹುಬ್ಬಳ್ಳಿ ಮೂರುಸಾವಿರಮಠದ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು, ನಿಡಸೋಸಿ ನಿಜಲಿಂಗೇಶ್ವರ ಸ್ವಾಮಿಗಳು, ಬೈಲಹೊಂಗಲದ ಗಂಗಾಧರಸ್ವಾಮಿಗಳು ಪಾಲ್ಗೊಂಡಿದ್ದರು. ನಗರದ ಗಣ್ಯ ವರ್ತಕರಾಗಿದ್ದ ಶಂಕ್ರಪ್ಪಣ್ಣ ಬಾಗಿ, ಬಾಬಣ್ಣ ಕತ್ತಿಶೆಟ್ಟಿ ಇನ್ನೂ ಅನೇಕರು ನೂತನ ಉತ್ತರಾಧಿಕಾರಿ ಗುರುಪಾದದೇವರನ್ನು ಮೆರವಣಿಗೆಯಲ್ಲಿ ಪ್ರಸಾದನಿಲಯಕ್ಕೆ ಕರೆತಂದರು. ಪ್ರಸಾದನಿಲಯದಲ್ಲಿ ನಿರ್ಮಿಸಿದ ವೇದಿಕೆಯಲ್ಲಿ ಸಮಾರಂಭ ಅದ್ದೂರಿಯಾಗಿ ಜರುಗಿತು. ಹಿರಿಯ ಸ್ವಾಮಿಗಳೆಲ್ಲ ಗುರುಪಾದದೇವರನ್ನು ಸ್ವಾಗತಿಸಿ ಶುಭ ಹಾರೈಕೆ ಸಲ್ಲಿಸಿದರು. ಆ ಮೇಲೆ ರುದ್ರಾಕ್ಷಿಮಠದ ಗುರುಗಳನ್ನು, ಭಕ್ತರನ್ನು ಉದ್ದೇಶಿಸಿ ಗುರುಪಾದದೇವರು ಮಾತನಾಡಿದರು. ಶಿವಬಸವಸ್ವಾಮಿಗಳು ಹಾಕಿ ಕೊಟ್ಟ ದಾರಿಯಲ್ಲಿ ನಡೆದು, ಮಠವನ್ನು ಉತ್ತರೋತ್ತರ ಬೆಳೆಸುವುದಾಗಿ ತಿಳಿಸಿದರು.

**ಮೌನಗುರುವಿನ ಮಾತೃವಾತ್ಸಲ್ಯ**

ಉತ್ತರಾಧಿಕಾರದ ಸಮಾರಂಭವಾದ ಮರುದಿನವೇ ರುದ್ರಾಕ್ಷಿಮಠದ ವಾರಸುದಾರರೆಂದು ಸಿದ್ಧರಾಮ ಸ್ವಾಮಿಗಳ ಹೆಸರು ನೋಂದಾಯಿಸಲ್ಪಟ್ಟಿತು. ಸಾಮಾನ್ಯವಾಗಿ ದೊಡ್ಡಸ್ವಾಮಿಗಳಾದವರು ಹಾಗೆ ಅವಸರ ಮಾಡುವದಿಲ್ಲ. ತಮ್ಮ ಉತ್ತರಾಧಿಕಾರಿಗಳಾದವರ ವರ್ತನೆಗಳನ್ನು, ಪೂಜೆ ನಿಷ್ಠೆಗಳನ್ನು ಅಳೆದು ನೋಡುತ್ತಾರೆ. ಅವರ ಗುಣಗಳನ್ನು ಒರಗೆ ಹಚ್ಚಿ ಪರೀಕ್ಷಿಸುತ್ತಾರೆ. ತಮ್ಮ ವಿಶ್ವಾಸಕ್ಕೆ ಯೋಗ್ಯರೆನಿಸಿದ ಮೇಲೆಯೇ ಅವರನ್ನು ಕಾನೂನುಬದ್ಧವಾಗಿ ಸ್ವಾಮಿಗಳೆಂದು ಸ್ವೀಕರಿಸುತ್ತಾರೆ. ಶಿವಬಸವಸ್ವಾಮಿಗಳು ಸಿದ್ಧರಾಮಸ್ವಾಮಿಗಳ ವಿಷಯದಲ್ಲಿ ನಡೆದುಕೊಂಡ ರೀತಿ ಮಾತ್ರ ಬೇರೆಯಾಗಿತ್ತು. ಸಿದ್ಧರಾಮ ಸ್ವಾಮಿಗಳ ಪರಿಚಯ ಅವರಿಗೆ ಹೊಸದಾಗಿದ್ದರೂ ಅದೆಷ್ಟೋ ವರ್ಷಗಳ ಸಂಬಂಧವಿದ್ದಂತೆ ನಡೆದುಕೊಂಡರು. ಈ ಸಂದರ್ಭ ಪರಮಹಂಸರ ಒಂದು ಪ್ರಸಂಗವನ್ನು ನೆನಪಿಗೆ ತರುತ್ತದೆ. 'ರಾಮಕೃಷ್ಣ ಪರಮಹಂಸರ ಭೇಟಿಗೆಂದು ನರೇಂದ್ರನು ಮೊದಲ ಸಲ ದಕ್ಷಿಣೇಶ್ವರಕ್ಕೆ ಹೋದಾಗ ಎಷ್ಟೋ ವರ್ಷಗಳ ನಂಟಿರುವಂತೆ ಪರಮಹಂಸರು ನರೇಂದ್ರನನ್ನು ಅಪ್ಪಿ ಮುದ್ದಾಡಿ ಬರಮಾಡಿಕೊಂಡರಂತೆ, ನಿನ್ನ ದಾರಿ ನೋಡಿ

ನೋಡಿ ನನಗೆ ಸಾಕಾಯ್ತು. ನೀನು ಇಷ್ಟೇಕೆ ತಡ ಮಾಡಿ ಬಂದೆ? ಎಂದು ಕೇಳಿದರಂತೆ.

ಈ ಗುರು ಶಿಷ್ಯರ ಸಂಬಂಧದ ಸ್ವರೂಪ ಕೂಡ ಹಾಗೇ ಇತ್ತು. ಪೂಜ್ಯ ಸಿದ್ಧರಾಮ ಮಹಾಸ್ವಾಮಿಗಳು ನೆನಪಿಸಿಕೊಳ್ಳುವಂತೆ 'ಏಳು ವರುಷ ದೊಡ್ಡ ಸ್ವಾಮಿಗಳ ಸಾನ್ನಿಧ್ಯ ನನಗೆ ದೊರೆಯಿತು. ಆ ದಿನಗಳು ನನ್ನ ಜೀವನದಲ್ಲಿಯೇ ಅತ್ಯಂತ ಸಾರ್ಥಕವಾದ ದಿನಗಳೆಂದು ನನ್ನ ಭಾವನೆ. ನಿಜಕ್ಕೂ ಅವು ಸಂತೋಷದ ದಿನಗಳು. ಅವರ ಸೇವೆಯಲ್ಲಿ ನಾನು ಬಹಳಷ್ಟು ಕಲಿತೆ. ಸ್ವಾಮಿಗಳು ನನ್ನ ಮೇಲಿಟ್ಟ ಪ್ರೀತಿ, ವಿಶ್ವಾಸ ನನಗೇ ನಂಬಲು ಆಗುತ್ತಿರಲಿಲ್ಲ. ನನ್ನ ಓದುವ ಆಸಕ್ತಿ ನೋಡಿ 'ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಹೋಗುವುದಾದರೆ ಹೋಗಿ ಬಾ' ಎಂದು ಹೇಳುತ್ತಿದ್ದರು. ಯಾರಾದರೂ ಭಕ್ತರು ಬಂದು ಅವರೆದುರು ಎರಡು ಹಣ್ಣು ಇಟ್ಟರೆ. ಒಂದನ್ನು ನನಗೆ ಕೊಟ್ಟು ಮತ್ತೊಂದನ್ನು ತಾವು ಇಟ್ಟುಕೊಳ್ಳುತ್ತಿದ್ದರು. ಉಣಿಸುವ ತಿನಿಸುವ ವಿಚಾರದಲ್ಲಿ ಅವರದು ಇದೇ ಪ್ರೀತಿ ವಾತ್ಸಲ್ಯ. ಸಿದ್ಧರಾಮಸ್ವಾಮಿಗಳು ನೆನಪಿಸುವಂತೆ 'ಶಿವಬಸವ ಸ್ವಾಮಿಗಳ ಕಾಯಕನಿಷ್ಠೆ ಎಂತಹದು ಎಂದರೆ ಕೆಲಸದಲ್ಲಿದ್ದವರನ್ನು ಅವರು ಎಂದೂ ಕೂಗಿ ಕರೆದವರಲ್ಲ. ಕೆಲಸದಲ್ಲಿದ್ದವರನ್ನು ವಿಚಲಿತಗೊಳಿಸುವುದು ತಪ್ಪು ಎಂದು ಹೇಳುತ್ತಿದ್ದರು. ಅವರು ಕೆಲಸದ ನಿಮಿತ್ತ ಬೇರೊಂದು ಊರಿಗೆ ಹೊರಟಿದ್ದರೆ, ಆಗ ನಾವು ಬೇರೊಂದು ಕೆಲಸದಲ್ಲಿದ್ದರೆ ನಮ್ಮನ್ನು ಕರೆಯುತ್ತಿರಲಿಲ್ಲ. ತಾವೊಬ್ಬರೇ ಹೋಗಿ ಬರುತ್ತಿದ್ದರು.'

ದೊಡ್ಡ ಗುರುಗಳ ಸಾನ್ನಿಧ್ಯದಲ್ಲಿ ಸಿದ್ಧರಾಮ ಸ್ವಾಮಿಗಳು ಅನುಭವಿಸಿದ 'ಅನುಭವಲೋಕ' ದೊಡ್ಡದು. ಅವುಗಳನ್ನು ಅವರ ಮುಖದಿಂದ ಕೇಳುವುದೇ ಸೊಗಸು. ಅವರು ಹೇಳುವುದನ್ನು ಕೇಳಿದರೆ 'ಇದ್ದರೆ ಇರಬೇಕು ಹೀಗೆ ಗುರು ಶಿಷ್ಯರ ಸಂಬಂಧ' ಎಂದೆನಿಸುತ್ತದೆ. ಮಠಾಧೀಶರಾಗಿ ಇಪ್ಪತ್ತೈದು ವರುಷಗಳಾದ ಮೇಲೆ ಮೊನ್ನೆ ಪೂಜ್ಯರು ಒಂದು ಮಾತು ಹೇಳಿದರು. 'ಕರ್ನಾಟಕದ ಮಠಾಧೀಶರಲ್ಲಿಯೇ ನಾನು ಅತ್ಯಂತ ಭಾಗ್ಯಶಾಲಿ. ನಾನೇ ಪುಣ್ಯವಂತ. ಆಡದೆ ಕಲಿಸಿದ ಉತ್ತಮ ಗುರುಗಳು ಸಿಕ್ಕರು. ತಾಯಿ ತಂದೆಯಂತೆ ನೋಡಿಕೊಳ್ಳುವ ಭಕ್ತರು ದೊರೆತರು. ನಾನು ಕಂಡ ಕನಸುಗಳಿಗೆ ನೀರು ಗೊಬ್ಬರ ಹಾಕಿ ದುಡಿಯುವಂತಹ ಸಮಾನ ಮನಸ್ಕ ಸಂಗಾತಿಗಳು ಸಿಕ್ಕರು. ದುಡಿಯುವುದಕ್ಕೆ ಬೇಕಾಗುವ ಹುರುಪು, ಹುಮ್ಮಸ್ಸು, ಒಳ್ಳೆಯ ಆರೋಗ್ಯ ಇದೆ. ಮಠದ ವಿರುದ್ಧ ಯಾವುದೇ ಅಪಸ್ವರಗಳಿಲ್ಲ. ಇಂಥ ಮಠದ ಸ್ವಾಮಿಯಾಗಿರುವುದು ನನ್ನ ಸೌಭಾಗ್ಯವಲ್ಲವೆ?' ಎಂದು ಧನ್ಯತೆಯಿಂದ ನುಡಿಯುತ್ತಾರೆ ಸ್ವಾಮಿಗಳು.

**ನಿರಂಜನ ಪಟ್ಟಾಧಿಕಾರ**

ದಿನಾಂಕ ೦೬-೧೧-೧೯೮೯ ರಂದು ಪ್ರಾತಃಕಾಲದ ಮಂಗಲ ಸಮಯದಲ್ಲಿ ನಿರಂಜನ ಚರಪಟ್ಟಾಧಿಕಾರದ ಪೂರ್ವದಲ್ಲಿ ಜರುಗಬೇಕಾದ 'ಚಿನ್ಮಯಾನುಗ್ರಹದೀಕ್ಷೆ'ಯ ಕಾರ್ಯಕ್ರಮವು ನಾಗನೂರಿನ ಚೌಕಿಮಠದಲ್ಲಿ, ಮಠದ ಸಂಸ್ಥಾಪಕ ಸ್ವಾಮಿಗಳಾದ ಶ್ರೀ ಅಲ್ಲಮಪ್ರಭುಸ್ವಾಮಿಗಳು ಮತ್ತು ಶ್ರೀ ಸಿದ್ಧರಾಮಸ್ವಾಮಿಗಳ ಸಮಾಧಿಯ ಪುಣ್ಯಸ್ಥಳದಲ್ಲಿ ವಿಧ್ಯುಕ್ತವಾಗಿ ನೆರವೇರಿತು. ಆ ಕ್ಷಣದಿಂದ ಶ್ರೀ ಸಿದ್ಧರಾಮದೇವರು (ಗುರುಪಾದದೇವರು) ಶ್ರೀ ಸಿದ್ಧರಾಮ ದೇಶಿಕರಾಗಿ ರೂಪು-ಗೊಂಡರು.

೧೦-೧೧-೧೯೮೯ ನಾಗನೂರು ರುದ್ರಾಕ್ಷಿಮಠದ ದಿನಚರಿಯಲ್ಲಿ ಚಾರಿತ್ರಿಕ ದಿನ. ಅಂದು ಏಳನೆಯ ಪೀಠಾಧಿಪತಿಯಾದ ಪರಮಪೂಜ್ಯ ತ್ರಿವಿಧದಾಸೋಹಿ, ಕಾಯಕಯೋಗಿ ಶಿವಬಸವ-ಮಹಾಸ್ವಾಮಿಗಳು ತಾವು ಮನಃಪೂರ್ವಕವಾಗಿ ಇಷ್ಟಪಟ್ಟು, ತಮಗೆ ಸಮರ್ಥರೆನಿಸಿದ ತಮ್ಮ ಮೆಚ್ಚಿನ ಉತ್ತರಾಧಿಕಾರಿಗೆ ಷಟ್‌ಸ್ಥಲ ಬ್ರಹ್ಮೋಪದೇಶ ನೀಡಿದರು. ನಿರಂಜನ ಪಟ್ಟ ಕಟ್ಟಿ ಹಾರೈಸಿದರು. ಅಂದು ಶ್ರೀ ಸಿದ್ಧರಾಮದೇಶಿಕರಿಗೆ 'ಶ್ರೀ ನಿ.ಪ್ರ. ಸಿದ್ಧರಾಮಸ್ವಾಮಿಗಳು' ಎಂದು ನಾಮಕರಣ ಮಾಡುವ ಮೂಲಕ ಶ್ರೀಮಠದ ಸರ್ವ ಅಧಿಕಾರವನ್ನು ನೀಡಿದರು. ಅಂದಿನ ನಿರಂಜನ ಪಟ್ಟಾಧಿಕಾರ ಸಮಾರಂಭವು ರುದ್ರಾಕ್ಷಿಮಠದ ಸದ್ಭಕ್ತರ ಸಮ್ಮುಖದಲ್ಲಿ, ಊರಿನ ಗಣ್ಯನಾಗರಿಕರ ಎದುರಿನಲ್ಲಿ ನಾಡಿನ ಹರಗುರು ಚರಮೂರ್ತಿಗಳ ಸಾನ್ನಿಧ್ಯದಲ್ಲಿ ಮಹಾಮಹೋತ್ಸವವಾಗಿ ಜರುಗಿತು. ಚನ್ನಬಸವಣ್ಣನ ವಚನದಂತೆ.

**ತುದಿ ಮೊದಲಿಲ್ಲದ ಘನವು ನೋಡಾ**
**ಒಳ ಹೊರಗಿಲ್ಲದ ಅನುವ ನೋಡಾ**
**ಗುರು ಲಿಂಗ ಜಂಗಮ ತಾನೆಯಾಗಿ**
**ಮತ್ತೆ ತಾನೆಂಬುದೇನೂ ಇಲ್ಲದೆ ಇಪ್ಪ ಪರಿಯ ನೋಡಾ**
**ತನ್ನ ತಾ ನಿರ್ದೇಶಮಂ ಮಾಡಿಕೊಂಡು**
**ನಿಜವನೈದಿಪ್ಪ ಪರಿಯ ನೋಡಾ**

ಎನ್ನುವಂತೆ ಶಿವಯೋಗದ ಸಂಭ್ರಮದಲ್ಲಿ ನಿರಂಜನ ಪಟ್ಟಾಧಿಕಾರವು ನಾಗನೂರಿನಲ್ಲಿ ಜರುಗಿತು. ಆ ಮಹಾ ಸಮಾರಂಭದ ನೇತೃತ್ವವಹಿಸಿದ್ದ ಶಿವಬಸವ ಮಹಾಸ್ವಾಮಿಗಳು ಶ್ರೀ ನಿ. ಪ್ರ. ಸಿದ್ಧರಾಮ ಸ್ವಾಮಿಗಳಿಗೆ "ಸಂಪುಟ ಪತ್ರ" ನೀಡಿ "ಶ್ರೀ ಸಿದ್ಧರಾಮಸ್ವಾಮಿಗಳು ನಾಗನೂರು ರುದ್ರಾಕ್ಷಿಮಠದ

ಒಂಬತ್ತನೆಯ ಪೀಠಾಧ್ಯಕ್ಷರು" ಎಂದು ಹೃದಯ ತುಂಬಿ ಘೋಷಿಸಿದರು. ಆ ಸಮಾರಂಭಕ್ಕೆ ಸಾಕ್ಷಿಯಾದ ಎಲ್ಲರೂ ಕರತಾಡನದ ಮೂಲಕ ಸಿದ್ಧರಾಮಸ್ವಾಮಿಗಳಿಗೆ ತಮ್ಮ ಬೆಂಬಲವನ್ನು ಸೂಚಿಸಿದರು. ಭಕ್ತಿಪೂರ್ವಕ ಅಭಿನಂದನೆಗಳನ್ನು ಅರ್ಪಿಸಿದರು. ಗದುಗಿನ ತೋಂಟದಾರ್ಯ ಮಠದ ಶ್ರೀಗಳು, ಹೊಸಪೇಟೆ ಶ್ರೀಗಳು, ಹುಬ್ಬಳ್ಳಿ ಮೂರುಸಾವಿರಮಠದ ಶ್ರೀಗಳು, ನಿಡಸೋಸಿಯ ಶ್ರೀಗಳು ನೂತನ ಪೀಠಾಧ್ಯಕ್ಷರಾದ ಶ್ರೀ ನಿ. ಪ್ರ. ಸಿದ್ಧರಾಮಸ್ವಾಮಿಗಳಿಗೆ ಉತ್ತರೋತ್ತರ ಅಭ್ಯುದಯವನ್ನು ಹಾರೈಸಿದರು. ಇದೇ ಸಂದರ್ಭದಲ್ಲಿ ಪೂಜ್ಯ ಶಿವಬಸವ ಮಹಾಸ್ವಾಮಿಗಳ ಶತಮಾನೋತ್ಸವವೂ ೧೧-೧೧-೧೯೮೯ ಅದ್ದೂರಿಯಾಗಿ ಜರುಗಿತು. ಎರಡು ದಿನ ರುದ್ರಾಕ್ಷಿಮಠದ ಪರಿಸರವು ಭಕ್ತಿಭಾವದಲ್ಲಿ, ಉಲ್ಲಾಸದಲ್ಲಿ ತೇಲಾಡಿತು.

**ಬದಲಾದ ಸಮಾಜ, ಬದಲಾದ ಸೇವೆ**

ಸಮಾಜ ಬದಲಾದ ಹಾಗೆ ಸಮಾಜಸೇವೆಯ ಸ್ವರೂಪ ಕೂಡ ಬದಲಾಗಬೇಕು, ಅದು ಅನಿವಾರ್ಯ. ಕಾಲಕ್ಕೆ ತಕ್ಕಂತೆ ಹಳೆಯ ಸೇವೆಗಳು ನವೀಕರಣಗೊಳ್ಳಬೇಕು. ಉನ್ನತೀಕರಣ ಸಾಧಿಸಬೇಕು. ಜೊತೆಗೆ ಕಾಲವು ಕೇಳುವ ಹೊಸ ಸೇವೆಗಳನ್ನು ಸೃಷ್ಟಿಸಬೇಕು. ಸೇವೆಯ ನಿರಂತರ ಪ್ರಕ್ರಿಯೆಯಲ್ಲಿಯೇ ಸಮಾಜದ ಅಭಿವೃದ್ಧಿ ಇದೆ. ಶಿವಬಸವ ಮಹಾಸ್ವಾಮಿಗಳು ರುದ್ರಾಕ್ಷಿಮಠದ ಸೇವೆಯಾಗಿ ಪ್ರಸಾದನಿಲಯ ಪ್ರಾರಂಭಿಸಿದರು. ಅದು ಆ ಕಾಲದ ಅಗತ್ಯವಾಗಿತ್ತು. ಅದು ಗ್ರಾಮೀಣ ಬಡ ಮಕ್ಕಳ ಶಿಕ್ಷಣಕ್ಕೆ ವರದಾನವಾಗಿ ಪರಿಣಮಿಸಿತು. ಅದಾದ ಮೇಲೆ ಪೂಜ್ಯರು ಶಿಕ್ಷಣ ಸಂಸ್ಥೆ ಹುಟ್ಟುಹಾಕಿದರು.

ಅನಂತರದಲ್ಲಿ ಬಂದ ಪ್ರಭುಸ್ವಾಮಿಗಳು ಪ್ರಸಾದನಿಲಯದ ಜೊತೆಗೆ ಕೈಗಾರಿಕಾ ತರಬೇತಿ ಕೇಂದ್ರ, ಪಾಲಿಟೆಕ್ನಿಕ್ ಕೋರ್ಸುಗಳನ್ನು ಪ್ರಾರಂಭಿಸಿದರು. ಪೂಜ್ಯ ಸಿದ್ಧರಾಮಸ್ವಾಮಿಗಳು ಅಧಿಕಾರಕ್ಕೆ ಬರುವ ವೇಳೆಗೆ ಶಿಕ್ಷಣ ಕ್ಷೇತ್ರದ ಸಮಸ್ಯೆಗಳು ಸವಾಲುಗಳು ಬೇರೆಯಾಗಿದವು. ೧೯೮೦ರ ದಶಕದಲ್ಲಿ ಸರಕಾರವು ವಿದ್ಯಾರ್ಥಿಗಳಿಗಾಗಿ ವಸತಿ ನಿಲಯಗಳನ್ನು ಪ್ರಾರಂಭಿಸಿತು. ೧೯೯೦ರ ದಶಕದಲ್ಲಿ ಶಾಲೆ, ಹೈಸ್ಕೂಲುಗಳನ್ನು ಹಳ್ಳಿ ಹಳ್ಳಿಗೆ ವಿಸ್ತರಿಸಿತು. ಇದರಿಂದ ಗ್ರಾಮೀಣ ಬಡ ವಿದ್ಯಾರ್ಥಿಗಳು ವಸತಿ ನಿಲಯಗಳನ್ನು ಅರಸಿ ಹೋಗುವ ತಾಪತ್ರಯ ತಪ್ಪಿತು. ಇದೇ ವೇಳೆಗೆ ಶಿಕ್ಷಣದಲ್ಲಿ ಉನ್ನತ ಶಿಕ್ಷಣ, ಜ್ಞಾನದಲ್ಲಿ ತಂತ್ರಜ್ಞಾನಗಳು ಆದ್ಯತೆಯ ಕ್ಷೇತ್ರಗಳಾಗಿ ಮಹಿಳೆಯರ ಕಲಿಕೆ, ಆ ಮೂಲಕ ಅವರ ಸಬಲೀಕರಣವೂ ಶಿಕ್ಷಣದ ಧೋರಣೆಯಾಯಿತು. ಇಂಥ ಸನ್ನಿವೇಶದಲ್ಲಿ ಸ್ವಾಮಿಗಳಾದ ಸಿದ್ಧರಾಮ ಸ್ವಾಮಿಗಳು ರುದ್ರಾಕ್ಷಿಮಠದ ಸೇವೆಯನ್ನು ಹೊಸ ರೀತಿಯಿಂದ ವಿಸ್ತರಿಸುವುದು ಅನಿವಾರ್ಯವಾಯಿತು.

ಶಾಲೆ, ಕಾಲೇಜುಗಳು ಶೈಕ್ಷಣಿಕ ಸವಲತ್ತುಗಳಿಂದ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಪೂರಕವಾದ ಪರಿಸರದಿಂದ ಆಕರ್ಷಕವಾಗಿರುವಂತೆ ನೋಡಿಕೊಳ್ಳಬೇಕಾಯಿತು. ವರ್ಗದ ಕೋಣೆಗಳು ಸುಸಜ್ಜಿತವಾಗಿರಬೇಕು. ಕಟ್ಟಡಗಳು ಸುಂದರಾಗಿರಬೇಕು. ಆವರಣ ಆರೋಗ್ಯಪೂರ್ಣ-ವಾಗಿರಬೇಕು. ಇತ್ಯಾದಿ ಸಂಗತಿಗಳು ಶಿಕ್ಷಣ ಸಂಸ್ಥೆಯ ಗುಣಮಟ್ಟಕ್ಕೆ ಮಾನದಂಡಗಳಾದವು ಇಂಥ ಸಂದರ್ಭದಲ್ಲಿ ಸಮಕಾಲೀನ ಪ್ರಜ್ಞೆಯ ಸಂವೇದನಾಶೀಲ ಸಿದ್ಧರಾಮಸ್ವಾಮಿಗಳು ಮೊದಲಿಗೆ ಶಾಲೆ ಕಾಲೇಜುಗಳಿಗಾಗಿ ಸ್ವತಂತ್ರ ಸುಸಜ್ಜಿತ ಸುಂದರ ಕಟ್ಟಡಗಳನ್ನು ನಿರ್ಮಿಸಲು ಮುಂದಾದರು.

ಪೂಜ್ಯರು ಪೀಠಾಧ್ಯಕ್ಷರಾಗಿ ಬಂದ ಹೊಸತರದಲ್ಲಿ ಕೈಗಾರಿಕಾ ತರಬೇತಿ ಕೇಂದ್ರ, ಪಾಲಿಟೆಕ್ನಿಕ್ ಕಾಲೇಜಿಗಾಗಿ ಸ್ವತಂತ್ರ ಕಟ್ಟಡಗಳನ್ನು ಕಟ್ಟಿಸಿದರು. ಜೊತೆಗೆ ಮಹಿಳಾ ಶಿಕ್ಷಣ ಮಹಾವಿದ್ಯಾಲಯ-ವನ್ನು ಪ್ರಾರಂಭಿಸಿದರು. ಡಿ.ಎಡ್. ಕಾಲೇಜು ಪ್ರಾರಂಭಿಸಿದರು. ಅವುಗಳಿಗೂ ಸ್ವತಂತ್ರ ಕಟ್ಟಡಗಳನ್ನು ನಿರ್ಮಿಸಿದರು. ಬೆಳಗಾವಿ ಸಮೀಪದ ಅಗಸಗಿಯಲ್ಲಿ ಹೈಸ್ಕೂಲು ಪ್ರಾರಂಭಿಸಿದರು (೧೯೯೩). ಮೂಲ ರುದ್ರಾಕ್ಷಿಮಠವಿರುವ ನಾಗನೂರಿನಲ್ಲಿ ಹೈಸ್ಕೂಲು ಇತ್ತು, ಆದರೆ ಕಟ್ಟಡವಿರಲಿಲ್ಲ. ಪೂಜ್ಯರು ಉತ್ತರಾಧಿಕಾರಿಯಾಗಿ ನಾಗನೂರು ಪ್ರವೇಶಿಸಿದ ದಿನವೇ ಅದರ ಕಟ್ಟಡಕ್ಕೆ ಅಡಿಗಲ್ಲು ಸಮಾರಂಭ ಜರುಗಿತ್ತು. ಏಳೆಂಟು ವರ್ಷಗಳಾದರೂ ಹೈಸ್ಕೂಲು ಕಟ್ಟಡ ಅಡಿ ಬಿಟ್ಟು ಮೇಲೇಳಲೇ ಇಲ್ಲ. ಇದು ಸಿದ್ಧರಾಮಸ್ವಾಮಿಗಳಿಗೆ ಕೊರತೆ ಎನಿಸಿತು. ತಮ್ಮ ಉತ್ತರಾಧಿಕಾರದ ಸಮಯಕ್ಕೆ ಆ ಕಟ್ಟಡದ ಅಡಿಗಲ್ಲು ಕಾರ್ಯಕ್ರಮ ನೆರವೇರಿದ್ದರಿಂದ ಅದರ ಜೊತೆಗೆ ಭಾವಾನಾತ್ಮಕವಾಗಿ ಸಂಬಂಧವು ಇತ್ತು. ನಾಗನೂರು ಹಾಗೂ ಸುತ್ತಲಿನ ಗ್ರಾಮೀಣ ಮಕ್ಕಳು ಸುಂದರ ಪರಿಸರ, ಸುಸಜ್ಜಿತ ಕಟ್ಟಡದಲ್ಲಿ ಕುಳಿತು ಕಲಿಯಬೇಕೆಂದು ಹಂಬಲಿಸಿದರು. ಹೈಸ್ಕೂಲು ಆಡಳಿತವನ್ನು ತಮ್ಮ ಕಕ್ಷೆಗೆ ತೆಗೆದುಕೊಂಡು ೧೯೯೬ರಲ್ಲಿ ಕಟ್ಟಡವನ್ನು ನೆರವೇರಿಸಿದರು. ಅಲ್ಲದೆ ನಾಗನೂರಿನ ಮಕ್ಕಳಿಗಾಗಿ ಐ.ಟಿ.ಐ. ಮತ್ತು ಡಿ.ಎಡ್. ಕಾಲೇಜುಗಳನ್ನು ಪ್ರಾರಂಭಿಸಿದರು. ಧಾರವಾಡದ 'ಸಿದ್ಧರಾಮ

ಮಾರ್ಗದರ್ಶಿ'ಯಲ್ಲಿ ಕನ್ನಡ, ಆಂಗ್ಲ ಕಾನ್ವೆಂಟ ಶಾಲೆಗಳಿಂದ ಹಿಡಿದು ಬಿ.ಎಡ್. ಕಾಲೇಜಿನವರೆಗೆ ಶಿಕ್ಷಣ ಸಮುಚ್ಚಯವನ್ನು ನಿರ್ಮಿಸಿದರು. ದೆಹಲಿಯಲ್ಲಿ ಐ.ಎ.ಎಸ್. ಪರೀಕ್ಷೆಯ ತರಬೇತಿಗೆಂದು ಬರುವ ಬಡ ಉದ್ಯೋಗಾಂಕಾಕ್ಷಿಗಳ ವಸತಿಗಾಗಿ ಭವ್ಯವಾದ ಬಂಗಲೆಯನ್ನು ಖರೀದಿಸಿದರು.

ಸಿದ್ಧರಾಮಸ್ವಾಮಿಗಳು ಶಿಕ್ಷಣರಂಗದಲ್ಲಿ ಮಾಡಿದ ಮತ್ತೊಂದು ಮಹತ್ವದ ಸಾಧನೆಯೆಂದರೆ ಎಸ್.ಜಿ. ಬಾಳೇಕುಂದ್ರಿ ತಾಂತ್ರಿಕ ಮಹಾವಿದ್ಯಾಲಯವನ್ನು ಬೆಳಗಾವಿಯಲ್ಲಿ ಪ್ರಾರಂಭಿಸಿದುದು. ಲಿಂಗಾಯತ ಇಷ್ಟಲಿಂಗ ಪರಿಕಲ್ಪನೆಯ ವಿಶಿಷ್ಟ ವಾಸ್ತುವಿನ್ಯಾಸದಲ್ಲಿ ತಲೆಯೆತ್ತಿದ ಈ ಕಾಲೇಜಿನ ಭವ್ಯ ಕಟ್ಟಡ ಅತ್ಯಂತ ಆಕರ್ಷಕವಾಗಿದೆ. ನಗರದ ಮಧ್ಯವರ್ತಿ ಸ್ಥಳದಲ್ಲಿರುವ ಈ ಕಾಲೇಜು ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಅನುಕೂಲಕರವಾಗಿದೆ. ಕಾಲೇಜಿನ ಪಕ್ಕದಲ್ಲಿಯೇ ವಿದ್ಯಾರ್ಥಿನಿಯರಿಗಾಗಿ ವಸತಿನಿಲಯವಿದೆ. ವಿದ್ಯಾರ್ಥಿಗಳಿಗಾಗಿ ೭೦ ಕೋಣೆಗಳಿರುವ ವಿಶಾಲ ಸುಸಜ್ಜಿತ ಕಟ್ಟಡವನ್ನು, ವಸತಿನಿಲಯದ ಸಲುವಾಗಿಯೇ ಶಿವಬಸವ ನಗರದಲ್ಲಿ ಖರೀದಿಸಿದ್ದಾರೆ. ಈ ಕಾಲೇಜು ಪರಿಣತ ಬೋಧಕರಿಂದ, ಉತ್ತಮ ಪರಿಸರದಿಂದ ಒಳ್ಳೆಯ ಫಲಿತಾಂಶಗಳನ್ನು ನೀಡುತ್ತಿದೆ. ನಗರದ ಪ್ರತಿಷ್ಠಿತ ಕಾಲೇಜುಗಳಲ್ಲಿ ಒಂದೆನಿಸಿದೆ. ಇದೆಲ್ಲ ಸಿದ್ಧರಾಮ ಸ್ವಾಮಿಗಳ ಸೇವೆಯ ಫಲವೆಂದೇ ಹೇಳಬೇಕು.

**ಪುಸ್ತಕ ಪ್ರೀತಿ**

ಪೂಜ್ಯರಿಗೆ ಪುಸ್ತಕಗಳೆಂದರೆ ಪಂಚಪ್ರಾಣ. ಅವರು ಪುಸ್ತಕಗಳನ್ನು ಕೈಯಲ್ಲಿ ಹಿಡಿಯದ, ಓದದ ದಿನಗಳೇ ಇಲ್ಲವೆನ್ನಬಹುದು. ಅವರು ಪುಸ್ತಕಗಳನ್ನು ಓದುವ ಕ್ಷಣಗಳು ಅತ್ಯಂತ ಆನಂದದ ಕ್ಷಣಗಳು; ತಾವು ಓದಿದ ವಚನಕಾರರ ಚಿಂತನೆ, ವಚನಗಳ ತಾತ್ಪರ್ಯ, ಭಕ್ತಿ ಸಾಹಿತ್ಯ, ಜನಪದ ಸಾಹಿತ್ಯ, ತತ್ವಶಾಸ್ತ್ರದ ಮಹತ್ವದ ಸಂಗತಿಗಳನ್ನು ರಸವತ್ತಾಗಿ ವಿವರಿಸುತ್ತಾರೆ. ಅವುಗಳನ್ನು ಪ್ರವಚನ ಆಶೀರ್ವಚನಗಳಲ್ಲಿ ಉದ್ಧರಿಸುತ್ತಾರೆ. ತಾವು ಅನುಭವಿಸಿದಂಥ ಆನಂದವನ್ನು ಇತರರೊಂದಿಗೂ ಹಂಚಿಕೊಳ್ಳುತ್ತಾರೆ. ಬರವಣಿಗೆಯಲ್ಲಿಯೂ ಪೂಜ್ಯರದು ಅದೇ ತನ್ಮಯತೆ, ಅದೇ ಅನುಭೂತಿ. ವಿನೋಬಾ ಭಾವೆ ಅವರ 'ಭಕ್ತಿ ದರ್ಶನ' ಕೃತಿಯನ್ನು ಅನುವಾದಿಸುತ್ತಿರುವ ಸಂದರ್ಭದಲ್ಲಿ ಎರಡು ಮೂರು ಬಾರಿ ಭೆಟ್ಟಿಯಾಗಿದ್ದೆ. ಆಗೆಲ್ಲ ಅವರು ವಿನೋಬಾಜಿಯವರ ಭಾಷೆಯ ಸರಳತೆ, ಭಕ್ತಿನಿರ್ಭರತೆ, ಹೆಜ್ಜೆ ಹೆಜ್ಜೆಗೆ ಹೇಳುವ ದೃಷ್ಟಾಂತಗಳನ್ನು ಓದಿ ತಾವು ಅನುಭವಿಸಿದ ಆನಂದವನ್ನು ರಸವತ್ತಾಗಿ ವಿವರಿಸಿದರು. ಪ್ರವಚನಕಾರರಿಗೆ. ಪುರಾಣಕಾರರಿಗೆ ಈ ಗ್ರಂಥ ತುಂಬ ಉಪಯುಕ್ತ ವಾದುದೆಂದೂ ಹೇಳಿದರು. ಹೀಗೆ ಅವರ ಓದು ನನ್ನಂಥ ಅನೇಕರ, ಸುತ್ತಮುತ್ತ ಇದ್ದವರ ಅರಿವನ್ನು ವಿಸ್ತರಿಸುತ್ತ ಇರುತ್ತದೆ.

ಓದುವವರು, ಬರೆಯುವವರು ಎಂದರೆ ಅವರಿಗೆ ತುಂಬ ಇಷ್ಟ ಅವರನ್ನು ಸಮಾನ ಮನಸ್ಕರೆಂದು ಅವರೊಂದಿಗೆ ಚರ್ಚೆ ನಡೆಸುತ್ತಾರೆ. ಒಟ್ಟಾರೆ ಪುಸ್ತಕಲೋಕದ ಸಹವಾಸ ಅವರಿಗೆ ಅಪ್ಯಾಯಮಾನವಾದುದು. ಬೆಳಗಾವಿಯಲ್ಲಿದ್ದರೆ ಅವರು ಹೆಚ್ಚಿನ ಸಮಯ ಕಳೆಯುವುದು ಗ್ರಂಥಾಲಯದಲ್ಲಿಯೇ. ಪ್ರವಾಸದಲ್ಲಿರಲಿ, ಸಭೆ ಸಮಾರಂಭಗಳಿಗೆ ಹೋಗಲಿ ಪುಸ್ತಕಗಳೇ ಅವರ ಸಂಗಾತಿಗಳಾಗಿರುತ್ತವೆ. ಪುಸ್ತಕಗಳ ಈ ಸಾಂಗತ್ಯ ಅವರಿಗೆ ಬಾಲ್ಯದಿಂದಲೇ ಬೆಳೆದು ಬಂದಿರುವಂತಹದ್ದು. ಬಾಲ್ಯದಲ್ಲಿ ಹಿತೈಷಿಗಳಾದವರು 'ಹಣ್ಣು ತಿನ್ನು' ಎಂದು ಹಣ ಕೊಟ್ಟರೆ ಇವರು ಹಣ್ಣು ತಿನ್ನುತ್ತಿರಲಿಲ್ಲ. ಪುಸ್ತಕ ಕೊಂಡು ಓದುತ್ತಿದ್ದರು. ಬಹುಶಃ ಪೂಜ್ಯರ ಈ ಆಸಕ್ತಿಯೇ ಬೃಹತ್ತಾದ ಮತ್ತು ಮಹತ್ತಾದ ಗ್ರಂಥಾಲಯವೊಂದರ ಜನ್ಮಕ್ಕೆ ಪ್ರೇರಣೆಯಾಯಿತೆನ್ನಬೇಕು

ಕುತೂಹಲಕ್ಕಾಗಿ ಗ್ರಂಥಾಲಯದ ನಿರ್ಮಾಣಕ್ಕೆ ಕಾರಣವೇನೆಂದು ಕೇಳಿದಾಗ ಪೂಜ್ಯರು ಹೇಳಿದರು. 'ಮೊದಲನೆಯ ಕಾರಣ ನನ್ನ ಆಸಕ್ತಿ, ಎರಡನೆಯದ್ದು ಎಸ್. ಆರ್. ಗುಂಜಾಳ ಅವರು ಸಿಕ್ಕಿದ್ದು'. ನನ್ನ ಕನಸಿಗೆ ರೂಪುಕೊಡುವ ಶಿಲ್ಪಿಯಾಗಿ ಗುಂಜಾಳ ಅವರು ದೊರೆತದ್ದು ಈ ಗ್ರಂಥಾಲಯ ಈ ಸ್ವರೂಪದಲ್ಲಿ ಬೆಳೆಯಲು ಕಾರಣವಾಯಿತು. ಗ್ರಂಥಾಲಯದ ಸಲುವಾಗಿ ಹೂಡಿದ ಹಣ, ಮಾಡಿದ ಖರ್ಚಿನ ಬಗ್ಗೆ ಸ್ವಾಮಿಗಳಿಗೆ ಸಾರ್ಥಕಭಾವ ಇದೆ. ಇನ್ನೂ ಸಾಕಷ್ಟು ಹಣ ಹೂಡುವ ಹಂಬಲವೂ ಇದೆ. ಅದನ್ನು ಆಧುನೀಕರಣಗೊಳಿಸುವ ಯೋಚನೆಯೂ ಇದೆ. 'ಒಂದು ಸಾವಿರ ರೂಪಾಯಿ ಉತ್ಪನ್ನ ಇರುವ ಮಠದಲ್ಲಿ ಹತ್ತು ಸಾವಿರ ರೂಪಾಯಿ ಪುಸ್ತಕಗಳನ್ನು ಸಂಗ್ರಹಿಸಿದವ ನಾನು. ಇನ್ನು ಲಕ್ಷ ರೂಪಾಯಿ ಉತ್ಪನ್ನ ಇರುವ ಮಠದಲ್ಲಿ ಪುಸ್ತಕಗಳನ್ನು ಸಂಗ್ರಹಿಸುವುದೇನು ದೊಡ್ಡ ಕೆಲಸ?' ಎಂದು ಅತ್ಯಂತ ಉತ್ಸಾಹದಿಂದ ಹೇಳುತ್ತಾರೆ. ಹೊಸ ಪುಸ್ತಕಗಳನ್ನು ನೋಡುವ ಸಲುವಾಗಿ ಖರೀದಿಸುವ ಸಲುವಾಗಿಯೇ ಪೂಜ್ಯರು ಪ್ರತಿಯೊಂದು ಅಖಿಲ ಭಾರತ ಕನ್ನಡ ಸಾಹಿತ್ಯ

ಸಮ್ಮೇಳನಕ್ಕೆ ತಪ್ಪದೆ ಹೋಗುತ್ತಾರೆ. ಧರ್ಮ, ದರ್ಶನ, ಸಾಹಿತ್ಯ, ಸಂಸ್ಕೃತಿ, ಇತಿಹಾಸಕ್ಕೆ ಸಂಬಂಧಿಸಿದ ಅನೇಕ ಪುಸ್ತಕಗಳನ್ನು ಖರೀದಿಸಿ ದೊಡ್ಡದೊಂದು ಪುಸ್ತಕಗಂಟನ್ನೇ ತರುತ್ತಾರೆ. ಗ್ರಂಥಭಂಡಾರವನ್ನು ದಿನೇ ದಿನೇ ವಿಸ್ತರಿಸುತ್ತಾರೆ.

ಎಸ್. ಆರ್. ಗುಂಜಾಳ ಅವರು ಇದ್ದಾಗ ಗ್ರಂಥಾಲಯ ಬೆಳೆಯಿತು. ಅವರು ಬಿಟ್ಟ ಮೇಲೆ ಅದರ ಉಸ್ತುವಾರಿ ಮಾತ್ರ ನಡೆದಿದೆ. ಅದನ್ನು ಇನ್ನು ವಿಸ್ತಾರವಾಗಿ ಬೆಳೆಸಬೇಕಾಗಿದೆ. ಅಪರೂಪದ ಗ್ರಂಥಗಳನ್ನು ಡಿಜಿಟಲ್ ತಂತ್ರಜ್ಞಾನಕ್ಕೆ ಅಳವಡಿಸಬೇಕು. ಲಿಂಗಾಯತ ಧರ್ಮ ದರ್ಶನ ಸಾಹಿತ್ಯ ಸಂಸ್ಕೃತಿ, ಇತಿಹಾಸ ಕುರಿತು ಅಧ್ಯಯನ ಮಾಡುವವರಿಗೆ ಸುಸಜ್ಜಿತ ಆಕರಗಳ, ಸಂಪನ್ಮೂಲಗಳ ಕೇಂದ್ರವನ್ನಾಗಿ ರೂಪಿಸಬೇಕು–ಎಂದು ಗ್ರಂಥಾಲಯದ ಬಗೆಗಿನ ಹೊಸ ಕನಸುಗಳನ್ನು ಆಸಕ್ತರ ಮುಂದೆ ಬಿಚ್ಚಿಡುತ್ತಾರೆ.

ಸಿದ್ಧರಾಮಸ್ವಾಮಿಗಳು ರೂಪಿಸಿದ ಮತ್ತು ರೂಪಿಸಬೇಕೆಂದಿರುವ ಲಿಂಗಾಯತ ಸಂಶೋಧನ ಕೇಂದ್ರ ಗ್ರಂಥಾಲಯವು ಮಠಗಳಿಗೆ ವಿದ್ಯಾಕೇಂದ್ರಗಳಿಗೆ, ವಿಶ್ವವಿದ್ಯಾಲಯಗಳಿಗೆ ಮಾದರಿಯಾಗು–ವಂತಹದು. 'ಶ್ರೀ ಸಿದ್ಧರಾಮಸ್ವಾಮಿಗಳು ಮಠಾಧೀಶರು ಮಾತ್ರವಲ್ಲ ಪುಸ್ತಕ ಭಾಂಡಾರಿಗಳೂ ಹೌದು.' ಎಂದು ವಿದ್ವತ್‌ಲೋಕ ಅವರನ್ನು ಗೌರವಿಸುತ್ತಿದೆ. ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಮೊದಲನೆಯ ಘಟಿಕೋತ್ಸವದಲ್ಲಿ ಪೂಜ್ಯರಿಗೆ ಗೌರವ ಡಾಕ್ಟರೇಟ ಪದವಿ ಪ್ರದಾನ ಮಾಡಿತು. ಬಹುಶಃ ಅವರ ಪುಸ್ತಕ ಪ್ರೀತಿ, ವಿದ್ವತ್ ಪ್ರೀತಿ, ಗ್ರಂಥಾಲಯ ನಿರ್ಮಿತಿಗೆ ಸಂದಿರುವ ದೊಡ್ಡ ಗೌರವವೆನ್ನಬೇಕು.

**ಸಾಂಸ್ಕೃತಿಕ ಆಸಕ್ತಿ**

ರುದ್ರಾಕ್ಷಿಮಠ ಸಾಹಿತ್ಯ, ಕಲೆ, ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿಯೂ ಬೆಳೆದು ನಾಡಿನ ಗಮನ ಸೆಳೆದಿದೆ. ಶ್ರೀಮಠದಲ್ಲಿ ಕಾರ್ಯಕ್ರಮಗಳು ನಿರಂತರ ನಡೆದಿರುತ್ತವೆ. ಕೆಲವೊಂದು ಕಾರ್ಯಕ್ರಮಗಳು ಶ್ರೀಮಠದ ಸಂಘಟನೆಯಲ್ಲಿ ಜರುಗಿದರೆ ಮತ್ತೆ ಕೆಲವು ಇತರ ಸಂಸ್ಥೆಗಳ ಸಹಯೋಗದಲ್ಲಿ ಜರುಗುತ್ತವೆ. ಅಕಾಡೆಮಿ, ವಿಶ್ವವಿದ್ಯಾಲಯಗಳು, ಇತರ ಸಾಹಿತ್ಯಿಕ ಸಾಂಸ್ಕೃತಿಕ ಸಂಘಟನೆಗಳು ಸಹಕಾರ ಕೇಳಿ ಬಂದರೆ ಪೂಜ್ಯರು ಅತ್ಯಂತ ಸಂತೋಷದಿಂದ ನೆರವಿನ ಹಸ್ತ ಚಾಚುತ್ತಾರೆ. ಕಾರ್ಯಕ್ರಮಗಳ ಯಶಸ್ಸಿಗೆ ಬೇಕಾಗುವ ಎಲ್ಲ ಅನುಕೂಲಗಳನ್ನು ಕಲ್ಪಿಸುತ್ತಾರೆ. ಕಾರ್ಯಕ್ರಮಗಳಿಗೆ ಬೆಂಬಲವಾಗಿ ನಿಲ್ಲುತ್ತಾರೆ. ಇದಕ್ಕೆಲ್ಲ ಅವರ ಸಾಹಿತ್ಯಿಕ ಸಾಂಸ್ಕೃತಿಕ ಆಸಕ್ತಿಯೇ ಕಾರಣವೆನ್ನಬೇಕು. ಪ್ರತಿ ವರುಷ ಡಿಸೆಂಬರ್ ತಿಂಗಳು ೬, ೭ ಮತ್ತು ೮ ರಂದು ಜರುಗುವ ಶಿವಬಸವಸ್ವಾಮಿಗಳ ಜಯಂತಿ ಉತ್ಸವ ಮತ್ತು ಪ್ರಭುಸ್ವಾಮಿಗಳ ಪುಣ್ಯ ಸ್ಮರಣೆ ಕಾರ್ಯಕ್ರಮಗಳನ್ನು ಅತ್ಯಂತ ಅರ್ಥಪೂರ್ಣವಾಗಿ ನಡೆಸುತ್ತಾರೆ. ಸೇವಾರತ್ನ ಪ್ರಶಸ್ತಿ ಪ್ರದಾನ, ಪುಸ್ತಕಗಳ ಲೋಕಾರ್ಪಣೆ, ಸಾಂಸ್ಕೃತಿಕ ಚಟುವಟಿಕೆಗಳಿಂದ ಈ ಮೂರು ದಿನಗಳ ಕಾರ್ಯಕ್ರಮವು ಬೆಳಗಾವಿಯ 'ನುಡಿಹಬ್ಬ'ದಂತೆ ಆಚರಣೆಗೊಳ್ಳುತ್ತದೆ. ಶ್ರೀಮಠದ ಸಹಕಾರ ಹಾಗೂ ಸಕ್ರೀಯ ಸಹಯೋಗದಿಂದ ರಾಜ್ಯ, ರಾಷ್ಟ್ರ ಮಟ್ಟದ ಸಮ್ಮೇಳನಗಳು, ವಿಚಾರ ಸಂಕಿರಣಗಳು, ತರಬೇತಿ ಶಿಬಿರಗಳು, ಕಲಾ ಉತ್ಸವಗಳು, ಜರುಗುತ್ತಲೇ ಇರುತ್ತವೆ. ಇಂಥ ಕಾರ್ಯಕ್ರಮಗಳನ್ನು ಸಂಘಟಿಸಿ, ಯಶಸ್ಸಿನಿಂದ ನಿರ್ವಹಿಸುವುದಕ್ಕಾಗಿಯೇ ಪೂಜ್ಯರು 'ಲಿಂಗಾಯತ ಅಧ್ಯಯನ ಅಕಾಡೆಮಿ' ಹುಟ್ಟು ಹಾಕಿದ್ದಾರೆ. ಅದರ ಅಡಿಯಲ್ಲಿ ಜರುಗಿದ ಬೆಳಗಾವಿ ಜಿಲ್ಲೆಯ ವಿದ್ವತ್ಪರಂಪರೆ, ಕರ್ನಾಟಕ ಏಕೀಕರಣಕ್ಕೆ ಬೆಳಗಾವಿ ಜಿಲ್ಲೆಯ ಕೊಡುಗೆ, ಸಿದ್ಧರಾಮ ಮರು ಅಧ್ಯಯನ ಮೊದಲಾದ ವಿಚಾರಸಂಕಿರಣಗಳು ವಿದ್ವತ್‌ವಲಯದಲ್ಲಿ ಮಹತ್ವದ ಚರ್ಚೆಯನ್ನು ಹುಟ್ಟುಹಾಕಿವೆ. ಅಲ್ಲದೆ ಈ ಕಾರ್ಯಕ್ರಮಗಳು ಸ್ಥಳೀಯ ಅಧ್ಯಯನಕ್ಕೆ ಮಾದರಿಯೆನಿಸಿವೆ.

'ಬೆಳಗಾವಿ ಜಿಲ್ಲೆಯ ವಿದ್ವತ್ಪರಂಪರೆ' ವಿಚಾರ ಸಂಕಿರಣವು ೨೦೦೬ರಲ್ಲಿ ಸೆಪ್ಟಂಬರ್ ೯ ಮತ್ತು ೧೦ ರಂದು ಜರುಗಿತು. ಈ ಸಂದರ್ಭದಲ್ಲಿ ಜಿಲ್ಲೆಯ ಒಂಬತ್ತು ಜನ ವಿದ್ವಾಂಸರ ವಿದ್ವತ್ತಿನ ಬಗ್ಗೆ ಚರ್ಚೆ ನಡೆಯಿತು. ಗಂಗಾಧರ ಮಡಿವಾಳೇಶ್ವರ ತುರಮರಿ, ಕೆ. ಜಿ. ಕುಂದಣಗಾರ, ಶಂಬಾ ಜೋಶಿ, ಎಸ್. ಸಿ. ನಂದಿಮಠ, ಆ. ನೇ. ಉಪಾಧ್ಯೆ ಈ ಐವರು ಬೆಳಗಾವಿ ಜ್ಞಾನಮಂದಿರಕ್ಕೆ ಕಳಸಪ್ರಾಯರಾದ ವಿದ್ವಾಂಸರು. ಇವರ ಪರಂಪರೆಯನ್ನು ಮುಂದುವರಿಸಿದವರು ಡಿ. ಎಸ್. ಕರ್ಕಿ, ಪ್ರ. ಗೋ. ಕುಲಕರ್ಣಿ, ಬೆಟಗೇರಿ ಕೃಷ್ಣಶರ್ಮ, ಎಮ್. ಬಿ. ನೇಗಿನಹಾಳ ಈ ಒಂಬತ್ತು ಜನ ವಿದ್ವಾಂಸರು ಕನ್ನಡ ನಾಡಿನ ಸಾಹಿತ್ಯ, ಭಾಷೆ, ಸಂಸ್ಕೃತಿಗೆ ಕೊಟ್ಟ ಗಮನಾರ್ಹ ಕೊಡುಗೆಗಳನ್ನು ವಿದ್ವಾಂಸರು ಗುರುತಿಸಿದರು. ಹಿರಿಯ ಸಂಶೋಧಕರಾದ ಟಿ.ವಿ. ವೆಂಕಟಾಚಲಶಾಸ್ತ್ರಿ, ಹಂಪನಾ ಮೊದಲಾದವರು ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದರು. ಇದೇ ಮಾದರಿಯಲ್ಲಿ ಸಿದ್ಧರಾಮಸ್ವಾಮಿಗಳ ನೇತೃತ್ವದಲ್ಲಿ ನಡೆದ 'ಕರ್ನಾಟಕ ಏಕೀಕರಣಕ್ಕೆ ಬೆಳಗಾವಿ ಪ್ರದೇಶದ ಕೊಡುಗೆ' 'ಸಿದ್ಧರಾಮ : ಮರು ಅಧ್ಯಯನ' ವಿಚಾರ ಸಂಕಿರಣಗಳಿಂದ ಮಹತ್ವದ ಚಿಂತನೆಗಳು ಸಾಹಿತ್ಯ ಲೋಕಕ್ಕೆ ತೂರಿ ಬಂದವು.

ಹೆಗ್ಗೋಡಿನ ನೀನಾಸಂ ಜೊತೆಯಲ್ಲಿ ವಚನ ಅಧ್ಯಯನ, ನಾಟಕ ಅಧ್ಯಯನ, ಕಂಬಾರ ಸಾಹಿತ್ಯ ಅಧ್ಯಯನ, ಇತಿಹಾಸ ಸಮ್ಮೇಳನ, ಶರಣ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ಹಲವಾರು ಸಮ್ಮೇಳನಗಳು, ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರ ಸಹಯೋಗದಲ್ಲಿ ಹಸ್ತಪ್ರತಿ ಅಧ್ಯಯನಗಳು, ಧಾರವಾಡದ ಗುಬ್ಬಚ್ಚಿ ಗೂಡು ಸಂಘಟನೆಯೊಂದಿಗೆ ಅಖಿಲ ಭಾರತ ಮಕ್ಕಳ ಸಾಹಿತ್ಯ ಸಮ್ಮೇಳನ, ಜಾನಪದ ಯಕ್ಷಗಾನ ಅಕಾಡೆಮಿಯ ಯಕ್ಷಗಾನ ಉತ್ಸವ ಮತ್ತು ವಿಚಾರ ಸಂಕಿರಣ ಇತ್ಯಾದಿ ಕಾರ್ಯ ಕ್ರಮಗಳು ಪೂಜ್ಯ ಸಿದ್ಧರಾಮಸ್ವಾಮಿಗಳ ನೇತೃತ್ವದಲ್ಲಿ ಯಶಸ್ವಿಯಾಗಿ ಜರುಗಿದ್ದು ಉಲ್ಲೇಖನೀಯ.

ಇತ್ತೀಚೆಗೆ ಸಾಣೆಹಳ್ಳಿಯ 'ಶಿವಸಂಚಾರ'ದ ನಾಟಕಗಳು, ನೀನಾಸಂ ನಾಟಕಗಳು, ರಂಗಭೂಮಿ ಅಭಿವೃದ್ಧಿ ಸಹಕಾರಿ ಸಂಘದ ನಾಟಕಗಳು ಬೆಳಗಾವಿಯಲ್ಲಿ ಪ್ರದರ್ಶನಗೊಳ್ಳಲು ಪೂಜ್ಯರು ಆಶ್ರಯ ನೀಡುತ್ತಿದ್ದಾರೆ. ಸಾಂಸ್ಕೃತಿಕ ಚಟುವಟಿಕೆಗಳು ನಗರದಲ್ಲಿ ನಿರಂತರವಾಗಿ ನಡೆಯಬೇಕೆಂದು ಸ್ಥಳಿಯರನ್ನು ಪ್ರೋತ್ಸಾಹಿಸುತ್ತ ಇರುತ್ತಾರೆ.

ಪೂಜ್ಯರ ಆಸಕ್ತಿಯ ಫಲವಾಗಿ ಬೆಳಗಾವಿ ಪ್ರದೇಶದ ರಂಗಕಲೆಗಳಾದ ಶ್ರೀಕೃಷ್ಣಪಾರಿಜಾತ, ದೊಡ್ಡಾಟ, ಸಣ್ಣಾಟ ಉತ್ಸವಗಳು ಜರುಗಿವೆ. ಅಲ್ಲದೆ ದಾಖಲೀಕರಣದ ಕೆಲಸವೂ ನಡೆದಿದೆ. ೧೯೯೮ ರಲ್ಲಿ ಉಡುಪಿಯ ಪ್ರಾದೇಶಿಕದ ರಂಗಕಲೆಗಳ ಅಧ್ಯಯನ ಕೇಂದ್ರದ ಸಹಯೋಗದಲ್ಲಿ ಪಾರಿಜಾತ ಆಟದ ಮೂರು ಭಾಗಗಳು ಮೂರು ದಿನ ಪ್ರದರ್ಶನಗೊಂಡವು. ಟಕ್ಕಳಕಿ ವಿಠ್ಠಲ್‌ರಾವ್. ಕವಟಕೊಪ್ಪ ರಾಮಣ್ಣ, ಸೂಳಿಕೇರಿ ಯಮನವ್ವ ಮೊದಲಾದ ಹಿರಿಯ ಪಾರಿಜಾತ ಕಲಾವಿದರು ಈ ಉತ್ಸವದಲ್ಲಿ ಪಾಲ್ಗೊಂಡಿದ್ದಲ್ಲದೆ ಇವರ ಹಾಡುಗಾರಿಕೆಯನ್ನು ದಾಖಲೀಕರಣ ಮಾಡಲಾಯಿತು. ಪಾರಿಜಾತ ಉತ್ಸವ ಹಾಗೂ ದಾಖಲೀಕರಣ ಚಟುವಟಿಕೆಗಳು ನಡೆದ ಮೂರೂ ದಿನ ಪೂಜ್ಯರು ಆಸಕ್ತಿಯಿಂದ ಭಾಗವಹಿಸಿದರು. ಪಾರಿಜಾತ ಬಯಲಾಟದ ಸೊಗಸನ್ನು ಅದರ ಅಧ್ಯಾತ್ಮವನ್ನು ಅನುಭವಿಸಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ರಂಗಭೂಮಿ ವಿದ್ವಾಂಸರಾದ ಡಾ. ಶ್ರೀರಾಮ ಇಟ್ಟಣ್ಣವರ ಹಾಗೂ ಬಸವರಾಜ ಮಲಶೆಟ್ಟಿ ಅವರು ಕಾರ್ಯಕ್ರಮವನ್ನು ಚೆನ್ನಾಗಿ ಸಂಘಟಿಸಿದ್ದರು. ಅವರ ದಾಖಲೀಕರಣದ ಮಹತ್ವವನ್ನು ಸಿದ್ಧರಾಮಸ್ವಾಮಿಗಳು ಆಗಾಗ ನೆನಪಿಸಿಕೊಳ್ಳುತ್ತಾರೆ. ಅಂಥ ಚಟುವಟಿಕೆಗಳು ಜರುಗಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಬಸವಲಿಂಗಯ್ಯ ಮತ್ತು ವಿಶ್ವೇಶ್ವರಿ ಹಿರೇಮಠರ ಜಾನಪದ ಸಂಶೋಧನ ಕೇಂದ್ರ ೧೯೯೯ ರಲ್ಲಿ ಹಮ್ಮಿಕೊಂಡಿದ್ದ ದೊಡ್ಡಾಟ ಉತ್ಸವ ಮತ್ತು ದಾಖಲೀಕರಣ, ಕ್ರಾಂತಿಗೀತೆಗಳ ಉತ್ಸವ ಹಾಗೂ ನಾಟಕೋತ್ಸವಗಳಿಗೆ ಪೂಜ್ಯರು ರುದ್ರಾಕ್ಷಿಮಠದ ಸಹಯೋಗ ಕಲ್ಪಿಸಿದ್ದನ್ನು ಮರೆಯುವಂತಿಲ್ಲ. ಇತ್ತೀಚೆಗೆ ನಾಗನೂರಿನಲ್ಲಿ ಬಸವ ವಚನ ಭಜನಾ ಸ್ಪರ್ಧೆ ಏರ್ಪಡಿಸಿ ಭಜನಾ ತಂಡಗಳನ್ನು ಪ್ರೋತ್ಸಾಹಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ನೆರವಿನಿಂದ ಜಿಲ್ಲೆಯಾದ್ಯಂತ ಭಜನಾ ಸ್ಪರ್ಧೆಗಳನ್ನು ಏರ್ಪಡಿಸಿರುವರು. ಇವರ ಸಾಂಸ್ಕೃತಿಕ ಪ್ರೀತಿಯ ಫಲವಾಗಿಯೇ ಈ ನೆಲದ ಅಪರೂಪದ ಕಲೆಗಳ ಉತ್ಸವಗಳು ನಡೆದದ್ದು ಮಾತ್ರವಲ್ಲ ಮುಂದಿನ ಪೀಳಿಗೆಗೂ ಅವು ತಲುಪುವಂತೆ ದಾಖಲೀಕರಣ ನಡೆದದ್ದು ಐತಿಹಾಸಿಕ ಮಹತ್ವದ ಸಂಗತಿಗಳಾಗಿವೆ.

**ಶಿವಯೋಗಮಂದಿರಕ್ಕಾಗಿ ಕಾಯಕಲ್ಪ**

ಶಿವಯೋಗಮಂದಿರದ ಅಭಿವೃದ್ಧಿಗಾಗಿಯೂ ಸಿದ್ಧರಾಮಸ್ವಾಮಿಗಳು ಬಹುವಿಧವಾಗಿ ಶ್ರಮಿಸಿದ್ದಾರೆ. ಶಿವಬಸವಸ್ವಾಮಿಗಳು ಅನೇಕ ವರ್ಷ ಶಿವಯೋಗಮಂದಿರ ಸಂಸ್ಥೆಯ ಅಧ್ಯಕ್ಷರಾಗಿ ಅದರ ಅಭಿವೃದ್ಧಿಗಾಗಿ ಶ್ರಮಿಸಿದ್ದರು. ಹಾನಗಲ್ಲ ಕುಮಾರಸ್ವಾಮಿಗಳ ಧ್ಯೇಯಾದರ್ಶ, ಸೇವಾ ಪರಂಪರೆಯನ್ನೇ ರುದ್ರಾಕ್ಷಿಮಠದ ಧ್ಯೇಯಾದರ್ಶಗಳನ್ನಾಗಿ ಸ್ವೀಕರಿಸಿದ್ದರು. ರುದ್ರಾಕ್ಷಿಮಠವು ಶಿವಯೋಗಮಂದಿರದ ಭಾಗವಾಗಿಯೇ ಕಾರ್ಯನಿರ್ವಹಿಸುವಂತೆ ಅನೇಕ ಕಾರ್ಯಕ್ರಮಗಳನ್ನು ಕೈಕೊಂಡಿದ್ದರು. ಕುಮಾರಸ್ವಾಮಿಗಳೆಂದರೆ ಶಿವಬಸವಸ್ವಾಮಿಗಳಿಗೆ ಎಲ್ಲಿಲ್ಲದ ಭಕ್ತಿ ಗೌರವ, 'ಸ್ವಾಮಿಗಳೆಂದರೆ ಕುಮಾರಸ್ವಾಮಿಗಳು, ಅವರಂಥ ತ್ಯಾಗಜೀವಿ, ಸೇವಾಜೀವಿಯನ್ನು ನಾನು ನೋಡಲಿಲ್ಲ' ಎಂದು ಅವರು ಪದೇ ಪದೇ ಹೇಳುತ್ತಿದ್ದರು. ಅವರ ಉತ್ತರಾಧಿಕಾರಿಯಾಗಿ ಬಂದ ಸಿದ್ಧರಾಮಸ್ವಾಮಿಗಳಿಗೂ ಅದೇ ಭಕ್ತಿ ಅದೇ ಗೌರವ. ಈ ಮಂದಿರದಲ್ಲಿ ಅವರು ಎರಡುವರೆ ವರುಷ ಸಾಧಕರಾಗಿದ್ದರು. ಧಾರ್ಮಿಕ ಸಾಹಿತ್ಯ, ತತ್ವಜ್ಞಾನ ಹಾಗೂ ಆಚರಣೆಯ ವಿಧಾನಗಳನ್ನು ಶ್ರದ್ಧೆಯಿಂದ ಓದಿ ತಿಳಿದವರಾಗಿದ್ದರು. ಈ ಸಂಸ್ಥೆಯಲ್ಲಿದ್ದಾಗಲೇ ಸಂಸ್ಕೃತವನ್ನು ಅಧ್ಯಯನ ಮಾಡಿದ್ದರು. ಮುಂದೆ ಉನ್ನತ ಶಿಕ್ಷಣದ ಸಲುವಾಗಿ ಕಾಶಿ, ಧಾರವಾಡದಂಥ ನಗರಗಳಿಗೆ ಹೋದರೂ ಆಗಾಗ ಶಿವಯೋಗಮಂದಿರಕ್ಕೆ ಬಂದು ಹೋಗುತ್ತಿದ್ದರು. ಅಲ್ಲಿಯೇ ಅಧ್ಯಯನ ಮಾಡುತ್ತ, ಅಧ್ಯಾಪನ ಮಾಡುತ್ತ, ಆ ಸಂಸ್ಥೆಯನ್ನು ಬೆಳೆಸುವ ಕನಸು ಕಂಡಿದ್ದರು. ಮುಂದೆ ರುದ್ರಾಕ್ಷಿಮಠದ

ಸ್ವಾಮಿಗಳಾದ ಮೇಲೆ ಆ ತರಹದ ಸೇವೆಗೆ ಅವಕಾಶ ಸಿಗಲಿಲ್ಲ. ಆದರೆ ಶಿವಯೋಗಮಂದಿರ ಸಂಸ್ಥೆಯ ಉಪಾಧ್ಯಕ್ಷರಾಗಿ, ಅಲ್ಲಿ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳುವಂಥ ಸದಾವಕಾಶ ಅವರ ಪಾಲಿಗೆ ಬಂತು. ೨೦೦೨ ರಿಂದ ೨೦೦೪ ರವರೆಗೆ ಪೂಜ್ಯರು ಈ ಸಂಸ್ಥೆಯ ಉಪಾಧ್ಯಕ್ಷರಾಗಿ ಕೈಕೊಂಡಂಥ ಚಟುವಟಿಕೆಗಳು ಶಿವಯೋಗಮಂದಿರದ ಚರಿತ್ರೆಯಲ್ಲಿ ಗಮನಾರ್ಹವಾಗಿವೆ. ಅವು ಈ ಕೆಳಗಿನಂತಿವೆ.

ಆದಿಚುಂಚನಗಿರಿ ಮಠದ ನೆರವಿನಿಂದ ಶಿವಯೋಗಮಂದಿರದ ೨೦ ಎಕರೆ ಭೂಮಿಯನ್ನು ಸ್ವಚ್ಛ ಮಾಡಿಸಿದರು, ಸಾಮಾಜಿಕ ಅರಣ್ಯಕ್ಕಾಗಿ ಆ ಭೂಮಿಯನ್ನು ಹದಗೊಳಿಸಿ, ಅಲ್ಲಿ ಗಿಡಗಳನ್ನು ನೆಡಸಿದರು, ಗಿಡಗಳ ಸಂರಕ್ಷಣೆಗಾಗಿ ೨೦ ಎಕರೆ ಭೂಮಿಗೆ ಸುತ್ತಲೂ ತಂತಿ ಬೇಲಿ ನಿರ್ಮಿಸಿದರು, ಆದಿಚುಂಚನಗಿರಿ ಮಠದ ವತಿಯಿಂದ ಸಂಸ್ಥೆಗೆ ಟ್ರ್ಯಾಕ್ಟರವೊಂದನ್ನು ಕೊಡುಗೆಯಾಗಿ ಪಡೆದರು, ಸರಕಾರದಿಂದ ೭.೩೦ ಲಕ್ಷ ರೂ. ಅನುದಾನ ಪಡೆದು ಕೆರೆಯ ನಿರ್ಮಾಣ ಕಾರ್ಯ ಕೈಗೊಂಡರು, ಸಣ್ಣ ಸಸಿಗಳ ಸಂರಕ್ಷಣೆಗಾಗಿ ಒಂದು ನೂರು ಟ್ರೀಗಾರ್ಡ ಮಾಡಿಸಿದರು. ತೇರಿನ ಮನೆ ನಿರ್ಮಿಸಿದರು. ಹಳೆಯ ಗೋಶಾಲೆಯ ದುರಸ್ತಿಯ ಜೊತೆಗೆ ಹೊಸ ಗೋಶಾಲೆ ನಿರ್ಮಾಣ ಕಾರ್ಯ ಕೈಕೊಂಡರು. ಹೊಸ ರಥವೊಂದರ ನಿರ್ಮಾಣಕ್ಕೆ ಕಾರಣಕರ್ತರಾದರು. "ಸುಕುಮಾರ" ಪತ್ರಿಕೆಯನ್ನು ನಿಯತವಾಗಿ ಪ್ರಕಟಿಸಲು ಕಾರ್ಯ ಕೈಗೆತ್ತಿಕೊಂಡರು. ಸಂಸ್ಥೆಯ ಮಾಹಿತಿ ಪುಸ್ತಕ ಹಾಗೂ ಪ್ರದರ್ಶಕ ಫಲಕ ತಯಾರಿಸಿದರು. ಮಂದಿರದಲ್ಲಿ ಅಧ್ಯಯನ ಮಾಡುತ್ತಿರುವ ವಟುಸಾಧಕರ ಸ್ನಾನಕ್ಕಾಗಿ ಹೊಳೆಯ ದಡದಲ್ಲಿ ಏರ್ಪಾಟು ಮಾಡಿಸಿದರು. ವಟುಸಾಧಕರಿಗಾಗಿ ಸುಸಜ್ಜಿತ ವಸತಿ ಮತ್ತು ಪಾಠೋಪಕರಣ ಗಳನ್ನು ಅಭಿವೃದ್ಧಿಪಡಿಸಿದರು. ದಾಸೋಹ, ಗದ್ದುಗೆ, ವಿದ್ಯಾಮಂದಿರ ಕಟ್ಟಡಗಳಿಗೆ ಸೋಲಾರ ಲೈಟಗಳನ್ನು ಅಳವಡಿಸಿದರು. ಮೇಲ್ಮಠ, ಕುಮಾರೇಶ್ವರ ಗದ್ದುಗೆಗೆ ರೀವೈರಿಂಗ್ ಮಾಡಿಸಿದರು. ಪೂಜಾನಿಧಿ ಹಾಗೂ ದಾಸೋಹನಿಧಿಗೆ ನೀಡಿದ ಭಕ್ತರ ಹೆಸರುಗಳ ಪ್ರದರ್ಶನಕ್ಕಾಗಿ ಬೋರ್ಡು ಗಳನ್ನು ಬರೆಸಿದರು. ಶಿವಯೋಗಮಂದಿರಕ್ಕೆ ನಿರಂತರವಾಗಿ ಆದಾಯ ಬರಬೇಕೆಂದು ಬಾಗಲಕೋಟದಲ್ಲಿ ೧೭ ಮತ್ತು ಬಾದಾಮಿಯಲ್ಲಿ ೭ ಅಂಗಡಿಗಳನ್ನು ಕಟ್ಟಿಸಿದರು. ಮಂದಿರದ ಆದಾಯದಲ್ಲಿ ಬಾದಾಮಿ ಶಾಖಾಮಂದಿರವನ್ನು ನವೀಕರಣಗೊಳಿಸಿದರು. ಆದಿಚುಂಚನಗಿರಿ ಶ್ರೀಗಳ ಸಹಾಯದಿಂದ ನೀರಿನಟ್ಯಾಂಕ ಖರೀದಿಸಿದರು. ಮೇಲ್ಮಠದವರೆಗೆ ಬೀದಿದೀಪಗಳು ಬೆಳಗುವಂತೆ ಸರಕಾರದಿಂದ ಆ ಕಾರ್ಯವನ್ನು ಮಾಡಿಸಿದರು. ಶಿವಯೋಗ ಮಂದಿರ ವಸ್ತು ಸಂಗ್ರಹಾಲಯಕ್ಕಾಗಿ ಗೊ. ರು. ಚ. ಅವರಿಂದ ನೀಲನಕ್ಷೆ ಸಿದ್ಧಪಡಿಸಿದರು. ಸಿದ್ಧರಾಮ ಸ್ವಾಮಿಗಳು ಶಿವಯೋಗಿಮಂದಿರದ ಪುಣ್ಯಪರಿಸರ ಅಭಿವೃದ್ಧಿಪಡಿಸಲು ಅಹೋರಾತ್ರಿ ಶ್ರಮಿಸಿದರು.

ಶ್ರೀ ಸಿದ್ಧರಾಮಸ್ವಾಮಿಗಳು ಮೂರು ವರ್ಷ ಪೂಜೆ ಪ್ರಸಾದ ಲೆಕ್ಕಿಸದೆ, ವಿಶ್ರಾಂತಿ ಇಲ್ಲದೆ ಬೆಳಗಾವಿಯಿಂದ ಶಿವಯೋಗಮಂದಿರಕ್ಕೆ ಓಡಾಡಿದರು. ನಿಸ್ವಾರ್ಥದಿಂದ ಸೇವೆ ಸಲ್ಲಿಸಿದ ಇವರ ಅವಧಿ ಶಿವಯೋಗಮಂದಿರದ ಸುವರ್ಣಯುಗವೆನ್ನಬೇಕು. ಶಿವಯೋಗಮಂದಿರವನ್ನು ಒಂದು ಧಾರ್ಮಿಕ ವಿಶ್ವವಿದ್ಯಾಲಯದ ಹಾಗೆ ಬೆಳೆಸಬೇಕೆಂಬ ಯೋಜನೆ ಅವರದಾಗಿತ್ತು. ಅದಕ್ಕಾಗಿ ರೂಪರೇಷೆಗಳನ್ನು ಹಾಕಿದ್ದರು. ಆದರೆ ಆಡಳಿತದಲ್ಲಿ ಭಿನ್ನಾಭಿಪ್ರಾಯಗಳು ತಲೆದೋರಿದ್ದರಿಂದ ಮನನೊಂದು ಅಲ್ಲಿಂದ ಹೊರಬಂದರು.

ಶಿವಯೋಗಮಂದಿರದ ಶತಮಾನೋತ್ಸವ ಯಶಸ್ವಿಗಾಗಿ ಹಗಲಿರುಳು ಶ್ರಮಿಸಿದರು. ಕುಮಾರ ಜ್ಯೋತಿ ಬೆಳಗಾವಿ ಜಿಲ್ಲೆಯಲ್ಲಿ ಸಂಚರಿಸುವಾಗ ಅನೇಕ ಸಭೆ ಸಮಾರಂಭಗಳನ್ನು ಸಂಘಟಿಸಿದರು. ಅತಿ ಹೆಚ್ಚು ನಿಧಿ ಸಂಗ್ರಹವಾಗುವಂತೆ ನೋಡಿಕೊಂಡರು. ಮೂರು ದಿನಗಳ ಕಾಲ ಜರುಗಿದ ಶತಮಾನೋತ್ಸವದ ಕಾರ್ಯಕ್ರಮಗಳಲ್ಲಿ ಇವರದೇ ಮಹತ್ವದ ಸೇವೆಯಾಗಿತ್ತು .

**ಸೀಮಾತೀತ ಸಂವೇದನೆ**

ಎಲ್ಲ ಜಿಲ್ಲೆಗಳಂತಲ್ಲ ಬೆಳಗಾವಿ ಜಿಲ್ಲೆ. ಇದರ ಇತಿಹಾಸ, ಇಲ್ಲಿಯ ಪರಿಸರ ಬಲು ವಿಶಿಷ್ಟವಾದುದು. ಮಹಾರಾಷ್ಟ್ರ, ಗೋವಾ ರಾಜ್ಯಗಳು ಈ ಜಿಲ್ಲೆಯ ಸೀಮೆಗೆ ಹೊಂದಿಕೊಂಡಿವೆ. ಅವುಗಳ ಜೊತೆಗಿನ ಸಾಮಾಜಿಕ ಸಂಬಂಧ, ಸಾಂಸ್ಕೃತಿಕ ವಿನಿಮಯದಿಂದಾಗಿ ಏರ್ಪಟ್ಟ ಸಹಬಾಳುವೆಯ ಸಂಸ್ಕೃತಿ ಎದ್ದು ಕಾಣುವಂತಹದ್ದು. ಇಲ್ಲಿಯ ಕನ್ನಡ, ಮರಾಠಿ, ಕೊಂಕಣಿ ಭಾಷಿಕರ ಮಧುರ ಬಾಂಧವ್ಯ ಗಮನಾರ್ಹವಾದದ್ದು. ಈ ಪ್ರದೇಶದ ಸಾಮರಸ್ಯದ ಬದುಕನ್ನು ಪೋಷಿಸುವ ಪ್ರೇರೇಪಿಸುವ ಕಾರ್ಯ ಇಲ್ಲಿಯ ಧಾರ್ಮಿಕ ಸಂಸ್ಥೆಗಳಿಂದ, ಸಾಹಿತಿ ಕಲಾವಿದರಿಂದ ನಿತ್ಯ ನಡೆದಿರುತ್ತದೆ. ವಿಶೇಷವಾಗಿ ಗಡಿನಾಡ ಜನರ ಯೋಗಕ್ಷೇಮ ನೋಡಿಕೊಳ್ಳುವಲ್ಲಿ ರುದ್ರಾಕ್ಷಿಮಠದ ಪಾತ್ರ ಗಣ್ಯವೆನಿಸಿದೆ.

ಭಾಷೆಯ ಪ್ರಶ್ನೆ ಬಂದಾಗ ರುದ್ರಾಕ್ಷಿಮಠವು ಕನ್ನಡಪರ ಸಂಸ್ಥೆಯಾಗಿ, ಕನ್ನಡಿಗರ ಶಕ್ತಿಕೇಂದ್ರವಾಗಿ ನಿಲ್ಲುತ್ತದೆ.

ಶಿವಬಸವಸ್ವಾಮಿಗಳು ಕರ್ನಾಟಕ ಏಕೀಕರಣದ ಸಲುವಾಗಿ ಭೂಗತ ಸಮರವನ್ನೇ ಸಾರಿದವರು. ಬೆಳಗಾವಿ ಕನ್ನಡ ಪ್ರದೇಶ, ಅದು ಕರ್ನಾಟಕದಲ್ಲಿಯೇ ಉಳಿಯಬೇಕು ಎಂದು ತ್ರಿಕರಣಪೂರ್ವಕ ಪ್ರಯತ್ನಿಸಿದರು. ಅವರ ಸೇವೆಯನ್ನು ಗೌರವಿಸುವ ದೃಷ್ಟಿಯಿಂದ ಕರ್ನಾಟಕ ಸರಕಾರವು 'ಸುವರ್ಣ ಕರ್ನಾಟಕ ವರ್ಷಾಚರಣೆ'ಯ ಸಂದರ್ಭದಲ್ಲಿ ರುದ್ರಾಕ್ಷಿಮಠಕ್ಕೆ "ಏಕೀಕರಣ ಪ್ರಶಸ್ತಿ"ಯನ್ನಿತ್ತು ಗೌರವಿಸಿತು. ಅದನ್ನು ಸ್ವೀಕರಿಸಿದವರು ಶ್ರೀ ನಿ. ಪ್ರ. ಸಿದ್ಧರಾಮ ಸ್ವಾಮಿಗಳು. ಕನ್ನಡ ನಾಡು ನುಡಿಗಾಗಿ, ಕರ್ನಾಟಕ ಏಕೀಕರಣಕ್ಕಾಗಿ ಶಿವಬಸವಮಹಾಸ್ವಾಮಿಗಳು ಹೋರಾಡಿದರೆ ಏಕೀಕೃತ ಕರ್ನಾಟಕದ ಅಭಿವೃದ್ಧಿಗಾಗಿ ವಿಶೇಷವಾಗಿ ಗಡಿನಾಡು ಬೆಳಗಾವಿಯ ಪ್ರಗತಿಗಾಗಿ ಸಿದ್ಧರಾಮಸ್ವಾಮಿಗಳು ಹೋರಾಡುತ್ತಿದ್ದಾರೆ. ಬೆಳಗಾವಿಯಲ್ಲಿ ಕನ್ನಡ ಪರಿಸರ ಹಸಿರಾಗಿ ಉಳಿಯ–ಬೇಕೆಂದು ಅನೇಕ ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಘಟಿಸಿ ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ. ಅಖಿಲ ಭಾರತ ೭೦ ನೆಯ ಕನ್ನಡ ಸಾಹಿತ್ಯ ಸಮ್ಮೇಳನವು ಬೆಳಗಾವಿಯಲ್ಲಿ ಜರುಗಿದಾಗ ಬಂದಂಥ ಪ್ರತಿನಿಧಿಗಳಿಗಾಗಿ ಪ್ರಸಾದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ, ಯಾರಿಗೂ ಕೊರತೆ ಆಗದ ಹಾಗೆ ನೋಡಿಕೊಂಡರು. ಕ್ಯೂ ಇಲ್ಲದೆ, ಕೂಪನ್‌ಗಳಿಲ್ಲದೆ ಅಸಂಖ್ಯಾತ ಸಾಹಿತ್ಯ ಆಸಕ್ತರು ಶುಚಿಯಾದ, ರುಚಿಯಾದ ಊಟ ಮಾಡಿದರು. ಇವರ ಸಂಘಟನೆಯ ಕೌಶಲ್ಯವೂ ಪ್ರಶಂಸೆಗೆ ಪಾತ್ರವಾಗಿರುವಂತಹದ್ದು ಅಖಿಲ ಭಾರತ ವೀರಶೈವ ಮಹಾಸಭೆಯ ೨೧ನೆಯ ಅಧಿವೇಶನ (೧೯೯೨), ಕರ್ನಾಟಕ ಇತಿಹಾಸ ಅಕಾಡೆಮಿ ಸಮ್ಮೇಳನ (೧೯೯೪), ಶರಣ ಸಾಹಿತ್ಯ ಸಮ್ಮೇಳನ (೧೯೯೯), ಮಕ್ಕಳ ಸಾಹಿತ್ಯ ಸಮ್ಮೇಳನ (೨೦೦೪), ವಿಜ್ಞಾನ ಸಮ್ಮೇಳನ ಮುಂತಾದವು ಪೂಜ್ಯ ಸಿದ್ಧರಾಮಸ್ವಾಮಿಗಳ ನೇತೃತ್ವದಲ್ಲಿ ಅಭೂತಪೂರ್ವವಾಗಿ ಜರುಗಿವೆ. ಅದ್ಭುತ ಯಶಸ್ಸನ್ನು ಕಂಡಿವೆ.

ಭಾಷೆಯ ವಿಷಯ ಬಂದಾಗ ಶ್ರೀಗಳದ್ದು ಕನ್ನಡ ಪರ ನಿಲುವಾದರೆ ಮಾನವೀಯತೆಯ ಪ್ರಶ್ನೆ ಬಂದಾಗ ಅವರದ್ದು ಭಾಷಾತೀತ ಜಾತ್ಯಾತೀತವಾದ ನಿಲುವು. ಗಡಿಭಾಗದೊಳಗಿನ ಎಲ್ಲರ ಯೋಗಕ್ಷೇಮಕ್ಕಾಗಿ ಹಂಬಲಿಸುವುದರಿಂದ ಪೂಜ್ಯರು ಸರ್ವ ಜನರ ಪ್ರೀತಿ ಭಕ್ತಿ ಗೌರವಗಳಿಗೆ ಪಾತ್ರರಾಗಿದ್ದಾರೆ. ಎಲ್ಲ ಭಾಷಿಕರು, ಎಲ್ಲ ಜಾತಿ ಜನಾಂಗದವರು ಭಾವೈಕ್ಯತೆಯಿಂದ, ಸಾಮರಸ್ಯ–ದಿಂದ ಬದುಕಬೇಕೆಂಬುದು, ಪ್ರತಿಯೊಬ್ಬ ಮನುಷ್ಯ ಆತ್ಮ ಸಮ್ಮಾನದಿಂದ, ನೆಮ್ಮದಿಯಿಂದ ಬದುಕುವಂತಾಗಬೇಕೆಂಬುದು ಪೂಜ್ಯರ ಪ್ರಯತ್ನ.

ನಿರಹಂಕಾರ, ನಿರಪೇಕ್ಷಭಾವ, ಸೇವಾಭಾವ, ಇವು ಮನುಷ್ಯತ್ವದ ದೊಡ್ಡ ಗುಣಗಳು. ಭೋಗದ ಅತಿಯಾದ ಆಸಕ್ತಿ ಮನುಷ್ಯತ್ವದ ದೊಡ್ಡ ವೈರಿ. ಧರ್ಮಗಳೆಲ್ಲ ಶ್ರೇಷ್ಠವಾಗಿಯೇ ಇವೆ. ಧರ್ಮಗ್ರಂಥಗಳೆಲ್ಲ ಮಾನವಿಯ ಮೌಲ್ಯಗಳನ್ನೇ ಸಾರುತ್ತವೆ. ಆದರೂ ಸಾಮಾಜಿಕ ಸಂಘರ್ಷ ನಿಲ್ಲದ ಕಥೆಯಾಗಿದೆ. ಯುದ್ಧಗಳು ಕಣ್ಣೆದುರಿನ ಘಟನೆಗಳಾಗಿವೆ. ಇದಕ್ಕೆ ಧರ್ಮ ಕಾರಣವಲ್ಲ. ಧರ್ಮಗ್ರಂಥಗಳು ಸಾರುವ ಮಾನವೀಯ ಮೌಲ್ಯಗಳನ್ನು ಜನರು ಅನುಸರಿಸುತ್ತಿಲ್ಲ, ಅಷ್ಟೇ ಏಕೆ ಧರ್ಮಗುರುಗಳು ಬದುಕಿನಲ್ಲಿ ಅಳವಡಿಸಿಕೊಳ್ಳುತ್ತಿಲ್ಲ ಎಂಬ ಖೇದ ಪೂಜ್ಯರದು. ಈ ಸಾಮರಸ್ಯದ ಸಮಸ್ಯೆಯಿಂದ ಸಮಾಜದ ಸ್ವಾಸ್ಥ್ಯ ಹದಗೆಡುತ್ತಿದೆ ಎಂಬುದು ಅವರ ವಿಚಾರವಾಗಿದೆ.

ಬೆಳಗಾವಿ ಭಾಗದ ಸಾಮಾಜಿಕ ಹಾಗೂ ಧಾರ್ಮಿಕ ಸಾಮರಸ್ಯದ ಚಟುವಟಿಕೆಗಳಲ್ಲಿ ಸಿದ್ಧರಾಮಸ್ವಾಮಿಗಳದು ಹಾರ್ದಿಕ ನೇತೃತ್ವ ಇರುತ್ತದೆ. ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ ಲಿಂಗಾಯತ ಧರ್ಮದ ತತ್ವಗಳನ್ನು ತಮ್ಮ ನಡೆ ನುಡಿಗಳಲ್ಲಿ ಸಾರಿ ಹೇಳಿದರೂ ಎಲ್ಲ ಧರ್ಮದ ಸಾರ ಒಂದೇ ಎಂಬ ಉದಾರಭಾವ ಅವರದು. ಪೂಜ್ಯರು ಪೌರ್ವಾತ್ಯ, ಪಾಶ್ಚಾತ್ಯ ತತ್ವಶಾಸ್ತ್ರಗಳನ್ನು ಓದಿಕೊಂಡಿದ್ದಾರೆ. ಜಾಗತಿಕ ಸಂತರ, ದಾರ್ಶನಿಕರ ಚಿಂತನೆಗಳನ್ನು ಆಳವಾಗಿ ಅಧ್ಯಯನ ಮಾಡಿದ್ದಾರೆ. ವಿನೋಬಾಜಿಯವರು ಬರೆದ 'ಇಸ್ಲಾಂ ಧರ್ಮದ ಸಂದೇಶ' ಗ್ರಂಥವನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ವಿನೋಬಾಜಿಯವರ ಚಿಂತನೆಗಳು ಪೂಜ್ಯರಿಗೆ ಪ್ರಿಯವಾದವು. ಪೂಜ್ಯರು ಮರಾಠಿ ಓದುತ್ತಾರೆ, ತಿಳಿದುಕೊಳ್ಳುತ್ತಾರೆ. ಕನ್ನಡದ ಶರಣರು, ಮರಾಠಿಯ ಸಂತರು ಸಮಾಜದ ಏಳಿಗೆಗಾಗಿ ಹೋರಾಡಿದ ಕಥನದ ಬಗ್ಗೆ ತೌಲನಿಕವಾಗಿ ಅಧ್ಯಯನವಾಗಬೇಕೆನ್ನುತ್ತಾರೆ. ಶರಣರ ವಚನಗಳನ್ನು ಮರಾಠಿಗೆ ಅನುವಾದಿಸಿ ಶ್ರೀಮಠದಿಂದ ಪ್ರಕಟಿಸಿದ್ದಾರೆ.

ಕಡೋಲಿ, ಗಡಹಿಂಗ್ಲಜ, ಕೊಲ್ಲಾಪೂರ ಭಾಗದ ಮಠಗಳು ಅಲ್ಲಿಯ ಮರಾಠಿ ಭಕ್ತರ ಸಲುವಾಗಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಪ್ರೇರೇಪಿಸುತ್ತಾರೆ. ಸೀಮೆಯಲ್ಲಿ ಬೆಳೆದ ಆಲದ ಮರದ ನೆರಳು ಸೀಮೆಯನ್ನು ದಾಟಿ ವ್ಯಾಪಿಸುವಂತೆ ಪೂಜ್ಯರ ನೇತೃತ್ವದ ರುದ್ರಾಕ್ಷಿಮಠದ ಸೇವೆಗಳು ದೇಶ–ಭಾಷೆ, ಜಾತಿ–ಮತ, ಬಡವ–ಬಲ್ಲಿದ ಭೇದಗಳನ್ನು ಮೀರಿ ಎಲ್ಲರಿಗೆ ತಂಪು ನೀಡುವ ನೆರಳುಗಳಾಗಿವೆ.

ಸಿದ್ಧರಾಮಸ್ವಾಮಿಗಳು, ಮಠಗಳು ಪಕ್ಷಾತೀತವಾಗಿರಬೇಕೆಂದು ಹೇಳುತ್ತಾರೆ. 'ಮಠಗಳಲ್ಲಿ ರಾಜಕೀಯ ಸಲ್ಲದು. ಭಕ್ತರು ಯಾವುದೇ ಪಕ್ಷದವರಾಗಲಿ, ಮಠಕ್ಕೆ ಬರುವಾಗ ಭಕ್ತಿಪಕ್ಷದವರಾಗಿ ಬರಬೇಕು. ಮಠಗಳಾದರೂ ಜಾತಿ, ಮತ, ಪಂಥ ಮೀರಿ ನಿಂತ ಮಾನವತೆಯ ಮಂದಿರಗಳಾಗ-ಬೇಕು. ಮಠಗಳು ನಾಡಿನ ಸಂಸ್ಕೃತಿಯನ್ನು ಪೋಷಿಸಬೇಕು. ನೆಲದ ಭಾಷೆಯನ್ನು ಸಂರಕ್ಷಿಸಬೇಕು. ಮಠಗಳು ಪಕ್ಷಾತೀತ ಪ್ರಜ್ಞೆಯಿಂದ ಕಾರ್ಯ ನಿರ್ವಹಿಸಬೇಕು'. ಶ್ರೀಗಳ ಈ ಧೋರಣೆ ಅನುಕರಣೀಯವಾದುದು.

**ಬಹುಮುಖ ಸೇವೆ**

ಭಕ್ತರ ಸೇವೆಯನ್ನು ಪಡೆದು ಬೆಳೆದಿರುವ ಅನೇಕ ಮಠಗಳು ನಮ್ಮ ನಾಡಿನಲ್ಲಿವೆ. ಅವುಗಳಿಗೆ ಭಕ್ತರು ಸಲ್ಲಿಸುವ ಸೇವೆಯೇ ಮುಖ್ಯ. ಇಂಥ ಮಠಗಳಿಗಿಂತ ತುಂಬ ಭಿನ್ನವಾದುದು ನಾಗನೂರು ರುದ್ರಾಕ್ಷಿಮಠ. ಭಕ್ತರ ಸೇವೆಯೇ ಈ ಮಠದ ಉದ್ದೇಶ. ಬಸವಾದಿ ಶಿವಶರಣರು ಸಾರಿದ ಕಾಯಕ, ದಾಸೋಹದ ಹಾದಿಯಲ್ಲಿ ಈ ಮಠ ಸಾಗಿ ಬಂದಿದೆ. ಹಾನಗಲ್ಲ ಕುಮಾರಸ್ವಾಮಿಗಳಿಂದ ಸೇವಾದೀಕ್ಷೆ ಪಡೆದ ಶಿವಬಸವಮಹಾಸ್ವಾಮಿಗಳು ರುದ್ರಾಕ್ಷಿಮಠದ ಸೇವೆಯನ್ನು ನಾಗನೂರಿನಿಂದ ಬೆಳಗಾವಿಗೆ ವಿಸ್ತರಿಸಿದರು. ಇವರಿಂದ ಶ್ರೀಮಠದ ಸೇವೆ ಧಾರ್ಮಿಕ ಚಟುವಟಿಕೆಗಳಿಂದ ಸಾಮಾಜಿಕ, ಶಿಕ್ಷಣ ವಲಯಕ್ಕೆ ವ್ಯಾಪಿಸಿತು. ರುದ್ರಾಕ್ಷಿಮಠದ ಇತಿಹಾಸದಲ್ಲಿಯೇ ಇದು ದೊಡ್ಡ ಬದಲಾವಣೆ. ಶಿವಬಸವಸ್ವಾಮಿಗಳು ಕಾಯಕಯೋಗಿಗಳೆಂದೇ ಹೆಸರಾದರು. ಇವರ ಸೇವೆಯನ್ನು ಪೂಜ್ಯ ಪ್ರಭುಸ್ವಾಮಿಗಳು ಮುಂದುವರಿಸಿದರು. ಒಂಭತ್ತನೆಯ ಪೀಠಾಧ್ಯಕ್ಷರಾಗಿ ಬಂದ ಸಿದ್ಧರಾಮಸ್ವಾಮಿಗಳಾದರೂ ಈ ಸೇವಾಪರಂಪರೆಯನ್ನು ಹೆಚ್ಚು ವ್ಯಾಪಕವಾಗಿ ಸಮಕಾಲೀನವಾಗಿ ಬೆಳೆಸಿದರು.

ಸಿದ್ಧರಾಮಸ್ವಾಮಿಗಳ ದೃಷ್ಟಿಯಲ್ಲಿ ಸೇವೆಯೆಂಬುದು ಈ ಸಮಾಜದ ದೊಡ್ಡ ಸಂಪತ್ತು. ವೈಯಕ್ತಿಕ ಹಾಗೂ ಸಾಂಸ್ಥಿಕ ಸೇವೆಗಳಿಂದಲೇ ಒಂದು ಸಮಾಜ ಸಂಪದ್ಭರಿತವಾಗಿ ಬೆಳೆಯಲು ಸಾಧ್ಯವೆಂಬುದು ಅವರ ಚಿಂತನೆ. ದುಡ್ಡಿನ ಬೆನ್ನು ಹತ್ತಿದ ಆಧುನಿಕ ಸಮಾಜದಲ್ಲಿ ಜನರ ಸೇವಾಭಾವ ಕಡಿಮೆಯಾಗಿದೆ. ಇದರಿಂದ ಸಮಾಜದ ಬೆಳವಣಿಗೆ ಕುಂಠಿತವಾಗುತ್ತದೆಯೆನ್ನುತ್ತಾರೆ. ಇಂಥ ಪರಿಸರದಲ್ಲಿ ಬಸವಾದಿ ಶರಣರ ಧ್ಯೇಯಾದರ್ಶಗಳನ್ನು ಮುಂದಿಟ್ಟುಕೊಂಡಿರುವ ವಿರಕ್ತಮಠಗಳು ಸಮಾಜದ ಸೇವಾಕೇಂದ್ರಗಳಾಗಿ ಬೆಳೆಯಬೇಕೆಂದು ಹೇಳುತ್ತಾರೆ. "ಮಠಗಳು, ಸ್ವಾಮಿಗಳು ಸಮಾಜದ ಸೊತ್ತು ಸ್ವಾಮಿಗಳು ಭಕ್ತವೃಂದದ ನಿಷ್ಠಾವಂತ ಸೇವಕರು" ಎಂಬ ಭಾವನೆ ಅವರದು. "ಸಮಾಜದ ಒಳಿತಿಗಾಗಿ ಸೇವೆ ಮಾಡುವದರಲ್ಲಿಯೇ ನನಗೆ ಆನಂದವಿದೆ" ಎನ್ನುತ್ತಾರೆ. ವಿರಕ್ತರಾದವರು ಮಠದ ಭಕ್ತರ ಸೇವೆ ಹೇಗೆ ಮಾಡಬೇಕು? ಎಂದು ನಿರಂತರ ಯೋಚಿಸುತ್ತಾ, ಆ ದಿಶೆಯಲ್ಲಿ ಕ್ರಿಯಾಶೀಲರಾಗಬೇಕೆಂದು ಹೇಳುತ್ತಾರೆ. ತಮ್ಮ ಸೇವೆಯಿಂದ ಸಮಾಜಕ್ಕೆ ಆದರ್ಶರಾದವರನ್ನು ಗುರುತಿಸಿ 'ಸೇವಾರತ್ನ' ಪ್ರಶಸ್ತಿ ಕೊಡುವ ಮೂಲಕ ಸೇವಾಭಾವ ಪ್ರೋತ್ಸಾಹಿಸುವ ಕೈಂಕರ್ಯವನ್ನು ಪೂಜ್ಯರು ಶ್ರೀಮಠದಲ್ಲಿ ಆರಂಭಿಸಿದ್ದಾರೆ.

ಆಧುನಿಕ ಸಮಾಜದಲ್ಲಿ ವಿಭಕ್ತ ಕುಟುಂಬಗಳು ಹೆಚ್ಚು ವಿಭಕ್ತಗೊಳ್ಳುತ್ತ ನಡೆದಿವೆ. ಇದರಿಂದ ಕೌಟುಂಬಿಕ ಸಂಬಂಧಗಳು, ಕರ್ತವ್ಯಗಳು ಶಿಥಿಲವಾಗಿವೆ. ಮುಪ್ಪಿನ ತಂದೆ ತಾಯಿಗಳನ್ನು ನೋಡಿ-ಕೊಳ್ಳುವ ಹೊಣೆಯಿಂದ ಮಕ್ಕಳು ಎರವಾಗುತ್ತಿದ್ದಾರೆ. ಇದರಿಂದ ಬಾಳಸಂಜೆಯಲ್ಲಿರುವ ಹಿರಿಯರ ದಿನಗಳು ಕರುಳು ಹಿಂಡುತ್ತವೆ. ಇಂಥ ಸ್ಥಿತಿ ತಪ್ಪಬೇಕು. ಮುಪ್ಪಿನ ಬದುಕು ಸಹ್ಯವಾಗಬೇಕೆಂಬುದು ಸಿದ್ಧರಾಮಸ್ವಾಮಿಗಳ ಚಿಂತನೆ. ಅದಕ್ಕಾಗಿ "ವೃದ್ಧಾಶ್ರಮ" ಯೋಜನೆ ರೂಪಿಸಿದ್ದಾರೆ. ಬೆಳಗಾವಿ ಹತ್ತಿರದ ಬಸವನ ಕುಡುಚಿ ಎಂಬ ಗ್ರಾಮದಲ್ಲಿ ವೃದ್ಧಾಶ್ರಮವನ್ನು ಪ್ರಾರಂಭಿಸಿದ್ದಾರೆ. ಹಾಗೆಯೇ ಗ್ರಾಮೀಣ ಬಡ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸಿದ್ದಾರೆ. ಅವುಗಳ ಅನುಷ್ಠಾನಕ್ಕಾಗಿ ಕಾರ್ಯೋನ್ಮುಖರಾಗಿದ್ದಾರೆ.

ನಮ್ಮ ಗ್ರಾಮೀಣ ರೈತರ ಏಳಿಗೆಗಾಗಿಯೂ ಶ್ರೀಗಳು ಯೋಜನೆ ಹಾಕಿಕೊಂಡಿದ್ದಾರೆ. ಈಗಾಗಲೇ ಅನೇಕ ಸಭೆ ಸಮಾರಂಭಗಳನ್ನು ಸಂಘಟಿಸಿ 'ಶ್ರೀಗಳ ನಡಿಗೆ ಕೃಷಿಯ ಕಡೆಗೆ' ಎಂಬ ಅಭಿಯಾನ ಪ್ರಾರಂಭಿಸಿದ್ದಾರೆ. ಅವರ ನುಡಿಯಲ್ಲಿಯೇ ಕೃಷಿ ಮತ್ತು ಕೃಷಿಕರ ಚಿಂತನೆ ಕೇಳಬೇಕು.

"ಕೃಷಿಕರ ಮತ್ತು ಧಾರ್ಮಿಕ ಸಂಸ್ಥೆಗಳ ಸಂಬಂಧವು ಅತ್ಯಂತ ಪವಿತ್ರವಾದುದು. ಕೃಷಿ ಶಬ್ದದಲ್ಲಿ ಋಷಿ ಶಬ್ದವೂ ಅಡಕವಾಗಿದೆ ಕೃಷಿಕನು ಒಬ್ಬ ಋಷಿಯೇ. ಜೀವಜಗತ್ತಿನ ಹೊಟ್ಟೆಯನ್ನು ತಣಿಸುವ ಕೃಷಿ ಋಷಿಯು, ಏಕಕಾಲಕ್ಕೆ ಪರಮಾತ್ಮನೂ ಹೌದು ಪರಮಾತ್ಮನಿಂದಧಿಕನಾದ ಸದ್ಭಕ್ತನೂ ಹೌದು.

'ತನು ಮನ ಬಳಲಿಸಿ ಗಳಿಸಿ ತಂದು ಕೃಷಿ ಕೃತ್ಯ ಕಾಯಕ ಮಾಡುವ ಸದ್ಭಕ್ತರ ಪಾದವ ತೋರಯ್ಯ ಕೂಡಲ

ಸಂಗಮದೇವ' ಎಂದು ಬಸವಣ್ಣನವರು ಕೃಷಿ ಋಷಿಯನ್ನು ಸ್ಮರಿಸಿರುವುದು, ಕೃಷಿಕನ ಹಾಗೂ ಕೃಷಿಯ ಹಿರಿಮೆಯನ್ನು ಎತ್ತಿ ಹಿಡಿದಂತಿದೆ.

ಆದರೆ ಇಂದು ಕೃಷಿ ಪ್ರಧಾನವಾದ ದೇಶದಲ್ಲಿ ಕೃಷಿಯನ್ನು ಅವಲಂಬಿಸಿದ ಕೃಷಿಕರು (ರೈತರು) ಸಂಕಷ್ಟದಲ್ಲಿದ್ದಾರೆ. ಆಧುನಿಕ ಕೃಷಿ ಪದ್ಧತಿಯಿಂದಾಗಿ ರಾಸಾಯನಿಕಗಳ ಬಳಕೆ ಹೆಚ್ಚಾಗಿ ಭೂಮಿಯು ತನ್ನ ಜೈವಿಕ ಸತ್ವವನ್ನು ಕಳೆದುಕೊಳ್ಳುತ್ತಿದೆ. ರಸಗೊಬ್ಬರ, ಕೀಟನಾಶಕ, ಕೃಷಿ ಉಪಕರಣ ಮುಂತಾದವುಗಳಿಗಾಗಿ ರೈತರು ಕೈಗಾರಿಕೋದ್ಯಮಿಗಳನ್ನು ಅವಲಂಬಿಸುವಂತಾಗಿದೆ. ಗುಡಿ ಕೈಗಾರಿಕೆಗಳ ನಷ್ಟ ಅನುಭವಿಸುವಂತಾಗಿದೆ. ಪಶುಪಾಲನೆ ನಿಂತು ಹೋಗುವ ಹಂತಕ್ಕೆ ತಲುಪಿದೆ. ಪರಿಣಾಮವಾಗಿ ನಮ್ಮ ಗ್ರಾಮೀಣ ಯುವಕ ಯುವತಿಯರು ನಗರಗಳತ್ತ ವಲಸೆ ಹೋಗುತ್ತಿರುವುದು ತೀರ ಸಾಮಾನ್ಯವಾಗಿದೆ. ಇಂಥ ಸಂದರ್ಭದಲ್ಲಿ ನಮ್ಮ ನಾಡಿನ ಶ್ರೀಗಳೆಲ್ಲ ಘನಮಠದ ನಾಗಭೂಷಣ ಶಿವಯೋಗಿಗಳಂತೆ ಪಾರಂಪರಿಕ ಕೃಷಿಯನ್ನು ಉತ್ತೇಜಿಸುವ ಮೂಲಕ ರೈತರ ಬದುಕಿಗೆ ಹೊಸ ಆಯಾಮವನ್ನು ಕಲ್ಪಿಸುವ ಕಾರ್ಯ ಮಾಡಬೇಕಿದೆ. ಅನ್ನದಾಸೋಹ, ಜ್ಞಾನದಾಸೋಹಗಳ ಮೂಲಕ ಕರ್ನಾಟಕದಲ್ಲಿ ಶೈಕ್ಷಣಿಕ ಕ್ರಾಂತಿಯನ್ನೇ ಮಾಡಿದ ಮಠಾಧಿಪತಿಗಳು, ಶರಣರು ಮತ್ತು ಸಂತರು. ಇಂದು ಕೃಷಿ ಕ್ರಾಂತಿಯ ಕಡೆಗೆ ಮುನ್ನಡಿ ಇಡಬೇಕಾಗಿದೆ.

'ಶ್ರೀಗಳ ನಡಿಗೆ ಕೃಷಿಯ ಕಡೆಗೆ' ಎಂಬ ವಿನೂತನ ಚಳವಳಿಯ ಮೂಲಕ ರೈತರ ನೆಮ್ಮದಿಯ ಬದುಕಿಗಾಗಿ ಸಾವಯವ ಕೃಷಿ ಹಾಗೂ ಸ್ವಾಭಾವಿಕ ಕೃಷಿ ಪರಂಪರೆಯನ್ನು ಪುನರುತ್ಥಾನಗೊಳಿಸುವ ಕಾರ್ಯ ಈ ನಾಡಿನ ಮಠಗಳಿಂದ, ಮಠಾಧೀಶರಿಂದ ಸಾಧ್ಯ. ಇದರಿಂದಾಗಿ ರೈತರು ತಾವೂ ಬದುಕಿ, ತಮ್ಮ ಸುತ್ತಲಿನ ಜೀವಜಗತ್ತನ್ನು ಬದುಕಿಸಲು ಸಾಧ್ಯವಾಗುತ್ತದೆ. ಹಾಗೆಯೇ ಕೃಷಿಯಿಂದ ವಿಮುಖರಾಗುತ್ತಿರುವ ಯುವಪೀಳಿಗೆಯನ್ನು ಮರಳಿ ಕೃಷಿಕಾಯಕಕ್ಕೆ ಬರಲು ಪ್ರೇರಣೆ ನೀಡಿದಂತಾಗುತ್ತದೆ.

ಪೂಜ್ಯರು ೧೩, ಫೆಬ್ರುವರಿ ೨೦೧೨ ರಂದು ಬೆಳಗಾವಿಯ ಮಹಾತ್ಮಾಗಾಂಧಿ ಭವನದಲ್ಲಿ ಜರುಗಿದ ಸಮಾರಂಭದಲ್ಲಿ ಮಾತನಾಡುತ್ತ ಮೇಲಿನಂತೆ ಚಿಂತನ ವ್ಯಕ್ತಪಡಿಸಿದರು. ಅದೇ ಸಂದರ್ಭದಲ್ಲಿ ಕೃಷಿ ಅಭಿವೃದ್ಧಿಯಲ್ಲಿ ಕೈ ಜೋಡಿಸಲು, 'ಜೈ ಕಿಸಾನ್' ಮಂತ್ರ ಪಠಿಸಲು ನಾಡಿನ ಜನರಿಗೆ ಕರೆ ಕೊಟ್ಟರು. ಗುಲಬರ್ಗಾ ಕೊಪ್ಪಳ ಮತ್ತು ಹಾವೇರಿ ಜಿಲ್ಲೆಗಳಲ್ಲಿ 'ಶ್ರೀಗಳ ನಡಿಗೆ ಕೃಷಿಯ ಕಡೆಗೆ' ಕಾರ್ಯಕ್ರಮಗಳು ಯಶಸ್ವಿಯಾಗಿ ಜರುಗಲು ಕಾರಣರಾಗಿದ್ದಾರೆ.

ಪೂಜ್ಯರ ಸೇವಾತತ್ಪರತೆಯಿಂದ ರುದ್ರಾಕ್ಷಿಮಠವು ಸೇವಾಕೇಂದ್ರವಾಗಿ ಬೆಳೆದಿದೆ. ಶ್ರೀಮಠದ ಹಾಗೆಯೇ ಗಡಿನಾಡಿನಲ್ಲಿರುವ ಮಠಗಳೂ ಸೇವಾದೀಕ್ಷೆ ತೊಡಬೇಕೆಂದು ಶ್ರೀಗಳು ಶ್ರಮಿಸುತ್ತಿದ್ದಾರೆ. ಜೀರ್ಣಾವಸ್ಥೆಯಲ್ಲಿದ್ದ ಮಠಗಳಿಗೆ ಕಾಯಕಲ್ಪ ಕಲ್ಪಿಸುವುದು, ಜಡವಾದ ಮಠಗಳಿಗೆ ಕಾಯಕ, ದಾಸೋಹ ದೀಕ್ಷೆ ಕೊಟ್ಟು ಕ್ರಿಯಾಶೀಲಗೊಳಿಸುವುದು ಸಿದ್ಧರಾಮಸ್ವಾಮಿಗಳ ನಿರಂತರ ಪ್ರಯತ್ನವಾಗಿದೆ. ಇವರಿಂದ ಅನುಗ್ರಹ ಪಡೆದ ಚಿಂಚಣಿ ಸಿದ್ಧಸಂಸ್ಥಾನಮಠದ ಅಲ್ಲಮಪ್ರಭು–ಸ್ವಾಮಿಗಳು, ಅಥಣಿ ಮೋಟಗಿಮಠದ ಪ್ರಭು ಚನ್ನಬಸವಸ್ವಾಮಿಗಳು, ಕಿತ್ತೂರು ಕಲ್ಮಠದ ಮಡಿವಾಳ ಸ್ವಾಮಿಗಳು, ನರಗುಂದದ ಚನ್ನಬಸವ ಶ್ರೀಗಳು ಸಿದ್ಧರಾಮಸ್ವಾಮಿಗಳ ಸೇವೆಯ ಹಾದಿಯಲ್ಲಿ ಮುನ್ನಡೆದಿರುವರು.

ಪೂಜ್ಯ ಸಿದ್ಧರಾಮಸ್ವಾಮಿಗಳು ಬೀಳಗಿ ಸಿದ್ಧೇಶ್ವರ ಶಿಕ್ಷಣ ಸಂಸ್ಥೆಯ ಕಾರ್ಯಾಧ್ಯಕ್ಷರಾಗಿ, ಬೈಲಹೊಂಗಲ ಕಿತ್ತೂರು ರಾಣಿ ಚನ್ನಮ್ಮ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ, ವೀರಶೈವ ಮಹಾಸಭೆ ಬೆಳಗಾವಿ ಜಿಲ್ಲಾ ಘಟಕದ ಗೌರವಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಆದಿಚುಂಚನಗಿರಿ ಸಂಸ್ಥಾಮಠದ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳು ಅಧ್ಯಕ್ಷರಾಗಿದ್ದ 'ಕರ್ನಾಟಕ ವನ ಸಂವರ್ಧನ ಟ್ರಸ್ಟ್'ನ ಸದಸ್ಯರಾಗಿ ಬೆಳಗಾವಿ, ಬಾಗಲಕೋಟ ಭಾಗದ ಸಸ್ಯ ಪರಿಸರ ಸಮೃದ್ಧಗೊಳಿಸುವ ಯೋಜನೆಯಲ್ಲಿ ಶ್ರೀಗಳು ಕಾರ್ಯನಿರ್ವಹಿಸಿದ್ದಾರೆ.

ಪೂಜ್ಯರ ಸೇವಾಭಾವ, ಸೇವಾ ಚಟುವಟಿಕೆಗಳ ಬಗ್ಗೆ ಬರೆಯುತ್ತ ಹೋದರೆ ದೊಡ್ಡ ಹೊತ್ತಿಗೆಯಾಗಬಹುದು. ಒಟ್ಟಿನಲ್ಲಿ ಸಿದ್ಧರಾಮ ಸ್ವಾಮಿಗಳ ದಿನಚರಿಯೆಂದರೆ ಬಿಡುವಿಲ್ಲದ ದಿನಚರಿ ಶ್ರೀಮಠದ ಶಿಕ್ಷಣ ಸಂಸ್ಥೆಗಳ ಉಸ್ತುವಾರಿ, ಹಣಕಾಸಿನ ವ್ಯವಹಾರ, ಭಕ್ತರ ಕಷ್ಟ ಸುಖಗಳಲ್ಲಿ ಭಾಗವಹಿಸುವುದು, ಸಾಹಿತ್ಯಿಕ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು 'ವಚನ ಅಧ್ಯಯನ ಕೇಂದ್ರ'ದ ಕಾರ್ಯಕ್ರಮಗಳನ್ನು ರೂಪಿಸುವುದು 'ವಚನ ಅಧ್ಯಯನ' ಪತ್ರಿಕೆಗಾಗಿ ಲೇಖನ ಬರೆಸುವುದು, ಬಂದ ಲೇಖನಗಳನ್ನು ಪರಿಶೀಲಿಸುವುದು, ಕರಡು ತಿದ್ದುವುದು, ವಚನಾರ್ಥ ಚಿಂತನಗಳಲ್ಲಿ ಬರೆಯುವುದು, ಅನುವಾದ ಮಾಡುವುದು

ಜೊತೆಗೆ ದೂರ ದೂರದ ಊರುಗಳಲ್ಲಿಯ ಕಾರ್ಯಕ್ರಮಗಳಿಗೆ ಹೋಗುವುದು-ಹೀಗೆ ಬಿಡುವಿಲ್ಲದ ಕಾರ್ಯಕ್ರಮಗಳ ನಡುವೆ ಉತ್ಸಾಹದಿಂದ ಓಡಾಡಿಕೊಂಡಿರುತ್ತಾರೆ. ನಗುನಗುತ್ತಾ ಹಾಸ್ಯಭರಿತ ಮಾತಿನ ಶೈಲಿಯಿಂದ ಜೊತೆಗಿದ್ದವರನ್ನು ನಗಿಸುತ್ತ ಹಗುರಾಗುತ್ತಾರೆ. ಕಾಯಕದಿಂದ ಕಾಯಕಕ್ಕೆ ಸಂಚರಿಸುತ್ತಾರೆ.

ಯಾವುದೇ ಕೆಲಸದ ಪರಿಣಾಮವು ಅದರಲ್ಲಿ ನಾವು ಸೇವಾಭಾವದಿಂದ ತೊಡಗಿಸಿಕೊಳ್ಳುವುದರಲ್ಲಿದೆಯೆಂಬುದು ಶ್ರೀಗಳ ವಿಶ್ವಾಸ. ಇಷ್ಟೊಂದು ಕಾರ್ಯಭಾರದಲ್ಲಿ ನಿರತರಾಗಿದ್ದರೂ ನಿರಾಭಾರಿಗಳು 'ಮಾಡಿದೆ' ಎಂಬ ಭಾವ ಅವರಲ್ಲಿ ಸುಳಿಯುವದಿಲ್ಲ. ಶರಣರ ತತ್ವಗಳಂತೆ 'ದಾಸೋಹವೆಂಬುದು ಮಾಡುವಂತಿರಬೇಕು. ಮಾಡದಂತಿರಬೇಕು' ಎಂಬುದಕ್ಕೆ ಇವರು ಪ್ರತ್ಯಕ್ಷ ನಿದರ್ಶನ. ಪ್ರಚಾರ, ಪ್ರಶಂಸೆ, ಪ್ರಸಿದ್ಧಿಗಳೆಂದರೆ ಆಗುವುದಿಲ್ಲ. ಹಾಗಾಗಿ ಅಭಿನಂದನೆ, ಗೌರವ ಪ್ರಶಸ್ತಿ ಸಮಾರಂಭಗಳನ್ನು ತಪ್ಪಿಸಲು ತುಂಬ ಪರಿಶ್ರಮ ಪಡುತ್ತಾರೆ. ಭಕ್ತರ, ಶ್ರೀಮಠದ ಹಿತೈಷಿಗಳ ಮನಸ್ಸನ್ನು ಎಷ್ಟೊಂದು ನೋಯಿಸಲು ಸಾಧ್ಯ? ಕೆಲವೊಮ್ಮೆ ಅವರ ಪ್ರೀತಿ ಅಭಿಮಾನ ಗೌರವಿಸಲು ಸಮಾರಂಭಗಳಲ್ಲಿ ಭಾಗವಹಿಸುತ್ತಾರೆ. ಆದರೆ ಅಂಥ ಸಮಾರಂಭಗಳು ತುಂಬ ಅಪರೂಪ.

ಪೂಜ್ಯರು ರುದ್ರಾಕ್ಷಿಮಠದ ಪೀಠಾಧಿಕಾರಿಯಾಗಿ ೨೫ ವರ್ಷಗಳಾದವು ಇದೇ ಸಂದರ್ಭದಲ್ಲಿ ಅವರಿಗೆ ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ ಪದವಿಯೂ ಬಂದಿತು. ಈ ನಿಮಿತ್ಯ ಪ್ರಸಾದ ನಿಲಯದ ಹಳೆಯ ವಿದ್ಯಾರ್ಥಿಗಳು, ಶ್ರೀಮಠದ ಭಕ್ತರು ಅಭಿನಂದಿಸಬೇಕೆಂದು ದುಂಬಾಲು ಬಿದ್ದಾಗ, ಕೊನೆಗೆ ಶ್ರೀಗಳು ಹೇಳಿದ ಮಾತೆಂದರೆ 'ಸಮಾರಂಭ ತುಂಬ ಸರಳವಾಗಿರಬೇಕು. ವಸ್ತುಸ್ಥಿತಿ ಮೀರಿದ ಬಣ್ಣನೆಗೆ ಅವಕಾಶ ಇರಬಾರದು. ಹಾಗಿದ್ದರೆ ಸಮಾರಂಭದಲ್ಲಿ ಭಾಗವಹಿಸುವೆ' ಎಂದು ಷರತ್ತಿನ ಮೇಲೆ ಒಪ್ಪಿಕೊಂಡರು. ಇವತ್ತಿನ ಪರಿಸ್ಥಿತಿಯಲ್ಲಿ ಸದ್ದುಗದ್ದಲವಿಲ್ಲದೆ ಸೇವೆ ಮಾಡುವ, ಪ್ರಸಿದ್ಧಿ ಬಯಸದೆ ಸೇವೆಯಲ್ಲಿಯೇ ಸಂತೋಷ ಅನುಭವಿಸುವ ಸ್ವಾಮಿಗಳೆಷ್ಟು? ಎಂದು ಯೋಚಿಸಿದಾಗ 'ಇಂಥ ಸ್ವಾಮಿಗಳೂ ಇದ್ದಾರಲ್ಲ!' ಎಂದು ಅಭಿಮಾನವೆನಿಸುತ್ತದೆ. ಆನಂದವಾಗುತ್ತದೆ.

**ರುದ್ರಾಕ್ಷಿಮಠದಿಂದ ತೋಂಟದಾರ್ಯಮಠಕ್ಕೆ**

ದಿನಾಂಕ ೨೯-೧೦-೨೦೧೮ ರಂದು ಬೆಳಗಾವಿಯ ನಾಗನೂರು ರುದ್ರಾಕ್ಷಿಮಠದ ಪೂಜ್ಯ ಡಾ. ಸಿದ್ಧರಾಮ ಮಹಾಸ್ವಾಮಿಗಳು ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠದ ಪೀಠಾರೋಹಣ ಮಾಡಿದರು. ಶ್ರೀ ಮನ್ನಿರಂಜನ ಜಗದ್ಗುರು ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳಾಗಿ ನಾಮಾಂಕಿತರಾದರು. ಅಂದು ನಾಡಿನ ಜನರು ಭಕ್ತಿಪೂರ್ವಕವಾಗಿ ಅವರಿಗೆ 'ಗುರುವಂದನೆ' ಸಲ್ಲಿಸಿದ ಅಪರೂಪದ ಸನ್ನಿವೇಶವದು.

ಪೂಜ್ಯ ಡಾ. ಸಿದ್ಧರಾಮ ಮಹಾಸ್ವಾಮಿಗಳು ಬೀಳಗಿಯ ಕಲ್ಮಠದಿಂದ ಬೆಳಗಾವಿಯ ನಾಗನೂರು ರುದ್ರಾಕ್ಷಿಮಠಕ್ಕೆ, ಅಲ್ಲಿಂದ ಎಡೆಯೂರು ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠಕ್ಕೆ ಉತ್ತರೋತ್ತರವಾಗಿ ಸಾಗಿ ಬಂದಿರುವ ದಾರಿ ಅತ್ಯಂತ ಕುತೂಹಲಪೂರ್ಣವಾದುದು. ಪೂಜ್ಯರು ಮಠದ ಅಧಿಕಾರವನ್ನು ಕನಸು ಮನಸಿನಲ್ಲಿ ಚಿಂತಿಸಿದವರಲ್ಲ. ಅದಕ್ಕಾಗಿ ಹಂಬಲಿಸಿದವರಲ್ಲ. ಅವರ ತೀವ್ರವಾದ ಹಂಬಲವೆಂದರೆ ಓದಬೇಕು, ಬರೆಯಬೇಕು ಅಧ್ಯಯನದ ಮೂಲಕ ಸಮಾಜಸೇವೆ ಮಾಡಬೇಕೆಂಬುದು. ಅದಕ್ಕಾಗಿ ಅವರು ಪ್ರಯತ್ನ ಮಾಡುತ್ತಿದ್ದಂತೆ ಅವರ ವಿನಯ, ವಿದ್ವತ್ತು ಚಿಂತನೆ-ಸಾಧನೆ ಸೇವಾಭಾವಗಳು ಅವರನ್ನು ಹುಡುಕಿಕೊಂಡು ಬಂದವು. ಮಠದ ಹೊಣೆ 'ಅನಿವಾರ್ಯ; ಎಂಬಂತೆ ಅವರನ್ನು ಮುನ್ನಡೆಸಿದವು.

ಬಸವಾದಿ ಶಿವಶರಣರ ತತ್ವಾದರ್ಶಗಳನ್ನು ಮೈಮನಗಳಲ್ಲಿ ತುಂಬಿಕೊಂಡಿದ್ದ ತೋಂಟದಾರ್ಯ ಮಠದ ಲಿಂ. ಡಾ. ಸಿದ್ಧಲಿಂಗ ಮಹಾಸ್ವಾಮಿಗಳ ವ್ಯಕ್ತಿತ್ವದ ಬಗೆಗೆ ಕೇಳಿಬರುವ ಮಾತು ಎಂದರೆ 'ಅವರೆಂದೂ ತಮ್ಮ ಮನಸಿನ ವಿರುದ್ಧ ನಡೆದುಕೊಂಡವರಲ್ಲ. ಹಾಗೆಯೇ ಮನಸಿಗೆ ಸರಿಕಂಡಿದ್ದನ್ನು ಮಾತಾಡಿ ತೋರಿಸುವದಕ್ಕೂ, ಮಾಡಿ ತೋರಿಸುವುದಕ್ಕೂ ಯಾವುದೇ ಸಂದರ್ಭದಲ್ಲೂ ಹಿಂಜರಿದವರಲ್ಲ. ಈ ನಾಡಿನಲ್ಲಿ ಮಠಗಳ ಸಂಖ್ಯೆ ಬಹಳ, ಸ್ವಾಮಿಗಳ ಸಂಖ್ಯೆಯೂ ಬಹಳ, ಆದರೆ ಅವರಲ್ಲಿ ನಾಗನೂರು ರುದ್ರಾಕ್ಷಿಮಠದ ಪೂಜ್ಯ ಸಿದ್ಧರಾಮ ಮಹಾಸ್ವಾಮಿಗಳೇ ತಮ್ಮ ಉತ್ತರಾಧಿಕಾರಿಯಾಗಬೇಕೆಂದು ತಮ್ಮ ಉಯಿಲಿನಲ್ಲಿ ಬರೆದಿಟ್ಟ ವಿಚಾರವು, ಅವರ ಮನಸಿನ ಮಾತು, ಅದಕ್ಕೆ ಕಾರಣ ಸ್ವಾಮಿತ್ವಕ್ಕೆ ತಕ್ಕ ವಿದ್ಯೆ, ತ್ಯಾಗ, ತಪಸ್ಸು, ಸೇವೆಗಳ ಸಾಕಾರರು ಶ್ರೀ ಸಿದ್ಧರಾಮ ಮಹಾಸ್ವಾಮಿಗಳು. ಸರಳರಲ್ಲಿ ಸರಳರು, ನಡೆ-ನುಡಿ ಒಂದಾದವರು, ಅಧ್ಯಯನಶೀಲರು, ಸಂಘಟನಾಶೀಲರು, ಸಮಾಜ ಸೇವೆಯಲ್ಲಿ ನಿಷ್ಣಾತರು. ಅದಕ್ಕೆ ನಿದರ್ಶನ ನಾಗನೂರು ರುದ್ರಾಕ್ಷಿಮಠದಲ್ಲಿ ಮಾಡಿದ ಶಿಖರಪ್ರಾಯ ಸಾಧನೆಗಳು. ಮಠದಿಂದ ಘಟವಲ್ಲ,

ಘಟದಿಂದ ಮಠ ಎಂಬ ಮಾತಿಗೆ ಪೂಜ್ಯರು ನಿದರ್ಶನ. ಅದಕ್ಕಾಗಿಯೇ ಪೂಜ್ಯ ಡಾ. ಸಿದ್ಧರಾಮ ಮಹಾಸ್ವಾಮಿಗಳಿಗೆ ಶ್ರೀ ತೋಂಟದಾರ್ಯ ಮಠದ ಪೀಠ ಒಲಿದು ಬಂದಿತು. ಪೂಜ್ಯ ಡಾ. ಸಿದ್ಧಲಿಂಗ ಸ್ವಾಮಿಗಳಿಗೆ ನಾಗನೂರು ಶ್ರೀಗಳೆಂದರೆ ಎಲ್ಲಿಲ್ಲದ ಪ್ರೀತಿ, ಅಂತಕರಣ, ಅವರ ಬಗೆಗೆ ದೊಡ್ಡ ಭರವಸೆ. ನಾಗನೂರು ರುದ್ರಾಕ್ಷಿಮಠಕ್ಕೆ ಸ್ವಾಮಿಗಳಾಗಬೇಕೆಂದು ಒತ್ತಾಯಿಸಿದವರೇ ಅವರು. ಅವರ ಬಗೆಗೆ ಪೂಜ್ಯ ಡಾ. ಸಿದ್ಧರಾಮ ಮಹಾಸ್ವಾಮಿಗಳಿಗೂ ಅಷ್ಟೇ ಭಕ್ತಿ, ಗೌರವ.

ಪೂಜ್ಯರ ಪುಸ್ತಕ ಪ್ರೀತಿ ಅನನ್ಯವಾದುದು. ಓದು–ಬರಹದಲ್ಲಿ ಅವರು ಅನುಭವಿಸುವ ಆನಂದಕ್ಕೆ ಪಾರವೇ ಇಲ್ಲ. ಅವರು ಪುಸ್ತಕಗಳನ್ನು ಕೈಯಲ್ಲಿ ಹಿಡಿಯದ, ಓದದ ದಿನಗಳೇ ಇಲ್ಲ ಎನ್ನಬಹುದು. ಓದಿದ ವಚನಗಳ ತಾತ್ಪರ್ಯ, ಭಕ್ತಿಸಾಹಿತ್ಯ, ತತ್ವಶಾಸ್ತ್ರದ ಸಂಗತಿಗಳನ್ನು ಭಕ್ತರಿಗೆ ರಸವತ್ತಾಗಿ ವಿವರಿಸುತ್ತಾರೆ. ಅಷ್ಟೇ ಸೊಗಸಾಗಿ ಬರೆದು ಅನುಭವಗಳನ್ನು ದಾಖಲಿಸುತ್ತಾರೆ. ಅವರ 'ವಚನಾರ್ಥ ಚಿಂತನ' 'ಇಷ್ಟಲಿಂಗ ಪೂಜಾವಿಧಾನ' ಕೃತಿಗಳು ಭಕ್ತರ ಮನಸ್ಸನ್ನು ಗೆದ್ದಿವೆ. ಪ್ರಜಾವಾಣಿ ದಿನಪತ್ರಿಕೆಯಲ್ಲಿ ಬುಧವಾರಕ್ಕೊಮ್ಮೆ ಬರುತ್ತಿದ್ದ 'ಅಮೃತವಾಕ್ಕು' ಅಂಕಣದಲ್ಲಿಯ ಅವರ ಬರಹಗಳು ಜನಪ್ರಿಯವಾಗಿದ್ದವು. ಪೂಜ್ಯರು ಉತ್ತಮ ಅನುವಾದಕರೂ ಹೌದು. ಅವರು ವಿನೋಭಾ ಭಾವೆಯವರ ಹಿಂದಿ ಕೃತಿಗಳನ್ನು ಸೊಗಸಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಅವುಗಳಲ್ಲಿ 'ಭಕ್ತಿದರ್ಶನ', 'ಇಸ್ಲಾಂ ಧರ್ಮ ಸಂದೇಶ', 'ಧರ್ಮಾಮೃತ' ಕೃತಿಗಳು ಪ್ರಮುಖವಾಗಿವೆ. ಭಾರತೀಯ ತತ್ತ್ವಶಾಸ್ತ್ರದ ವಿದ್ವಾಂಸರಲ್ಲಿ ಪ್ರೊ. ಚಂದ್ರಧರ ಶರ್ಮಾ ಪ್ರಮುಖರು. ಇವರ 'ಭಾರತೀಯ ತತ್ತ್ವಶಾಸ್ತ್ರ' ಗ್ರಂಥವನ್ನು ಪೂಜ್ಯರು ಕನ್ನಡಕ್ಕೆ ಅನುವಾದಿಸಿದ್ದಾರೆ. ಎರಡು ವರ್ಷಗಳ ಅವರ ನಿರಂತರ ಪರಿಶ್ರಮದ ಫಲವಿದು. ಈ ಕೃತಿಯನ್ನು ಕನ್ನಡ ವಿದ್ವತ್‌ಲೋಕ ಮೆಚ್ಚಿಕೊಂಡು ಗೌರವಿಸುತ್ತಿದೆ.

ಪೂಜ್ಯಶ್ರೀ ಡಾ. ಸಿದ್ಧರಾಮ ಮಹಾಸ್ವಾಮಿಗಳ ಸೇವಾತತ್ಪರತೆಯಿಂದ ರುದ್ರಾಕ್ಷಿಮಠ ಸೇವಾಕೇಂದ್ರವಾಗಿ ಬೆಳೆದಿದೆ. ಶ್ರೀಮಠದ ಹಾಗೆಯೇ ಇತರ ಮಠಗಳೂ ಸೇವಾದೀಕ್ಷೆ ತೊಡಗಬೇಕೆಂದು ಪೂಜ್ಯರು ಶ್ರಮಿಸುತ್ತಿದ್ದಾರೆ. ಜೀರ್ಣಾವಸ್ಥೆಯಲ್ಲಿದ್ದ ಮಠಗಳಿಗೆ ಕಾಯಕಲ್ಪ ಕಲ್ಪಿಸುವುದು, ಜಡವಾದ ಮಠಗಳನ್ನು ಕ್ರಿಯಾಶೀಲಗೊಳಿಸುವುದು, ಕಾಯಕ–ದಾಸೋಹ ದೀಕ್ಷೆ ನೀಡುವುದು ಪೂಜ್ಯ ಸಿದ್ಧರಾಮ ಮಹಾಸ್ವಾಮಿಗಳವರ ನಿರಂತರ ಪ್ರಯತ್ನವಾಗಿದೆ. ಯಾವುದೇ ಕೆಲಸದ ಪರಿಣಾಮವು ಅದರಲ್ಲಿ ತೊಡಗಿಸಿಕೊಳ್ಳುವ ಪ್ರಾಮಾಣಿಕತೆಯನ್ನು ಅವಲಂಬಿಸಿದೆಯೆಂಬುದು ಪೂಜ್ಯರ ನಿಲುವು. ಬಿಡುವಿಲ್ಲದ ದಿನಚರಿಯಲ್ಲಿ ದುಡಿದರೂ, ದುಡಿದೆನೆಂಬ ಭಾವ ಅವರ ಸಮೀಪಕ್ಕೆ ಸುಳಿಯದು. ಶರಣರ ತತ್ವದಂತೆ 'ದಾಸೋಹವೆಂಬುದು ಮಾಡುವಂತಿರಬೇಕು, ಮಾಡದಂತಿರಬೇಕು ಎಂಬುದು ಪ್ರತ್ಯಕ್ಷ ನಿದರ್ಶನ. ಪ್ರಚಾರ, ಪ್ರಶಂಸೆ, ಪ್ರಸಿದ್ಧಿಯೆಂದರೆ ಅವರಿಗೆ ಆಗುವುದಿಲ್ಲ. ಅಭಿನಂದನೆ, ಗೌರವ, ಪ್ರಶಸ್ತಿಯ ಸಮಾರಂಭಗಳನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾರೆ.

ಇವತ್ತಿನ ದಿನಮಾನದಲ್ಲಿ ಸದ್ದುಗದ್ದಲವಿಲ್ಲದೆ ಸೇವೆ ಮಾಡುವ, ಪ್ರಸಿದ್ಧಿ ಬಯಸದೆ ಸೇವೆಯಲ್ಲಿಯೇ ಸಂತೃಪ್ತಿ ಕಾಣುವ ಸ್ವಾಮಿಗಳ ಸಂಖ್ಯೆ ಎಷ್ಟು? ಎಂದು ಯೋಚಿಸಿದಾಗ 'ಪೂಜ್ಯ ಡಾ. ಸಿದ್ಧರಾಮ ಸ್ವಾಮಿಗಳಿದ್ದಾರಲ್ಲ 'ಎಂದು ನೆನೆದಾಗ ಅಭಿಮಾನ ಮತ್ತು ಹೆಮ್ಮೆಯೆನಿಸುತ್ತದೆ. ಅವರ ಸೇವಾಭಾವಕ್ಕೆ ಒಲಿದು ಬಂದ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠದ ಸೇವೆಗಳು ಅರ್ಥಪೂರ್ಣವಾಗಿ, ಪರಿಣಾಮಕಾರಿಯಾಗಿ ನಡೆಯುತ್ತಿರುವುದು ಕಣ್ಣ ಮುಂದಿನ ಸತ್ಯ.

೨೦೧೯– ಈ ವರ್ಷದ ವಿಶೇಷತೆಯೆಂದರೆ ಕಾಯಕಯೋಗಿ, ಮಹಾಪ್ರಸಾದಿ ಪೂಜ್ಯಶ್ರೀ ಡಾ. ಶಿವಬಸವ ಮಹಾಸ್ವಾಮಿಗಳವರ ಪುಣ್ಯ ಸ್ಮರಣೆಯ ರಜತ ಮಹೋತ್ಸವ ಅದರಂಗವಾಗಿ ಬಸವ ಪುರಾಣ, ಪೂಜ್ಯಶ್ರೀ ಡಾ. ಸಾವಳಗೀಶ್ವರ ದೇವರ ನಿರಂಜನ ಪಟ್ಟಾಧಿಕಾರ ಮಹೋತ್ಸವ ಸಾಧಕರಿಗೆ ಸನ್ಮಾನ, ಪುಸ್ತಕ ಪ್ರಕಟಣೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ನಾಗನೂರಿನಲ್ಲಿ ಅತ್ಯಂತ ಅಚ್ಚುಕಟ್ಟಾಗಿ, ಅದ್ದೂರಿಯಿಂದ ನೆರವೇರಲು ಪೂಜ್ಯಶ್ರೀ ಡಾ. ಸಿದ್ಧರಾಮ ಮಹಾಸ್ವಾಮಿಗಳ ಪ್ರಯತ್ನ, ಪರಿಶ್ರಮ ಮತ್ತು ಸಾನಿಧ್ಯವೇ ಕಾರಣ.

■■

# ಸುಸಂಸ್ಕೃತ ವ್ಯಕ್ತಿ

● **ಪೂಜ್ಯಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು**

**ತನುವಿನಲ್ಲಿ ನಿರ್ಮೋಹ ಮನದಲ್ಲಿ ನಿರಹಂಕಾರ,**
**ಪ್ರಾಣದಲ್ಲಿ ನಿರ್ಭಯ, ಚಿತ್ತದಲ್ಲಿ ನಿರಪೇಕ್ಷೆ,**
**ವಿಷಯಂಗಳಲ್ಲಿ ಉದಾಸೀನ ಭಾವದಲ್ಲಿ ದಿಗಂಬರ,**
**ಜ್ಞಾನದಲ್ಲಿ ಪರಮಾನಂದ ನೆಲೆಗೊಂಡ ಬಳಿಕ**
**ಸೌರಾಷ್ಟ್ರ ಸೋಮೇಶ್ವರ ಲಿಂಗ ಬೇರಿಲ್ಲ ಕಾಣಿರೋ"**
– ಶರಣ

ಆದಯ್ಯ

ಮತ್ತೆ ಮತ್ತೆ ಮನನ ಮಾಡುವಂತಹ ಶಿವಶರಣ ಆದಯ್ಯನ ವಚನದ ಒಂದೊಂದು ಮಾತನ್ನು ಸಾರ್ಥಕಗೊಳಿಸುತ್ತರುವ ಜೀವಂತ ಭಾಷ್ಯವಾಗಿ ಬಾಳುತ್ತಿರುವ ಸಾವಳಗೀಶ್ವರ ದೇವರು ಒರ್ವ ಸುಸಂಸ್ಕೃತ ವ್ಯಕ್ತಿ. ಹಜರತ್ ಮಹಮ್ಮದ್ ಪೈಗಂಬರರನ್ನು ಯಾರೋ ಕೇಳಿದರಂತೆ "ಸ್ವರ್ಗವೆಲ್ಲಿದೆ?" ಎಂದು. ಪೈಗಂಬರ್ ಉತ್ತರಿಸಿದರಂತೆ " ತಾಯಿಯ ಪದತಳದಲ್ಲಿ ಹಾಗೂ ತಾಯಿಯ ಗುಣ ಶ್ರೀಮಂತಿಕೆಯನ್ನು ಹೊಂದಿದವರಲ್ಲಿದೆ ಎಂದು" ಈ ಮಾತು ಎಷ್ಟು ಸತ್ಯವಾದುದು ! ತಮ್ಮ ಪೂರ್ವಾಶ್ರಮದ ತಂದೆ–ತಾಯಿ ಬಂಧು–ಬಳಗದವರ ಸಂಪರ್ಕ ಹರಿದೊಗೆದು ಜಂಗಮರಾದ ವಿರಕ್ತರಿಗೆ ತಾಯಿಯ ಸ್ಥಾನಮಾನವನ್ನು ತುಂಬಿಕೊಡಲು ತಾಯಿಯಾಗಿ ಉದಯಿಸಿ ಬಂದಿದ್ದಾರೆನೋ ಅನ್ನುವ ಕಲ್ಪನೆ ಸದಾ ಸಾವಳಗೀಶ್ವರ ದೇವರನ್ನು ನೋಡಿದಾಗಲೆಲ್ಲ ನಮಗೆ ಭಾಸವಾಗುತ್ತಿದೆ. 'ತಾಯೊಲವೇ ಒಲವು' ಈ ಲೋಕದೊಳಗೆ, ಕಡಲಿಂಗೆ, ಕಡಲಲ್ಲದುಂಟೆ ಹೋಲಿಕೆಗೆ? ಎಂದು ಜಿ.ಎಸ್.ಎಸ್. ಅವರು ಹೇಳಿದಂತೆ ತಾಯಿಗೆ ತಾಯಿಯೇ ಹೋಲಿಕೆ. ಹಾಗೆ ಸಾವಳಗೀಶ್ವರ ದೇವರಿಗೆ ಸಾವಳಗೀಶ್ವರರೇ ತಾಯಿಯ ಗುಣದಲ್ಲಿ ಹೋಲಿಕೆ. ಲೌಕಿಕವನ್ನು ಬಿಡದೆ ಅದರ ಆಂತರ್ಯದಲ್ಲಿಯೇ ಆಧ್ಯಾತ್ಮದ ತಳಹದಿಯನ್ನು ಕಂಡುಕೊಂಡವರು. ನಾಡಿನ ಹಿತಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡಿದ್ದಾರೆ. ಗುರುಸೇವೆಗಾಗಿ ಸುಟ್ಟುಕೊಂಡಿದ್ದಾರೆ. ಬೇರೊಬ್ಬರ ಮನಸ್ಸಿಗೆ ನೋವಾಗುವಂತೆ ಮಾತನಾಡಿದವರಲ್ಲ, ನಡೆದುಕೊಂಡವರೂ ಅಲ್ಲ. ಎನಗಿಂತ ಕಿರಿಯರಿಲ್ಲ ಎನ್ನುವ ವಿನೀತ ಭಾವ ಸರ್ವ ಕಾಲದಲ್ಲಿಯೂ, ಗರುವರ್ಯರ ಬಗ್ಗೆ ಪೂಜ್ಯ ಭಾವನೆಯುಳ್ಳವರಾಗಿದ್ದಾರೆ.

ಸತ್ಯಶುದ್ಧ ಸಾಧನೆಯು ಸೂತ್ರವಿಡಿದು, ಪರಮಾರ್ಥದಲ್ಲಿ ಯಥಾ ರೀತಿಯಾಗಿ ನಡೆದು ಷಟ್‌ಸ್ಥಲ ಸಿದ್ಧಿ' ಯನ್ನು ಪಡೆಯಲೆತ್ನಿಸುತ್ತಿರುವ, ಮಾನವತೆಯ ಪರಮಾವಧಿ ವಿಕ್ರಮದ ಮಹಾನುಭಾವರ ಮಾಲಿಕೆಯಲ್ಲಿ ನಮ್ಮ ಸಹೃದಯದ, ಒಂದು ದಿವ್ಯ ತೇಜೋರತ್ನ ಶ್ರೀ ಸಾವಳಗೀಶ್ವರ ದೇವರು.

ಪ್ರಪಂಚದ ಯೋಗ–ಕ್ಷೇಮಗಳು, ಸುಖ–ಶಾಂತಿ, ಸಮೃದ್ಧಿಗಳು, ಪರಮಾರ್ಥ ಪ್ರಣವತೆಯನ್ನೆ ಅವಲಂಬಿಸಿವೆ. ಪರಮಾರ್ಥವೆಂದರೆ ಪ್ರಪಂಚದ ತಿರುಳು. ಪ್ರಪಂಚ ಪ್ರೇಮಿಗಳು ಪರಮಾರ್ಥ ನಿಷ್ಠೆಯನ್ನು ಮರೆಯಲಾಗದು, ತೊರೆಯಲಾಗದು ಎಂಬ ವಿಚಾರವನ್ನು ಈ ಪೂಜ್ಯರು ತಮ್ಮ ಸಹಜ ವರ್ತನೆಯಿಂದ ಸಮಾಜಕ್ಕೆ ಬಿಂಬಿಸುತ್ತಿದ್ದಾರೆ.

ಮಾವಿನ ಸಸಿಯು ಮಾವಿನ ಮರವಾಗುವಂತೆ, ಬೇವಿನ ಸಸಿಯು ಮಾವಿನ ಮರವಾಗಲಾಗದು. ರಸ–ರುಚಿಗಳಿಂದಾಗಿ ಹೀಚು ಹಣ್ಣೆನಿಸುವದು, ಆದರೆ ಹೀಚಿನಲ್ಲಿ ಹಣ್ಣಾಗುವ ಶಕ್ತಿ ಮೊದಲು ಅಗತ್ಯ. ಸಾವಳಗೀಶ್ವರ ದೇವರು ಬಾಲ್ಯದಲ್ಲಿಯೇ 'ಶಿವಯೋಗಿ ಸಂಕೇತ' ವಾಗಿದ್ದಾರೆ. ಪರಿಪೂರ್ಣತೆಯ ಸಂಕ್ಷೇಪವಾಗಿದ್ದಾರೆ. ಬಾಲಕರಾಗಿದ್ದಾಗ (ಶ್ರೀ ಕುಮಾರೇಶನ ಕೃಪೆ, ನಾಗನೂರಿನ ಪೂಜ್ಯಶ್ರೀ ಡಾ॥ ಸಿದ್ಧರಾಮ ಮಹಾಸ್ವಾಮಿಗಳ ಗುರುಕೃಪೆಯಾಂತು ಸಾವಳಗೀಶ್ವರ ದೇವರಾಗಿ ತಮ್ಮ ನಿಜಾಚರಣೆಯೊಂದಿಗೆ ಅಲ್ಲಮಪ್ರಭು ಮಹಾಸ್ವಾಮಿಗಳಾಗುವವರಿದ್ದಾರೆ. ಸರಿಯಷ್ಟೆ!

ಸಾಹಿತ್ಯ ಸಂಸ್ಕೃತಿಗಳ ಉದಾತ್ತ ಪರಂಪರೆಯ ಪರಿಚಯವಿಲ್ಲದ ಜನಾಂಗ ಸಮಾಜವಲ್ಲ, ಅದೊಂದು ಜನಜಂಗುಳಿ ಮಾತ್ರ ! ಸಾಹಿತ್ಯದ ಒಲವು, ಸಂಸ್ಕೃತಿಯ ನಿಲುವು, ಸಮಾಜ ಜೀವನದಲ್ಲಿ ಅಗತ್ಯ.

**ಶ್ರೀ ಮುರುಘಾಮಠ, ಧಾರವಾಡ**

ಈ ದಿಶೆಯಲ್ಲಿ ಅಜ್ಞ ಜನತೆಯನ್ನು ರೂಪಿಸುವುದು ಮಠಕ್ಕೆ ಆಗುವ ಪೂಜ್ಯ ಮಹಾಸ್ವಾಮಿಗಳ ಆದ್ಯ ಕರ್ತವ್ಯ. ನಮ್ಮ ಸಾವಳಗೀಶ್ವರ ದೇವರ ಕರ್ತವ್ಯವು ಮುಂದೆ ಇದೇ ಆಗಿದೆ.

"ದಾಸೋಹಂಭಾವವನ್ನು ಕರುಣಿಸುವವನು ಜಂಗಮನು" ಭಕ್ತಿ ಜ್ಞಾನ, ವೈರಾಗ್ಯಗಳ ಸಂಗಮವೇ ಜಂಗಮವು. ಮತತತ್ವಗಳನ್ನು, ಶಿವಾನುಭವವನ್ನು ಓದಿಸಿ ಭಕ್ತರ ನಡೆನುಡಿಗಳಲ್ಲಿರುವ ಲೋಪ ದೋಷಗಳನ್ನು ತಿದ್ದುವದು, ಅನುಗ್ರಹ ಮಾಡಿ ಭಕ್ತರನ್ನು ಉದ್ಧರಿಸುವದು ಜಂಗಮರ ಕರ್ತವ್ಯವು. ಕರ್ತವ್ಯ ಭೇದದಿಂದ ಜಂಗಮವು ಸ್ವಯ ಜಂಗಮ, ಚರಜಂಗಮ, ಪರಜಂಗಮವೆಂದು ವಿಸ್ತಾರವಾಗಿದೆ. ಸಾವಳಗೀಶ್ವರ ದೇವರು ಈ ಸೇವೆಗಾಗಿಯೇ ಸಿದ್ಧರಾಗುತ್ತಿದ್ದಾರೆ. ಅದು ಸಮಾಜದ ಭಾಗವೇ ಸರಿ.

ಪೂಜ್ಯ ಸಾವಳಗೀಶ್ವರ ದೇವರದು ಮೈಮುಚ್ಚುವ ಸರಳತೆಯ ಉಡುಗೆ, ತೆಳುವಾದ ಕಾವಿ, ಹೆಗಲಮೇಲೆ ಒಂದು ಶುಭ್ರ ವಸ್ತ್ರ, ಹಣೆತುಂಬ ಭಸ್ಮೋದ್ಧೂಳನ, ಮಗುವಿನಂತಹ ಮುಗ್ಧ ಮನಸ್ಸು, ಮಂದಹಾಸದ ಮುಗುಳ್ನಗೆ, ಮೃದುವಾದ ಮಾತು, ನಡೆ-ನುಡಿಯಲ್ಲಿ ಏಕರೂಪತೆ, ಎಲ್ಲರಲ್ಲೂ ಆತ್ಮೀಯತೆ! ಪರಮ ಗುರು ಪೂಜ್ಯ ನಾಗನೂರ ರುದ್ರಾಕ್ಷಿಮಠದ ಪೂಜ್ಯ ಡಾ. ಸಿದ್ಧರಾಮ ಮಹಾಸ್ವಾಮಿಗಳಲ್ಲಿ ಅಪಮಿರಿತ ಭಕ್ತಿ, ಅನನ್ಯ ಶ್ರದ್ಧೆ, ಅಪಾರ ನಂಬುಗೆ, ಅವನ್ನೆಲ್ಲ ಒಟ್ಟಾಗಿ ಹೇಳುವದಾದರೆ ಕೋಳೂರ ಕೊಡಗೂಸಿನ, ಬೇಡರ ಕಣ್ಣಪ್ಪನ ಮುಗ್ಧ ಭಕ್ತಿ, ಶ್ರವಣಕುಮಾರನ ಮಾತಾ-ಪಿತೃ ಸೇವೆ, ರಾಮಾಯಣದ ಶಬರಿಯ ಮುಗ್ಧ ಶ್ರದ್ಧೆ, ದಕ್ಷಿಣೇಶ್ವರದ ಕಾಳಿಕೆಯಲ್ಲಿಟ್ಟ ರಾಮಕೃಷ್ಣ ಪರಮಹಂಸರ ವಿಶ್ವಾಸ, ಉಪನಿಷತ್ ಕಾಲದ ಅರುಣೆಯ ಗುರು ಸೇವೆಯು, (ಪ್ರಾಚೀನ ಭಾರತದ ಮಹಾಪತಿವೃತೆಯರಾದ ಅನುಸೂಯಾ, ಅನಲಾ, ಸಾವಿತ್ರಿಯರ ಪತಿಭಕ್ತಿ ಶ್ರೀ ಸಾವಳಗೀಶ್ವರ ದೇವರಲ್ಲಿ ಮೇಳೈಸಿದೆ.

೨೦೧೮ ರ ಅಗಷ್ಟು ತಿಂಗಳಲ್ಲಿ ಧಾರವಾಡ ಮುರುಘಾಮಠದ ಶ್ರೀ ಜಗದ್ಗುರು ಮುರುಘರಾಜೇಂದ್ರ ಉಚಿತ ಪ್ರಸಾದ ನಿಲಯದ ಶತಮಾನೋತ್ಸವದ ಸುಸಂದರ್ಭದಲ್ಲಿ ಪರಿಪೂರ್ಣ ಒಂದೂವರೆ ತಿಂಗಳ ಮೇಲೆ ಶ್ರೀ ಸಾವಳಗೀಶ್ವರದೇವರು ನಮ್ಮ ಶ್ರೀ ಮುರುಘಾಮಠದಲ್ಲಿದ್ದು ಎಲ್ಲ ಕಾರ್ಯಕ್ರಮ ನಡೆಸಿಕೊಟ್ಟ ಸಂದರ್ಭದಲ್ಲಿ ದೈನಂದಿಕದ ದಿನಚರಿಯಲ್ಲಿ ನಮಗೆ ಆದ ಅವರ ಅಂತರಂಗ ಬಹಿರಂಗದ ಬದುಕಿನ ಚಿತ್ರವಿದು.

■■

---

## ಪೂಜ್ಯಶ್ರೀ ಸಾವಳಗೀಶ್ವರ ದೇವರು

**ಜನನ** : ೨ ಅಕ್ಟೋಬರ್ ೧೯೮೭

**ತಂದೆ** : ಬಸಯ್ಯ

**ತಾಯಿ** : ವಿಜಯಲಕ್ಷ್ಮಿ

**ಊರು** : ತುಬಚಿ (ಜಮಖಂಡಿ ತಾಲೂಕು, ಬಾಗಲಕೋಟ ಜಿಲ್ಲೆ)

**ಪೂರ್ವ ಪ್ರಾಥಮಿಕ ಶಿಕ್ಷಣ** : ತುಬಚಿಯಲ್ಲಿ (೧೯೯೨-೧೯೯೪)

**ಪ್ರಾಥಮಿಕ ಶಿಕ್ಷಣ** : ಕುಮಾರೇಶ್ವರ ಪ್ರಸಾದ ನಿಲಯ, ಶ್ರೀ ನಾಗನೂರು ರುದ್ರಾಕ್ಷಿಮಠ ಬೆಳಗಾವಿ ಮತ್ತು ತಾಯಿಯ ತವರೂರು ಜೀರಗಾಳದಲ್ಲಿ (೧೯೯೫-೧೯೯೮)

**ಮಾಧ್ಯಮಿಕ ಹಾಗು ಧಾರ್ಮಿಕ ಶಿಕ್ಷಣ** : ೧೯೯೯ ರಿಂದ ೨೦೦೩ ರವರೆಗೆ ಶ್ರೀ ಶಿವಯೋಗಮಂದಿರ ಸಂಸ್ಥೆ

**ಸಂಸ್ಕೃತ ಅಧ್ಯಯನ**: ಕಾಶಿಯಲ್ಲಿ (೨೦೦೪)

**ಪದವಿಪೂರ್ವ ಹಾಗು ಪದವಿ ಶಿಕ್ಷಣ** : ೨೦೦೪ ರಿಂದ ೨೦೦೯ ರವರೆಗೆ ಧಾರವಾಡದ ಕರ್ನಾಟಕ ಮಹಾವಿದ್ಯಾಲಯ (ಕೆ. ಸಿ. ಡಿ.)

**ಸ್ನಾತಕೋತ್ತರ ಶಿಕ್ಷಣ** : ೨೦೧೨ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದ ತತ್ತ್ವಶಾಸ್ತ್ರ ವಿಭಾಗದಲ್ಲಿ ಚಿನ್ನದ ಪದಕಗಳೊಂದಿಗೆ ಸ್ನಾತಕೋತ್ತರ (ಎಂ. ಎ.) ಪದವಿ.

**ಪಿಎಚ್.ಡಿ ಪದವಿ** : ಏಪ್ರಿಲ್ ೨೦೧೯ 'ಬಸವಣ್ಣ ಮತ್ತು ಮಾರ್ಟಿನ್ ಲೂಥರ್ ಚಿಂತನೆಗಳ ತೌಲನಿಕ ಅಧ್ಯಯನ' ಎಂಬ ವಿಷಯ ಕುರಿತು ರಾಣಿಚೆನ್ನಮ್ಮ ವಿಶ್ವವಿದ್ಯಾನಿಲಯದಿಂದ ಪಿಹೆಚ್. ಡಿ. ಪದವಿ ಸಂಪಾದನೆ.

**ಧಾರ್ಮಿಕ ಸೇವೆ** : ತುಬಚಿಯ ಶ್ರೀ ಶಿವಲಿಂಗೇಶ್ವರ ಮಠದ ಉತ್ತರಾಧಿಕಾರಿ (೧೯೯೮)

# ನೆನೆಯೊಳಗಣ ಪರಿಮಳದಂತಿತ್ತು

● ಪ್ರೊ. ಎಸ್. ಎಂ. ಗಂಗಾಧರಯ್ಯ

ಶ್ರೀಗಳಾದ ಸಾವಳಗೀಶ್ವರರು ನನಗೆ ಆತ್ಮೀಯರು ಹಾಗೂ ನನ್ನ ಸಂಶೋಧನಾ ವಿದ್ಯಾರ್ಥಿ. ಎಂ.ಎ. ತತ್ವಶಾಸ್ತ್ರವನ್ನು ಮುಗಿಸಿಕೊಂಡು ಬಸವಣ್ಣನವರು ಕಟ್ಟಬಯಸಿದ ಕಲ್ಯಾಣವನ್ನು ಹುಡುಕುತ್ತಾ ಬೆಳಗಾವಿಯ ನಾಗನೂರು ರುದ್ರಾಕ್ಷಿಮಠದ ಅಧ್ಯಾತ್ಮ ಸಾಧಕರಾಗಿ ನನಗೆ ಮೊದಲು ಪರಿಚಿತರು. ಅವರನ್ನು ಮೊದಲು ನೋಡಿದಾಗಲೇ ಅವರ ಗಂಭೀರ ಮುಖ ಮುದ್ರೆ ನನ್ನ ಗಮನವನ್ನು ಸೆಳೆಯಿತು. ಅವರು ಮಿತ ಭಾಷಿ ಹಾಗು ಬದ್ಧತೆಯ ವ್ಯಕ್ತಿತ್ವದವರು ಎನ್ನುವುದು ಅವರನ್ನು ನೋಡುತ್ತಲೇ ತಿಳಿಯಿತು. ಈ ಜಿಜ್ಞಾಸುವಿನಲ್ಲಿ ಒಬ್ಬ ಸಾಧಕನಿದ್ದಾನೆ ಎನ್ನುವುದು ನನಗೆ ಮೊದಲು ತಿಳಿಯಿತು. ಪೂಜ್ಯರಾದ ನಾಗನೂರಿನ ರುದ್ರಾಕ್ಷಿ ಮಠದ ಸಿದ್ಧರಾಮ ಮಹಾಸ್ವಾಮಿಗಳು ಇವರಿಗೆ ವಿದ್ಯಾಗುರುವಿನ ದೀಕ್ಷೆಯನ್ನು ಕಲ್ಪಿಸಿಕೊಡಬೇಕೆಂದು ನನಗೆ ಮೊದಲೇ ಅಪ್ಪಣೆಯನ್ನಿತ್ತಿದ್ದರು. ಅರೆ ಮನಸ್ಸಿನಿಂದ ಅವರ ಅಪ್ಪಣೆಯನ್ನು ಸ್ವೀಕರಿಸಿದ್ದೆ. ಅಲ್ಲದೇ ಅವರಿಗೆ ವಿಶ್ವವಿದ್ಯಾಲಯದ ಹಾಗೂ ಕನ್ನಡ ಅಧ್ಯಯನ ಸಂಸ್ಥೆಯ ಪ್ರವೇಶದ ದಾರಿಯನ್ನು ಸುಗಮಗೊಳಿಸಿ ಆಗಾಗ್ಗೆ ಕೆಲ ಸಲಹೆ, ಸೂಚನೆ ನೀಡುತ್ತಾ ಬಂದೆ. ಕೆಲದಿನಗಳ ತರುವಾಯದಲ್ಲಿ ಮಠಗಳ ಕೆಲಸದ ಒತ್ತಡದಿಂದ ಅಧ್ಯಯನದಲ್ಲಿ ಅನ್ಯಮನಸ್ಕತೆ ಉಂಟಾಗುತ್ತಿರುವುದನ್ನು ಗಮನಿಸಿದೆ. ಈ ವಿಷಯವನ್ನು ಪರಮ ಪೂಜ್ಯರಲ್ಲಿ ನಿವೇದಿಸಿಕೊಳ್ಳಬಾರದು ಎನ್ನುವುದು ನನ್ನ ಮನೋಭಾವನೆಯಾಗಿತ್ತು. ಮಠದ ಕೆಲಸ ಕಾರ್ಯಗಳು ಮತ್ತು ಅಧ್ಯಯನಗಳು ಪರಸ್ಪರ ವಿರೋಧದ ಸನ್ನಿವೇಶದಲ್ಲಿ ಚಲಿಸುತ್ತಿರುತ್ತವೆ. ಈ ಸಂಗತಿಯನ್ನು ಅರಿತಿದ್ದ ನಾವು ಅವರದ್ದೇ ಆದ ಅಧ್ಯಯನ ಸ್ವಾತಂತ್ರ್ಯವನ್ನು ಕಲ್ಪಿಸಿಕೊಟ್ಟೆ. ಇದರ ವಾಸ್ತವಗಳು ನನಗೆ ಮತ್ತು ಸಾವಳಗೀಶ್ವರ ಶ್ರೀಗಳವರಿಗೆ ಗೊತ್ತು.

ಅಧ್ಯಯನ ಕ್ರಮ ಎಂದ ಮೇಲೆ ಅದೊಂದು ಶಿಸ್ತಿನ ಮತ್ತು ಬದ್ಧತೆಯ ಸಂಗತಿ. ಅಲ್ಲಿ ಯಾವುದೇ ರೀತಿಯ ರಾಜಿಗೆ ಅವಕಾಶವಿರುವುದಿಲ್ಲ. ಶ್ರೀಗಳವರು ಎತ್ತಿಕೊಂಡ ಅಧ್ಯಯನ ವಿಷಯವು ಅತ್ಯಂತ ಗಂಭೀರವಾದದ್ದು. ಅದೇ ಸಂದರ್ಭದಲ್ಲಿ ವೀರಶೈವ–ಲಿಂಗಾಯತ ಎನ್ನುವ ಸ್ವತಂತ್ರ ಧರ್ಮದ ಚಳುವಳಿ ಒಂದುಕಡೆ. ಇಂತದ್ದೆ ಸಂದರ್ಭದಲ್ಲಿ ಪ್ರೊಟೆಸ್ಟಂಟ್ ಕುರಿತ ಅಧ್ಯಯನ. ಈ ಎಲ್ಲ ಪರೀಕ್ಷೆಗಳು ಶ್ರೀಗಳವರ ಕಣ್ಣೆದುರಿನ ವಿಚಿತ್ರಗಳಾಗಿ ನಿಂತವು. ಬಸವಣ್ಣ ಮತ್ತು ಮಾರ್ಟಿನ ಲೂಥರ್‌ರ ಚಿಂತನೆಗಳಲ್ಲಿರುವ ಸಾಮ್ಯ–ವೈಷಮ್ಯಗಳನ್ನು ಪಟ್ಟಿಮಾಡಬೇಕು. ಸನಾತನತೆ ಮತ್ತು ಪ್ರಗತಿಪರತೆ ನಡುವಿನ ತೂಗುಯ್ಯಾಲೆಯಲ್ಲಿ ಅಧ್ಯಯನವು ಮತ್ತಷ್ಟು ಸ್ಫುಟಗೊಳ್ಳುತ್ತಾ ಹೋಯಿತು. ಕರ್ನಾಟಕದಲ್ಲಿ ಅಂದು ನಡೆಯುತ್ತಿದ್ದ ಸಮಾಜೋ–ಧಾರ್ಮಿಕ ಹಾಗೂ ಸಮಾಜೋ–ರಾಜಕೀಯ ವಿದ್ಯಮಾನಗಳ ನಡುವೆ ಗುರು–ಶಿಷ್ಯರ ಸಂಭಾಷಣೆ ನಡೆಯುತ್ತಲೆ ಇತ್ತು. ಜಿಜ್ಞಾಸೆ–ಪ್ರತಿಜಿಜ್ಞಾಸೆ, ವಾದ–ಪ್ರತಿವಾದ, ಕ್ರಿಯೆ–ಪ್ರತಿಕ್ರಿಯೆಗಳ ನಡುವೆ ಶ್ರೀಗಳವರು ಗೊಂದಲದಲ್ಲಿ ಬಿದ್ದರು. ಧರ್ಮ, ಪರಂಪರೆ, ಸಮಾಜ ಸುಧಾರಣೆ, ಅಧ್ಯಾತ್ಮ ಮುಂತಾದ ಗಹನ ವಿಚಾರಗಳು ಸಂವಾದದ ನೆಲೆಯಲ್ಲಿ ತೀವ್ರಗೊಂಡವು. ನನಗೆ ಆಶ್ಚರ್ಯದ ಸಂಗತಿಯೆಂದರೆ ಶ್ರೀಗಳವರು ಎಂದೂ ತಮ್ಮ ವೈಯಕ್ತಿಕ ಬದುಕಿನ ಅಥವಾ ಪೂರ್ವಾಶ್ರಮದ ಬದುಕಿನ ಸಂಗತಿಗಳನ್ನು ತಿಳಿಸಲೇ ಇಲ್ಲ. ವಾಸ್ತವವಾಗಿ ಅವರ ಊರು, ತಂದೆ–ತಾಯಿ ಇತ್ಯಾದಿಗಳ ಕೌಟುಂಬಿಕ ವಿವರವೇ ನನ್ನಲ್ಲಿಲ್ಲ.

ಬಸವಣ್ಣನವರ ಹಾಗೂ ಅವರ ಸಮಕಾಲೀನ ವಚನಕಾರರ ಬಗೆಗೆ ಅಲ್ಲಿ ನಡೆದ ಸಂಕ್ರಾಂತಿಯ ಬಗೆಗೆ ಅವರ ತೀವ್ರ ಕುತೂಹಲಗಳು ನನ್ನ ಗಮನವನ್ನು ಸೆಳೆದವು. ೧೨ನೆಯ ಶತಮಾನದ ಚಾರಿತ್ರಿಕ, ಸಾಮಾಜಿಕ ಹಾಗೂ ಧಾರ್ಮಿಕ ವಿವರಗಳನ್ನು ಬಗೆಯುವುದೇ ನಮ್ಮ ಕೆಲಸವಾಗಿತ್ತು. ಶರಣರು ಕಟ್ಟ ಬಯಸಿದ ಸಮಾಜ, ಅವರ ಧಾರ್ಮಿಕ ಪ್ರಣಾಳಿಕೆ, ಅವರ ಬದುಕಿನ ಕ್ರಮ, ಅವರ ಅಧ್ಯಾತ್ಮ ಈ ಎಲ್ಲ ವಿವರಗಳು ನಮ್ಮಿಬ್ಬರ ಚರ್ಚೆಯ ಮುನ್ನೆಲೆಯ ಅಂಶಗಳಾದವು. ತಮ್ಮ ಮಠದ ವಿವರಗಳನ್ನು ತಿಳಿಸುತ್ತ ಧರ್ಮ ಸಮನ್ವಯತೆಯ ನೆಲೆಯಾದ ತಮ್ಮ ಮಠದ ಬಗೆಗೆ ಅಪಾರ ಅಭಿಮಾನ ಅವರಲ್ಲಿತ್ತು. ಆ ಮಠದ ಏಳ್ಗೆ ಮತ್ತು ಅಲ್ಲಿ ಅಧ್ಯಾತ್ಮದ ದಿವ್ಯ ಕೇಂದ್ರವೊಂದನ್ನು ಹಾಗೂ ಬಸವಾದಿ

ಪ್ರಾಧ್ಯಾಪಕರು ಕನ್ನಡ ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ

ಪ್ರಮಥರ ಶಕ್ತಿಕೇಂದ್ರವನ್ನಾಗಿ ಬೆಳೆಸುವ ಉದ್ದೇಶವನ್ನು ಅವರು ಹೊಂದಿದ್ದರು. ಅವರ ಮಾತಿನ ಪ್ರತಿ ಸಂಪುಟದಲ್ಲಿ ಅದು ಎದ್ದು ಕಾಣುತ್ತಿತ್ತು. ಅವರ ಬಯಕೆಯು ಧರ್ಮ ಜಾಗೃತಿಯ ಅಭಿಯಾನವನ್ನು ನಡೆಸುವುದರ ಮೂಲಕ ಅಲ್ಲೊಂದು ಜಾಗೃತ ನೆಲೆಯ ಧರ್ಮ ಸನ್ನಿಧಾನವನ್ನು ನಿರ್ಮಿಸುವ ಉತ್ಕಟ ಬಯಕೆ ಅವರಲ್ಲಿ ವ್ಯಕ್ತವಾಗುತ್ತಿತ್ತು. ತಮ್ಮ ಕನಸುಗಳ ಕಟ್ಟನ್ನು ಆಗಾಗ್ಗೆ ತೆರೆದಿಡುತ್ತಾ ತನ್ನ ಕನಸನ್ನು ಸಾಂಸ್ಥಿಕ ರೂಪವನ್ನಾಗಿ ಹೊಂದುವ ಬಗೆಯ ಹುಡುಕಾಟದಲ್ಲಿ ಅವರು ಅನವರತ ತಲ್ಲೀನರಾಗಿರುತ್ತಿದ್ದರು. ಚರ್ಚೆಯ ಸಂದರ್ಭದಲ್ಲಿ ಅವರ ಲವಲವಿಕೆಯ ಮಾತಿನ ಓಘ ಗಮನಸೆಳೆಯುತ್ತಿತ್ತು. ಮಾರ್ಟಿನ್ ಲೂಥರರ ಪ್ರಯತ್ನವನ್ನು ಅರಿತ ಮೇಲಂತೂ ಅವರು ಸಮಾಜ ಪರವಾಗಿ ಚಿಂತಿಸಿದ್ದೇ ಹೆಚ್ಚು.

ಸೃಷ್ಟಿ ತತ್ವ, ಸ್ಥಿತಿ ತತ್ವ, ಲಯತತ್ವ ಮುಂತಾದವುಗಳ ತರ್ಕತಾಡನದಿಂದ ಹೊರಬಂದು ಬಸವಣ್ಣನವರ ಅಂತರಂಗದ ನಿರೂಪಗಳು ಬಹಿರಂಗದ ಕಾಣ್ಕೆಗಳ ಕುರಿತ ಜಿಜ್ಞಾಸೆ ಅವರಲ್ಲಿ ದಿನ ಕಳೆದಂತೆ ಹೆಚ್ಚುತ್ತಾ ಹೋಯಿತು. ನನ್ನ ಸಂಪರ್ಕದಲ್ಲಿದ್ದ ಐದು ಸಂವತ್ಸರಗಳಲ್ಲಿ ಅವರು ತಾತ್ವಿಕ ಜಿಜ್ಞಾಸೆಯನ್ನು ಹೊರತುಪಡಿಸಿ ಬೇರೊಂದು ವಿಷಯವನ್ನು ಕುರಿತು ಚರ್ಚಿಸುತ್ತಿರಲಿಲ್ಲ. ಮಠದ ಜವಾಬ್ದಾರಿಗಳ ನಡುವೆ ಅವರ ಅಧ್ಯಯನ ಕ್ರಮವು ಇಜ್ಜೋಡಾಗಿ ಮುಂದುವರೆಯುತ್ತಾ ಹೋಯಿತು. ಗುರುವಾದ ನಾನು ಕಟ್ಟುಪಾಡಗಳ ಮೇಲೆ ಕಟ್ಟುಪಾಡುಗಳನ್ನು ವಿಧಿಸುತ್ತಾ ವಿಶ್ವವಿದ್ಯಾಲಯ ಶುಲ್ಕ ಇತ್ಯಾದಿ ವಿವರಗಳನ್ನು ತಿಳಿಸುತ್ತಾ ಮಠವನ್ನು ಬದಿಗಿಟ್ಟು ವಿಶ್ವವಿದ್ಯಾಲಯಕ್ಕೆ ಬನ್ನಿ ಎಂದು ಆಗಾಗ ಗುರುವಾಜ್ಞೆ ಹೊರಡಿಸುತ್ತಿರುವಾಗಲೂ ಅವರು ಅದನ್ನು ಪ್ರಾಂಜಲ ಮನಸ್ಸಿನಿಂದ ಸ್ವೀಕರಿಸಿಕೊಂಡು ಮರುದಿನ ಬಂದು ಮುಂದೆ ಕುಳಿತುಕೊಳ್ಳುತ್ತಿದ್ದರು. ಅಂತಿಮ ಸಂದರ್ಭದಲ್ಲಂತೂ ಅವರ ಮಠದ ಕಾರ್ಯ ಬಾಹುಳ್ಯ ಹಾಗೂ ಅಧ್ಯಯನದ ಒತ್ತಡ ಇವೆರೆಡರ ನಡುವೆ ಹಗ್ಗ ಜಗ್ಗಾಟವೇ ನಡೆಯಿತು. ಸಂಕಲ್ಪ ಹೊತ್ತವನಿಗೆ ಈ ತೆರನಾದ ಸಂಕೀರ್ಣ ಸನ್ನಿವೇಶಗಳನ್ನು ಗೆಲ್ಲುವುದು ದೊಡ್ಡದೇನಾಗಿರಲಿಲ್ಲ. ಅದರಂತೆಯೇ ಅವರು ಸ್ಥಿತಪ್ರಜ್ಞರಾಗಿ ಎರಡು ಪಕ್ಷಗಳಿಗೂ ನ್ಯಾಯವನ್ನು ಒದಗಿಸಿಕೊಟ್ಟರು.

ಶ್ರೀಗಳವರು ಗಂಭೀರವಾದ ವಿಷಯವನ್ನು ಆಯ್ದುಕೊಂಡಿದ್ದರಿಂದ ಅವರ ಅಧ್ಯಯನವು ಮೊದಮೊದಲು ಉತ್ಸಾಹದಾಯಕವಾಗಿರಲಿಲ್ಲವೆಂದೆನಿಸಿತು. ಆದರೆ ಆ ವಿಷಯದ ತೀವ್ರತೆಯನ್ನು ಕಂಡು ಪ್ರೊಟೆಸ್ಟಂಟ್ ಚರ್ಚಗಳಲ್ಲಿ ಮಾಹಿತಿ ಸಂಗ್ರಹಿಸಲು ಬೆಂಗಳೂರು ಮತ್ತು ಮಂಗಳೂರುಗಳಿಗೆ ಹೊರಟರು. ಮಾರ್ಟಿನ ಲೂಥರರ್ ಸಮಾಜ ಸುಧಾರಣಾ ಪ್ರಯತ್ನವನ್ನು ಅರ್ಥೈಸಿಕೊಳ್ಳುವಲ್ಲಿ ಅವರ ಶೈಕ್ಷಣಿಕ ಯಾತ್ರೆಯು ಫಲಪ್ರದವಾಯಿತು ಎಂದೆನಿಸುತ್ತದೆ. ಅಲ್ಲಿಂದ ಬಂದವರು ಗಂಭೀರವಾಗಿ ಚಿಂತನೆಯಲ್ಲಿ ತೊಡಗಿಕೊಂಡರು. ಜಾಗತೀಕರಣೋತ್ತರ ಸಂದರ್ಭದಲ್ಲಿ ಮಠ–ಮಾನ್ಯಗಳು, ಅವುಗಳ ಸಮಾಜಿಕ, ಧಾರ್ಮಿಕ, ಶೈಕ್ಷಣಿಕ, ಆಧ್ಯಾತ್ಮಿಕ ಜವಾಬ್ದಾರಿಗಳನ್ನು ಅರಿಯಲು ಆರಂಭಿಸಿದರು. ಅದು ಅವರು ತಮ್ಮನ್ನು ನಿರಂತರವಾಗಿ ಜ್ಞಾನವನ್ನು ಕುರಿತು ಧ್ಯೇನಿಸುವ ಸ್ಥಿತಿಯಾಗಿತ್ತು ಎನ್ನುವುದು ನನ್ನ ಅಭಿಪ್ರಾಯ. ಅಧ್ಯಯನ ಸಂದರ್ಭದಲ್ಲಿ ಬರುವ ಹಲವು ತೊಡಕುಗಳನ್ನು ಕುಳಿತು ಬಗೆಹರಿಸಿಕೊಳ್ಳುತ್ತಿದ್ದರು. ಈ ಅಧ್ಯಾಯಕ್ಕೆ ಪ್ರಸ್ತಾವನೆ ಈ ತೆರನಾದ ಪ್ರಸ್ತಾವನೆ ಬೇಕು, ಈ ವಾದವನ್ನು ಹೀಗೆ ನಿರೂಪಿಸಬೇಕು, ಬರವಣಿಗೆ ಮತ್ತಷ್ಟು ಪ್ರಬುದ್ಧವಾಗಬೇಕು ಎನ್ನುವ ನನ್ನ ಮಾತು ಮತ್ತು ಮನಸ್ಸನ್ನು ಅರ್ಥೈಸಿಕೊಂಡು ಮರುದಿನ ಹಾಗೊಂದು ಬರವಣಿಗೆಯನ್ನು ಸಿದ್ಧಪಡಿಸಿಕೊಂಡು ತರುತ್ತಿದ್ದರು. ನನಗಿರುವ ನೂರಾರು ವಿದ್ಯಾರ್ಥಿಗಳಲ್ಲಿ ಇವರ ಮನಸ್ಥಿತಿ ಮತ್ತು ಕಾರ್ಯಶೈಲಿ ತುಸು ಭಿನ್ನವಾಗಿ ಕಾಣತೊಡಗಿತು. ನನ್ನ ಒಂದೇ ಒಂದು ಅಳಲೇನೆಂದರೆ ಇನ್ನೂ ಗಂಭೀರವಾಗಿ ಅಧ್ಯಯನವನ್ನು ಸ್ವೀಕರಿಸಿದ್ದರೆ ಮತ್ತಷ್ಟು ಅಜ್ಞಾತ ಸಂಗತಿಗಳನ್ನು ಶ್ರೀಗಳವರು ಹೊರಗೆಡುಹಬಹುದಾಗಿತ್ತು. ಅಧ್ಯಯನಕ್ಕೆ ಇಳಿದಾಗಲೆಲ್ಲ ಮಠದ ಜವಾಬ್ದಾರಿ ಅವರನ್ನು ಕಾಡುತ್ತಿತ್ತು. ಇಲ್ಲದಿದ್ದಲ್ಲಿ ಅವರ ಆಯ್ದುಕೊಂಡ ವಿಷಯದ ಮೇಲೆ ಅದ್ಭುತವಾದ ಪ್ರತಿಪಾದನೆಯನ್ನು ನಿರೀಕ್ಷಿಸಬಹುದಿತ್ತು. ಒಮ್ಮೆ ಅವರ ಮೇಲೆ ವಿಪರೀತವಾಗಿ ಕೋಪಿಸಿಕೊಳ್ಳಬೇಕಾದ ಪ್ರಸಂಗ ಬಂದಿತು. ಅಂದು ಅವರನ್ನು ಶಿಷ್ಟ ಸಂಸ್ಕೃತಿಯಲ್ಲೇ ಹೇಳಬೇಕೆಂದರೆ ವಾಚಾಮಗೋಚರವಾಗಿ ಆರತಿಯೆತ್ತಲಾಯಿತು. ಅದೇನೆಂದರೆ ಮಠದ ಒತ್ತಡದ ಕೆಲಸ ಕಾರ್ಯಗಳ ನೆಪ ಹೇಳಿ ಅಧ್ಯಯನದಿಂದ ಹೊರಬೀಳುವ ವಿಮುಖತೆಯನ್ನು ವ್ಯಕ್ತಪಡಿಸುವ ಅಭಿಪ್ರಾಯ ಅವರಲ್ಲಿತ್ತು. ಯಾವಾಗ ಮಷ್ಪಾರ್ಚನೆಗಳು ಪ್ರಕಟಗೊಂಡವೋ ತುಸು ಹೊತ್ತಿನಲ್ಲಿ ಸರಿದಾರಿಗೆ ಬಂದು ನಿಂತರು. ಅಷ್ಟು ಹೊತ್ತಿಗೆ ನನ್ನ ಕೋಪವು ಶಮನವಾಗಿತ್ತು. ಮತ್ತೇ ಗುರು–ಶಿಷ್ಯರ ಪ್ರೀತಿ ಮತ್ತಷ್ಟು ಆಪ್ತವಾಗುತ್ತಾ ಹೋಯಿತು.

ಶ್ರೀಗಳವರು ನಾಡಿನಲ್ಲಿ ಹೆಸರು ಮಾಡಿದ ನಾಗನೂರು ರುದ್ರಾಕ್ಷಿ ಮಠದ ಉತ್ತರಾಧಿಕಾರಿಯೆಂದು ನಿಯೋಜನೆಗೊಂಡ ಮುನ್ಸೂಚನೆ ತಿಳಿಯಿತು. ಅವರೊಬ್ಬ ಕಿರಿಯ ಮಿತ್ರರು ಈ ಸಂಗತಿಯನ್ನು ನನಗೆ ಅರುಹಿದರು. ಇದನ್ನು ತಿಳಿದು ನನಗೆ ಅಲೌಕಿಕವಾದ ಸಂತೋಷವಾಯಿತು. ನನ್ನ ಶ್ರೀಮತಿಯಾದ

ರೋಹಿಣಿ ಅವರು ಸಂಭ್ರಮಪಟ್ಟರು. ಅವರ ಮನಸ್ಸನ್ನು ತಿಳಿದಿದ್ದ ನಾವುಗಳು ದೂರದಿಂದಲೇ ಶುಭ ಹಾರೈಸಿದೆವು. ದೂರವಾಣಿಯ ಮೂಲಕ ಮಾತನಾಡಿದಾಗ ಸ್ಥಿತ ಪ್ರಜ್ಞರಾಗಿಯೇ ಪ್ರತಿಕ್ರಿಯಿಸಿದರು. ಉತ್ತಮ ಸಂಸ್ಕಾರ, ನಡೆ ಮತ್ತು ನುಡಿ, ವಿವೇಕ ಮತ್ತು ವಿಚಾರ, ಅಧ್ಯಯನ ಮತ್ತು ಅಧ್ಯಾತ್ಮ ಎಲ್ಲದರಲ್ಲಿಯೂ ಸಮತೂಕದ ವ್ಯಕ್ತಿತ್ವ ಅವರದ್ದು. ಹಲವಾರು ಸಂದರ್ಭಗಳಲ್ಲಿ ಮನೆಗೆ ಬಂದರು ಮನೆ ಮಗನಂತೆ ಇರುತ್ತಿದ್ದರೇ ಹೊರತು ಎಂದೂ ಏನನ್ನೂ ನಿರೀಕ್ಷಿಸಲಿಲ್ಲ. ತಮ್ಮ ಸಾತ್ವಿಕ ಬದುಕು ಮತ್ತು ಸುಸಂಸ್ಕೃತ ನಡವಳಿಕೆಯಿಂದ ದಂಪತಿಗಳ ಮನಸ್ಸಿನ ಮೇಲೆ ಪ್ರಭಾವವನ್ನು ಬೀರಿದ್ದರು. ನಾವಿಬ್ಬರು ಪರಸ್ಪರ ಗುರುಗಳೆಂದು ಒಬ್ಬರನ್ನೊಬ್ಬರು ಅಭಿಪ್ರಾಯಿಸಿಕೊಳ್ಳುತ್ತಿದ್ದ ಸಂಭ್ರಮ ನೆನೆಯಲು ಸಂತೋಷವಾಗುತ್ತದೆ. ಒಮ್ಮೆ ತಮ್ಮ ಮಠದ ಮಾವಿನ ಮರದಿಂದ ಹಣ್ಣುಗಳನ್ನು ನನಗಾಗಿ ತಂದು ನಾನಿಲ್ಲದ ಸಂದರ್ಭದಲ್ಲಿ ನನ್ನ ಮಗನ ಕೈಯಲ್ಲಿಟ್ಟು ಹೋಗಿದ್ದರು. ಮಗನನ್ನು ಈ ಹಣ್ಣುಗಳನ್ನು ತಂದುಕೊಟ್ಟವರಾರೆಂದು ಕೇಳಿದೆ. ಅವನು ಅವರ ಹೆಸರು ಹೇಳದೆ ಸ್ವಾಮಿಜಿ ನಂಬರ್–೧ ಎಂದು ತಿಳಿಸಿದ. ನನಗೆ ಅವನ ಲೆಕ್ಕಾಚಾರ ಗೊತ್ತಾಗಲಿಲ್ಲ. ಇದೇ ಸಂದರ್ಭದಲ್ಲಿ ಅವರ ಜೊತೆಗಾರ ಸ್ವಾಮಿಜಿ ಒಬ್ಬರು ನನ್ನ ಮಾರ್ಗದರ್ಶನದಲ್ಲಿಯೇ ಪಿಎಚ್.ಡಿ ಅಧ್ಯಯನ ನಡೆಸುತ್ತಿದ್ದರು. ಅವರು ನಂಬರ್–೨ ಆಗಿದ್ದರೆಂದು ಆನಂತರ ತಿಳಿಯಿತು. ದೂರವಾಣಿಯ ಮೂಲಕ ಮಾತನಾಡಿ 'ಆ ಹಣ್ಣುಗಳು ತುಂಬಾ ವಿಶಿಷ್ಟವಾದವುಗಳು, ಊರಿಂದ ಮಠದ ಜಾಗದಲ್ಲೇ ಬೆಳೆದಿದ್ದ ಮರದಿಂದ ತಂದಿರುವೆ' ಎಂದು ತಿಳಿಸಿದರು. ಹೀಗೆ ಅವರ ಸಂಬಂಧವು ಗಟ್ಟಿಗೊಳ್ಳುತ್ತಾ ಹೋಯಿತು. ಘಟಿಕೋತ್ಸವ ಮತ್ತು ಪುರಪ್ರವೇಶೋತ್ಸವಗಳು ಆಸುಪಾಸಿನ ಒಂದೇ ತಿಂಗಳಲ್ಲಿ ನಡೆದವು. ನಾನು ಅವರಿಗೆ ತಾವು ಘಟಿಕೋತ್ಸವ ಸಂದರ್ಭದಲ್ಲಿ ಬೆಳಗಾವಿಗೆ ಬರಬೇಕಾಗುತ್ತದೆ. ಪುರಪ್ರವೇಶವು ನಿಯೋಜನೆಗೊಂಡಿರುವುದರಿಂದ ನೀವೀಗ ಮಠದಲ್ಲಿ ಬಂದಿಳಿಯುವುದು ಸಂಪ್ರದಾಯಕ್ಕೆ ಸಮ್ಮತವಲ್ಲ, ಅಭ್ಯಂತರವಿಲ್ಲದಿದ್ದರೆ ಮನೆಯಲ್ಲಿ ಬಂದು ಉಳಿಯಿರಿ ಎಂದೆ. ಸೌಜನ್ಯದ ಭಾಷೆಯಿಂದ, ತೊಂದರೆಯಾದೀತೆಂಬ ಉದ್ದೇಶದಿಂದ ಆಹ್ವಾನವನ್ನು ಕೃತಜ್ಞತೆಗಳೊಂದಿಗೆ ಬೇರೆಡೆಗೆ ಗಮನ ಸೆಳೆಯುವುದರ ಮೂಲಕ ನಿರಾಕರಿಸಿದ್ದರು.

ಶ್ರೀಗಳವರ ಮಿತವಾದ ಮಾತು, ಸೌಜನ್ಯದ ವರ್ತನೆ, ಜ್ಞಾನದ ಜಿಜ್ಞಾಸೆ, ಅಧ್ಯಾತ್ಮದ ಸಂಕಲ್ಪ, ಅಧ್ಯಯನಶೀಲತೆಯ ಮನೋಭಾವ, ಸಮಾಜ ಮತ್ತು ಸಮುದಾಯಗಳಿಗೆ ತಮ್ಮಿಂದ ಏನನ್ನಾದರೂ ನೀಡುವ ಮಹದಾಸೆ ನಿರಂತರ ಕ್ರಿಯಾಶೀಲತೆ ಅವರಲ್ಲಿರುವ ಗುಣಾಂಕಗಳಾಗಿವೆ. ಪರಂಪರೆಯಲ್ಲಿ ಆಗಿಹೋದ ಪರಮಪೂಜ್ಯ ಶ್ರೀ ಶಿವಬಸವ ಸ್ವಾಮಿಗಳ ದಿವ್ಯ ಸಂಕಲ್ಪದಿಂದಲೋ, ಪೂಜ್ಯರಾದ ಶ್ರೀ ಸಿದ್ಧರಾಮ ಸ್ವಾಮೀಜಿಗಳ ಮನೋ ಸಂಕಲ್ಪದಿಂದಲೋ ಬಹಳ ಜವಾಬ್ದಾರಿಯುತವಾದ ಸ್ಥಾನಕ್ಕೆ ಏರಿದ್ದಾರೆ. ಅವರ ಮುಂದಿರುವುದು ಅಧಿಕಾರವಲ್ಲ. ನನ್ನ ವಿದ್ಯಾರ್ಥಿಗೆ ಒದಗಿದ ದೈವ ಪರೀಕ್ಷೆ. ಈ ದೈವ ಪರೀಕ್ಷೆಯಲ್ಲಿ ಅವರು ನಿಸ್ಸಂಶಯವಾಗಿ ಯಶಸ್ಸನ್ನು ಕಾಣುವುದರ ಮೂಲಕ ಕರ್ನಾಟಕದ ಮಠ ಪರಂಪರೆಯ ಉತ್ಕೃಷ್ಟತೆಯುಳ್ಳ ನಾಗನೂರಿನ ಶ್ರೀ ರುದ್ರಾಕ್ಷಿಮಠಕ್ಕೆ ಭೂಷಣ ಪ್ರಾಯರಾಗುವರೆಂಬ ಸಂಗತಿಯು ನನ್ನ ಅಲೌಕಿಕ ನಂಬಿಕೆ. ಅವರ ದೃಢತೆ, ದಕ್ಷತೆ, ದಿಟ್ಟ ಸಂಕಲ್ಪ, ಪಾರಮಾರ್ಥದ ತಿಳುವಳಿಕೆಗಳು ನಾಗನೂರು ಶ್ರೀ ರುದ್ರಾಕ್ಷಿಮಠವನ್ನು ಮತ್ತೊಮ್ಮೆ ಭರತ ವರ್ಷದ ಮಹತ್ವದ ಧಾರ್ಮಿಕ ಶ್ರದ್ಧಾ ಕೇಂದ್ರವನ್ನಾಗಿ, ಸಂಸ್ಕೃತಿಯ ಸಾರ ಸಂಕೇತವೆಂಬಂತೆ ಮಠವನ್ನು ಹಾಗೂ ಅದರ ಘನತೆಯನ್ನು ಎತ್ತಿಹಿಡಿಯುತ್ತಾರೆಂಬ ಭರವಸೆ ನನಗಿದೆ.

ಉತ್ತರೋತ್ತರ ಅವರ ಸಂಕಲ್ಪಗಳು, ಅವರ ಅಭೀಪ್ಸೆಗಳು, ಅವರ ಕಾಣ್ಕೆಗಳು ನಮ್ಮ ಸಂದರ್ಭದ ಜನತೆಯ ಬದುಕಿನಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ ಎಂಬ ಶುಭ ಹಾರೈಕೆ ನನ್ನದಾಗಿದೆ. ಅವರಿಗೆ ನಾಗನೂರು ಶ್ರೀ ರುದ್ರಾಕ್ಷಿ ಮಠದ ಶ್ರೀ ಸಿದ್ಧರಾಮ ಸ್ವಾಮೀಜಿಗಳು ನೀಡುವ ಬಹುದೊಡ್ಡ ಜವಾಬ್ದಾರಿಯನ್ನು ನಿಭಾಯಿಸುವ ಎಲ್ಲ ಸಾಮರ್ಥ್ಯವನ್ನು ಬಸವಾದಿ ಪ್ರಮಥರು, ನಾಡಿನ ಹರಗುರು ಚರಮೂರ್ತಿಗಳು ಜ್ಞಾನಿಗಳು, ದೈವ ಸದೃಶ್ಯ ಬದುಕನ್ನು ಬದುಕಿದ ಮಹಾತ್ಮರು ಕರುಣಿಸಲಿ ಎಂದು ಧರ್ಮಮಾರ್ಗ, ಜ್ಞಾನಮಾರ್ಗ, ಭಕ್ತಿಮಾರ್ಗಗಳ ಮೂಲಕ ಅಧ್ಯಾತ್ಮ ಸಿದ್ಧಿಯ ಉತ್ತುಂಗಕ್ಕೆ ಏರಲಿ ಎಂಬ ಸತ್ಸಂಕಲ್ಪ ನನ್ನದಾಗಿದೆ. ಇಂತಹ ಪರಂಪರೆಯುಳ್ಳ ಪ್ರತಿಷ್ಠಿತ ಮಠಕ್ಕೆ ಉತ್ತರಾಧಿಕಾರತ್ವದ ಪಟ್ಟಾಧಿಕಾರವನ್ನು ಧಾರೆಯೆರೆಯುವಲ್ಲಿ ಆಶೀರ್ವದಿಸಿದ ಪರಮಪೂಜ್ಯ ಶ್ರೀ ಸಿದ್ಧರಾಮ ಸ್ವಾಮೀಜಿಯವರಿಗೆ ನನ್ನ ಭಕ್ತಿಪೂರ್ವಕ ನಮನಗಳನ್ನು ಸಲ್ಲಿಸಿ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುವೆ ಹಾಗೂ ಇಂತಹ ಉತ್ತರಾಧಿಕಾರಿಯನ್ನು ಪಡೆಯುವಲ್ಲಿ ಯಶಸ್ವಿಯಾದ ನಾಗನೂರು ರುದ್ರಾಕ್ಷಿ ಮಠದ ದೈವಸ್ಥರು, ಭಕ್ತರು, ಅಭಿಮಾನಿಗಳನ್ನು ಅಭಿನಂದಿಸುವೆ.

■■

# ಸದುವಿನಯದ ತವರು–ಸಾವಳಗೀಶ್ವರ ದೇವರು

● ಪೂಜ್ಯಶ್ರೀ ಪ್ರಭುಚನ್ನಬಸವ ಸ್ವಾಮಿಗಳು

ಹಾನಗಲ್ಲ ವಿರಕ್ತಮಠದ ಪಟ್ಟಾಧಿಕಾರವನ್ನು ಪೂಜ್ಯಶ್ರೀ ಕುಮಾರ ಮಹಾಸ್ವಾಮಿಗಳು ವಹಿಸಿಕೊಳ್ಳುವ ಸಂದರ್ಭದಲ್ಲಿ ಹಿರಿಯ ಗುರುಗಳಾದ ಪೂಜ್ಯಶ್ರೀ ಫಕೀರ ಮಹಾಸ್ವಾಮಿಗಳು ಆದೇಶ ನೀಡಿದ ಅನುಗ್ರಹ ಹೀಗಿದೆ. 'ಸ್ವಾಮಿಗಳೇ.... ನೀವು ಶ್ರೀಮಠದ ಅಧಿಕಾರ ವಹಿಸಿಕೊಂಡು ಕೇವಲ ಮಠದಲ್ಲಿಯೇ ಕುಳಿತು ಪೂಜೆ–ಪ್ರಸಾದ–ಪಾದಪೂಜೆ ಎಂದು ಕಾಲಹರಣ ಮಾಡಬೇಡಿ, ನಿಮ್ಮನ್ನು ನಂಬಿದ ಸಮಾಜಕ್ಕೆ ನೀವು ಆಶ್ರಯದಾತರಾಗಿರಿ. ಸಮಾಜ ಸೇವೆಯೇ ನಿಮ್ಮ ಬಾಳಿನ ಉಸಿರಾಗಲಿ ಎಂದು ಹೇಳಿದ ಆಜ್ಞೆಯನ್ನು ಅನುಸರಿಸಿ ಸಮಾಜಕ್ಕಾಗಿಯೇ ಸಮರ್ಪಿತರಾದವರು ಕುಮಾರ ಶಿವಯೋಗಿಗಳವರು. ಹೀಗಾಗಿ ಅವರನ್ನು ಈ ನಾಡು 'ಕಾರಣಿಕ ಯುಗಪುರುಷ' ಎಂದು ಕೊಂಡಾಡಿತು. ಇಂತಹ ಗುರುಗಳ ಶಿಷ್ಯ ಶ್ರೇಷ್ಠರಾಗಿ ಬಾಳಿ, ಅವರ ಆಜ್ಞೆಯನ್ನು ಮುನ್ನಡೆಸಿದವರು ಶತಾಯುಷಿ, ಮಹಾಪ್ರಸಾದಿ ನಾಗನೂರಿನ ಡಾ. ಶಿವಬಸವ ಮಹಾಸ್ವಾಮಿಗಳವರು. ನಾಗನೂರಿನ ಹಿರಿಯ ಅಪ್ಪಗಳ ವಚನ ಪ್ರಜ್ಞೆಯನ್ನು ವ್ರತವಾಗಿ ಕೈಗೊಂಡವರು ಸದ್ಯದ ಗದುಗಿನ ಜಗದ್ಗುರುಗಳಾದ ಡಾ. ತೋಂಟದ ಸಿದ್ಧರಾಮ ಅಪ್ಪಗಳು.

ಹೀಗೆ ಶತಮಾನದಿಂದ ಸಾಗಿಬಂದ ಈ ಸೇವಾ ಪರಂಪರೆಯನ್ನು ಬಾಲ್ಯದಿಂದಲೇ ಮೈಗೂಡಿಸಿಕೊಂಡು ಬಂದು, ತಮ್ಮ ಸೇವೆ–ಸದುವಿನಯಗಳ ಮೂಲಕ ಸಾಧಿಸಿದವರು ನನ್ನ ಆತ್ಮೀಯ ಸಹೋದರ, ಗುರುಬಂಧು ಡಾ ಸಾವಳಗೀಶ್ವರ ದೇವರು.

ತೋಟದಿ ಹೂವುಗಳೆಷ್ಟೇಯಿದ್ದರು ವಾಸನೆ ಕೆಲವೊಂದೇ ಎನ್ನುವ ಡಾ. ಚನ್ನವೀರ ಕಣವಿಯವರ ಕಾವ್ಯದಾಶಯದಂತೆ 'ದೇವರು' ಹೆಸರು ಹೊತ್ತು ಎಷ್ಟೋ ಮರಿದೇವರುಗಳಿದ್ದರೂ ಆ ಸ್ಥಾನ–ಮಾನಗಳಿಗೆ ಘನತೆ–ಗೌರವ ತರುವ ಕೆಲವೇ ಕೆಲವು ಆದರ್ಶ ಸಾಧಕರಲ್ಲಿ ನಮ್ಮ ಸಾವಳಗೀಶ್ವರ ದೇವರು ಮೊದಲಿಗರಾಗಿದ್ದಾರೆ.

ಪೂಜ್ಯರನ್ನು ನಾನು ಭೇಟಿಮಾಡಿದ್ದು ಇಂದಿಗೆ ಇಪ್ಪತ್ತೆರಡು ವರ್ಷಗಳ ಹಿಂದೆ. ಶ್ರೀಗುರು ಚನ್ನಬಸವೇಶ್ವರರ 'ಉಳವಿಯಲ್ಲಿ ಓಂಕಾರ' ಎನ್ನುವ ಕಮ್ಮಟ ಹಮ್ಮಿಕೊಳ್ಳಲಾಗಿತ್ತು. ಅದರ ಕರ್ಣಧಾರತ್ವ ವಹಿಸಿದವರು ಇಂದಿನ ಗದುಗಿನ ಜಗದ್ಗುರುಗಳವರು.

ನಾನೂ ಕೂಡಾ ಚಿಂತಕನಾಗಿ ಪಾಲ್ಗೊಂಡಿದ್ದೆ. ಸುಮಾರು ನೂರು ಜನ ಸಾಧಕರು ಸಂಗಮಗೊಂಡಿದ್ದರು. ಪುಣ್ಯ ಪ್ರಕೃತಿಯಲ್ಲಿ ಎಲ್ಲರು ಬರೆಯುವುದು, ಓದುವುದು, ಚಿಂತನ–ಮಂಥನ ಮಾಡುತಲಿದ್ದರು. ಹೀಗೆ ಚಟುವಟಿಕೆಗಳು ನಡೆಯುತ್ತಿದ್ದರೆ ಓರ್ವ ಸಾಧಕರು ಮಾತ್ರ ಬಂದಂತಹ ಶ್ರೀಗಳ ಸೇವೆ–ಆರೈಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಹೀಗೆ ಎಲೆಮರೆಯ ಕಾಯಿಯಂತೆ ಸೇವೆಯಲ್ಲಿಯೇ ಸಾರ್ಥಕತೆ ಕಾಣುವ ಕಾರುಣ್ಯ ಜೀವ ಡಾ. ಸಾವಳಗೀಶ್ವರರು.

ನಾಗನೂರಿನ ಡಾ. ಸಿದ್ಧರಾಮ ಅಪ್ಪಗಳ ಶಿಷ್ಯ ಬಳಗ ಅಪಾರ. ಪೂಜ್ಯ ಗುರುಗಳವರಿಂದ ಅನುಗ್ರಹ ಅಧಿಕಾರ ಪಡೆದ ಸ್ವಾಮಿ ಬಳಗ ಅಪಾರವಿದೆ. ಅನೇಕರು ಪ್ರವಚನಕಾರರು, ಕೆಲವರು ಬರಹಗಾರರು, ಉಳಿದವರು ಸಂಘಟಕರು ಇನ್ನು ಕೆಲವರು ಪ್ರಸಾದಪ್ರಿಯರು ಹೀಗೆ ಹತ್ತು ಹಲವು ಭಿನ್ನಾ, ವಿಭಿನ್ನ ವ್ಯಕ್ತಿತ್ವ ಹೊಂದಿದವರ ನಡುವೆ 'ಸೇವೆಯಿಂದಲೇ ಶ್ರೇಯಸ್ಸು' ಪಡೆದವರು ಒಬ್ಬರೇ ಒಬ್ಬರು ಅವರು ಸಾವಳಗೀಶ್ವರ ದೇವರು. ಪೂಜ್ಯ ಗುರುಗಳು ತುಂಬಾ ಸೂಕ್ಷ್ಮ ಸಂವೇದನಾಶೀಲರು. ಅಂತಹ ಅಂತಃಕರುಣೆಗಳೊಂದಿಗೆ ಅಪ್ಪಗಳ ಅನುಗ್ರಹ ಸಂಪಾದಿಸಿದ್ದು ನಿಜಕ್ಕೂ ಸಂತಸ, ಅಭಿಮಾನ ತಂದಿದೆ.

'ಯಾರು ನೀರಿನಿಂದ ಸ್ನಾನ ಮಾಡುತ್ತಾರೋ, ಅವರು ಬಟ್ಟೆ ಮಾತ್ರ ಬದಲಿಸುತ್ತಾರೆ. ಯಾರು ಬೆವರಿನಿಂದ ಸ್ನಾನ ಮಾಡುತ್ತಾರೋ ಅವರು ಇತಿಹಾಸವನ್ನೇ ಬದಲಿಸುತ್ತಾರೆ' ಎನ್ನುವ ಇತಿಹಾಸಕಾರರ ಮಾತಿನಂತೆ ಬೆವರ ಹನಿಯ ಸ್ನಾನಮಾಡಿ ಇತಿಹಾಸ ಬರೆಯಲು ಬಂದವರು ನಮ್ಮ ಸಾವಳಗೀಶ್ವರರು.

**ಮೋಟಗಿಮಠ, ಅಥಣಿ**

ಹತ್ತು ಹಳ್ಳಿಯ ಹತ್ತೂರೊಡೆಯ ಸಾವಳಗಿ ಶ್ರೀ ಶಿವಲಿಂಗೇಶ್ವರರು. ಗುಲಬರ್ಗಾ ಜಿಲ್ಲೆಯಲ್ಲಿ ಹುಟ್ಟಿ ಸಂಚಾರಗೈಯುತ್ತ ಹಿಂದು–ಮುಸ್ಲಿಂ ಧರ್ಮೀಯರ ಸಮನ್ವಯ ಶ್ರೀಗಳಾಗಿ ಜಮಖಂಡಿ ತಾಲೂಕು ತುಬಚಿಯಲ್ಲಿ ಬಂದು ನೆಲೆಸಿರುವುದು ಒಂದು ಯೋಗಾಯೋಗ. ಇಂತಹ ಇತಿಹಾಸ ಪ್ರಸಿದ್ಧ ಪೀಠದ ಉತ್ತರಾಧಿಕಾರಿಗಳಾಗಿ ಶ್ರೀಕ್ಷೇತ್ರ ತುಬಚಿಯಲ್ಲಿಯೇ ಜನ್ಮತಾಳಿ, ಶಿವಯೋಗಮಂದಿರದೊಳಗೆ ಹೂವಾಗಿ ಅರಳಿ, ಮುಂದೆ ನಾಗನೂರಿನ ರುದ್ರಾಕ್ಷಿಮಠದ ಮಂಟಪದೊಳಗೆ ಸೇವೆಯ ಕಂಪ ಸೂಸಿ, ಇಂದು ಕನ್ನಡ ನಾಡಿನ ಭಾಗ್ಯರವಿಯಾಗಿ ಬೆಳಗುತ್ತಿರುವುದು ನಮ್ಮೆಲ್ಲರ ಅಹೋ ಭಾಗ್ಯವೇ ಸರಿ.

ಶ್ರೀ ಮೋಟಗಿಮಠದಲ್ಲಿ ಪ್ರತಿವರ್ಷ ಹಮ್ಮಿಕೊಳ್ಳುವ ಶರಣಸಂಸ್ಕೃತಿ ಮೇಳ, ಭಾವೈಕ್ಯ ಬೆಳದಿಂಗಳು ಕಾರ್ಯಕ್ರಮಗಳ ಕರ್ಣಧಾರತ್ವ ವಹಿಸಿಕೊಳ್ಳುತ್ತಿದ್ದರು ಡಾ. ಸಾವಳಗೀಶ್ವರ ದೇವರು. ಎಂದೂ ವೇದಿಕೆ ಬೇಕೆಂದು ಬಯಸಿದವರಲ್ಲ. ಸನ್ಮಾನ–ಶಾಲು ಬೇಕೆಂದು ಹಂಬಲಿಸಿದವರಲ್ಲ. ಹಿಂಬದಿಯಲ್ಲಿಯೇ ಇದ್ದು ಎಲ್ಲರ ಆಗು ಹೋಗು ನೋಡಿಕೊಳ್ಳುವ ಮಾತೃ ಹೃದಯಿ ಪೂಜ್ಯರು. ಹೀಗಾಗಿ ನಾನು ಆಗಾಗ ನಮ್ಮ ಸಾಧಕ ಬಳಗದಲ್ಲಿ ಹೇಳುವ ಮಾತು ಕಂಡು ಎಲ್ಲರೂ ನಗುತ್ತಿದ್ದರು. ಏನೆಂದರೆ ನಮ್ಮ ತಾಯಿ–ನಮ್ಮ ಅವ್ವ ಸಾವಳಗೀಶ್ವರರು ಎಂದು ಹೇಳುತ್ತಿದ್ದೆ. ಅಂತಹ ಮಾತೃ ಹೃದಯವೇ ಇಂದು ಪೂಜ್ಯರನ್ನು ಮೇಲೆತ್ತರಕೆ ತಂದು ನಿಲ್ಲಿಸಿದೆ.

**ನಾವು ಎಳೆಯರು ನಾವು ಗೆಳೆಯರು**
**ಹೃದಯ, ಹೂವಿನ ಹಂದರ।**

ಎನ್ನುವ ಧಾರವಾಡದ ಕವಿಗಳ ಆಶಯದಂತೆ ನಾವೆಲ್ಲ ನಾಗನೂರು ಮಠದ ಕರುಳಬಳ್ಳಿಯ ಕುಡಿಗಳಾಗಿ ಅರಳಿದವರು. ಕಿತ್ತೂರು ರಾಜಗುರು ಕಲ್ಮಠ ಶ್ರೀಗಳು, ಶೇಗುಣಸಿ ಮಹಾಂತದೇವರು, ಹಾವೇರಿ ಹುಕ್ಕೇರಿಮಠದ ಶ್ರೀ, ಹುಕ್ಕೇರಿ ವಿರಕ್ತಮಠದ ಶ್ರೀ, ಗುರುದೇವರು, ವಿಜಯಪುರದ ಅಭಿನವ ಸಿದ್ಧಾರೂಢರು, ಕಾರಂಜಿಮಠದ ಶಿವಯೋಗಿ ದೇವರು, ನಾನು, ಡಾ. ಸಾವಳಗೀಶ್ವರರು ನಿತ್ಯವೂ ಹಾಡುತ್ತ, ಆಡುತ್ತ, ವಚನಾಧ್ಯಯನ ಮಾಡುತ್ತ ಹತ್ತು ಹಲವು ಸಂಘಟನೆ ಕೈಗೊಳ್ಳುತ್ತ ಬೆಳೆದವರು. ನಮಗೆಲ್ಲ ಆಧಾರ, ಆಕಾರ, ಅರಿವಿನ ಶ್ರೀಕಾರ ಎಂದರೆ ಡಾ. ಸಿದ್ಧರಾಮ ಅಪ್ಪಗಳು. ತಾಯಿ ತನ್ನ ಹತ್ತು ಮಕ್ಕಳನ್ನು ಆರೈಕೆ ಮಾಡಿ ಪೋಷಿಸಿ ಪಾಲಿಸಿದಂತೆ ನಮ್ಮ ತಪ್ಪು–ವಪ್ಪುಗಳನ್ನು ಅಪ್ಪಿ ಹರಿಸಿ ಹಾರೈಸಿದ್ದಾರೆ ಪೂಜ್ಯ ಗುರುಗಳವರು. ಇಂದು ಸಾವಳಗೀಶ್ವರರು ನಮ್ಮ ಗೆಳೆಯ ಬಳಗದ ಸ್ನೇಹ ಸೇತುವೆ. ಗುರುಬಂಧು– ಮತ್ತೆ ಪ್ರೇಮಸಿಂಧು!

ಶಿವದೀಪ್ತಿಯ ಶರಣ ಕಿರಣವಾಗಿ ಇಂದು ಡಾ. ಸಾವಳಗೀಶ್ವರರು ನಾಗನೂರು ಶ್ರೀಮಠದ ನೂತನ ಅಧಿಪತಿಗಳಾಗಿ ಸಮಾಜಸೇವಾ ದೀಕ್ಷೆ ಸ್ವೀಕರಿಸುತ್ತಿರುವ ಪುಣ್ಯ ಪರ್ವದಲ್ಲಿ ನಾಡು ಅವರಿಂದ ಹತ್ತು ಹಂಬಲವನ್ನಿರಿಸಿಕೊಂಡಿದೆ. ಅದಕ್ಕೆಲ್ಲ ಬೆಂಬಲದ ಬೆಂಗಾವಲಾಗಿ ಗುರುಗಳು ಅನುಗ್ರಹಿಸಲಿ. ಆ ಮೂಲಕ ನೂತನ ಸಮಾಜಕ್ಕೆ ಸಂಜೀವಿನಿಯಾಗಿ ಬೆಳಗಲಿ–ಬೆಳಗುತ್ತಿರಲಿ ಎಂದು ಹೃದಯತುಂಬಿ ಆಶಿಸುತ್ತೇನೆ.

■■

---

**ಕಂಡ ಭಕ್ತರಿಗೆ ಕೈಮುಗಿವಾತನೆ ಭಕ್ತ**
**ಮೃದುವಚನವೆ ಸಕಲ ಜಪಂಗಳಯ್ಯಾ,**
**ಮೃದುವಚನವೆ ಸಕಲ ತಪಂಗಳಯ್ಯಾ,**
**ಸದುವಿನಯವೆ ಸದಾಶಿವನ ಒಲುಮೆಯಯ್ಯಾ**
**ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ.**

**–ಬಸವಣ್ಣ**

ನಿಜವಾದ ಭಕ್ತರು ಇತರ ಭಕ್ತರನ್ನು ಕಂಡಾಗ ಬಾಗಿ ನಮಿಸುವರು. ಮೃದು ವಚನಗಳಿಂದ ಉಪಚರಿಸುವರು. ಮೃದುವಚನಗಳೇ ಅವರಿಗೆ ಎಲ್ಲ ರೀತಿಯ ಜಪ–ತಪಗಳಾಗಿರುವವು. ಸದ್ವಿನಯವೇ ಭಗವಂತನ ಒಲುಮೆಗೆ ಕಾರಣವಾಗುವುದು, ಹಾಗಿಲ್ಲದಿದ್ದರೆ ಭಗವಂತನು ಎಂದೂ ಮೆಚ್ಚಲಾರನು ಎಂಬುದನ್ನು ನಿಜ ಭಕ್ತರು ಅರಿತುಕೊಂಡಿರುತ್ತಾರೆ.

# ವಿದ್ಯಾ-ವಿನಯ ವಿಭೂಷಿತರು: ಶ್ರೀ ಸಾವಳಗೀಶ್ವರ ದೇವರು

● ಪೂಜ್ಯಶ್ರೀ ಮಹಾಂತ ದೇವರು

ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ತುಬಚಿಯ ಶಿವಲಿಂಗೇಶ್ವರ ಮಠಕ್ಕೆ ತನ್ನದೇ ಆದ ಇತಿಹಾಸವಿದೆ; ಪರಂಪರೆಯಿದೆ. ಶ್ರೀಮಠದ ಕರ್ತೃಗಳಾದ ಶ್ರೀ ಶಿವಲಿಂಗೇಶ್ವರರು ಮಹಾತಪಸ್ವಿಗಳು, ಲಿಂಗಲೀಲಾಲೋಲರು. ಈ ಪರಂಪರೆಯನ್ನು ಮುಂದುವರೆಸಿದವರು ಶ್ರೀ ಮ. ನಿ. ಪ್ರ. ಲಿಂ. ಶಿವಲಿಂಗ ಸ್ವಾಮಿಗಳು ಸರಳ-ಸಜ್ಜನಿಕೆಯಿಂದ ಭಕ್ತ ಬಂಧುಗಳ ಆರಾಧ್ಯ ಗುರುಗಳಾದವರು. ಇಂತಹ ಗುರುಗಳವರ ವಾರಸುದಾರರಾಗಿ ಆದರ್ಶ ಯುವಯತಿಗಳಾದವರು ಪೂಜ್ಯಶ್ರೀ ಡಾ. ಸಾವಳಗೀಶ್ವರ ದೇವರು.

ಪರಮಾರಾಧ್ಯ ಗುರುಗಳಾದ ಹಾನಗಲ್ಲ ಶ್ರೀ ಗುರುಕುಮಾರ ಶಿವಯೋಗಿಗಳವರು ಸಂಸ್ಥಾಪಿಸಿದ ಶ್ರೀ ಶಿವಯೋಗಮಂದಿರ ಸಂಸ್ಥೆಯು ಸಾವಿರಾರು ಯತಿಗಳನ್ನು, ಸಮಾಜ ಸೇವಕರನ್ನು ನೀಡಿದ ಧಾರ್ಮಿಕ ಗುರುಕುಲವಾಗಿದೆ. ಈ ಸಂಸ್ಥೆಯಲ್ಲಿ ಧಾರ್ಮಿಕ ಶಿಕ್ಷಣವನ್ನು ಪಡೆಯಲು ೧೯೯೯ರ ಸಾಲಿನ ವಿದ್ಯಾರ್ಥಿಯಾಗಿ ನಾನು ಪ್ರವೇಶ ಪಡೆದಿದ್ದೆ. ಕೆಲವು ದಿನಗಳ ನಂತರ ಈ ಗುರುಕುಲಕ್ಕೆ ಆಗಮಿಸಿದವರು ಸಾತ್ವಿಕತೆಯ ಸಾಕಾರರೂಪವಾದ ಶ್ರೀ ಸಾವಳಗೀಶ್ವರ ದೇವರು. ನಾವಿಬ್ಬರೂ ಒಂದೇ ತಾಲೂಕಿನವರಾದ್ದರಿಂದ ಮೊದಲನೆಯ ದಿನವೇ ಆತ್ಮೀಯ ಸ್ನೇಹಿತರಾದೆವು. ಅಂದು ಬೆಸೆದ ಸ್ನೇಹಸಂಬಂಧ ಇಂದಿಗೂ ಅವಿನಾಭಾವಕ್ಕೆ ತಿರುಗಿದೆ; ಅನೋನ್ಯವಾಗಿದೆ.

ಅತ್ಯಂತ ಲವಲವಿಕೆಯಿಂದ ಆಟ-ಪಾಠಗಳಲ್ಲಿ ತೊಡಗಿಕೊಳ್ಳುತ್ತಿದ್ದ ಪೂಜ್ಯಶ್ರೀ ಸಾವಳಗೀಶ್ವರ ದೇವರೆಂದರೆ ಎಲ್ಲರಿಗೂ ಪ್ರೀತಿ. ಎಲ್ಲರೊಳಗೊಂದಾಗಿ-ಚಂದಾಗಿ ಬೆರೆಯುತ್ತಿದ್ದ ಅವರ ವ್ಯಕ್ತಿತ್ವ ನಿಷ್ಕಲ್ಮಶವಾದುದು. ಶಿವಯೋಗಮಂದಿರದಲ್ಲಿ ಪ್ರಸಾದ ತೆಗೆದುಕೊಳ್ಳುವಾಗ ವಚನಗಳನ್ನು ಹೇಳಬೇಕಾಗುತ್ತಿತ್ತು. ಆಗತಾನೆ ಪ್ರವೇಶ ಪಡೆದಿದ್ದ ನಮಗೆ ವಚನಗಳು ಬರುತ್ತಿರಲಿಲ್ಲ. ಆದರೆ ಪ್ರಸಾದ ಕುಳಿತ ಮೊದಲನೆಯ ದಿನವೇ ಸಾವಳಗೀಶ್ವರ ದೇವರು 'ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ' ಎಂಬ ಬಸವಣ್ಣನವರ ಸುಂದರ ವಚನವನ್ನು ಸುಶ್ರಾವ್ಯವಾಗಿ ಹಾಡಿದಾಗ ಎಲ್ಲ ಸಾಧಕರಿಗೂ ಆಶ್ಚರ್ಯವಾಗಿತ್ತು. ಅವರು ನಾಗನೂರು ರುದ್ರಾಕ್ಷಿಮಠದ ಶ್ರೀ ಕುಮಾರೇಶ್ವರ ಪ್ರಸಾದನಿಲಯದಲ್ಲಿದ್ದು ಪ್ರಾಥಮಿಕ ಶಿಕ್ಷಣವನ್ನು ಪೂರೈಸಿದ್ದರಿಂದ ಸಹಜವಾಗಿಯೇ ಅವರು ಅನೇಕ ವಚನಗಳನ್ನು ಕಲಿತಿದ್ದರು. ಅಂದು ಅವರು ಭಾವತುಂಬಿ ಹಾಡಿದ ಆ ವಚನವನ್ನು ನಾನು ಈಗಲೂ ಕೇಳಬಲ್ಲೆ.

೨೦೦೧ ರಲ್ಲಿ ಶ್ರೀ ಶಿವಯೋಗಮಂದಿರ ಸಂಸ್ಥೆಯ ನೇತೃತ್ವವನ್ನು ನಮ್ಮೆಲ್ಲರ ಆರಾಧ್ಯ ಗುರುಗಳಾದ ನಾಗನೂರು ರುದ್ರಾಕ್ಷಿಮಠದ ಪೂಜ್ಯಶ್ರೀ ಡಾ. ಸಿದ್ಧರಾಮ ಮಹಾಸ್ವಾಮಿಗಳವರು ವಹಿಸಿಕೊಂಡಿದ್ದರು. ಅಸ್ತವ್ಯಸ್ತವಾಗಿ ಬದುಕುತ್ತಿದ್ದ ನಮಗೆ ಬದುಕಿನ ಶಿಸ್ತನ್ನು ಕಲಿಸಿದ ಸಂದರ್ಭವದು. ಆದರ್ಶ ಅಧ್ಯಾಪಕ, ಶಿಕ್ಷಣ ಚೇತನ ಶ್ರೀ ವ್ಹಿ. ಡಿ. ರಾಚನಾಯ್ಕರ ಗುರುಗಳನ್ನು ಪಾಠ ಮಾಡಲು ನೇಮಿಸಿ ನಮ್ಮ ಬದುಕಿಗೆ ಸದ್ಗತಿಯನ್ನು ಕರುಣಿಸಿದವರು ಪೂಜ್ಯಶ್ರೀ ನಾಗನೂರಿನ ಅಪ್ಪಗಳವರು. ಆ ಸಂದರ್ಭದಲ್ಲಿ ಚೆನ್ನಾಗಿ ಓದಲು ಪ್ರಾರಂಭಿಸಿದೆವು. ಸಾವಳಗೀಶ್ವರ ದೇವರಂತೂ ಚಾಣಾಕ್ಷಮತಿಯಾಗಿದ್ದರು. ಪಾಠಶಾಲೆಯಲ್ಲಿ ಎಲ್ಲರಿಗಿಂತ ತುಸು ಮುಂದೆಯೇ ಇದ್ದರು. ಎಷ್ಟು ಜಾಣರಾಗಿದ್ದರೋ ಅಷ್ಟೇ ಸೇವಾಮನೋಭಾವವನ್ನು ಬೆಳೆಸಿಕೊಂಡಿದ್ದರು.

ಬೇಸಿಗೆಯ ಸಂದರ್ಭದಲ್ಲಿ ಶಿವಯೋಗಮಂದಿರದಲ್ಲಿ ತುಂಬಾ ಬಿಸಿಲು. ಈ ಕಾರಣಕ್ಕಾಗಿ ನಾಗನೂರಿನ ಅಪ್ಪಗಳವರು ಎಲ್ಲ ವಟು ಸಾಧಕರನ್ನು ಬೆಳಗಾವಿಗೆ ಕರೆಸಿಕೊಳ್ಳುತ್ತಿದ್ದರು. ಬೆಳಗಾವಿಯಲ್ಲಿ ಪಾಠ ಪ್ರವಚನ ವ್ಯವಸ್ಥೆಯನ್ನು ಮಾಡಿದ್ದರು. ಎಲ್ಲ ಸಾಧಕರು ಪ್ರವಾಸಕ್ಕೆ ಹೊರಟ ಸಂದರ್ಭದಲ್ಲಿ ಪರಮಾರಾಧ್ಯ ಗುರುಗಳಾದ ಹಾನಗಲ್ಲ ಶ್ರೀ ಗುರುಕುಮಾರ ಶಿವಯೋಗಿಗಳವರ ಕರ್ತೃ ಗದ್ದುಗೆಯ ಸೇವೆಯನ್ನು ಮಾಡುವವರು ಯಾರು? ಎಂಬ ಪ್ರಶ್ನೆ ಬಂದಾಗ ತಾವೆಲ್ಲರೂ ಆರಾಮವಾಗಿ ಪ್ರವಾಸಕ್ಕೆ ಹೊರಡಿ

**ಶೇಗುಣಸಿ, ನಾಗನೂರು ಶ್ರೀ ರುದ್ರಾಕ್ಷಿಮಠ, ಶಿವಬಸವನಗರ ಬೆಳಗಾವಿ**

ಗುರುಗಳವರ ಕರ್ತೃಗದ್ದುಗೆಯ ಸೇವೆಯನ್ನು ನಾನು ಮಾಡುತ್ತೇನೆ ಎಂದು ಮುಂದೆ ಬಂದವರು ಸೇವಾ ಸಂಪನ್ನರಾದ ಶ್ರೀ ಸಾವಳಗೀಶ್ವರ ದೇವರು. ಸ್ವಾಮಿಯೆಂದರೆ ಮಠದ ಒಡೆಯನಲ್ಲ, ಸಮಾಜದ ನಿಷ್ಠಾವಂತ ಸೇವಕ ಎಂಬ ಶ್ರೀ ಗುರುಕುಮಾರ ಶಿವಯೋಗಿಗಳವರ ಜ್ಯೋತಿರ್ಲಿಂಗ ಸದೃಶ ಮಾತು ಸಾವಳಗೀಶ್ವರರ ಮಂತ್ರವಾಗಿ ಪರಿಣಮಿಸಿದೆ.

ತುಬಚಿಯ ಶ್ರೀ ಶಿವಲಿಂಗೇಶ್ವರ ಮಠದ ಪ್ರತಿವರ್ಷದ ಕಾರ್ಯಕ್ರಮದಲ್ಲಿ ನಾನು ಇರಲೇಬೇಕು. ಅತ್ಯಂತ ಆತ್ಮೀಯತೆಯಿಂದ ಆಮಂತ್ರಣವನ್ನು ನೀಡಿ ಕರೆಸಿಕೊಳ್ಳುತ್ತಿದ್ದರು. ಸಾವಳಗೀಶ್ವರ ದೇವರು ಕಾಶಿಯಲ್ಲಿ ಕೆಲವು ದಿನಗಳವರೆಗೆ ಅಧ್ಯಯನ ಮಾಡುತ್ತಿದ್ದರು. ಅವರ ಮಠದ ಪ್ರತಿವರ್ಷದ ಜಾತ್ರೆಯ ಸಂದರ್ಭವದು. ಅನಿವಾರ್ಯ ಕಾರಣಗಳಿಂದ ಪೂಜ್ಯರು ಅವರ ಮಠದ ಕಾರ್ಯಕ್ರಮಕ್ಕೆ ದೂರದ ಕಾಶಿಯಿಂದ ಬರಲು ಆಗದ ಸಂದಿಗ್ಧ ಪರಿಸ್ಥಿತಿ. ಅಂತಹ ಸಂದರ್ಭದಲ್ಲಿ ನನಗೆ ಫೋನಾಯಿಸಿ ‘ನಮ್ಮ ಮಠದ ಈ ವರ್ಷದ ಕಾರ್ಯಕ್ರಮದ ಸಂಪೂರ್ಣ ಜವಾಬ್ದಾರಿ ನಿಮ್ಮದು, ನನ್ನ ಸ್ಥಾನದಲ್ಲಿ ನಿಂತು ನೀವೆ ಕಾರ್ಯಕ್ರಮಗಳನ್ನು ಸುಸೂತ್ರವಾಗಿ ನೆರವೇರಿಸಬೇಕು ಎಂದಾಗ ನಾವು ಅವರಿಲ್ಲದ ದೊಡ್ಡ ಕೊರತೆಯಲ್ಲಿ ಆ ವರ್ಷದ ಕಾರ್ಯಕ್ರಮವನ್ನು ನೆರವೇರಿಸಿದೆವು. ಇಂದಿಗೂ ಆ ಸಂಗತಿಯನ್ನು ಸಂದರ್ಭೋಚಿತ ಅವರು ಹೇಳುವಾಗಲೆಲ್ಲ ನಾನು ಧನ್ಯತೆಯನ್ನು ಅನುಭವಿಸುತ್ತೇನೆ. ಇಷ್ಟೊಂದು ಗಾಢ ಸ್ನೇಹಸಂಬಂಧ ನಮ್ಮಿಬ್ಬರ ಮಧ್ಯೆ ಇದೆ. ಇಂದಿಗೂ ನಮ್ಮಿಬ್ಬರ ಪೂರ್ವಾಶ್ರಮದ ತಾಯಂದಿರು ನಮ್ಮಿಬ್ಬರನ್ನು ಅಣ್ಣ ತಮ್ಮರಂತೆಯೇ ಕಾಣುತ್ತಾರೆ.

ಧಾರವಾಡದ ಶ್ರೀ ಸಿದ್ಧರಾಮೇಶ್ವರ ಮಾರ್ಗದರ್ಶಿಯಲ್ಲಿದ್ದುಕೊಂಡು ಕರ್ನಾಟಕ ಕಾಲೇಜ ಹಾಗು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅವರು ತತ್ತ್ವಶಾಸ್ತ್ರ ವಿಭಾಗದಲ್ಲಿ ಓದುತ್ತಿದ್ದರು. ನಾನು ಬೆಳಗಾವಿಯ ನಾಗನೂರು ರುದ್ರಾಕ್ಷಿಮಠದಲ್ಲಿದ್ದುಕೊಂಡು ಲಿಂಗರಾಜ ಮಹಾವಿದ್ಯಾಲಯದಲ್ಲಿ ಇಂಗ್ಲಿಷ್ ಸ್ನಾತಕೋತ್ತರ ವಿಭಾಗದಲ್ಲಿ ಓದುತ್ತಿದ್ದೆ. ನಾವೆಲ್ಲರೂ ನಾಗನೂರು ಶ್ರೀ ರುದ್ರಾಕ್ಷಿಮಠ ಎಂಬ ಒಂದೇ ಬಳ್ಳಿಯ ಹೂಗಳಾದ್ದರಿಂದ ಸಹಜವಾಗಿಯೇ ಓದುವುದರಲ್ಲಿ ಆಸಕ್ತಿಯಿತ್ತು. ತತ್ತ್ವಶಾಸ್ತ್ರ ವಿಭಾಗದಲ್ಲಿ ಬಂಗಾರದ ಪದಕಗಳೊಂದಿಗೆ ಅವರು ಸ್ನಾತಕೋತ್ತರ ಪದವಿಯನ್ನು ಪಡೆದಾಗ ನಾವೆಲ್ಲರೂ ಬಹಳ ಸಂಭ್ರಮಿಸಿದೆವು. ನಿರಂತರ ಪ್ರೇರಣಾದಾಯಕ ಮಾತುಗಳನ್ನಾಡುತ್ತ ಹುರಿದುಂಬಿಸುವ ಕಾರ್ಯವನ್ನು ಸಾವಳಗೀಶ್ವರ ದೇವರು ಅಂದಿನಿಂದ ಇಂದಿನವರೆಗೂ ಮಾಡುತ್ತಲೇ ಇದ್ದಾರೆ.

ಹಾನಗಲ್ಲ ಶ್ರೀ ಗುರುಕುಮಾರ ಶಿವಯೋಗಿಗಳವರು ನಮ್ಮ ಸಮಾಜದ ಶ್ರೇಷ್ಠ ಗುರುಗಳು. ಸಮಾಜ ಕಲ್ಯಾಣಕ್ಕಾಗಿ ಸರ್ವಸ್ವವನ್ನು ಸಮರ್ಪಿಸಿದವರು. ಇಂತಹ ದಿವ್ಯಚೇತನ ಪೂಜ್ಯರ ಜೀವನ ಧ್ಯೇಯಗಳನ್ನು ಸಮಾಜಕ್ಕೆ ತಲುಪಿಸುವ ಉದ್ದೇಶದಿಂದ ಹುಟ್ಟಿಕೊಂಡ ಸಂಘಟನೆಯೇ ‘ಶ್ರೀ ಕುಮಾರೇಶ್ವರ ಜಯಂತಿ ಮಹೋತ್ಸವ ಸಮಿತಿ’ ಈ ಸಮಿತಿಯ ಪ್ರಥಮ ಕಾರ್ಯದರ್ಶಿಗಳಾಗಿ ಅಪರೂಪದ ಸೇವೆ ಸಲ್ಲಿಸಿದವರು ಪೂಜ್ಯಶ್ರೀ ಸಾವಳಗೀಶ್ವರ ದೇವರು. ಅತ್ಯಂತ ಪ್ರಗತಿಪರ ಮನೋಭಾವದೊಂದಿಗೆ ತಮ್ಮ ತುಬಚಿಯ ಶ್ರೀಮಠದ ಮೂಲಕ ಹಲವಾರು ವಿಧಾಯಕ ವಿನೂತನ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನೆರವೇರಿಸಿ ನಮ್ಮ ನಾಡಿನ ಭರವಸೆಯ ಬೆಳಕಾಗಿದ್ದಾರೆ.

ತಮಗೆ ವಹಿಸಿದ ಯಾವುದೇ ಕಾರ್ಯವನ್ನಾದರೂ ಅತ್ಯಂತ ಶ್ರಮ-ಶ್ರದ್ಧೆಯಿಂದ ಯಶಸ್ವಿಯಾಗಿಸುವುದಕ್ಕೆ ನಿಪುಣರಾಗಿರುವ ಪೂಜ್ಯರು ಕೀರ್ತಿಶನಿಯ ಬೆನ್ನು ಹತ್ತಿದವರಲ್ಲ. ನೆಲದ ಮರೆಯ ನಿಧಾನದಂತೆ, ಎಲೆಯ ಮರೆಯ ಕಾಯಿಯಂತೆ ಎಲ್ಲ ಯಶಸ್ವಿ ಕಾರ್ಯಕ್ರಮಗಳಲ್ಲಿ ಇದ್ದೂ ಇಲ್ಲದಂತೆ ನಿರ್ಲಿಪ್ತರಾಗಿ ನಿರಾಳರಾಗುವ ಅವರ ಗುಣ ವಿಶೇಷವಾದುದು.

ಯಾವುದೇ ಮಠದ ಸಾಕ್ಷ್ಯ ಚಿತ್ರಗಳನ್ನು ನಿರ್ಮಿಸುವುದರಲ್ಲಿ ಸಾವಳಗೀಶ್ವರ ದೇವರು ಸಿದ್ಧಹಸ್ತರು. ಸಾಕ್ಷ್ಯಚಿತ್ರದ ಸಾಹಿತ್ಯ ಮತ್ತು ಧ್ವನಿಯನ್ನು ನನಗೆ ನೀಡಲು ಹೇಳಿ ತಾವು ಅತ್ಯಂತ ಚಾಕಚಕ್ಯತೆಯಿಂದ ಸಂಕಲನ ಮಾಡುತ್ತಾರೆ. ಹೀಗೆ ಅನೇಕ ಮಠಗಳ ಮತ್ತು ಸ್ವಾಮಿಗಳವರ ಸಾಕ್ಷ್ಯ ಚಿತ್ರಗಳನ್ನು ನಾವಿಬ್ಬರೂ ಮಾಡಿದ್ದೇವೆ. ಇದೆಲ್ಲವನ್ನು ಗಮನಿಸಿದ ಅನೇಕರು ನಮ್ಮಿಬ್ಬರನ್ನು ಕನ್ನಡ ಖ್ಯಾತ ಸಂಗೀತ ನಿರ್ದೇಶಕರಾದ ರಾಜನ್ ಮತ್ತು ನಾಗೇಂದ್ರರಿಗೆ ಹೋಲಿಸಿ ತಮಾಷೆ ಮಾಡುತ್ತಾರೆ.

ನಮ್ಮ ನೆಲದ ಪುಸ್ತಕ ಸಂಸ್ಕೃತಿಯ ಶ್ರೇಷ್ಠ ಮಹಾಸ್ವಾಮಿಗಳಾದ ಪೂಜ್ಯಶ್ರೀ ಮನ್ನಿರಂಜನ ಜಗದ್ಗುರು ಡಾ. ತೋಂಟದ ಸಿದ್ಧರಾಮ ಅಪ್ಪಗಳವರು, ಸುಬುದ್ದಿಯೆಂಬ ಉದಕವನೆರೆದು ನಮ್ಮನ್ನೆಲ್ಲ ಸಾಕಿಸಲಹುತ್ತಿದ್ದಾರೆ. ಅವರ ಸಾನಿಧ್ಯದಲ್ಲಿದ್ದುಕೊಂಡು ಅಧ್ಯಯನ ಮಾಡುತ್ತಿರುವ ನಾವು ಧನ್ಯವಂತರು. ಯಾವ ಆಡಂಬರಕ್ಕೂ ಒಳಗಾಗದೇ ಬಸವತತ್ತ್ವವನ್ನೇ ಹಾಸಿಕೊಂಡು ಬಸವತತ್ತ್ವವನ್ನೇ ಹೊದ್ದುಕೊಂಡು ತಮ್ಮ ಬಸವಾಯತ ಬದುಕಿನಿಂದಲೇ ನಮಗೆಲ್ಲ ಜೀವನ ಸಂದೇಶ ನೀಡುತ್ತಿರುವ ಅಪ್ಪಗಳವರ ನಿರಂಜನ ವ್ಯಕ್ತಿತ್ವ ನಮಗೆಲ್ಲ ಅಗಾಧವಾದ

ಪರಿಣಾಮವನ್ನುಂಟು ಮಾಡಿದೆ. ಪೂಜ್ಯಶ್ರೀ ಡಾ. ಸಾವಳಗೀಶ್ವರ ದೇವರು ಪೂಜ್ಯನೀಯ ಅಪ್ಪಗಳವರ ಬಸವಾಯತ ಬದುಕಿನಿಂದ ಪ್ರಭಾವಿತರಾದವರು. ಇದೀಗ ತಾವು ಓದಿದ ಪ್ರತಿಷ್ಠಿತ ಮಠದ ಕರ್ಣಧಾರತ್ವವೇ ಅವರಿಗೆ ಒಲಿದು ಬಂದಿರುವುದು ಅತ್ಯಂತ ಸಂತೋಷದ ಸಂಗತಿಯಾಗಿದೆ.

ಕಾಯಕಯೋಗಿ, ಮಹಾಪ್ರಸಾದಿ ಪೂಜ್ಯಶ್ರೀ ಲಿಂ. ಶಿವಬಸವ ಮಹಾಸ್ವಾಮಿಗಳವರು ಕಟ್ಟಿ ಬೆಳೆಸಿದ ಶ್ರೀಮಠವು ಪೂಜ್ಯಶ್ರೀ ಲಿಂ. ಪ್ರಭು ಮಹಾಸ್ವಾಮಿಗಳು ಮತ್ತು ಪೂಜ್ಯಶ್ರೀ ಡಾ. ಸಿದ್ಧರಾಮ ಅಪ್ಪಗಳವರಿಂದ ವಿಸ್ತಾರೋನ್ನತವಾಗಿ ಬೆಳೆದು ನಿಂತಿದೆ. ಇಂತಹ ಘನವೆತ್ತ, ಶ್ರೀಮಂತ ಪರಂಪರೆಯ ಶ್ರೀ ರುದ್ರಾಕ್ಷಿಮಠಕ್ಕೆ ೧೦ನೆಯ ಪೀಠಾಧಿಪತಿಗಳಾಗುವ ಬಹುದೊಡ್ಡ ಜವಾಬ್ದಾರಿ ಶ್ರೀ ಡಾ. ಸಾವಳಗೀಶ್ವರ ದೇವರ ಹೆಗಲೇರಿದೆ. ಪರಮ ಪರಂಪರೆಯನ್ನು ಸಮರ್ಥವಾಗಿ ಮುನ್ನಡೆಸುವ ಅತುಲ ಸಾಮರ್ಥ್ಯ ಶ್ರೀ ಡಾ. ಸಾವಳಗೀಶ್ವರ ದೇವರಿಗಿದೆ.

ನಾಗನೂರು ರುದ್ರಾಕ್ಷಿಮಠಕ್ಕೂ ಶೇಗುಣಸಿಯ ಶ್ರೀ ವಿರಕ್ತಮಠಕ್ಕೂ ಅನನ್ಯ ಸಂಬಂಧ. ಮಹಾತಪಸ್ವಿಗಳಾದ ಲಿಂ. ಮುರುಘೇಂದ್ರ ಮಹಾಸ್ವಾಮಿಗಳು ಮತ್ತು ಮಹಾಪ್ರಸಾದಿಗಳಾದ ಶ್ರೀ ಶಿವಬಸವ ಮಹಾಸ್ವಾಮಿಗಳು ಅತ್ಯಂತ ಆತ್ಮೀಯರು. ೧೦೫ ಇಳಿವಯಸ್ಸಿನಲ್ಲಿಯೂ ಶೇಗುಣಸಿ ವಿರಕ್ತಮಠದ ಜಾತ್ರೆಗೆ ದಯಮಾಡಿಸಿ ಆಶೀರ್ವದಿಸಿದವರು ಪೂಜ್ಯಶ್ರೀ ಲಿಂ. ಶಿವಬಸವ ಅಜ್ಜನವರು. ಪೂಜ್ಯಶ್ರೀ ಡಾ. ಸಿದ್ಧರಾಮ ಅಪ್ಪಗಳವರು ಮತ್ತು ಶೇಗುಣಸಿ ವಿರಕ್ತಮಠದ ಸದ್ಯದ ಪೀಠಾಧಿಪತಿಗಳಾದ ಪೂಜ್ಯಶ್ರೀ ಶಂಕರ ಮಹಾಸ್ವಾಮಿಗಳವರ ಮೂಲಕ ಆ ಆತ್ಮೀಯ ಸಂಬಂಧ ಗಾಢವಾಗಿ ಬೆಳೆದು ನಿಂತಿದೆ ಶೇಗುಣಸಿ ವಿರಕ್ತಮಠದ ಗುರುಗಳಾದ ಪೂಜ್ಯಶ್ರೀ ಶಂಕರ ಮಹಾಸ್ವಾಮಿಗಳವರ ಆರೋಗ್ಯದ ಬಗ್ಗೆ ಪೂಜ್ಯಶ್ರೀ ಡಾ. ಸಿದ್ಧರಾಮ ಅಪ್ಪಗಳವರಿಗೆ ಎಲ್ಲಿಲ್ಲದ ಕಾಳಜಿ. ನಿರಂತರವಾಗಿ ಅವರ ಪ್ರಕೃತಿಯ ಬಗ್ಗೆ ವಿಚಾರಿಸಿ ಸೇವೆಯನ್ನು ಮಾಡುವಂತೆ ಅಪ್ಪಣೆ ಪಡಿಸುತ್ತಾರೆ. ತಮ್ಮ ಕಾರ್ಯ ಬಾಹುಳ್ಯದ ಮಧ್ಯೆಯೂ ಶೇಗುಣಸಿ ವಿರಕ್ತಮಠದ ಕಾರ್ಯಕ್ರಮಗಳಲ್ಲಿ ದಯಮಾಡಿಸಿ ದರ್ಶನಾಶೀರ್ವಾದವನ್ನು ಕರುಣಿಸುತ್ತಾರೆ. ಇಷ್ಟೊಂದು ಅವಿನಾಭಾವ ಸಂಬಂಧ ನಾಗನೂರಿನ ರುದ್ರಾಕ್ಷಿಮಠಕ್ಕೂ ಶೇಗುಣಸಿಯ ವಿರಕ್ತಮಠಕ್ಕೂ ಇದೆ. ಶೇಗುಣಸಿಯ ವಿರಕ್ತಮಠದ ಉತ್ತರಾಧಿಕಾರಿಯನ್ನಾಗಿ ಶ್ರೀಗುರುದ್ವಯರು ೨೦೦೯ ರಲ್ಲಿ ನನ್ನನ್ನು ನೇಮಿಸಿದರು. ಇದೀಗ ಪೂಜ್ಯಶ್ರೀ ಡಾ. ಸಾವಳಗೀಶ್ವರ ದೇವರು ನಾಗನೂರು ರುದ್ರಾಕ್ಷಿಮಠದ ಪೀಠಾಧಿಪತಿಗಳಾಗುತ್ತಿದ್ದಾರೆ. ಇದೀಗ ಡಾ. ಸಾವಳಗೀಶ್ವರ ದೇವರು ಮತ್ತು ನನ್ನ ಮೂಲಕ ಆ ಅವಿನಾಭಾವ ಸಂಬಂಧ ಮುಂದುವರೆಯುತ್ತಿರುವುದು ಯೋಗಾಯೋಗವೇ ಸರಿ.

■■

---

**ಮನೆ ನೋಡಾ ಬಡವರು; ಮನ ನೋಡಾ ಘನ.**
**ಸೋಂಕಿನಲ್ಲಿ ಸುಖಿ; ಸರ್ವಾಂಗ ಕಲಿಗಳು**
**ಪಸರಕ್ಕನುವಿಲ್ಲ; ಬಂದ ತತ್ಕಾಲಕ್ಕುಂಟು**
**ಕೂಡಲಸಂಗನ ಶರಣರು ಸ್ವತಂತ್ರಧೀರರು.**

–ಬಸವಣ್ಣ

ಶರಣರ ಸಂತರ ಮನೆ ಚಿಕ್ಕದಿದ್ದು ಅವರು ಬಡವರಂತೆ ಕಾಣುತ್ತಿರಬಹುದು. ಆದರೆ ಅವರ ಮನಸ್ಸು ಶ್ರೀಮಂತವಾದುದು. ಅವರು ಲಿಂಗಾಂಗ ಸಾಮರಸ್ಯವನ್ನು ಅನುಭವಿಸುತ್ತ ನಿತ್ಯ ಸುಖಿಗಳಾದವರು, ದೇಹ ಮನಸ್ಸುಗಳ ಮೇಲೆ ನಿಯಂತ್ರಣ ಸಾಧಿಸಿದ ಕಲಿಗಳು. ಅವರು ಏನನ್ನೂ ಸಂಗ್ರಹಿಸಿ ಇಡುವವರಲ್ಲ, ಆ ಕಾಲಕ್ಕೆ ಬಂದುದನ್ನು ಭಗವಂತನಿಗೆ ಅರ್ಪಿಸಿ ನಿರ್ಲಿಪ್ತರೆನಿಸಿದವರು. ಆದ್ದರಿಂದ ಅವರು ಸರ್ವತಂತ್ರ ಸ್ವತಂತ್ರರೂ, ಧೀರರೂ ಆಗಿರುವರು.

# ವಿದ್ಯೆ–ವಿನಯಗಳ ಸಾಕ್ಷಾತ್ಕಾರ

● ಪೂಜ್ಯಶ್ರೀ ಶಿವಯೋಗಿ ದೇವರು

ಪ್ರಶಾಂತವಾದ ಮುಖಭಾವ, ವಿಶಾಲವಾದ ಹಣೆ, ಹಣೆಯ ಮೇಲೆ ಸದಾಕಾಲ ಗೋಚರಿಸುವ ಮೂರು ಬೆರಳು ವಿಭೂತಿ. ಸಮಚಿತ್ತದಿ ನೋಡುವ ಕಣ್ಣುಗಳು, ಪೋಣಿಸಿದಂತಿರುವ ಮೌಲ್ಯಯುತ ಮಾತುಗಳು, ಸೇವಾಸಕ್ತ ಕೈಗಳು, ಸತ್ಪತದಿ ಸಾಗಬೇಕೆಂಬ ಅಗಾಧ ಹಂಬಲ ಹೊಂದಿರುವ ಶ್ರೀ ಪಾದಗಳು, ವಿದ್ಯಾ–ವಿನಯ ಸಂಪನ್ನಗಳ ನಿಜ ಸಾಕ್ಷಾತ್ಕಾರ 'ಕೂಡಲಸಂಗಮವೇ' ಡಾ. ಸಾವಳಗೀಶ್ವರ ದೇವರು.

ಡಾ. ಸಾವಳಗೀಶ್ವರ ದೇವರ ಜೊತೆಗಿನ ನನ್ನ ಒಡನಾಟ ಹದಿನಾರು ವರ್ಷಗಳಿಗೂ ಹಿಂದಿನದು. ಅವರು ತೋರುವ ಪ್ರೀತಿ–ವಾತ್ಸಲ್ಯ ಉಂಡು ಬೆಳೆದವನು. ೨೦೦೩ ಜೂನ್ ೧೪ನೇ ತಾರೀಖು ಭೈರನಹಟ್ಟಿಯ ಪರಮಪೂಜ್ಯಶ್ರೀ ಶಾಂತಲಿಂಗ ಮಹಾಸ್ವಾಮಿಗಳ ಮಾರ್ಗದರ್ಶನದಲ್ಲಿ ಶಿವಯೋಗಮಂದಿರಕ್ಕೆ ವಿದ್ಯಾರ್ಜನೆಗೆಂದು ಹೋಗಿದ್ದೆ. ಎಲ್ಲ ಸಾಧಕರು ಪಾಠ–ಪ್ರವಚನದಲ್ಲಿ ತೊಡಗಿದ್ದರು. ದೂರಿನಿಂದಲೇ ಅವರ ವೇಷ–ಭೂಷಣ ನೋಡಿ ಮೂಕವಿಸ್ಮಿತನಾದೆ. ಒಂದು ಕ್ಷಣ ಎವೆಯಿಕ್ಕದೆ ನೋಡಿದೆ, ನೋಡುತ್ತಲೇ ಇದ್ದೆ. ಆ ನನ್ನ ನೋಟವನ್ನು ತಡೆಯಲೆಂಬಂತೆ ಬಂದವರು ಸಾವಳಗೀಶ್ವರ ದೇವರು. ಶಾಂತಲಿಂಗ ಮಹಾಸ್ವಾಮಿಗಳಿಗೆ ನಮಸ್ಕರಿಸಿ, ಬಂದ ಕಾರಣ ಕೇಳಿದರು ನಾನು ಅವರ ಜೊತೆ ಸಾಧಕನಾಗಿ ಇದ್ದು ವಿದ್ಯಾಭ್ಯಾಸ ಮಾಡಲು ಅಲ್ಲಿಗೆ ಬಂದಿದ್ದೆ ಎಂಬುದನ್ನು ತಿಳಿದ ತಕ್ಷಣ ಸಂತಸಪಟ್ಟರು. ಸಂಬಂಧ ಪಟ್ಟವರಿಗೆ ಭೇಟಿ ಮಾಡಿಸಿ ಸಾಲದೆಂಬಂತೆ ನಾವೆಲ್ಲ ಇದ್ದೀವಿ. ನೀವೇನು ಚಿಂತೆ ಮಾಡಬೇಡಿ ಎಂದು ಧೈರ್ಯ ತುಂಬಿ ಇನ್ನು ಶಿವಯೋಗಿ ದೇವರು ನಮ್ಮೆಲ್ಲರಲ್ಲಿ ಒಬ್ಬರಾಗಿ ಇರುತ್ತಾರೆ. ಅವರ ಜವಾಬ್ದಾರಿ ನಮಗಿರಲಿ ಎಂದು ಪೂಜ್ಯರು ಅವತ್ತೇ ನನ್ನ ಜವಾಬ್ದಾರಿಯನ್ನು ಹೊತ್ತುಕೊಂಡರು. ಅಲ್ಲಿ ಬೆಳೆದ ಆ ಅವಿನಾಭಾವ ಸಹೋದರ ಸಂಬಂಧ ಬೆಳಗಾವಿ ಶ್ರೀ ನಾಗನೂರು ರುದ್ರಾಕ್ಷಿಮಠಕ್ಕೆ ಹಿರಿಯ ಕಿರಿಯ ಸಾಧಕರಾಗಿ ಸೇರಿಕೊಂಡಾಗಲೂ ಮುಂದುವರೆಯಿತು. ನಾನು ಕಾರಂಜಿಮಠದ ಉತ್ತರಾಧಿಕಾರಿಯಾಗಿ ಸಾವಳಗೀಶ್ವರ ದೇವರು ಶ್ರೀ ನಾಗನೂರು ರುದ್ರಾಕ್ಷಿಮಠಕ್ಕೆ ನಿಯೋಜಿತ ಶ್ರೀಗಳಾದ ಕಾರಣ ಆ ಬಂಧ ಅಭೇದ್ಯವಾಗಿ ಮುಂದುವರೆಯುವಂತಾಯಿತು. ಇದು ನನ್ನ ಪೂರ್ವಜನ್ಮದ ಸುಕೃತವೇ ಸರಿ.

ಶಿವಯೋಗಮಂದಿರದಲ್ಲಿ ಕಿರಿಯ ಸಾಧಕರಾದ ನಮಗೆಲ್ಲ ಒಂದೇ ಒಂದು ಮಹದಾಸೆ. ನಾವು ಸಾವಳಗೀಶ್ವರ ದೇವರಂತೆ ಆಗಬೇಕೆಂಬುದು. ಕಾರಣ ಅವರೊಬ್ಬ 'ಏಕಪಾಠಿ'ಯಾಗಿದ್ದರು. ಗುರುಗಳು ವರ್ಗಕೋಣೆಯಲ್ಲಿ ಪಾಠವನ್ನು ಹೇಳುವಾಗಲೇ ಗಮನವಿಟ್ಟು ಕೇಳುತ್ತಿದ್ದರು. ಅದಾಗಲೇ ಆ ವಿಷಯ ಅವರಿಗೆ ಮನನವಾಗಿ ಬಿಡುತ್ತಿತ್ತು. ಅವರ ಜೊತೆಗೆ ಅದೇ ಟಂಕ ಶಾಲೆಯಲ್ಲಿ ಪಾಠ ಕೇಳಿಸಿಕೊಂಡಿರುತ್ತಿದ್ದ ಕೆಲವು ಸಾಧಕರು ಎಷ್ಟೆಲ್ಲ ಓದಿಕೊಂಡಿದ್ದರು ಮರುದಿನ ಗುರುಗಳ ಎದುರಿಗೆ ಪಾಠ ಒಪ್ಪಿಸಲು ಪರದಾಡುತ್ತಿದ್ದರು. ಸಾವಳಗೀಶ್ವರ ದೇವರು ಮಾತ್ರ ನಿರರ್ಗಳವಾಗಿ ಪಾಠ ಒಪ್ಪಿಸಿ Very good ಗುರುಗಳಿಂದ ಎನಿಸಿಕೊಳ್ಳುತ್ತಿದ್ದರು. ಇವರಿಗಿರುವ ಗುರುಗಳ ಬಗೆಗಿನ ಶ್ರದ್ಧೆ ಪಾಠ ಮಾಡುತ್ತಿದ್ದಾಗ ತೋರುತ್ತಿದ್ದ ಏಕಾಗ್ರತೆ ವಿಷಯಗಳ ಮೇಲಿನ ಇವರಿಗಿರುವ ಹಿಡಿತ ಅವರ್ಣನೀಯ. ಅದು ನಮಗೂ ಬರಬೇಕು ಎಂದುಕೊಳ್ಳುತ್ತಿದ್ದೆವು.

ನಾನು ಶಿವಯೋಗಮಂದಿರಕ್ಕೆ ಹೋಗಿ ವರ್ಷವಾಗಿರಬೇಕು. ಹಿರಿಯ ಸಾಧಕರಿಗೊಂದು, ಕಿರಿಯ ಸಾಧಕರಿಗೊಂದು ಸ್ಪರ್ಧೆಯನ್ನು ಏರ್ಪಡಿಸಲಾಯಿತು. ಅಕ್ಷರ ಲೋಪವಿಲ್ಲದೆ ಹೇಳುವುದು, ಪಂಚತಂತ್ರ ಕಥೆಗಳನ್ನು ಸಂಸ್ಕೃತದಲ್ಲಿಯೇ ಕಂಠಪಾಠ ಮಾಡಿ ಹಾವಭಾವದೊಂದಿಗೆ ಒಪ್ಪಿಸುವುದು, ಅಮರ ಕೋಶಗಳನ್ನು ರಾಗಬದ್ಧವಾಗಿ ಅನ್ನುವುದಿತ್ತು. ನನಗಿನ್ನೂ ಆ ನೆನಪುಗಳು ಹಚ್ಚಹಸಿರಾಗಿ ಉಳಿದಿವೆ. ಆ ಸ್ಪರ್ಧೆಯಲ್ಲಿ ಗೆದ್ದವರಿಗೆ ಶಿವರಾತ್ರಿಯಂದು ನಡೆಯುವ ಮಂದಿರದ ಜಾತ್ರೆಯ ಕಾರ್ಯಕ್ರಮದಲ್ಲಿ ಪದಕಗಳನ್ನು ನೀಡಲಾಗುತ್ತಿತ್ತು. ನಮಗೆಲ್ಲರಿಗೂ ಆ

ಉತ್ತರಾಧಿಕಾರಿಗಳು, ಶ್ರೀ ಕಾರಂಜಿಮಠ, ಶಿವಬಸವನಗರ, ಬೆಳಗಾವಿ

ಪದಕಗಳನ್ನು ಗೆಲ್ಲೋ ತವಕ. ಸ್ಪರ್ಧೆಯ ತಯಾರಿ ಜೋರಾಗಿ ನಡೆದಿತ್ತು. ಸ್ಪರ್ಧೆ ನಡೆದು ಆಯಿತು. ಫಲಿತಾಂಶ ಬಂದಾಗ ಅಚ್ಚರಿ ಜೊತೆಗೆ ಸಂತಸವೂ ಆಯಿತು. ಹಿರಿಯ ಸಾಧಕರದಲ್ಲಿ ಸಾವಳಗೀಶ್ವರ ದೇವರು ಮೊದಲ ಸ್ಥಾನವನ್ನು ಪಡೆದುಕೊಂಡಿದ್ದರು. ಕಿರಿಯ ಸಾಧಕರಲ್ಲಿ ನಾನು ಪಡೆದುಕೊಂಡಿದ್ದೆ. ಹೀಗೆ ನನ್ನ ಎಲ್ಲ ರೀತಿಯ ಪ್ರಗತಿಯ ಮೇಲೆ ಬಹಳಷ್ಟು ಪ್ರಭಾವ ಬೀರಿದವರು ಇವರು.

ಉನ್ನತ ಅಧ್ಯಯನಕ್ಕಾಗಿ ಅವರು ನನಗಿಂತಲೂ ಮೊದಲೇ ಶಿವಯೋಗಮಂದಿರದಿಂದ ಹೊರಟು ಬೆಳಗಾವಿ ಶ್ರೀಮಠಕ್ಕೆ ಬಂದಿದ್ದರು. ಅಲ್ಲಿಂದ ಕಾಶಿಗೆ ಹೋಗಿ, ಆನಂತರ ಧಾರವಾಡದಲ್ಲಿರುವ ಬೆಳಗಾವಿ ಶ್ರೀಮಠದ ಅಂಗಸಂಸ್ಥೆಯಾದ ಕಲ್ಯಾಣನಗರದ 'ಮಾರ್ಗದರ್ಶಿ'ಯಲ್ಲಿ ಇದ್ದುಕೊಂಡು ಎಂ. ಎ. ಪದವಿ ಓದುತ್ತಿದ್ದರು. ನಾನು ಕೂಡ ಶಿವಯೋಗಮಂದಿರದಿಂದ ಬೆಳಗಾವಿಗೆ ಬಂದು ಶ್ರೀಮಠದಲ್ಲಿದ್ದುಕೊಂಡು ಪದವಿಪೂರ್ವ ಹಾಗು ಪದವಿ ಶಿಕ್ಷಣ ಪಡೆದು ೨೦೧೧ ರಲ್ಲಿ ಧಾರವಾಡದ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಪಡೆಯಲು ಹೋದೆ. ನನ್ನ ಬರುವಿಕೆಯನ್ನು ಮೊದಲೇ ನಿರೀಕ್ಷಿಸಿದ್ದ ಸಾವಳಗೀಶ್ವರ ದೇವರು ನಗುಮೊಗದಿಂದ ಬರಮಾಡಿಕೊಂಡು ನನ್ನ ಓದಿಗೆ ಸಹಕಾರ ನೀಡಿದರು. ನನ್ನ ಎಲ್ಲ ಕಷ್ಟ-ನಷ್ಟ, ನೋವು-ನಲಿವು, ಆಗು-ಹೋಗುಗಳನ್ನು ಅವರಲ್ಲಿ ಹೇಳಿಕೊಳ್ಳುತ್ತಿದ್ದೆ. ಸಂದರ್ಭ ಬಂದಾಗ ಚೂರು ಕೋಪಗೊಂಡಿದ್ದು ಇದೆ. ಅವರು ಮಾತ್ರ ಯಾವುದಕ್ಕೂ ಬೇಸರಿಸಿಕೊಳ್ಳದೆ ಎಲ್ಲದಕ್ಕೂ ಅಸ್ತು ಎನ್ನುತ್ತಿದ್ದರು. ತಪ್ಪಿದ್ದಲ್ಲಿ ತಿದ್ದಿ ಬುದ್ಧಿ ಹೇಳಿದರು. ಸರಿ ಇದ್ದಾಗ ಬೆನ್ನು ತಟ್ಟಿ ಹುರುಪು ತುಂಬಿದರು. ಇರೋದನ್ನ ಹಂಚಿ ಉಂಡರು. ಧಾರವಾಡದಲ್ಲಿಯ ಆ ನೆನಪುಗಳು ಠಾಕೂರ ಪೇಡಾದಷ್ಟೇ ಸಿಹಿಯಾದವುಗಳು.

ಬೆಳಗಾವಿ ರಾಣಿಚೆನ್ನಮ್ಮ ವಿಶ್ವವಿದ್ಯಾಲಯದಲ್ಲಿ ಪಿಹೆಚ್. ಡಿ. ಪದವಿಗೆ ಅರ್ಜಿ ಆಹ್ವಾನಿಸಲಾಗಿತ್ತು. ಅರ್ಜಿ ತುಂಬಿ, ಪ್ರವೇಶ ಪರೀಕ್ಷೆ ತೇರ್ಗಡೆಹೊಂದಿ ಸಂಶೋಧನಾ ವಿದ್ಯಾರ್ಥಿಯಾಗಿ ಬೆಳಗಾವಿ ಶ್ರೀಮಠದಲ್ಲಿದ್ದುಕೊಂಡು ಅಧ್ಯಯನದಲ್ಲಿ ತೊಡಗಿದರು. ನಾನು ಕೂಡ ಸ್ನಾತಕೋತ್ತರ ಪದವಿ ಪೂರೈಸಿಕೊಂಡು ಬೆಳಗಾವಿ ಪೂಜ್ಯರ ಮಾರ್ಗದರ್ಶನದಂತೆ ಕಾರಂಜಿಮಠದ ಅಪ್ಪಗಳವರ ಅಪೇಕ್ಷೆಯಂತೆ ಕಾರಂಜಿಮಠದ ಉತ್ತರಾಧಿಕಾರಿಯಾಗಿ ನೇಮಕಗೊಂಡೆ. ಅಲ್ಲಿ ಮತ್ತೆ ಸಾವಳಗೀಶ್ವರ ದೇವರ ಜೊತೆಗಿನ ಒಡನಾಟ ಮುಂದುವರೆಯಿತು. ಮುಂದೆ ಅವರು ಸಂಶೋಧನ ಮಹಾಪ್ರಬಂಧ ಮಂಡಿಸಿ ಪಿಹೆಚ್. ಡಿ. ಪದವಿ ಪಡೆದುಕೊಂಡದ್ದು ನಂತರ ಗಡಿನಾಡ ಗುಡಿ ಶ್ರೀ ನಾಗನೂರು ರುದ್ರಾಕ್ಷಿಮಠಕ್ಕೆ ಉತ್ತರಾಧಿಕಾರಿಯಾಗಿ ನೇಮಕಗೊಂಡದ್ದು ಸುವರ್ಣ ಘಳಿಗೆ.

ನಾನು ಅತ್ಯಂತ ಸಂತಸಪಡುವ ಸಂಗತಿಗಳೆಂದರೆ ಗದಗ ತೋಂಟದಾರ್ಯಮಠದ ಜಗದ್ಗುರು ಲಿಂ. ಡಾ. ಸಿದ್ಧಲಿಂಗ ಮಹಾಸ್ವಾಮಿಗಳು ಸ್ವಾಮಿತ್ವಕ್ಕೆ ಇವರೇ 'ರೋಲ್ ಮಾಡೆಲ್' ಎಂದು ಸ್ವಾಮಿಗಳಾಗಬಯಸುವವರಿಗೆಲ್ಲ ಯಾರನ್ನು ತೋರಿಸುತ್ತಿದ್ದರೋ ಅದೇ ಪರಮಪೂಜ್ಯ ಡಾ. ಸಿದ್ಧರಾಮ ಅಪ್ಪಗಳ (ಇಂದು ಗದಗ ತೋಂಟದಾರ್ಯಮಠದ ಜಗದ್ಗುರು ಡಾ. ಸಿದ್ಧರಾಮ ಮಹಾಸ್ವಾಮಿಗಳು) ಕಾರುಣ್ಯದಲ್ಲಿ ಇದ್ದು ನನ್ನ ಬದುಕನ್ನು ರೂಪಿಸಿಕೊಳ್ಳಲು ಅವಕಾಶ ಸಿಕ್ಕಿದ್ದು ಒಂದೆಡೆಯಾದರೆ, ಹಿರಿಯಣ್ಣನಂತೆ ಹಿಂದೆ, ಇಂದು, ಮುಂದೆಂದು ಕೈ ಹಿಡಿದು ಮುನ್ನಡೆಸುವ ಡಾ. ಸಾವಳಗೀಶ್ವರ ದೇವರು ನನ್ನ ಬಾಳಬೆಳಗು ಡಾ. ಸಿದ್ಧರಾಮ ಅಪ್ಪಗಳ ಸಮರ್ಥ ವಾರಸುದಾರರಾಗಿ ನಾಗನೂರು ಬೆಳಗಾವಿ ಶ್ರೀಮಠಕ್ಕೆ ಆಗಮಿಸಿರೋದು ಇನ್ನೊಂದು ಕಡೆ ಸಂತಸ.

ಇದೇ ೨೦೧೯ ನವೆಂಬರ್ ೯, ೧೦, ೧೧ ರಂದು ಅವರ ಚರಪಟ್ಟಾಧಿಕಾರ ಸಮಸ್ತ ನಾಡಿನ ಪರಮಪೂಜ್ಯರ ಸಾನಿಧ್ಯದಲ್ಲಿ, ಗಣ್ಯವ್ಯಕ್ತಿಗಳ ಸಾರಥ್ಯದಲ್ಲಿ ಭಕ್ತಬಾಂಧವರ ಸಮ್ಮತಿಯಂತೆ ನಡೆಯುತ್ತಿರೋದು ಇನ್ನಿಲ್ಲದಷ್ಟು ಸಂತಸ ತಂದಿದೆ. ಜಗದ್ಗುರು ಡಾ. ಸಿದ್ಧರಾಮ ಅಪ್ಪಗಳ ಶ್ರೀರಕ್ಷೆ, ಡಾ. ಸಾವಳಗೀಶ್ವರ ದೇವರ ನಿಷ್ಕಲ್ಮಶ ಸಹೋದರತ್ವ ಸದಾ ನನ್ನ ಮೇಲಿರಲಿ ಎಂದು ಕೇಳಿಕೊಳ್ಳುತ್ತಾ ಲೇಖನಿಯನ್ನು ಕೆಳಗಿಡುವ ಮುನ್ನ ಕೊನೆಗೊಂದು ಮಾತು.

ಲೌಕಿಕ ಉದಾಹರಣೆ ಕೊಟ್ಟು ಹೇಳುವುದಾದರೆ ನನಗೆ ನಾಗನೂರು ರುದ್ರಾಕ್ಷಿಮಠ ತವರು ಮನೆ, ಕಾರಂಜಿಮಠ ಗಂಡನ ಮನೆ. ನಾನು ನಾಗನೂರು ಮಠದ ಮಗಳಾಗಿ ಬೆಳೆದು ಕಾರಂಜಿಮಠಕ್ಕೆ ದಾರೆಯೆರೆದುಕೊಡಲ್ಪಟ್ಟವನು. ಗಂಡನ ಮನೆಯಲ್ಲಿ ಎಷ್ಟೆಲ್ಲ ಸುಖ-ಸಂತೋಷವಿದ್ದರೂ ಹೆಣ್ಣು ಮಗಳಿಗೆ ತವರು ಮನೆಯಂತಾಗಲಾರದು. ತವರು ಮನೆಯ ನೆನಪುಗಳು ಮಾಸದೆ ಹಸಿರಾಗಿ ಉಳಿಯುವಂತವುಗಳು. ಆ ನೆನಪುಗಳನ್ನು ನಾನು ನೆನೆಯುತ್ತ ಜಾನಪದ ಗರತಿ ಹೇಳುವಂತೆ 'ಹೊಳೆದಂಡೆಲಿರುವ ಕರಕೀಯ ಕುಡಿಯಂತೆ ಹಬ್ಬಲಿ ಅವರ ರಸಬಳ್ಳಿ' ಎಂದು ಮನಪೂರ್ವಕವಾಗಿ ಬಸವದಿ ಪ್ರಮಥರಲ್ಲಿ, ಗುರುಕುಮಾರೇಶನಲ್ಲಿ, ಶಿವಬಸವೇಶನಲ್ಲಿ ಪ್ರಾರ್ಥಿಸುತ್ತೇನೆ.

■■

# ಸಾತ್ವಿಕ ಮನದ ಡಾ. ಸಾವಳಗೀಶ್ವರ ದೇವರು

● **ಪೂಜ್ಯಶ್ರೀ ವಿವೇಕಾನಂದ ದೇವರು**

**"ಅಗ್ನಿಯ ಸಂಗದಿಂದ ಕಾನನ ಕೆಟ್ಟಂತೆ**
**ಜ್ಯೋತಿಯ ಸಂಗದಿಂದಕತ್ತಲೆಕೆಟ್ಟಂತೆ**
**ಪರುಷದ ಸಂಗದಿಂದಕಬ್ಬಿನಕೆಟ್ಟಂತೆ**
**ಲಿಂಗಾನುಭಾವಿಗಳ ಸಂಗದಿಂದ ಎನ್ನ ಹುಟ್ಟು**
**ಹೊಂದುಗಳು ನಷ್ಟವಾಗಿ ಕೆಟ್ಟು ಹೋದವು**
**ನೋಡಾ ಅಖಂಡೇಶ್ವರಾ"**

ಷಣ್ಮುಖ ಶಿವಯೋಗಿಗಳ ಆಶಯದಂತೆ ೨೦೧೩ ರಲ್ಲಿ ಬಾಗಲಕೋಟದ ಮಹಾನಗರದಲ್ಲಿ ಜರುಗಿದ ಪೂಜ್ಯಶ್ರೀ ಲಿಂ. ಹಾನಗಲ್‌ಕುಮಾರ ಶಿವಯೋಗಿಗಳ ಜಯಂತಿ ಸಮಿತಿಯ ಕಾರ್ಯಕ್ರಮದಲ್ಲಿ ಪರಿಚಯವಾದವರು ಪೂಜ್ಯಶ್ರೀ ಡಾ. ಸಾವಳಗೀಶ್ವರ ದೇವರು. ನಾನು ಆಗ ಬಾಗಲಕೋಟೆಯ ಚರಂತಿಮಠದಲ್ಲಿ ಸಾಧಕನಾಗಿ ಪದವಿ ಶಿಕ್ಷಣವನ್ನು ಪಡೆಯುತ್ತಿರುವ ಸಂದರ್ಭ. ಸರಳ ವ್ಯಕ್ತಿತ್ವದ ಸಹಜ ಭಾವದ ಪೂಜ್ಯರು ನನ್ನನ್ನು ಪ್ರೀತಿಯಿಂದ ನನ್ನ ಯೋಗಕ್ಷೇಮವನ್ನು ವಿಚಾರಿಸಿದ್ದ ಕಂಡು ಮೂಖವಿಸ್ಮಿತನಾದೆ. ಇಲ್ಲಿ ಪರಿಚಯವಾದ ಸ್ನೇಹ ಬಹಳ ಆತ್ಮೀಯವಾಗಿ ತಮ್ಮ ಸಹೋದರನಂತೆ ತಿಳಿದು ನನ್ನ ಪ್ರತಿ ಹೆಜ್ಜೆಯಲ್ಲೂ ಮಾರ್ಗದರ್ಶನ ಮಾಡಿದವರು. ಮುಂದೆ ಹೆಚ್ಚಿನ ವ್ಯಾಸಂಗಕ್ಕಾಗಿ ವಿದ್ಯಾನಗರಿ ಧಾರವಾಡ ವಿಶ್ವವಿದ್ಯಾಲಯಕ್ಕೆ ತತ್ವಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪ್ರವೇಶ ಬಯಸಿ ಬಂದಾಗ, ಪೂಜ್ಯರು ಸಹ ಅದೇ ವಿಭಾಗದಲ್ಲಿ ಸುವರ್ಣ ಪದಕವನ್ನು ಪಡೆದಿದ್ದಾರೆ ಎಂದು ತಿಳಿಯಿತು. ನಾನು ಸಹ ಅವರ ಹಾಗೆ ಮುಂದೆ ಓದಬೇಕು ಎಂದು ಸಂಕಲ್ಪಿಸಿದೆ. ತತ್ವಶಾಸ್ತ್ರದ ವಿಶಾಲವಾದ ವಿಷಯವನ್ನು ಸರಳ ರೂಪದಲ್ಲಿ ಸಂಗ್ರಹಿಸಿ ನನಗೆ ನೀಡಿ ನನ್ನಅಧ್ಯಯನಕ್ಕೆ ಸ್ಫೂರ್ತಿ ತುಂಬಿದ ಸಂದರ್ಭವು ಇಂದಿಗೂ ನನ್ನ ಸ್ಮೃತಿ ಪಟಲದಲ್ಲಿ ಅಚ್ಚಳಿಯದೆ ಉಳಿದಿದೆ. ಅದೇ ವಿಭಾಗದಲ್ಲಿ ಸುವರ್ಣ ಪದಕವನ್ನು ಪಡೆದ ಪೂಜ್ಯರು ನನಗೂ ಸಹ ಸುವರ್ಣ ಪದಕ ಪಡೆಯಲು ಪ್ರೇರಣೆಯಾದರು.

ಬಾಗಲಕೋಟೆಯಿಂದ ಸುವರ್ಣ ಪದಕವನ್ನು ಪಡೆಯುವ ವರೆಗೂ ಮಾರ್ಗದರ್ಶನ ನೀಡಿದ ಪೂಜ್ಯರು, ಇದೀಗ ಸಂಶೋಧನಾ ವಿದ್ಯಾರ್ಥಿ ಜೀವನದಲ್ಲೂ ಸಹ ಉತ್ಸಾಹವನ್ನು ತುಂಬುವ ಸಂದರ್ಭವನ್ನು ನೆನೆಸಿಕೊಂಡರೆ ನನ್ನ ಸುಕೃತವೇ ಸರಿ ಎನಿಸುತ್ತದೆ. ಪೂಜ್ಯರ ಸಂಶೋಧನಾ ವಿಷಯ "ಬಸವಣ್ಣ ಮತ್ತು ಮಾರ್ಟಿನ್ ಲೂಥರ್ ತೌಲನಿಕ ಅಧ್ಯಯನ'ವು ಅನುಭಾವ ಪೂರ್ಣವಾದ ಗ್ರಂಥವಾಗುವುದರಲ್ಲಿ ಎರಡು ಮಾತಿಲ್ಲ. ಪೂಜ್ಯರು ಮಾಡಿರುವ ೧೨ನೇ ಶತಮಾನದ ಬಸವಣ್ಣನವರ ಕಾಯಕ ದಾಸೋಹತತ್ವವು ೧೪ನೇ ಶತಮಾನದ ಜರ್ಮನ್ ದೇಶದ ಕ್ರೈಸ್ತ ಗುರು ಮಾರ್ಟಿನ್ ಲೂಥರ್‌ರವರು ಹೇಳಿರುವ ವಿಚಾರಗಳು ಸಮನ್ವಯದ ಪ್ರತೀಕವಾಗಿವೆ.

ಸಮಾಜಯೋಗಿ ಲಿಂ ಹಾನಗಲ್ಲ ಕುಮಾರೇಶ್ವರರ ೧೫೦ನೇ ಜಯಂತಿಯನ್ನು ನಾಡಿನಾದ್ಯಂತ ಆಚರಿಸಿ ಅವರ ಬದುಕನ್ನು ಭಕ್ತ ಬಂದುಗಳಿಗೆ ಮುಟ್ಟಿಸಬೇಕೆಂಬ ಸಂಕಲ್ಪ ಕುಮಾರೇಶ್ವರ ಜಯಂತಿ ಸಮಿತಿಯದ್ದಾಗಿತ್ತು. ಕನ್ನಡ ನಾಡಿನ ಎಲ್ಲ ಜಿಲ್ಲೆಗಳಲ್ಲಿ ನಗರ ಪಟ್ಟಣಗಳಲ್ಲಿ ಹಳ್ಳಿ–ಗಲ್ಲಿಗಳಲ್ಲಿ ದತ್ತಿ ಉಪನ್ಯಾಸವನ್ನು ವರ್ಷಪೂರ್ತಿ ಹಮ್ಮಿಕೊಳ್ಳಲಾಗಿತ್ತು, ಅಂತಹ ಸುಕೃತದ ಸೇವಾಯೋಗವು ವಿಜಯಪುರ ಮತ್ತು ಬಾಗಲಕೋಟ ಜಿಲ್ಲೆಗಳಲ್ಲಿ ಸಂಚರಿಸಿದ್ದು ಒಂದು ಸುವರ್ಣ ಘಳಿಗೆ. ಇವೆರಡು ಜಿಲ್ಲೆಗಳ ನೇತೃತ್ವವನ್ನು ಪೂಜ್ಯಡಾ. ಸಾವಳಗೀಶ್ವರ ದೇವರು ವಹಿಸಿಕೊಂಡ ಪರಿಣಾಮವಾಗಿ ಆ ಸಂದರ್ಭದಲ್ಲಿ ನನಗೆ ಸೇವಾ ಯೋಗವನ್ನು ಕರುಣಿಸಿ ಪ್ರವಚನ ಮಾಡುವಕೈಂಕರ್ಯಕ್ಕೆ ಅಣಿಗೊಳಿಸಿದ್ದು ಪೂಜ್ಯರು. ನಾಡಿನ ಹತ್ತು ಹಲವು ಮಠಮಾನ್ಯಗಳ ಕಾರ್ಯಕ್ರಮಗಳಲ್ಲಿ ಅವಕಾಶ ಕಲ್ಪಿಸಿದ್ದು ಸಮಾಜದ ಮುಖ್ಯ ವಾಹಿನಿಗೆ ಪರಿಚಯಿಸಿದ್ದು ಪೂಜ್ಯರೆಎಂದು ಹೇಳಿದರೆ ಅತಿಶಯೋಕ್ತಿ ಎನಿಸಲಾರದು. ಮುಂದೆ೨೦೧೮ ರಲ್ಲಿ ಸುಕ್ಷೇತ್ರ ತುಬಚಿಯ ಶಿವಲಿಂಗೇಶ್ವರರ ಜಾತ್ರೆಯ ನಿಮಿತ್ಯವಾಗಿ ೧೧ ದಿನ ಶಿವಶರಣೆ ಗುಡ್ಡಾಪುರ ದಾನಮ್ಮದೇವಿ ಜೀವನದರ್ಶನ ಪ್ರವಚನವನ್ನು ಹೇಳುವ

**ಕಲ್ಯಾಣೇಶ್ವರ ಹಿರೇಮಠ, ಸಾ॥ ಗುಣದಾಳ**

ಭಾಗ್ಯ ನನ್ನದಾಯಿತು. ಆ ಕಾರ್ಯಕ್ರಮದ ಮಂಗಲ ಸಮಾರಂಭದಲ್ಲಿ ವಾರಣಾಸಿಯಿಂದ ತಮಗಾಗಿ ತಂದಿದ್ದ ಗೌರಿ-ಶಂಕರ ರುದ್ರಾಕ್ಷಿಗೆ ಸುವರ್ಣ ಕವಚ ಲೇಪಿಸಿ ನನಗೆ ದಯಪಾಲಿಸಿದ ಮೇಲೆ ನನ್ನ ಬದುಕಿನ ಸುವರ್ಣದ ಘಳಿಗೆ ಅಲ್ಲಿಂದಲೆ ಆರಂಭವಾಯಿತು.

ಇಂತಹ ಎಲ್ಲ ಸದ್ಗುಣಗಳ ಸಾತ್ವಿಕ ಮೂರ್ತಿಯಾದ ಪೂಜ್ಯ ಶ್ರೀ ಡಾ. ಸಾವಳಗೀಶ್ವರ ದೇವರು ಕನ್ನಡ ನಾಡಿನ ಪ್ರತಿಷ್ಠಿತ ಮಠಗಳಲ್ಲಿ ಬಸವ ಪರಂಪರೆಯನ್ನು ಬಿತ್ತರಿಸುತ್ತಿರುವ ಕನ್ನಡತನವನ್ನು ಎತ್ತರಿಸಿದ ಗಡಿನಾಡ ಗುಡಿಯ ಕೀರ್ತಿ ಕಳಶವಾಗಿರುವ ನಾಗನೂರು ಶ್ರೀ ರುದ್ರಾಕ್ಷಿಮಠಕ್ಕೆ ಉತ್ತರಾಧಿಕಾರಿಗಳಾದಾಗ ನಾನಂತೂ ಆನಂದದ ಹೊಳೆಯಲ್ಲಿಯೆ ತೇಲಾಡಿದ್ದೆ, ಇದೀಗ ಅಂತಹ ಮಹಾಮಠದ ೧೦ನೇ ಪೀಠಾಧಿಪತಿಗಳಾಗಿ ಸಮಾಜ ಸೇವಾದೀಕ್ಷೆಯನ್ನು ಸ್ವೀಕರಿಸುತ್ತಿರುವ ಪೂಜ್ಯರಿಗೆ ಬಸವಾದಿ ಶಿವ ಶರಣರ ಶ್ರೀರಕ್ಷೆ ಅವರನ್ನು ರಕ್ಷಿಸಲೆಂದು ಪ್ರಾರ್ಥಿಸುತ್ತೇನೆ.

**ಸಾವಳಗಿಯ ಈಶ ರುದ್ರಾಕ್ಷಿಯ ಮಠಾಧೀಶ**
**ಭಕ್ತಜನ ಸಂಪ್ರೀತಕರುಣ ಹೃದಯಕಂಪಿತ**
**ಕಾಯಕದ ನವನೀತ**
**ಸರಳತೆಯ ಸಂಕೇತಗುರುಕರಕಮಲ ಸಂಜಾತ**
**ತ್ಯಾಗದ ತವನಿಧಿ ಸಾಮಾಜಿಕ ಮಹಾನಿಧಿ**
**ಸ್ನೇಹದಲಿ ಚಿಂತಾಮಣಿ ಮಮತೆಯಲಿ**
**ಮಾತೃಮಣಿ**
**ಮಾತಿನಲಿ ಚೂಡಾಮಣಿ ನಡತೆಯಲಿ ಸದ್ಗುಣಿ**
**ತತ್ವಶಾಸ್ತ್ರದ ಚಿನ್ನ ಆಧ್ಯಾತ್ಮದ ರನ್ನ**
**ವೈಚಾರಿಕತೆಯ ವಿಜ್ಞಾನಿ ಆಚಾರದ ಸುಜ್ಞಾನಿ**
**ಶರಣ ಭೂಮಿಯ ಸ್ಫುರಣ ಬಸವ ಭಕ್ತಿಯ ಸ್ಮರಣ**
**ಗುರುಕುಮಾರೇಶನ ವಚನ ಪಾಲನಾ .**
**ಶುಭಕೋರುವೆ ಇಂದು ಶುಭವಾಗಲಿ ಎಂದು..**
**ನಮಗೆ ಇರಲಿ ಎಂದೆಂದು ನಿಮ್ಮ**
**ಮಾರ್ಗದರ್ಶನ..**

■■

**ಬಸವಣ್ಣನವರು**

ಬಸವಣ್ಣನವರು ಭಕ್ತಿಭಂಡಾರಿಗಳು. ಆದರೂ ಅವರಿಗೆ ತಮ್ಮ ಭಕ್ತಿಯ ಬಗ್ಗೆ ತೃಪ್ತಿ ಎಂಬುದಿಲ್ಲ. 'ಭಕ್ತಿ ಇಲ್ಲದ ಬಡವ ನಾನಯ್ಯ, ಕಕ್ಕಯ್ಯ, ಚನ್ನಯ್ಯ, ದಾಸಯ್ಯಗಳ ಮನೆ ಮುಂದೆ ನಿಂತು ಭಕ್ತಿಯ ಭಿಕ್ಷೆಯನ್ನು ಬೇಡಿದೆ, ಅವರೆಲ್ಲರೂ ನನ್ನ ಪಾತ್ರೆಗೆ ಭಕ್ತಿಯನ್ನು ನೀಡಿ ತುಂಬಿದರು' ಎನ್ನುತ್ತಾರೆ. ತಮ್ಮೆಲ್ಲ ಅಹಂಕಾರವನ್ನು ಕಳೆದುಕೊಂಡು ಶ್ರದ್ಧೆ ಮತ್ತು ನಿಷ್ಠೆಯಿಂದ ಭಕ್ತಿಯನ್ನಾಚರಿಸಬೇಕೆಂಬ ಭಾವದಿಂದ ಅವರು ಶಿವಭಕ್ತರ, ಶರಣರ ಮನೆಯ ಮುಂದೆ ನಿಂತು ಬೇಡಿಕೊಳ್ಳುವ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಅಹಂಕಾರ-ಮಮಕಾರಗಳಿಂದ ಮಾಡುವ ಭಕ್ತಿ ಅರ್ಥಹೀನವಾದುದು. 'ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು, ದೃಢವಿಲ್ಲದ ಭಕ್ತಿ ಅಡಿ ಒಡೆದ ಕುಂಭದಲ್ಲಿ ಸುಜಲವ ತುಂಬಿದಂತೆ' ಎಂಬ ಶರಣವಾಣಿ ಇದನ್ನು ದೃಢಪಡಿಸುತ್ತದೆ. ಭಗವಂತನೂ ಅಷ್ಟೇ, ಭಕ್ತನನ್ನು ಅಷ್ಟು ಸುಲಭವಾಗಿ ಸ್ವೀಕರಿಸಲಾರನು. 'ನಚ್ಚಿದೆನೆಂದರೆ, ಮಚ್ಚಿದನೆಂದರೆ ಸಲೆಮಾರುವೋದೆನೆಂದರೆ ತನುವನಲ್ಲಾಡಿಸಿ ನೋಡುವೆ ನೀನು, ಮನವನಲ್ಲಾಡಿಸಿ ನೋಡುವೆ ನೀನು, ಧನವನಲ್ಲಾಡಿಸಿ ನೋಡುವೆ ನೀನು' ಎನ್ನುವ ಬಸವಣ್ಣನವರು ಭಗವಂತನ ಪರೀಕ್ಷೆಯ ವಿಧಾನವನ್ನು ತಿಳಿಸುತ್ತಾರೆ. ಭಕ್ತನು ಯಾವುದಕ್ಕೂ ಬೆದರದೆ ಬೆಚ್ಚದೆ ಇದ್ದರೆ, ಭಗವಂತನನ್ನೇ ನಚ್ಚಿ ಮಚ್ಚಿ, ಅವನಿಗೇ ತಮ್ಮನ್ನು ಸಮರ್ಪಿಸಿಕೊಂಡರೆ ಭಕ್ತಿಕಂಪಿತನಾದ ಭಗವಂತನೂ ಭಕ್ತಾಧೀನನಾಗುತ್ತಾನೆ.

# ನೂತನ ಶ್ರೀಗಳಿಗೆ ಶರಣು ಶರಣಾರ್ಥಿ !

● ಈಶ್ವರ ಕಾಪಸೆ

ಅಕ್ಟೋಬರ ಎರಡು ಭಾರತೀಯರ ಭಾಗ್ಯವಿಧಾತರಾದ ಮಹಾತ್ಮಾಗಾಂಧಿ ಮತ್ತು ಲಾಲಬಹಾದ್ದೂರರ ಜನ್ಮದಿನ ! ಒಬ್ಬರು ಮಹಾತ್ಮರಾದರೆ ಮತ್ತೊಬ್ಬರು ಲಾಲಬಹಾದ್ದೂರರು ಸಾದಾಸೀದಾ ನಡೆನುಡಿಗೆ ಜೀವಂತ ಸಾಕ್ಷಿಯಾದರು. ಒಬ್ಬರು ಹುದ್ದೆ ಹಣ ಪಿಶಾಚಿಯ ಬಲಿಬೀಳದೆ ಸ್ವಾತಂತ್ರ್ಯ ಶಿಲ್ಪಿಯಾಗಿ ಸತ್ಯ, ಅಹಿಂಸೆ, ಅಸ್ತೇಯ, ಅಪರಿಗ್ರಹ ಪಾಲಕರಾಗಿ 'ಲೋಕವೇ ನನ್ನ ಮನೆ, ಮಾನವ ಕುಲವೇ ನನ್ನ ಕುಟುಂಬ'ವೆಂದು ಅವರೆಲ್ಲರ ಬದುಕಿಗೆ ಸಂಜೀವಿನಿ ಆದ ಧೀಮಂತರು. ಪ್ರಸಂಗಾನುಸಾರ ಹುದ್ದೆ ಹಣ ತ್ಯಜಿಸಿ, ಯಮ, ನಿಯಮಗಳಿಗೆ ಬದ್ಧರಾಗಿ ಬದುಕಿದ ಸಂಸಾರಯೋಗಿಗಳಾದರು. ಅಂಥವರ ಜನ್ಮದಿನದಂದು ಸಾಮಾನ್ಯ ಕುಟುಂಬದಲ್ಲಿ ಜನಿಸಿ, ನಮ್ಮೆಲ್ಲರ ಪ್ರೀತಿಯ, ಪೂಜ್ಯರು ತಮ್ಮ ತನುಮನವೆಲ್ಲ ಸ್ವಚ್ಛ ಸದೃಢರಾದ, ಪ್ರಾಮಾಣಿಕ ಪ್ರಯತ್ನಶೀಲರಾಗಿ ಬದುಕುತ್ತಿರುವ 'ಇತಿಮಿತಿಯ ಬದುಕಿನಲಿ ಋತುಮಾನಕ್ಕನುಸರಿಸಿ । ಮತಿವಂತ ಯತಿಯು ತಾವಾಗಿ । ನಡೆ ನುಡಿಗೆ । ಉತ್ತುಂಗ ಹೆಸರು ಪಡೆದಾರ' ॥ ಎಂಬಂತೆ ಶ್ರೇಷ್ಠ ಯತಿಗಳಾದ ಪೂಜ್ಯ 'ಸಾವಳಗೀಶ'ರು ನಮಗೆಲ್ಲ ಆದರ್ಶರು.

ಜಮಖಂಡಿ ತಾಲೂಕಿನ ಚಿಕ್ಕಗ್ರಾಮ 'ತುಬಚಿ'ಯ ಚೊಕ್ಕ ಕುಟುಂಬದ ಬಸಯ್ಯ, ವಿಜಯಲಕ್ಷ್ಮಿಯವರ ವರಪುತ್ರನಾಗಿ ಅಕ್ಟೋಬರ ಎರಡು ೧೯೮೭ ರಲ್ಲಿ ಜನಿಸಿದರು. 'ಸ್ವಪ್ರಯತ್ನದಿಂದ ಸರ್ವಾಂಗೀಣ ಪ್ರಗತಿಯನ್ನು ಸಾಧಿಸಬಲ್ಲ ಒಬ್ಬ ವ್ಯಕ್ತಿ ಈ ವಿಶ್ವದಲ್ಲಿ ಖಂಡಿತವಾಗಿಯೂ ಇದ್ದಾನೆ. ಅವನು ಯಾರೆಂದರೆ ನೀನೆ !' ಎಂಬ 'ಹಕ್ಸಲಿ'ಯವರ ನುಡಿಗೆ ಜೀವಂತ ಸಾಕ್ಷಿಯಾದರು ಕುಮಾರ ಸಾವಳಗೀಶರು. ಅವರು ಪ್ರಾಥಮಿಕ, ಮಾಧ್ಯಮಿಕ, ಪದವಿ, ಸ್ನಾತಕೋತ್ತರ ಶಿಕ್ಷಣ ಪಡೆಯುವಾಗ ಪಾಲಿಸಿದ ಯೋಗಾಭ್ಯಾಸ ಇಂದಿನ ಯುವ ಜನಾಂಗಕ್ಕೆ ಮಾದರಿಯಾಗಿದೆ. ಅವರು 'ಉಪದೇಶಿಯಾಗದೆ ಉದಾಹರಣೆ'ಯಾದರು. ವಿದ್ಯಾಬುದ್ಧಿಗಾಗಿ ಇದ್ದ ಆಲಸ್ಯವನು । ಒದ್ದು ಹೊರಹಾಕಿ ಅಭ್ಯಾಸ । ಬಲದಿಂದ ಗೆದ್ದಾರ ಚಿನ್ನದಾಪದಕ ॥ ಎಂಬ ನುಡಿಗೆ ನಡೆಯಾದರು. ಶಿವಯೋಗಮಂದಿರ, ಕಾಶಿ, ಬೆಳಗಾವಿ ರುದ್ರಾಕ್ಷಿಮಠ, ಧಾರವಾಡ ಅವರ ಆರೋಗ್ಯಕರ ಶಿಕ್ಷಣಕ್ಕೆ, ವ್ಯಕ್ತಿತ್ವ ವಿಕಾಸಕ್ಕೆ ಸುಕ್ಷೇತ್ರಗಳಾದವು.

ಬೆಳಗಾವಿಯ ನಾಗನೂರು ರುದ್ರಾಕ್ಷಿಮಠದ ಪೂಜ್ಯಶ್ರೀ ಡಾ. ಸಿದ್ಧರಾಮ ಸ್ವಾಮಿಗಳ ಸನ್ನಿಧಿ, ಕೃಪಾಕಟಾಕ್ಷದಿಂದ ಪ್ರಾಮಾಣಿಕ ಸ್ವಪ್ರಯತ್ನದಿಂದ ತತ್ತ್ವಶಾಸ್ತ್ರ ಸ್ನಾತಕೋತ್ತರ ಪದವಿಯಲ್ಲಿ 'ಚಿನ್ನದ ಪದಕ' ಪಡೆದರು. ಅಷ್ಟೇ ಅಲ್ಲದೆ ವಿಶ್ವವಿದ್ಯಾಲಯಕ್ಕೆ 'ಬಸವಣ್ಣ ಮತ್ತು ಮಾರ್ಟಿನ್ ಲೂಥರ್ ಚಿಂತನೆಗಳ ತೌಲನಿಕ ಅಧ್ಯಯನ' ಎಂಬ ಸುದೀರ್ಘ, ಸಂಶೋಧನಾತ್ಮಕ ಪ್ರಬಂಧವನ್ನು ಮಂಡಿಸಿ ಅನೇಕ ವಿಧ ಪದವಿ ಪ್ರಶಸ್ತಿ ಪಡೆದ ಶ್ರೀಗಳು 'ಬಾಗಿದ ತಲೆ, ಮುಗಿದ ಕೈಯಾಗಿರುವ' ವಿದ್ಯಾ ವಿನಯ ಸಂಪನ್ನರು ! ಅಂಥವರನ್ನು ಪೋಷಿಸಿ, ಪ್ರೋತ್ಸಾಹಿಸುತ್ತಿರುವ ಪೂಜ್ಯಶ್ರೀ ಡಾ. ಸಿದ್ಧರಾಮ ಶ್ರೀಗಳ ಕೃಪಾದೃಷ್ಟಿ ಪವಾಡ ಸದೃಶವಾಗಿದೆ. ಅವರ ಸನ್ನಿಧಾನದಲ್ಲಿ ಬೆಳೆದು ನಾಡಿನ ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಕ್ಷೇತ್ರದ ಬೆಳ್ಳಿ ಚಿಕ್ಕ್ಯಾಗ ಬೆಳಗುತ್ತ ನಾಡಿನ ಸನ್ಮಂಗಳವನ್ನುಂಟುಮಾಡುವ ಮಹಾ ಬೆಳಕಾಗುತ್ತಿರುವುದು ನಮ್ಮ ಭಾಗ್ಯ!

ಪೂಜ್ಯ ಶ್ರೀ ಸಾವಳಗೀಶ್ವರ ದೇವರು ತಮ್ಮ ಪ್ರಸಾದ ಕಾಯವನ್ನು ಹಸನಾಗಿ ಇಟಗೊಂಡು, 'ಶರೀರಮಾದ್ಯಮ್ ಖಲು ಧರ್ಮ ಸಾಧನಮ್' ! ಎಂಬ ಅರಿವು ಆಚಾರದಲ್ಲಿ ತೊಡಗಿದ ಶ್ರೇಷ್ಠ ಸಾಧಕರು. ಶರಣರ ವಚನದಂತೆ ದೇಹ ದೇವಾಲಯವಾಗಿರಿಸಿಕೊಂಡು, ವೈರಾಗ್ಯನಿಧಿ ಅಕ್ಕಮಹಾದೇವಿಯು, 'ಅಷ್ಟದಳ ಕಮಲದಾ ಬಟ್ಟ ಬಯಲೊಳಗೊಂದು । ಮುಟ್ಟಬಾರದೊಂದು ಘನವಿಹುದು। ಅದರಲ್ಲಿ । ದೃಷ್ಟಿ ಇಟ್ಟಾತನೆ ನಿಜಮುಕ್ತ' ॥ ತ್ರಿವಿಧಿಯ ಹತ್ತನೆಯ ನುಡಿಯಂತೆ ಅವರ ದೃಷ್ಟಿ ಅಂತರ್‌ದೃಷ್ಟಿಯಾಗುತ್ತಿರುವುದು ಶುಭ ಸಂಕೇತವಾಗಿದೆ. ಇಷ್ಟಲಿಂಗದಿಂದ, ಪ್ರಾಣಲಿಂಗ ಪ್ರವೇಶಿಯಾಗಿ ಭಾವ ಲಿಂಗಿಯಾಗುವ ಶ್ರೇಷ್ಠ ಸನ್ಮಾರ್ಗಿಗಳವರು, ಶರಣಧರ್ಮ ಅನುಷ್ಠಾನವದು.

# ೩೧೧೫, ಪ್ರೆಸ್ಟೀಜ ಬಾಗಮಾನೆ, ಟೆಂಪಲ್ ಬೆಲ್ಸ ೩೬೪೪೩ನೇ ಮುಖ್ಯರಸ್ತೆ ಜವರೇಗೌಡ ನಗರ ಜವಗನ ದೊಡ್ಡಿ ಆರ್. ಆರ್. ನಗರ, ಬೆಂಗಳೂರು-೫೬೦೦೯೮

ನಾಗನೂರು ರುದ್ರಾಕ್ಷಿಮಠದ ಇತಿಹಾಸದ ಅರಿವು ಆಚಾರ ಬಲ್ಲ ಪ್ರಾಮಾಣಿಕ ಪ್ರಯತ್ನಶೀಲರಾದ ಪೂಜ್ಯಶ್ರೀ ಸಾವಳಗೀಶ ದೇವರು ಹೊಸ ಇತಿಹಾಸ ಬರೆಯಬಲ್ಲರು. ಇತ್ತಿತ್ತಲಾಗಿ ಬೀಸುತ್ತಿರುವ ಲಿಂಗಾಯತ ಧರ್ಮಾನುಷ್ಠಾನ ಆರೋಗ್ಯಕರವಾದುದಾಗಿದೆ. ಅದಲ್ಲದೆ ಸದೃಢ ಶರೀರ ಸ್ವಸ್ಥ ಮನಸ್ಸಿಗಾಗಿ ವಿಶ್ವದಾದ್ಯಂತ ಹಬ್ಬುತ್ತಿರುವ 'ಯೋಗದಾ ಹವೆಯದು ರೋಗ ರುಜಿನಗಳ ಕಳೆಯಲಿಕೆ। ವ್ಯಕ್ತಿ ಸಮಾಜದ ಸ್ವಸ್ಥ ಜೀವನಕೆ । ಶಕ್ತಿ ಸಾಮರ್ಥ್ಯ ನೀಡಲಿಕೆ ॥ ಯೋಗವೆಂಬುದು ಬರಿ ಕಸರತು ಅಲ್ಲ। ತನುಮನ ಮೋಹಕೆ ಕಡಿವಾಣ । ಬಾಹ್ಯಾಡಂಬರ ಡೌಲೂ ಇಲ್ಲದ ಸುಖ ಶಾಂತಿಗದು ಉಗ್ರಾಣ ॥ ಎಂಬ ನುಡಿಯಂತೆ ಆಗಾಗ 'ಅಷ್ಟಾಂಗಯೋಗ' ಶಿವಾನುಭವ ಶಿಬಿರಗಳನ್ನು ಏರ್ಪಡಿಸಿ ವ್ಯಸನಮುಕ್ತ, ದೈಹಿಕ, ಮಾನಸಿಕ, ಬೌದ್ಧಿಕ, ಭಾವನಾತ್ಮಕ, ಸಾಮಾಜಿಕ ಸ್ವಾಸ್ಥ್ಯಕ್ಕಾಗಿ ಶ್ರೇಷ್ಠ ಕ್ರಿಯಾಶೀಲ ವ್ಯಕ್ತಿತ್ವ ವಿಕಾಸ ಶಿಬಿರಗಳನ್ನು ಏರ್ಪಡಿಸುವ ಉತ್ಕಟೇಚ್ಛೆಗೆ ಪೂರಕವಾಗಿ ಹಿರಿಯ ಪೂಜ್ಯ ಶ್ರೀಗಳ ಸೂಕ್ತ ಮಾರ್ಗದರ್ಶನ ಸದಾವಕಾಲ ಇರಲಿ !

'ಸ್ವಾಮಿ ಅಂದರೆ ಮಠದ ಒಡೆಯನಲ್ಲ; ಸಮಾಜದ ನಿಷ್ಠಾವಂತ ಸೇವಕ' ಎಂದು ಅರ್ಥೈಸಿಕೊಂಡ ಪೂಜ್ಯ ಗುರುಗಳ ಆದರ್ಶ ಅವರ್ಣೀವಾದುದು. ತಮ್ಮ ನುಡಿಯನ್ನು ನಡೆಯಲ್ಲಿರಿಸಿಕೊಂಡ ಪೂಜ್ಯರ ಭಕ್ತಿಭಾವ ಮೆಚ್ಚತಕ್ಕದ್ದು !

ಕೋಮು ಸೌಹಾರ್ದತೆಯ ಹರಿಕಾರರು, ಪುಸ್ತಕದ ಸ್ವಾಮಿಗಳು ಎಂದೆನಿಸಿಕೊಂಡ ಗದಗಿನ ಲಿಂ. ಪೂಜ್ಯ ಡಾ. ತೋಂಟದ ಸಿದ್ಧಲಿಂಗ ಸ್ವಾಮಿಗಳ, ಇಳಕಲ್ಲ ಲಿಂ. ಮಹಾಂತ ಶಿವಯೋಗಿಗಳ 'ಮಹಾಂತ ಜೋಳಿಗೆ', ಬಸವ ನಿಷ್ಠರು, ಶರಣ ಧರ್ಮಿಗಳು, ಲಿಂಗಾಯತ ಸ್ವತಂತ್ರ ಧರ್ಮದ ಅನುಷ್ಠಾನಕ್ಕಾಗಿ ಶ್ರಮಿಸುತ್ತಿರುವ ತಮ್ಮ ಅಧ್ಯಾತ್ಮ, ಶೈಕ್ಷಣಿಕ ರೂವಾರಿಗಳಾದ ಈಗ ಗದಗಿನ ಪೂಜ್ಯಶ್ರೀ ಜಗದ್ಗುರು ಡಾ. ತೋಂಟದ ಸಿದ್ಧರಾಮ ಸ್ವಾಮಿಗಳ ಸೂಕ್ತ ಮಾರ್ಗದರ್ಶನದಲ್ಲಿರುವ ಪೂಜ್ಯಶ್ರೀ ಸಾವಳಗೀಶ್ವರ ಭಕ್ತಿಭಾವ ಅಚಲ, ಆದರ್ಶವಾದುದು, ನಾಡಿಗೆ 'ಸುಷುಮ್ನಾ' ನಾಡಿಯಂತಾಗಲಿ ! ಪೂಜ್ಯರ ಸಹೃದಯದ ಸಂಕಲ್ಪಕ್ಕೆ ಅನಂತಾನಂತ ಶರಣು ಶರಣಾರ್ಥಿ

## ಶರಣು ಶರಣಾರ್ಥಿ

ರುದ್ರಾಕ್ಷಿ ಮಠದಲ್ಲಿ ಬದ್ಧತೆಯ ಬಲದಿಂದ
ಇದ್ದ ಜನಮನವೆಲ್ಲ ಗೆದ್ದ । ಅನುನಯದಿ
ಶುದ್ಧ ಒಳಹೊರಗೆಲ್ಲ ನಡೆಯಲ್ಲಿ ॥೧॥

ಹಸನಾದ ವಿಭೂತಿ ನೊಸಲೀಗೆ ಹಚಗೊಂಡು
ಬಸವೇಶ ನಾಮ ಜಪಿಸುತ್ತ । ತನುಮನದಿ
ಕೆಸರಿಲ್ಲ ನುಡಿಯ ನಡೆಯಲ್ಲಿ ॥೨॥

ಅಷ್ಟಾಂಗ ಯೋಗದಾ ಅಷ್ಟಾಂಗಗಳನೆಲ್ಲ
ಅಷ್ಟಿಷ್ಟು ರೂಢಿ ಬಲದಿಂದ । ಬದುಕಿನಲಿ
ಇಷ್ಟಾರ್ಥ ಸಿದ್ಧಿ ಪಡೆದಾರ ॥೩॥

ವಿದ್ಯಾಬುದ್ಧಿಗಾಗಿ ಇದ್ದ ಆಲಸ್ಯವನು
ಒದ್ದು ಹೊರಹಾಕಿ ಅಭ್ಯಾಸ । ಬಲದಿಂದ
ಗೆದ್ದಾರ ಚಿನ್ನ ಪದಕವನು ॥೪॥

ನಿಜಶರಣ ತುಬಚಿಯಾ ಯಜಮಾನ ಬಸಯ್ಯಾ
ವಿಜಯಲಕ್ಷ್ಮೀಯ ವರಪುತ್ರ । ನಿಜವಾಗಿ
ವಿಜಯ ಗಳಿಸಿದರು ವಿದ್ಯೆಯಲಿ ॥೫॥

ಮೂರುದಶ ವರ್ಷಗಳ ಧೀರ ಯುವ ಶಕ್ತಿಯವ
ಭಾರಿಯಶ ಪಡೆದು ಜೀವನದಿ । ಅನವರತ
ಶರಣ ಧರ್ಮವನು ಪಾಲಿಸುತ ॥೬॥

ಯಮ ನಿಯಮ ಪಾಲಿಸುತ ಕ್ರಮಬದ್ಧ ತಪ್ಪದಲೆ
ನಮಗೆಲ್ಲ ಶ್ರೇಷ್ಠ ಮಾದರಿಯು । ಆಗ್ಯಾರ
ಸಮದರ್ಶಿ ಸ್ವಾಮಿ ಭವದಾಗ ॥೭॥

ಇತಿಮಿತಿಯ ಬದುಕಿನಲಿ ಋತುಮಾನಕ್ಕನುಸರಿಸಿ
ಮತಿವಂತ ಯತಿಯು ತಾವಾಗಿ । ನಡೆ ನುಡಿಗೆ
ಉತ್ತುಂಗ ಹೆಸರು ಪಡೆದಾರ ॥೮॥

ಸದುವಿನಯ ಸಂಪನ್ನ ಸಹೃದಯ ಸೌಹಾರ್ದ
ಮೃದುವಾಗಿ ತಟ್ಟುವಾ ಪ್ರೀತಿ । ಭಕ್ತಿಯಲಿ
ಸದುವಿನಯಿ 'ಸಾವಳಗೀಶ'ರು ॥೯॥

ಶ್ರಮಸೇವೆ ಅನುನಯದ ಕ್ರಮಬದ್ಧ ದಿನಚರಿಯ
ಶಮದಮದ ಸಿದ್ಧಿ ಪಡೆದಂಥ । ಗುರುಗಳಿಗೆ
ನಮ್ಮೆಲ್ಲ ಶರಣು ಶರಣಾರ್ಥಿ ॥೧೦॥

■■